
# ನಿರಂಜನ

ಆರ್.ವಿ. ಭಂಡಾರಿ



ಭಾರತೀಯ
ಸಾಹಿತ್ಯ
ನಿರ್ಮಾಪಕರು





ನಿರಂಜನ

ಡಾ|| ಕೊ. ಶ್ರೀನಿವಾಸಯ್ಯನವರ ಗ್ರಂಥ ಭಂಡಾರ
ACC. No. CC6211
No. 0833 - 6211
DATE
ಬೆಂಗಳೂರು - 1

ಒಳಬದಿಯ ರಕ್ಷಾಪುಟಗಳಲ್ಲಿ ಕಾಣಿಸಿರುವ ಶಿಲ್ಪಕಲೆಯಲ್ಲಿ ಮೂವರು ಭವಿಷ್ಯವಾದಿಗಳು ಭಗವಾನ್ ಬುದ್ಧನ ತಾಯಿ ರಾಣಿ ಮಾಯಾಳ ಕನಸನ್ನು ರಾಜ ಶುದ್ಧೋಧನನಿಗೆ ವಿವರಿಸುವ ದೃಶ್ಯವಿದೆ. ಅವುಗಳ ಕೆಳಗೆ ಆ ವಿವರಣೆಯನ್ನು ಬರೆದುಕೊಳ್ಳುತ್ತಿರುವ ಬರಹಗಾರ ಕುಳಿತಿದ್ದಾನೆ. ಬಹುಶಃ ಇದುವೇ ಭಾರತದ ಬರವಣಿಗೆಯನ್ನು ಕುರಿತ ಪ್ರಥಮ ಚಾರಿತ್ರಿಕ ದಾಖಲೆಯಾಗಿದೆ.

ಸ್ಥಳ: ನಾಗಾರ್ಜುನಕೊಂಡ - ಕ್ರಿ.ಶ. ಎರಡನೆಯ ಶತಮಾನ
ಕೃಪೆ: ರಾಷ್ಟ್ರೀಯ ವಸ್ತು ಸಂಗ್ರಹಾಲಯ, ಹೊಸದೆಹಲಿ.

ಭಾರತೀಯ ಸಾಹಿತ್ಯ ನಿರ್ಮಾಪಕರು

# ನಿರಂಜನ

ಲೇಖಕರು

ಆರ್.ವಿ. ಭಂಡಾರಿ

ಸಾಹಿತ್ಯ ಅಕಾದೆಮಿ

Niranjana : A monograph in Kannada by R.V. Bhandari, Sahitya Akademi, 2005, Rs. 25/-

ISBN: 81-260-1973-5

© ಸಾಹಿತ್ಯ ಅಕಾದೆಮಿ

ಮೊದಲ ಮುದ್ರಣ: 2005

**ಸಾಹಿತ್ಯ ಅಕಾದೆಮಿ**

ರವೀಂದ್ರ ಭವನ, 35, ಫಿರೋಜ್ ಶಾ ರಸ್ತೆ, ನವದೆಹಲಿ - 110 001.

'ಸ್ವಾತಿ' ಮಂದಿರ್ ಮಾರ್ಗ, ನವದೆಹಲಿ - 110 001.

ಸೆಂಟ್ರಲ್ ಕಾಲೇಜ್ ಆವರಣ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560 001.

443, ಗುಣ ಬಿಲ್ಡಿಂಗ್ಸ್, ಅಣ್ಣಾಸಾಲೈ, ಚೆನ್ನೈ - 600 018.

ಜೀವನ್ ತಾರಾ ಭವನ್, 23ಎ/44 ಎಕ್ಸ್, ಡೈಮಂಡ್ ಹಾರ್ಬರ್ ರಸ್ತೆ, ಕೊಲ್ಕತ್ತಾ - 700 053.

172, ಮುಂಬಯಿ ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ, ದಾದರ್, ಮುಂಬಯಿ - 400 014.

ಬೆಲೆ: ಇಪ್ಪತ್ತೈದು ರೂಪಾಯಿಗಳು

ಅಕ್ಷರ ಸಂಯೋಜನೆ: ಒಮೇಗಾ ಲೇಸರ್‌ಟೆಕ್ ಬೆಂಗಳೂರು

ಮುದ್ರಣ: ಸತ್ಯಶ್ರೀ ಪ್ರಿಂಟರ್ಸ್, ಬೆಂಗಳೂರು 560 004.

# ಲೇಖಕನ ಮಾತು

ನನ್ನ ಪ್ರೀತಿಯ ಲೇಖಕರಾದ ನಿರಂಜನರ ಬಗ್ಗೆ 'ಭಾರತೀಯ ಸಾಹಿತ್ಯ ನಿರ್ಮಾಪಕರು' ಮಾಲಿಕೆಯಲ್ಲಿ ಪುಸ್ತಕ ಬರೆಯಲು ಕೇಳಿಕೊಂಡ ಕೇಂದ್ರ ಸಾಹಿತ್ಯ ಅಕಾದೆಮಿಗೂ ಮತ್ತು ನನ್ನ ಹೆಸರನ್ನು ಅಕಾದೆಮಿಗೆ ಪರಿಚಯಿಸಿದ ಅಕಾದೆಮಿ ಸದಸ್ಯ ಶ್ರೀ ಮುರಳೀಧರ ಉಪಾಧ್ಯ ಅವರಿಗೂ ನನ್ನ ಕೃತಜ್ಞತೆಗಳು. ನನ್ನ ಹತ್ತಿರ ಇಲ್ಲದಿದ್ದ ನಾಟಕವನ್ನು ಒದಗಿಸಿಕೊಟ್ಟ ಪುತ್ತೂರು ಕರ್ನಾಟಕ ಸಂಘದ ಅಧ್ಯಕ್ಷ ಈಗ ದಿವಂಗತರಾದ ಬೋಳಂತಕೋಡಿ ಈಶ್ವರ ಭಟ್ಟರಿಗೆ ಕೃತಜ್ಞತೆ. ಸಣ್ಣ ಕತೆಯ ಅಧ್ಯಯನದಲ್ಲಿ ಪ್ರೊ॥ ಬಿದರಹಳ್ಳಿ ನರಸಿಂಹಮೂರ್ತಿಗಳು ಧ್ವನಿ ಸಂಪುಟಕ್ಕೆ ಬರೆದ ವಿಧಾನವು ನನಗೆ ಸೂಕ್ತ ಎನ್ನಿಸಿದ್ದರಿಂದ ಆಂಶಿಕವಾಗಿ ಆ ವಿಧಾನವನ್ನು ಅನುಸರಿಸಿದ್ದೇನೆ. ಅವರಿಗೂ ನನ್ನ ಕೃತಜ್ಞತೆ ಸಲ್ಲುತ್ತದೆ. ಇಲ್ಲಿ 'ನಿರಂಜನ ಅಭಿನಂದನ' ಮತ್ತು ನನ್ನ ಮಹಾಪ್ರಬಂಧ 'ನಿರಂಜನ ಬಸವರಾಜ ಕಟ್ಟೀಮನಿ ಚದುರಂಗ ಮತ್ತು ವ್ಯಾಸರಾಯ ಬಲ್ಲಾಳರ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ'ದ ಸಹಾಯ ಪಡೆದಿದ್ದೇನೆ. ಇಲ್ಲಿ ಆ ಎಲ್ಲ ಲೇಖಕರನ್ನೂ ನೆನೆಸುತ್ತೇನೆ. ಹಾಗೆಯೇ ಈ ಬರಹದ ಪರಿಶೀಲಕರಿಗೂ ನನ್ನ ಕೃತಜ್ಞತೆಗಳು.


ಆರ್.ವಿ. ಭಂಡಾರಿ, ಕೆರೆಕೋಣ
ಅಂಚೆ: ಅರೆಅಂಗಡಿ
ತಾ: ಹೊನ್ನಾವರ (ಉ.ಕ)
ಪಿನ್‌ಕೋಡ್: ೫೮೧ ೪೩೦

# ಪರಿವಿಡಿ

## ಅಧ್ಯಾಯ - ೧

# ನಿರಂಜನ - ವ್ಯಕ್ತಿ - ವಿಚಾರ

ಮಡಿಕೇರಿ - ಮಂಗಳೂರು ರಸ್ತೆಯ ಬದಿ, ಕಾವುನಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿ ಒಂದು ಚಿಕ್ಕ ಹುಲ್ಲಿನ ಗುಡಿಸಲು. ಮನೆಯೋ ತೀರಾ ಜೀರ್ಣಗೊಂಡಿದೆ. ಮನೆಯಲ್ಲಿಯೇ ಚಿಕ್ಕ ಹೋಟೆಲ್ ವ್ಯವಸ್ಥೆ ಇದೆ. ಅದನ್ನು ನಡೆಸುವವರು ಓರ್ವ ಮಧ್ಯ ವಯಸ್ಸಿನ ಮಹಿಳೆ. ಆಕೆಗೆ ತೀರದ ಬಡತನ.

ಆ ಹುಡುಗನನ್ನು ನೋಡಿ, ಕಾವು ಶಾಲೆ ಬಿಟ್ಟೊಡನೆ ನಾಗಮುರುಗಿ ರಸ್ತೆಯಲ್ಲಿ ಲಗುಬಗೆಯಿಂದ ಮನೆಯ ಕಡೆ ಧಾವಿಸುತ್ತಿದ್ದಾನೆ. ತೊಟ್ಟಿದ್ದು ಸಾಮಾನ್ಯವಾದ ಒಂದು ಅಂಗಿ, ಒಂದು ಚೊಣ್ಣ. ಹುಡುಗ ಸ್ಫುರದ್ರೂಪಿ. ತುಟಿಯಲ್ಲಿ ಯಾವುದೋ ಕನಸಿನ ಮುಗುಳು ನಗೆ. ಮನೆಗೆ ಬಂದೊಡನೆ ಪಾನ್-ಬೀಡಾ ತಯಾರಿಸಿ ಹರಿವಾಣದಲ್ಲಿ ಶಿಸ್ತಾಗಿ ಇಡುತ್ತಿದ್ದಾನೆ. ತಾಯಿಗೆ ಅಷ್ಟಾದರೂ ಸಹಾಯ ಮಾಡುವ ಇರಾದೆ.

ಸಂಜೆಯಾಯಿತೆಂದರೆ ಶಾಲೆಯಲ್ಲಿ ಕೊಟ್ಟ ಮನೆಕೆಲಸ ಮಾಡಲು (ಹೋಂವರ್ಕ್) ಮನೆಯ ಮುಂದೆ ಬಲಗಡೆ ಇರುವ ಒಂದು ದೀಪಕಂಬದ ಕಟ್ಟೆಗೆ ಈ ಹುಡುಗ ಹೋಗಿ ಕೂಡ್ರುತ್ತಾನೆ. ಚಿಮಣಿಎಣ್ಣೆ ದೀಪ ಚೆಲ್ಲಿದ ಮಂಪರು ಬೆಳಕಿನಲ್ಲಿ ಓದು. ಯಾರಾದರೂ ತನ್ನ ಕಡೆ ನೋಡುತ್ತಾರೋ ಎಂದು ಕಳ್ಳ ದೃಷ್ಟಿ ಹಾಯಿಸುತ್ತಾನೆ. ನೋಡದಿದ್ದರೆ ಬಹುಶಃ ನೋಡದಿದ್ದರೇನು? ಜನ ತಾವಾಗಿ ನೋಡುವ ಹಾಗೆ ಸಾಧಿಸಿ ತೋರಿಸುತ್ತೇನೆ ಅಂದುಕೊಳ್ಳುತ್ತಾನೋ ಏನೋ!

ಹಸಿದ ಮಕ್ಕಳು ಅನ್ನ ಕಂಡ ಕೂಡಲೇ ಗಪ ಗಪ ತಿಂದು ಮುಗಿಸುವ ಹಾಗಿನ ಓದು. ಕತೆ, ಕವನ, ವೃತ್ತಪತ್ರಿಕೆ, ರಾಮಾಯಣ, ಮಹಾಭಾರತ, ಆಮೇಲೆ ಇಂಗ್ಲೀಷ್ ಇತ್ಯಾದಿ. ಶಾಲಾ ಹಸ್ತಪತ್ರಿಕೆಗೆ ಇವನದೇ ಉಸ್ತುವಾರಿ. ಹೆಚ್ಚಿನ ಲೇಖನವೂ ಇವನದೇ. ಸ್ವಾತಂತ್ರ್ಯ ಹೋರಾಟದ ಕಾವಿಗೂ ಒಡ್ಡಿದ ಮನಸ್ಸು, ಓಣಿಯಲ್ಲಿ ಮಕ್ಕಳದೇ ಒಂದು ಮೆರವಣಿಗೆ, ಮಹಾತ್ಮಾ ಗಾಂಧೀಜೀಕಿ ಜೈ, ಘೋಷಣೆ, ಮೆರವಣಿಗೆಯ ಮುಂಚೂಣಿಯಲ್ಲಿ ಈ ಹುಡುಗ. ಹರಿಜನ ಕೇರಿಗೆ ಹೋಗಿ ಆ ಮಕ್ಕಳಿಗೆ ಸಾಬು ಹಚ್ಚಿ, ಸ್ನಾನ ಮಾಡಿಸಿ, ಚಾಕಲೇಟ್ ಕೊಟ್ಟು ಸ್ವಚ್ಛತೆ ಸಫಾಯಿ ಬಗ್ಗೆ ಭಾಷಣ ಕೊಡುತ್ತಾನೆ.

ಈ ಹುಡುಗನ ನಡಿಗೆ ಕಾವು ಇಂದ ಸುಳ್ಯಕ್ಕೆ, ಸುಳ್ಯದಿಂದ ನೀಲೇಶ್ವರದ ರಾಜಾಸ್ ಹೈಸ್ಕೂಲಿಗೆ. ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರದ ಹಾಲಿನಲ್ಲಿ ಕುಳಿತು ಪ್ರಶ್ನೆ ಪತ್ರಿಕೆಗೆ ಉತ್ತರ ಬರೆಯುತ್ತಿದ್ದಾನೆ. ಉಟ್ಟಿದ್ದು ಒಂದು ಖಾದಿ ಲುಂಗಿ, ಮೈಮೇಲೆ ಚಿಕ್ಕ ಖಾದಿವಸ್ತ್ರ ಎ.ಎಸ್. ಕರಾಟ್ (Karat) ಪರೀಕ್ಷಾ ಮೇಲ್ವಿಚಾರಕರಲ್ಲೊಬ್ಬರು, ಹುಡುಗನ ಉಡುಪು ನಿಯಮಬಾಹಿರ ಎಂದು ಅವರಿಂದ ಆಕ್ಷೇಪ. ನಂತರ ಹುಡುಗನನ್ನು ಒಳಗೆ ಕರೆಸಲಾಯಿತು. ಹುಡುಗನ ಚುರುಕಾದ ಮಾತಿನಿಂದ ಈ ಹುಡುಗನ ಮೇಲೆ ಗಾಂಧೀವಾದದ ಪ್ರಭಾವ ಉಂಟಾಗಿದೆಯೆಂದು ತಿಳಿಯಿತು. ಕೆ. ರಾಮಕೃಷ್ಣರಾವ್ ಮುಖ್ಯೋಪಾಧ್ಯಾಯರು, ಶಿಷ್ಯವತ್ಸಲರು. ಹುಡುಗ ವಿನಯವಂತ ವಿದ್ಯಾರ್ಥಿ. ಅವರ ರಾಜಿಯ ಪರಿಣಾಮದಿಂದಾಗಿ ಮಾರನೇ ದಿನ ಹುಡುಗ ಶಾಲಾ ನಿಯಮದ ಉಡುಪು ಧರಿಸಿ ಬಂದ.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲೇ ಉತ್ತೀರ್ಣನಾದ. ಆದರೆ ವಿದೇಶಿ ಸರಕಾರ ಕೊಡುವ ಪ್ರಮಾಣಪತ್ರ ತನಗೆ ಬೇಡವೆಂದು ತಿರಸ್ಕರಿಸಿಬಿಟ್ಟ!

ಇಷ್ಟರ ತನಕವೂ ಹುಡುಗ, ಹುಡುಗ ಎಂದು ಕರೆದದ್ದು ಬೇರೆ ಯಾರಿಗೂ ಅಲ್ಲ. ಆ ಹುಡುಗನೇ ಬೆಳೆದು ಜನರ ದೃಷ್ಟಿಯನ್ನು ತಾನಾಗಿಯೇ ತನ್ನೆಡೆ ಸೆಳೆದುಕೊಂಡ ಸಾಧಕ, ಹಿರಿಯ ಸಾಹಿತಿ ನಿರಂಜನ.

ನಿರಂಜನ ಹುಟ್ಟಿದ್ದು, ೧೯೨೪ ಜೂನ್ ೧೫ ರಂದು. ಅವರ ತಾಯಿ ಚಿನ್ನಮ್ಮ. ಅವಳಿಗೆ ಎಂಟನೇ ವರ್ಷದಲ್ಲೇ ಮದುವೆಯಾಯಿತು. ಅದೇ ವರ್ಷದಲ್ಲೇ ವಿಧವೆಯೂ ಆದಳು. ಇದಾದ ನಂತರ ತನ್ನ ಮೂವತ್ತೆರಡನೇ ವರ್ಷದಲ್ಲಿ ಶ್ರೀನಿವಾಸರಾಯರು ಎಂಬವರೊಡನೆ ಎರಡನೇ ಸಂಬಂಧಿಗಳಾದರು. ಆಗ ಹುಟ್ಟಿದವರು ನಿರಂಜನ. ಮೊದಲ ಹೆಸರು ಶಿವರಾಯ. ಊರಿನ ಹೆಸರು ಸೇರಿ ಕುಳಕುಂದ ಶಿವರಾಯ. ಹುಟ್ಟಿ ಆರೇ ತಿಂಗಳಲ್ಲಿ ತಾಯಿ ತಿರಸ್ಕೃತೆಯಾದರು. ತನ್ನ 'ಪರಿತ್ಯಕ್ತೆ' ಕತೆಗೆ ಇದೇ ವಸ್ತು ಎಂದಿದ್ದಾರೆ ನಿರಂಜನ. ಅವರ ತಾಯಿಯ ಜೀವನ 'ಬನಶಂಕರಿ'ಗೆ ಆಧಾರ. ನಿರಂಜನ ನಡೆದದ್ದು ಬೆಂಕಿಯ ಮೇಲೆ. ಕಾಲು ಸುಟ್ಟುಕೊಂಡರೂ ಮನಸ್ಸನ್ನು ಸುಟ್ಟುಕೊಳ್ಳಲಿಲ್ಲ. ಎರಡನೇ ಸಲ ಪಾರ್ಶ್ವವಾಯು ಆಘಾತವಾಗಿ ಮಲಗಿದಾಗ 'ಇದು ಪರಿಷ್ಕೃತ ಆವೃತ್ತಿ' ಎಂದು ನಕ್ಕರಂತೆ ಗೆಳೆಯರೊಡನೆ.

ಮೊದಲೇ ಪರೀಕ್ಷಾ ಪ್ರಮಾಣಪತ್ರವನ್ನು ತಿರಸ್ಕರಿಸಿಯಾಗಿದೆ. ವಿದೇಶಿ ಸರಕಾರದಲ್ಲಿ ಕೆಲಸ ಮಾಡುವುದೇನಿದೆ? ಬರಹದಿಂದಲೇ ಬದುಕುವ ಛಲ. ಆದರೆ ಆದರಲ್ಲಿ ವಿಫಲರಾದವರಲ್ಲ. ಕನ್ನಡ ಸಾಹಿತ್ಯದ ಮುಖ್ಯ ಶ್ರೇಣಿಯ ಕಾದಂಬರಿಕಾರರಲ್ಲಿ ತಮ್ಮ ಹೆಸರನ್ನು ಕೆತ್ತಿಸಿಕೊಂಡಿದ್ದಾರೆ. ಆದರೆ ಅವರು

ಕೀರ್ತಿಯಿಂದ, ಸಾಧನೆಯಿಂದ ಬೀಗಿ ಬಿರಿಯಲಿಲ್ಲ. ಅವರು ತಮ್ಮ ಮಕ್ಕಳಿಗೆ ಹೇಳುತ್ತಿದ್ದರಂತೆ, 'ಯಾವಾಗಲೂ ಜಂಬ ಪಡಬಾರದು ಏನೇ ಸಾಧಿಸಿದರೂ ನಮ್ರತೆಯಿಂದಿರಬೇಕು.'

ಅವರು ತಮ್ಮ ಎಳೆವರೆಯದಿಂದಲೇ ಬರೆಯಲು ಶುರು ಮಾಡಿದರು. ಅವರು ಬರೆದ ಮೊದಲ ಕತೆ 'ಮೋಹಜಾಲ'. ಇದಕ್ಕೂ ಮೊದಲೇ ತುಳುವಿನಲ್ಲಿ ಕತೆ ಬರೆದರು. ಆಗ ಅವರಿಗೆ ಹದಿಮೂರು ವರ್ಷ, ಪ್ರಕಟವಾದದ್ದು ಮಂಗಳೂರಿನ 'ರಾಷ್ಟ್ರಬಂಧು' ಪತ್ರಿಕೆಯಲ್ಲಿ. ಅದರ ಸಂಪಾದಕರು ಖ್ಯಾತ ಕವಿ ಕಡೆಂಗೋಡ್ಲು ಶಂಕರಭಟ್ಟ, ಮುಂದೆ ಪತ್ರಿಕಾ ವ್ಯವಸಾಯ ಅವರ ಬದುಕಿನ ಮುಖ್ಯ ಅಂಗ-ಆಧಾರವಾಯಿತು. ಕತೆಗಾರ, ಕಿಶೋರ, ಕುಶಿರಾಯ, ಶಿ.ರಾ. ಕುಳಕುಂದ, ಕುಳಕುಂದ ಶಿವರಾಯ ಮುಂತಾದ ಹೆಸರಿನಿಂದ ಬರೆದರು.

ಅವರಿಗೆ ಒದಗಿ ಬಂದ ಬದುಕಿನ ಘಟನೆಗಳು ಅವರ ವ್ಯಕ್ತಿತ್ವವನ್ನು ನಿರೂಪಿಸಿದವೆಂದು ತೋರುತ್ತದೆ. ಅವರು ಅಲ್ಲಲ್ಲಿ ನೆನಪಿಸುವ ಒಂದು ಘಟನೆ ಹೀಗಿದೆ. ಅದು ಅವರ ಶಾಲಾ ದಿನಗಳಲ್ಲಿ ನಡೆದದ್ದು. ಒಂದು ದಿನ ಸಾಯಂಕಾಲ ಡೊಂಬರಿಗರು ಡೋಲು ಬಾರಿಸುತ್ತ ಜನರನ್ನು ಆಕರ್ಷಿಸುತ್ತಿದ್ದರು. ಅವರು ಗಂಡ, ಹೆಂಡತಿ ಮತ್ತು ಮಗಳು. ಜಾದುಗಾರ ಒಂದು ಜಾದೂ ಮಾಡುವುದಾಗಿ ಸಾರಿದ. ಯಾರಾದರೂ ಒಬ್ಬ ಹುಡುಗ ಇಲ್ಲಿ ಬನ್ನಿ ಎಂದ. ಶಿವರಾಯ ಎದ್ದು ಬಂದ. ಶಿವರಾಯನ ಕಿವಿಯಲ್ಲಿ ಆ ಡೊಂಬರಿಗ ಹೇಳಿದ 'ಕೇಳು ಮುದ್ದೆ, ನಾವು ದೂರದಿಂದ ಬಂದಿದ್ದೇವೆ, ಮೂರು ದಿನಗಳಿಂದ ಊಟವಿಲ್ಲ. ನೀನು ದಯೆ ತೋರು. ನಾವು ಹೇಳಿದ ಹಾಗೇ ಕೇಳು.'

ಡೊಂಬರಿಗ ಕೆಲವು ಜಾದು ಪ್ರದರ್ಶನ ಕೊಟ್ಟ. ಶಿವರಾಯ ಸಹಕರಿಸಿದ. ಅಷ್ಟರಲ್ಲಿ ಪೋಲೀಸರು ಬಂದರು. ಅವರು ಹುಗಿದ ಬಿದಿರು, ಕಂಬ, ಹಗ್ಗವನ್ನೆಲ್ಲ ಒಯ್ದಿದ್ದಲ್ಲದೆ ಅವರನ್ನು ಪೋಲೀಸ್ ಸ್ಟೇಷನ್ನಿಗೆ ಒಯ್ದರು. ಹುಡುಗನಿಗೆ ಕುತೂಹಲ. ತಾನೂ ಸ್ಟೇಶನ್ನಿಗೆ ಹೋದ. ಡೊಂಬಿಗರ ಗೋಳು, ಪೋಲೀಸ ಜೋರು ಮಾಡಿದ. ಅವರಿಗೆ ನಾಲ್ಕನೆಯ ದಿನವೂ ಉಪವಾಸ. 'ವಿಮೋಚನೆ' ಕಾದಂಬರಿಯಲ್ಲಿ ಕಥಾನಾಯಕನ ತಂದೆಯ ಪಾತ್ರವೊಂದಿದೆ. ಅವನ ದುಡಿತ. ಕಷ್ಟವನ್ನು ನೋಡಿ ಕಥಾನಾಯಕ (ಮಗ) ಹೇಳಿಕೊಳ್ಳುತ್ತಾನೆ. ''ಒಬ್ಬ ಮಳೆಯಲ್ಲಿ ಮೈತೋಯಿಸಿಕೊಂಡು, ಚಳಿಯಲ್ಲಿ ದೇಹ ಕೊರೆಸಿಕೊಂಡು, ಬಿಸಿಲಲ್ಲಿ ಬೆವರಿ ನೀರಾಗಿ, ಮನುಷ್ಯ ಹಾಗೆ ದುಡಿಯಲೇಬೇಕೆ?'' ಇಲ್ಲಿ ಡೊಂಬರಿಗನ ಜೀವನ ದೃಶ್ಯ ಪ್ರತಿಫಲಿಸಿದಂತಿದೆ.

ಅವರ ತಾರುಣ್ಯದ ಸಂದರ್ಭದಲ್ಲೇ ನೀಲೇಶ್ವರದ ಸಮೀಪ ಪ್ರಸಿದ್ಧ ಚಾರಿತ್ರಿಕ ಘಟನೆ ಕಯ್ಯೂರ ಹೋರಾಟ (೧೯೪೧) ನಡೆಯಿತು. ನಂಬೂದರಿ, ನಾಯರ್ ಎಂಬ ಭೂಮಾಲಿಕರ ವಿರುದ್ಧ ಕಯ್ಯೂರಿನ ರೈತರು ನಡೆಸಿದ ಹೋರಾಟವನ್ನು ಹತ್ತಿರದಿಂದ ನೋಡಿದರು. ಗುಲಾಮರಂತಿರುವ ರೈತರು ಮಾರ್ಕ್ಸ್ ಸಿದ್ಧಾಂತದ ಅಡಿಯಲ್ಲಿ ಭೂಮಾಲಿಕರ ವಿರುದ್ಧ ನಡೆಸಿದ ಹೋರಾಟ, ಬ್ರಿಟಿಷ್ ವಿರುದ್ಧದ ಬಣ್ಣ ಬಡಿದುಕೊಂಡು ಅಲ್ಲಿಯ ಮೂರು ಜನ ರೈತ ಮಕ್ಕಳಿಗೆ ನೇಣು ಕಂಬದ ಶಿಕ್ಷೆಗೆ ಕಾರಣವಾಯಿತು. ಈ ಘಟನೆ ಅವರ 'ಚಿರಸ್ಮರಣೆ' ಕಾದಂಬರಿಯಲ್ಲಿ ಸಾಕಲ್ಯವಾಗಿ ರೂಪಗೊಂಡಿದೆ.

ಅವರ 'ಮೃತ್ಯುಂಜಯ' ಕಾದಂಬರಿ ಬಗ್ಗೆ ಬರೆಯುವ ಖ್ಯಾತ ವಿಮರ್ಶಕ ಡಿ.ಆರ್. ನಾಗರಾಜ್ ಎನ್ನುತ್ತಾರೆ. 'ಮಾನವ ಜೀವನವನ್ನು ನಿಯಂತ್ರಿಸುವ ಶಕ್ತಿಗಳು ಯಾವುವು? ಈ ಪ್ರಶ್ನೆಯತ್ತ ನಿರಂಜನರ ಗಮನ. ಅದಕ್ಕೆ ಅವರು ಕಂಡುಕೊಂಡ ಸಮಾಜದ ವಾಸ್ತವ ಶಕ್ತಿಗಳ ಶೋಷಣೆ, ದಬ್ಬಾಳಿಕೆಗಳ ಬಗ್ಗೆ ಕೇಂದ್ರೀಕರಣ ಮಾಡಿದರು.' (ಪ್ರಧಾನ ಸಂಪಾದಕರು: ಬೋಳಂತಕೋಡಿ ಈಶ್ವರಭಟ್ಟ ನಿರಂಜನ ಅಭಿನಂದನೆ ೧೯೮೬./ಪುಟ ೩೩೭)

ತಮ್ಮ ಬಗ್ಗೆ ತಾವೇ ಅವರು ಹೇಳಿಕೊಳ್ಳುವುದು ಹೀಗೆ, 'ಎರಡನೇ ಮಹಾಯುದ್ಧ ಶುರುವಾದಾಗ ಈ ಹುಡುಗ ಕೇರಳದ ಅಂಚಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ. ಅಲ್ಲಿ ಸ್ಪಷ್ಟವಾಗಿ ಬಡವರ ಮತ್ತು ಶ್ರೀಮಂತರ ಮಧ್ಯದ ಅಂತರ ಎದ್ದು ಕಾಣುತ್ತಿತ್ತು. ಜನಸಾಮಾನ್ಯರು (ಬಹುಜನರು) ದಾರುಣವಾದ ಬಡತನದಲ್ಲಿ ಬದುಕುತ್ತಿದ್ದರು. ಅಲ್ಲಿ ಮಾರ್ಕ್ಸ್‌ವಾದಿ ಚಳವಳಿ ತಲೆಯೆತ್ತುತ್ತಿತ್ತು. ಕೇರಳದವರು ಕಲಿತವರು, ಸಾಮ್ರಾಜ್ಯಶಾಹಿ ಪ್ರತಿಭಟನೆಗೂ ಊಳಿಗಮಾನ್ಯದ ಪ್ರತಿಭಟನೆಗೂ ಇರುವ ಸಂಬಂಧವನ್ನು ಕಂಡುಕೊಂಡರು. ಹದಿಹರೆಯದ ಈ ಹುಡುಗ ತನ್ನ ಅಸ್ತಿತ್ವವನ್ನು ಮಾರ್ಕ್ಸ್‌ವಾದದಲ್ಲಿ ಸ್ಥಾಪಿಸಿಕೊಂಡ. ೧೯೪೩ ರಲ್ಲಿ ಶಕ್ತಿಶಾಲಿಯಾದ ಬರವಣಿಗೆಯಿಂದ ಸಾಮಾಜಿಕ ಬದಲಾವಣೆ ಸಾಧ್ಯ ಎನ್ನುವ ಉದ್ದೇಶದಿಂದ ಗಾಂಧಿ ಟೊಪ್ಪಿಗೆ ವಿದಾಯ ಹೇಳಿ ಪತ್ರಿಕಾ ವ್ಯವಸಾಯದಲ್ಲಿ ತೊಡಗಿಕೊಂಡೆ.

ಅವರು ಪತ್ರಿಕೋದ್ಯಮಕ್ಕೆ ಪ್ರವೇಶಿಸಿದ ಸನ್ನಿವೇಶವನ್ನು ಎನ್. ಸುಬ್ಬರಾವ್ ವಿವರಿಸುವುದು ಹೀಗೆ: ೧೯೪೧ರ ಬೇಸಿಗೆಯ ಒಂದು ದಿನ ಬಿಳಿಯ ಖಾದಿ ಮುಂಡು, ಬನಿಯನಿನಂಥ ತುಂಡು ಖಾದಿ ಜುಬ್ಬ, ಗಾಂಧಿಟೋಪಿ ಧರಿಸಿದ್ದ ಹುಡುಗನೊಬ್ಬನ ಆಗಮನವಾಯಿತು. ಇವನೇ ಕುಳಕುಂದ ಶಿವರಾಯ ಎಂದು ಕೃಷ್ಣರಾಯರು ನಮಗೆಲ್ಲ ಪರಿಚಯ ಮಾಡಿಕೊಟ್ಟರು. ಸಂಪಾದಕ ಕಡೆಂಗೋಡ್ಲ ಶಂಕರಭಟ್ಟರ ಹಾಗೂ ಪತ್ರಿಕೆಯ ವ್ಯವಸ್ಥಾಪಕರಾಗಿದ್ದ ಕೆ.ಆರ್. ಆಚಾರ್ಯರ ಭೇಟಿಯೂ ಆಯಿತು. ಸ್ವಲ್ಪ ಸಮಯದಲ್ಲೇ ಶಿವರಾಯರು ರಾಷ್ಟ್ರಬಂಧುವಿನ

ಸಂಪಾದಕ ಬಳಗ ಸೇರಿ ನನ್ನ ಸಹೋದ್ಯೋಗಿಯಾದರು. ಆಗ ಅವರಿಗೆ ಹದಿನೇಳು ವರ್ಷ.

ಹೀಗೆ ತೊಡಗಿಕೊಂಡ ನಿರಂಜನ ತಮ್ಮ ಕಾರ್ಯಬಾಹುಳ್ಯವನ್ನು ವಿಸ್ತರಿಸಿಕೊಂಡರು. ಹುಬ್ಬಳ್ಳಿಯ 'ಸಂಯುಕ್ತ ಕರ್ನಾಟಕ'ಕ್ಕೆ ಬೆಂಗಳೂರಿನ 'ತಾಯಿನಾಡು', Daily News 'ಜನವಾಣಿ' ದೈನಿಕಕ್ಕೆ, ಮಂಗಳೂರು 'ಸುದ್ದಿಗಾರ' 'ನವಭಾರತ' ದೈನಿಕಕ್ಕೆ ನಗರದ ಪ್ರತಿನಿಧಿಯಾಗಿ, ೧೯೪೪ ರಲ್ಲಿ ಬೆಂಗಳೂರಿನ 'ಪ್ರಜಾಮತ' ಸಾಪ್ತಾಹಿಕದಲ್ಲಿ ಸಹಸಂಪಾದಕರಾದರು. ಅದರ ಸಂಪಾದಕರು ಬಿ.ಎನ್. ಗುಪ್ತ. 'ಸರೂ ಕೇಳಿದೆಯಾ' ಅಂಕಣ ಬರಹ ಶುರು. ಮುಂದೆ ಹುಬ್ಬಳ್ಳಿ 'ಉಷಾ' ದಲ್ಲಿ 'ಸರೋಜ ಸಂಚಯ' ಅಂಕಣ ಬರವಣಿಗೆ. ಎನ್. ನಂಜಪ್ಪ 'ಉಷಾ' ದ ಸಂಪಾದಕರಾಗಿದ್ದರು.

೧೯೪೭ ರಲ್ಲಿ ಅವರು 'ಜನಶಕ್ತಿ'ಯ ಸಂಪಾದಕರಾದರು. 'ಜನಶಕ್ತಿ' ಕಮ್ಯುನಿಸ್ಟ್ ಪಕ್ಷದ ಪತ್ರಿಕೆ. ಶ್ರಮಜೀವಿಗಳ ಬಗ್ಗೆ ಹೆಚ್ಚಿನ ಕಾಳಜಿ. 'ವಿಚಾರವೇನೇ ಇರಲಿ ಕುಳಕುಂದರ ಜಾದುಗಾರಿಕೆಯಿಂದ ಪತ್ರಿಕೆ ಸಾಹಿತಿಗಳಿಗೆ ಅಪ್ರಿಯವೆನಿಸಲಿಲ್ಲ' ಎಂದು ಪ್ರಸಿದ್ಧ ಕವಿ ಚೆನ್ನವೀರ ಕಣವಿ ಅನ್ನುತ್ತಾರೆ. 'ಸಂಗಾತಿ ಸಂಚಯ' ಅಂಕಣ ಬರಹವೂ ಬರುತ್ತಿತ್ತು ನಿರಂಜನರಿಂದ.

ಕಮ್ಯುನಿಸ್ಟ್ ಪಕ್ಷ ಸರಕಾರದ ಕ್ರೂರ ದೃಷ್ಟಿಗೆ ಗುರಿಯಾಯಿತು. ಪಕ್ಷದ ಅನೇಕ ಸದಸ್ಯರು ಭೂಗತರಾದರು. 'ಜನಶಕ್ತಿ'ಯ ಸಂಪಾದಕರಾದ ನಿರಂಜನ ಕೂಡ ಭೂಗತರಾದರು. ಹುಬ್ಬಳ್ಳಿ, ಧಾರವಾಡ, ಇತ್ಯಾದಿಗಳಲ್ಲಿ ತಲೆ ಮರೆಸಿಕೊಂಡರು. ವಸತಿಯಿಂದ ವಸತಿ, ಏಕಾಂತದಿಂದ ಏಕಾಂತಕ್ಕೆ ಅಲೆದಾಟ. ಆಗಲೂ ನಿಯಮಿತವಾಗಿ ಜನಶಕ್ತಿ ಹೊರಬರುತ್ತಿತ್ತು. ಆದರೆ ಏಕಾಂತ 'ನಿರಂಜನರ ಜೀವನಕ್ಕೆ ಹೊಸ ತಿರುವು ನೀಡಿತು. ಬಹುಶಃ ಕುಳಕುಂದ ಶಿವರಾಯನ ಒಳಗಿನ ಕಿಶೋರ (ಅವರ ಮೊದಲ ಕತೆ ಮೋಹಜಾಲದ ಕತೆಗಾರ) ಪುಕ್ಕ ಪಡೆದು ಚಿಟ್ಟೆಯಾಗಿ ಆಕಾಶಕ್ಕೆ ನೆಗೆಯಲು ತವಕ ಪಡುತ್ತಿದ್ದಿರಬೇಕು. ಅಂತರಂಗದ ಆತಂಕಕ್ಕೆ ಕೊನೆ ಪಡೆದು ನಿರಂಜನರಾದರು. ೧೯೫೦ ರಲ್ಲಿ ಪಕ್ಷ ಬಿಟ್ಟು ಹೊರಬಂದರು. ಆದರೂ ಹಿಂದೆ 'ಜನಶಕ್ತಿ'ಯಲ್ಲಿ ಬರೆದ ಲೇಖನಕ್ಕಾಗಿ ಕೈಕೋಳ ತೊಡಿಸಲಾಯಿತು. ಕೊನೆಗೆ ನ್ಯಾಯಾಲಯ ಬಿಡುಗಡೆ ಮಾಡಿತು.

ಆದರೂ ಪತ್ರಿಕಾ ವ್ಯವಸಾಯದ ನಂಟು ಬಿಡಲಾರದ ಅಂಟಾಗೇ ಉಳಿಯಿತು. 'ಉಷಾ' ದಲ್ಲೂ 'ಜನಪ್ರಗತಿ'ಯಲ್ಲೂ ಅಂಕಣ ಬರಹ ಮುಂದುವರಿದೇ ಇತ್ತು. ಚಿತ್ರಗುಪ್ತದಲ್ಲೂ ಹೊಸ ಅಂಕಣ 'ಓದುಗರೊಡನೆ ಐದು ನಿಮಿಷ' 'ಸಾಹಿತ್ಯ ಸಮೀಕ್ಷೆ' ಬರತೊಡಗಿತು. ೧೯೫೭ ರಲ್ಲಿ ನವಶಕ್ತಿಯಲ್ಲಿ 'ಬಿಸಿಲು ಬೆಳದಿಂಗಳು'

ಅಂಕಣದ ಬರಹ ಶುರು. ೧೯೬೨ ರಲ್ಲಿ ದಿಲ್ಲಿಯ ಇನ್ಫಾ (ಇಂಡಿಯನ್ ನ್ಯೂಸ್ ಎಂಡ್ ಫೀಚರ್ ಅಲಾಯಿನ್ಸ್)ದಲ್ಲಿ ಕರ್ನಾಟಕ ಪ್ರತಿನಿಧಿಯಾಗಿ ಕೆಲಸ ಮಾಡಿದರು. ರಾಜಧಾನಿಯಿಂದ 'ದಿನಚರಿ' ಎಂಬ ಅಂಕಣ ಬರಹ ಅಲ್ಲಿಯದು.

ಈ ಮಧ್ಯೆ ಕಾದಂಬರಿ ಬರವಣಿಗೆ ನಡೆಯುತ್ತಿತ್ತು. ೧೯೫೨ ರಲ್ಲಿ ಅವರ ಪ್ರಥಮ ಕಾದಂಬರಿ 'ವಿಮೋಚನ' ಹೊರಬಂತು. ಇದು ಅವರ ಪ್ರಾರಂಭದ ಬಿಂದುವಾದರೆ ''ಮೃತ್ಯುಂಜಯ'' ಅವರ ಕೊನೆಯ ಬಿಂದು. ಹಾಗೂ ಅವರ ಕಾದಂಬರಿಗಳಲ್ಲಿ ಉನ್ನತ ಶಿಖರವೂ ಹೌದು. ಇವುಗಳ ಮಧ್ಯದಲ್ಲಿ ಮತ್ತೆ ಇಪ್ಪತ್ಮೂರು ಕಾದಂಬರಿಗಳಿವೆ. ಇದರ ಜೊತೆ ರಷ್ಯಾದ ಬರಹಗಾರ ಮಾಕ್ಸಿಂಗಾರ್ಕಿಯ ದೊಡ್ಡ ಕಾದಂಬರಿಗಳಾದ 'ತಾಯಿ' 'ಅಧಃಪತನ', 'ನನ್ನ ವಿಶ್ವವಿದ್ಯಾನಿಲಯಗಳು' ಮೊದಲಾದ ಮತ್ತು ಚಕಾವನ ಬರಹಗಳ ಅನುವಾದವನ್ನು ಕೈಕೊಂಡಿದ್ದಾರೆ. ಬೆಲಿನ್ಸ್ಕಿಯ ಕಾವ್ಯ ಮೀಮಾಂಸೆಯನ್ನು ಅನುವಾದಿಸಿದ್ದಾರೆ. ಇದು ಅವರ ಸೈದ್ಧಾಂತಿಕ ನಿಲುವಿಗೆ ಅನುಸಾರಿಯಾಗೇ ಇದೆ.

ಈ ಮಧ್ಯೆ ಅವರು ೧೯೫೬ ರಲ್ಲಿ ಕನ್ನಡದ ಪ್ರಸಿದ್ಧ ಕತೆ-ಕಾದಂಬರಿಗಾರ್ತಿ ಅನುಪಮರನ್ನು ಮದುವೆಯಾಗುತ್ತಾರೆ. ಅವರು ಅನುಪಮರನ್ನು ಭೇಟಿಯಾದುದು ೧೯೫೦ ರಲ್ಲಿ. ತಮ್ಮ ಮತ್ತು ಅವರ ಮಧ್ಯೆ ನಡೆದ ಭೇಟಿಯನ್ನು ಅನುಪಮರೇ ಹೀಗೆ ಹೇಳಿದ್ದಾರೆ.

''ನಮ್ಮಿಬ್ಬರ ಪರಿಚಯವಾದದ್ದೇ ವಿಚಿತ್ರ ರೀತಿಯಲ್ಲಿ. ನಾನಾವಾಗ ಎರಡನೆಯ ಇಂಟರ್ ಮೀಡಿಯಟ್ (ಈಗಿನ ಪಿ.ಯು.ಸಿ. ಎರಡು) ತರಗತಿಯಲ್ಲಿ ಓದುತ್ತಿದ್ದೆ. ನನ್ನ ಸ್ನೇಹಿತೆಯೊಬ್ಬಳು 'ಕ್ರಾಂತಿಕಾರಿ' ಕತೆಗಾರ ಕುಳಕುಂದ ಶಿವರಾಯರನ್ನು ಭೆಟ್ಟಿ ಮಾಡಿಸುತ್ತೇನೆ ಬನ್ನಿ' ಎಂದು ಸಾಹಿತ್ಯ ಆಸಕ್ತರಾದ ಮೂರು ಗೆಳತಿಯರನ್ನು ಕರೆದಳು. ಈ ಕತೆಗಾರ ಒಬ್ಬ ವಯೋವೃದ್ಧರಿರಬೇಕು ಎಂದು ಲೆಕ್ಕ ಹಾಕುತ್ತ ಹೋದ ನನಗೆ ಕಂಡದ್ದು ಸ್ಫುರದ್ರೂಪಿ ಯುವಕ. ಈತ ಮಿತಭಾಷಿ. ಆಡಿದರೆ ಆಡಿದ ಮಾತು ನೇರ, ಸ್ಪಷ್ಟ. ಸ್ನೇಹಿತೆ 'ಇವರು ಕತೆ ಬರೀತಾರೆ' ಎಂದು ನನ್ನನ್ನು ಪರಿಚಯ ಮಾಡಿಸಿಕೊಟ್ಟಳು. ಅದನ್ನು ಕೇಳಿದ ಕೂಡಲೇ ಅವರ ಕಣ್ಣುಗಳು ಅರಳಿದವು. ಅವರು ನೇರವಾಗಿ ನನ್ನನ್ನು ದಿಟ್ಟಿಸಿ ನೋಡತೊಡಗಿದರು. ನನಗೂ ಲಜ್ಜೆ, ಕಸಿವಿಸಿ. 'ನಿಮ್ಮ ಕತೆಗಳನ್ನು ಕಳಿಸ್ಕೊಡಿ' ಎಂದರು ಅವರು. ನಾನು ಮನೆಗೆ ಬಂದೆ. ಮದ್ವೆಯಾದರೆ ಇಂಥವರನ್ನೇ ಆಗ್ಬೇಕು ಎಂದು ಆವತ್ತು ದಿನಚರಿಯಲ್ಲಿ ಬರೆದೆ.'' (ನಿರಂಜನ ಅಭಿನಂದನ - ಪು. ೧೯೬)

ಮುಂದೆ ಒಮ್ಮೆ ಭೆಟ್ಟಿಯಾದಾಗ 'ಉಷಾ' ಮಾಸಪತ್ರಿಕೆಯ ಮೂರು ಸಂಚಿಕೆಗಳನ್ನು ನನ್ನ ಕೈಗಿತ್ತು ಇದರಲ್ಲಿ ನಾನು ಬರೆದಿರೊ 'ಸಾಧನ ಸಂಚಯ' ಅನ್ನೋ ಲೇಖನಗಳಿವೆ. ಓದಿ ನೋಡಿ ಎಂದರು. 'ಬಾಳಸಂಗಾತಿ ಸಾಧನಾ' ಎಂದು

ಆರಂಭವಾಗುವ ಒಲವಿನ ಓಲೆ. ಅದನ್ನು ಓದುತ್ತಾ ಮೊದಲಬಾರಿಗೆ ನನಗೆ ಗೊತ್ತಾಯಿತು ಇವರ 'ಸಾಧನ ಸಂಚಯ'ದ ಒಡತಿ ನಾನೇ ಎಂದು.

ಮುಂದೆ ೧೯೫೪ರ ತನಕವು ಇವರದ್ದು ಗುಪ್ತಪ್ರಣಯ. ಇವರ ಮದುವೆಯನ್ನು ಅನುಪಮಾರ ತಂದೆ ತಾಯಿಗಳು ಬಹಿಷ್ಕರಿಸಿದ್ದರು. ಸ್ನೇಹಿತರ ಎದುರು ಅವರ ಮದುವೆ. ತನಗೆ ಇದರಿಂದೇನೂ ಅಂಜಿಕೆಯಾಗಲಿಲ್ಲ. 'ನನಗೆ ದೊರಕಿದ್ದು ನಿರಂಜನರ ಅಖಂಡ ಪ್ರೀತಿ' ಎಂದಿದ್ದಾರೆ ಅನುಪಮ. ಅನುಪಮಾರ ಮೊದಲ ಹೆಸರು ವೆಂಕಟಲಕ್ಷ್ಮೀ. 'ಅನುಪಮಾ' ಆದದ್ದು ನಂತರ, ಮದುವೆಯಾಗುವ ಹೊತ್ತಿಗೆ ಅವರು ಎಂ.ಬಿ.ಬಿ.ಎಸ್. ಮುಗಿಸಿ ವೈದ್ಯರಾಗಿದ್ದರು.

ನಿರಂಜನರ ಕುಟುಂಬ ಪ್ರೀತಿ ದೊಡ್ಡದು. ಅವರಿಗೆ ಕುಟುಂಬದ ಘಟಕದ ಮೇಲೆ ಶ್ರದ್ಧೆ ಮತ್ತು ನಿಷ್ಠೆ. ಮಹಿಳಾ ಸಮಾನತೆಯ ಕುರಿತು ಅವರದ್ದು ಕೇವಲ ಕತೆ-ಕಾದಂಬರಿಗೆ ಸಂಬಂಧಿಸಿದ್ದಲ್ಲ. ನಿತ್ಯ ಜೀವನದಲ್ಲೂ ಹಾಗೇ. ಅವರು ಅನುಪಮಾರನ್ನು ಏಕವಚನದಿಂದ ಕರೆಯುತ್ತಿರಲಿಲ್ಲ.

ನಿರಂಜನರದು ಶಿಸ್ತಿನ ಜೀವನ. ಅನುಪಮಾರೇ ಹೇಳಿದ್ದು. "ನಿರಂಜನರದ್ದು ತುಂಬಾ ಶಿಸ್ತಿನ ಬದುಕು. ಎಲ್ಲಾ ಕೆಲಸಗಳೂ ಕರಾರುವಕ್ಕಾಗಿ ಆಗಬೇಕು. ಪ್ರತಿಯೊಂದೂ ಪರಿಪೂರ್ಣವಾಗಬೇಕು. ಸ್ವಚ್ಛತೆಗೆ ಅವರು ತುಂಬಾ ಮಹತ್ವ ಕೊಡುತ್ತಿದ್ದರು. ಮನೆಯ ಎಲ್ಲಾ ಸಾಮಾನುಗಳು ಓರಣವಾಗಿರಬೇಕೆಂದು ಬಯಸುತ್ತಿದ್ದರು. ಉದಾಹರಣೆಗೆ ಅವರು ಬರೆಯುವ ಮೇಜೇ ಸಾಕು. ಒಂದು ಕಾಗದ, ಒಂದು ಗುಂಡುಪಿನ್ನು ಅತ್ತಿತ್ತ ಸರಿದಿರಬಾರದು. ನಾನೋ ಎಲ್ಲ ಗುಣಗಳಲ್ಲೂ ಇದಕ್ಕೆ ತದ್ವಿರುದ್ಧ. ಎಷ್ಟೋಬಾರಿ ಅವರು ನನ್ನ ಮೇಜಿನ ಮೇಲೆ ಹರಡಿರುತ್ತಿದ್ದ ಪುಸ್ತಕಗಳನ್ನು ಓರಣವಾಗಿಡುತ್ತಿದ್ದರು. ನನ್ನ ಬಾಲ್ಯದಲ್ಲೂ ನನಗೆ ಇಂಥ ಶಿಸ್ತಿನ ಶಿಕ್ಷಣವಾಗಿರಲಿಲ್ಲ. ಈಗ ನಿಧಾನವಾಗಿ ಎಲ್ಲವನ್ನು ಕಲಿಯತೊಡಗಿದೆ." (ನಿರಂಜನ ಅಭಿನಂದನ - ೧೯೭)

ಆ ಶಿಸ್ತು, ನಿಯಮಬದ್ಧತೆ, ಕಾರ್ಯೋನ್ಮುಖತೆ ಅವರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಅವರ ಶಿಸ್ತು ಮತ್ತು ಹಠದಿಂದಾಗಿಯೇ ಅವರು 'ಜ್ಞಾನ ಗಂಗೋತ್ರಿ' ಕಿರಿಯರ ವಿಶ್ವಕೋಶದ ಮುಖ್ಯ ಸಂಪಾದಕರಾಗಿ ಆರು ವರ್ಷಗಳಲ್ಲಿ ಮುಗಿಸುವ ಯೋಜನೆಯನ್ನು ಹೊಂದಿದ್ದ ಏಳು ಸಂಪುಟಗಳನ್ನು (೩೩ ಲೇಖನ, ೩೮೦೦ ರೇಖಾ ಚಿತ್ರ, ೩೭೧೦ ಛಾಯಾಚಿತ್ರ, ಮತ್ತು ೨೯೧ ಚಿತ್ರದಿಂದ ಕೂಡಿದ ೫೦೦೦ ಪುಟಗಳ) ನಾಲ್ಕು ವರ್ಷ ಒಂಬತ್ತು ತಿಂಗಳಲ್ಲಿ ಮುಗಿಸಿದರು. ಆ ಕಾಲದಲ್ಲಿ ಅವರು ನಾಲ್ಕು ವರ್ಷ ತಮ್ಮ ಎಲ್ಲಾ ಬರಹಗಳನ್ನು ನಿಲ್ಲಿಸಿ 'ಜ್ಞಾನ ಗಂಗೋತ್ರಿ'ಯ ಸಿದ್ಧತೆಯಲ್ಲಿ ಲೀನವಾಗಿದ್ದರು. ೧೯೬೯-೭೧ರ ಅವಧಿಯಲ್ಲಿ ಅವರು ಬೆಂಗಳೂರು ಮತ್ತು

ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿದ್ದರು. ೧೯೭೧ರ ಮಾರ್ಚ್ ೨೪ ರಂದು ಮೈಸೂರಿನ ಸೆನೆಟ್ ಹಾಲಿನಲ್ಲಿ ಹಠಾತ್ತನೆ ನಿರಂಜನರಿಗೆ ಪಾರ್ಶ್ವವಾಯು ಹೊಡೆಯಿತು. ಆದರೆ ಅವರ ಬುದ್ಧಿ, ದೃಷ್ಟಿಗಳಿಗೆ ತೊಂದರೆಯಾಗಲಿಲ್ಲ. ಬೇಗನೆ ಗುಣ ಹೊಂದಿ ಮತ್ತೆ ಗಂಗೋತ್ರಿಯ ಕೆಲಸದಲ್ಲಿ ತೊಡಗಿಕೊಂಡರು. ಆದರೆ ಅವರಿಗೆ ಹೊರಗಡೆ ತಿರುಗಾಡಲು ಆಗುತ್ತಿರಲಿಲ್ಲ. ಆದರೂ ಅವರು ನವಕರ್ನಾಟಕ ಪ್ರಕಾಶನದ ಯೋಜನೆಯಡಿ ೨೫ ಸಂಪುಟಗಳ ವಿಶ್ವಕಥಾಕೋಶದ ಸಂಪಾದನೆಯ ಭಾರವನ್ನು ಆಹ್ವಾನಿಸಿಬಿಟ್ಟರು. ತನ್ನ ಸೈದ್ಧಾಂತಿಕ ನಿಲುವಿಗೆ ವಿಶ್ವ ಸಾಹಿತ್ಯದಿಂದ ಸಾಕ್ಷಿ ಸಾಧಿಸುವ ಪ್ರಯತ್ನವೋ ಅಥವಾ ವಿಶ್ವಸಾಹಿತ್ಯದ ಸಾಕ್ಷಿಯಲ್ಲಿ ತನ್ನ ನಿಲುವನ್ನು ಪರೀಕ್ಷಿಸಿಕೊಳ್ಳುವ ಅವಕಾಶವೋ ತಿಳಿಯದು. ಕಥೆಗಳ ಆಯ್ಕೆಯಲ್ಲಿ ಅವರದೇ ಆಯ್ಕೆಗೆ ಮುಕ್ತ ಅವಕಾಶ.

ಈ ಸಂದರ್ಭದಲ್ಲಿ ಮತ್ತೆ ೧೯೮೨ರಲ್ಲಿ ಅವರಿಗೆ ಪಾರ್ಶ್ವವಾಯು ಆಘಾತವಾಯಿತು. ಈ ಸಲದ ಆಘಾತ ಇನ್ನೂ ಬಲವಾಗಿತ್ತು. ಮುಂದೆ ಅದು ಅವರ ಶಕ್ತಿಯನ್ನು ಕ್ಷೀಣಗೊಳಿಸುತ್ತಲೇ ಹೋಯಿತು. ಇಷ್ಟರ ಒಳಗೇ ಅವರ ಮಾಸ್ಟರ್‌ಪೀಸ್ (ಉಚ್ಚ್ಯಾಂಕದ) ಎನ್ನಬಹುದಾದ ಕಾದಂಬರಿ 'ಮೃತ್ಯುಂಜಯ' ಪ್ರಕಟವಾಗಿತ್ತು. ಅದರ ನಂತರ ಅವರು ಮೊದಲೇ ಹೆಸರಿಟ್ಟ 'ಹೆಜ್ಜೆ' ಎಂಬ ಹೆಸರಿನ ಕಾದಂಬರಿ ಬರೆಯುವ ಕನಸು ಹೊತ್ತಿದ್ದರು. ಅದು ಮಾನವನ ಹುಟ್ಟಿನಿಂದ ನಾಗರಿಕತೆ ವಿವಿಧ ಹಂತದಲ್ಲಿ ಇಟ್ಟ ಗುರುತಿನ 'ಹೆಜ್ಜೆ'ಯಾಗಿತ್ತು. ''ಸುಮಾರು ಎಂಟು ವರ್ಷಗಳಿಂದಲೂ ಅವರ ಮನಸ್ಸಿನಲ್ಲಿ ಬೆಳೆಯುತ್ತ ಬಂದ ಕಾದಂಬರಿ ಇದು. ಸಾವಿರಾರು ಪುಟಗಳಷ್ಟಿರುವ ಟಿಪ್ಪಣಿ ಅವರ ಸೀಮೋಲ್ಲಂಘನಕ್ಕೆ ಇಂಬು ಕೊಡುತ್ತದೆ'' ಎಂದು ಅನುಪಮಾ ಅಂದಿದ್ದರು. ಆದರೆ ಆ ಕನಸು ನನಸಾಗಲೇ ಇಲ್ಲ. ೧೯೭೮ರಲ್ಲಿ ಅನುಪಮಾರಿಗೆ ಕ್ಯಾನ್ಸರ್ ಆಯಿತು. ನಿರಂಜನರ ಕುಟುಂಬಕ್ಕೆ ಆದ ಮತ್ತೊಂದು ಆಘಾತವಿದು. ಏಳು ವರ್ಷಗಳಲ್ಲಿ ಮೂರು ಸಲ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯಾಯಿತು. 'ಕಷ್ಟತರ ಚಿಕಿತ್ಸೆಗಳವು ಎಲ್ಲ ವೇದನೆಗಳನ್ನು ಸಹಿಸಿ ಗೆದ್ದು ಬರಲು ನನಗೆ ಆಸರೆಯಾಗಿ ನಿಂತದ್ದು ನಿರಂಜನರ ಅನುರಾಗ ಎಂದರೆ ಉತ್ಪ್ರೇಕ್ಷೆಯ ಮಾತಲ್ಲ' ಎಂದು ಸ್ವತಃ ಅನುಪಮ ಅವರೇ ಹೇಳಿದ್ದಾರೆ.

೧೯೪೩ ರಲ್ಲಿ ಪ್ರಗತಿಶೀಲ ಸಂಘ ಅಸ್ತಿತ್ವಕ್ಕೆ ಬಂತು. ಅ.ನ.ಕೃ. ಅದರ ನೇತಾರರು. 'ಮಾನವನ ಸೃಷ್ಟ್ಯಾತ್ಮಕ ಶಕ್ತಿಯ ಬಗ್ಗೆ ತಿರಸ್ಕಾರ, ಒಂದು ಕುಲ ಅಥವಾ ಜನಾಂಗದ ಮೇಲೆ ಮತ್ತೊಂದರ ಅಧಿಕಾರ, ಜಾತಿ ಮತ್ತು ಮತೀಯರ ದ್ವೇಷ,' ಇದು ನಮ್ಮ ಜನತೆಯ ಹಿತಕರವಾದ ಪರಂಪರೆಗೆ ದೂರವಾಗಿದೆ. ಧ್ಯೇಯರಹಿತ ಜೀವನ, ಮೂಢನಂಬಿಕೆ, ನಿರಾಸೆ ಮತ್ತು ವಿಧಿವಾದ ಇವು ನಮ್ಮ ಬೆಳವಣಿಗೆಯನ್ನು ತಡೆಯುತ್ತವೆ.

"ನಮ್ಮ ಸಾಹಿತಿಗಳು ಜನತೆಯ ಸೇವೆಯಲ್ಲಿ ಒಂದುಗೂಡಬೇಕೆಂದೂ ಸುಖಮಯ ಸಮೃದ್ಧ ಜೀವನದ ಕಡೆಗೆ ಮುನ್ನಡೆಯುವಂತೆ ಜನತೆಯನ್ನು ತಮ್ಮ ಸೃಷ್ಟಾತ್ಮಕ ಕೃತಿಗಳ ಮೂಲಕ ಪ್ರೇರೇಪಿಸಬೇಕೆಂದೂ ನಾವು ಕರೆ ಕೊಡುತ್ತೇವೆ. (ಭಾವ ಬುದ್ಧಿ ಬದುಕು ನಿರಂಜನ: ೧೯೮೪:೮೩) ಎಂಬ ಪ್ರಗತಿಶೀಲ ಘೋಷಣೆ, ನಿರಂಜನರಿಗೆ ಸಮ್ಮತವಾದುದು. ಅವರ ಪ್ರತಿಯೊಂದು ಬರಹ ಮತ್ತು ಇತರ ಕೆಲಸ, ಸಂಘಟನೆಯ ಹಿನ್ನೆಲೆಯಲ್ಲಿರುವ ತುಡಿತ ಇದೇ ಆಗಿದೆ.

ಆಧುನಿಕ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಪ್ರಗತಿಶೀಲದ ಕಾಲ ಕಿರಿದಾದುದು. ಅದು ಹತ್ತೇ ವರ್ಷದಲ್ಲಿ ಶಿಥಿಲಗೊಂಡಿತು. ಪ್ರಗತಿಶೀಲದ ಸಫಲ ಕೃತಿಗಳು ಆಮೇಲೆ ಬಂದವು ಎಂಬುದು ಬೇರೆ ವಿಚಾರ.

೧೯೭೬ ರಲ್ಲಿ ದಾವಣಗೆರೆಯಲ್ಲಿ ಪ್ರಗತಿಪಂಥದ ಪ್ರಥಮ ಸಮ್ಮೇಳನ ನಡೆಯಿತು. ಆದಕ್ಕೆ ಒತ್ತಾಸೆ ಅವರದೇ. ಅವರೇ ಸಮ್ಮೇಳನಾಧ್ಯಕ್ಷರು. 'ಪ್ರಗತಿ ಪಂಥ' ಪ್ರಗತಿಶೀಲದ ಪುನರಾವರ್ತನೆಯಲ್ಲ ಪುನರುತ್ಥಾನ, ಪ್ರಗತಿಶೀಲದ ಮಾತ್ರವಲ್ಲ: ಇದು ಇನ್ನೂ ವಿಶಾಲವಾಗಿದೆ. ಬರಹಗಾರರು, ಕಲಾವಿದರು, ಜಾನಪದರು ಹೀಗೆ ಎಲ್ಲ ರಂಗದ ಸೃಜನಶೀಲರನ್ನು ಒಳಗೊಂಡಿದೆ. ಸಂವಹನ ಮಾಧ್ಯಮವನ್ನು ಯಾರ್‍ಯಾರು ಬಳಸುತ್ತಾರೋ ಅವರಲ್ಲೆಲ್ಲ ಪ್ರಗತಿಪರ ವಿಚಾರವನ್ನು ಮೂಡಿಸುವ ಪ್ರಯತ್ನ ಎಂದಿದ್ದಾರೆ. (ಮುಖತ: ೧೯೮೫ ಮೇ ೧-೨ ಆರ್. ನಾಗರಾಜರೊಡನೆಯ ಸಂದರ್ಶನ.)

ಪ್ರಗತಿಶೀಲತೆಯಲ್ಲಿ, ಮಾನವೀಯತೆಯಲ್ಲಿ ಅವರ ಬದ್ಧತೆ ಅಖಂಡವಾದುದು.

ಅವರು ಕರ್ನಾಟಕ ಪತ್ರಿಕೋದ್ಯಮ ಸಂಘದ ಕಾರ್ಯದರ್ಶಿಯಾಗಿ, ಮಂಗಳೂರು ಪ್ರಗತಿಶೀಲ ಸಂಘದ ಮತ್ತು ಜನತಾ ರಂಗಭೂಮಿಯ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದ್ದರು. ಹಾಗೆಯೇ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಕೂಡ ಕೆಲಸ ಮಾಡಿದ್ದಾರೆ.

ರಾಯಚೂರಿನಲ್ಲಿ ಜರುಗಿದ ೩೮ನೇ ಸಾಹಿತ್ಯ ಸಮ್ಮೇಳನದಲ್ಲಿ ಲೇಖಕರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದಾರೆ.

೧೯೭೨ರಲ್ಲಿ ಅವರ 'ಒಂಟಿ ನಕ್ಷತ್ರ ನಕ್ಕಿತು' ಕಥಾ ಸಂಕಲನಕ್ಕೆ ಕರ್ನಾಟಕ ರಾಜ್ಯ ಅಕಾಡೆಮಿಯ ಪ್ರಶಸ್ತಿ ಸಿಕ್ಕಿತು. ೧೯೭೪ರಲ್ಲಿ 'ಚಿರಸ್ಮರಣೆ' ಕಾದಂಬರಿಗೆ ಸೋವಿಯಟ್ ಪ್ರಶಸ್ತಿ, ೧೯೭೫ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೧೯೭೮ರಲ್ಲಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರ, ೧೯೭೬ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವದ ಗೌರವ ಅವರಿಗೆ ಸಂದಿತು. ಹಾಗೆಯೇ ಅವರ ಅನೇಕ ಕಾದಂಬರಿಗಳು ಅನೇಕ ಮರುಮುದ್ರಣಗೊಂಡಿದ್ದೂ ಅಲ್ಲದೆ ಹಿಂದಿ,

ಇಂಗ್ಲೀಷ್, ರಷ್ಯನ್, ಪೋಲಿಷ್, ಮಲಯಾಳಂ, ಮರಾಠಿ, ಬೆಂಗಾಲಿ ಮುಂತಾದ ಭಾಷೆಗಳಿಗೆ ಅನುವಾದಗೊಂಡಿವೆ.

ಅವರಿಗೆ ಇಬ್ಬರು ಹೆಣ್ಣು ಮಕ್ಕಳು - ಹಿರಿಯವಳು ತೇಜಸ್ವಿನಿ, ಎರಡನೆಯವಳು ಸೀಮಂತಿನಿ. ಇಬ್ಬರೂ ತಂದೆ ತಾಯಿಗಳಂತೆ ವಿದ್ವಾಂಸರು, ಲೇಖಕರು.

ನಿರಂಜನರ ಸ್ನೇಹಶೀಲತೆ ಅದ್ಭುತವಾದುದು. ಅವರಿಗೆ ಸಿಟ್ಟು ಬರುವುದಿಲ್ಲವೆಂತಿಲ್ಲ. ಆದರೆ ಅದು ಹೆಚ್ಚು ಕಾಲ ನಿಲ್ಲುವುದಿಲ್ಲ. ಹಾಗೆಯೇ ಪೂರ್ವಾಗ್ರಹ ಉಳಿಸಿ ಹೋಗುವುದಿಲ್ಲ. ಅವರು ಬೇಕಾದರೆ ಬಸವರಾಜಕಟ್ಟೀಮನಿ, ವ್ಯಾಸರಾಯ ಬಲ್ಲಾಳ, ಚದುರಂಗರಂಥ ದೊಡ್ಡವರಿರಲಿ, ಕಿರಿಯರಿರಲಿ, ಲೇಖಕರಲ್ಲದವರಿರಲಿ ಅವರ ಸ್ನೇಹದಲ್ಲಿ ಹೆಚ್ಚು ಕಡಿಮೆಯಿಲ್ಲ. ಅದಕ್ಕೆ ಜಾತಿ, ಧರ್ಮಗಳ ತಡೆಯಿಲ್ಲ. ಅವರು ಧರ್ಮ, ಜಾತಿಗಳ ಮಿತಿಯನ್ನು ಮೀರಿ ನಿಂತವರು. ವಿಶ್ವಮಾನವತೆ ಅವರ ಪಂಥ.

ಅಂತೆಯೇ ಅವರ ಸ್ನೇಹಿತರೆಲ್ಲ ಸೇರಿ ಪುತ್ತೂರಿನ ಕರ್ನಾಟಕ ಸಂಘದ ಆಶ್ರಯದಲ್ಲಿ ೧೯೮೬ ರಲ್ಲಿ ಅದ್ದೂರಿಯ ಸಮಾರಂಭ ಮಾಡಿ ಅಭಿನಂದನೆ ಗ್ರಂಥವನ್ನು ಅರ್ಪಿಸಿದರು.

ನಿರಂಜನರ ಅಂತ್ಯ ಕಾಲ ಸುಖಮಯವಾಗಿರಲಿಲ್ಲ. ಅನುಪಮಾ ಅವರು ತೀರಿಕೊಂಡ ನಂತರ ನಿರಂಜನರ ಆರೋಗ್ಯ ಕ್ಷೀಣಿಸುತ್ತಾ ಹೋಯಿತು. ಪಾರ್ಶ್ವವಾಯುವಿನ ಪರಿಣಾಮದಿಂದಾಗಿ ಮಾತು ಸಂಪೂರ್ಣ ನಿಂತಿತು. ಬುದ್ಧಿ ನಿಂತಿತು. ಸ್ಮರಣೆ ಹೋಯಿತು. ಕೊನೆ ಕೊನೆಗೆ ಆಹಾರವನ್ನು ಕೃತ್ರಿಮವಾಗಿ ಸೇರಿಸಬೇಕಾಗುತ್ತಿತ್ತು.

ಆಗ ತೇಜಸ್ವಿನಿ ಹೈದರಾಬಾದಿನಲ್ಲಿ ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ ಉದ್ಯೋಗಿಯಾಗಿದ್ದರು. ತಂದೆಯನ್ನು ಕೊನೆ ಕಾಲದಲ್ಲಿ ಅವರು ನೋಡಿಕೊಂಡರು.

ಇಂದು 'ನಿರಂಜನ' ನಮ್ಮ ಮುಂದೆ ಇಲ್ಲ. ಆದರೆ ಅವರ ಸಂದೇಶ - ಮೃತ್ಯುಂಜಯದ ಕೊನೆವಾಕ್ಯ - ''ಕತ್ತಲಾದ ಮೇಲೆ ಬೆಳಕು ಹರೀತದೆ. ಇದು ಸಾಮಾನ್ಯ ಅಂತ ತೋರುವ ಅಸಾಮಾನ್ಯ ವಿಷಯ. ನೆನಪಿಡಿ'' ನಮ್ಮೆದುರು ಇದೆ.

# ಅಧ್ಯಾಯ - ೨

## ಸಣ್ಣ ಕತೆಗಳು

೧೯೪೫ರಲ್ಲಿ ನಿರಂಜನರ ಮೊದಲ ಕಥಾ ಸಂಕಲನ ಪ್ರಕಟವಾಯಿತು. ಅವರ ಒಟ್ಟು ಕತೆಗಳನ್ನು ಧ್ವನಿ ಸಂಪುಟ ೧ ಮತ್ತು ೨ ರಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಕಥೆಯ ಪ್ರಾರಂಭದಲ್ಲಿ ಚಿಕ್ಕ ಸಂದರ್ಭಸೂಚಿ ಟಿಪ್ಪಣಿಯನ್ನು ಇಟ್ಟಿದ್ದಾರೆ. ಇದರಿಂದ ಅಭ್ಯಾಸಿಗಳಿಗೆ ತುಂಬ ಅನುಕೂಲವಾಗಿದೆ.

ಅವರು ಬರೆದ ಕತೆಗಳ ಸಂಖ್ಯೆ ೧೬೫. ಅವುಗಳಲ್ಲಿ ೧೫೬ ಮಾತ್ರ ಈ ಸಂಪುಟಗಳಲ್ಲಿ ಸಂಗ್ರಹವಾಗಿದೆ. ಉಳಿದ ಕತೆಗಳು ಲಭ್ಯವಿಲ್ಲ ಎಂದು ಅವರೇ ಟಿಪ್ಪಣಿಯಲ್ಲಿ ಸೂಚಿಸಿದ್ದಾರೆ.

ಅವರು ಬರೆದ ಮೊದಲ ಕನ್ನಡ ಕತೆ 'ರಾಷ್ಟ್ರಬಂಧು' ಪತ್ರಿಕೆಯಲ್ಲಿ ೧-೭-೧೯೩೭ ರಲ್ಲಿ ಪ್ರಕಟವಾಯಿತು. ಅದಕ್ಕೂ ಮೊದಲು ತಾನು 'ತುಳುನಾಡ್' ಎಂಬ ಪತ್ರಿಕೆಯಲ್ಲಿ ತುಳುವಿನಲ್ಲಿ ಕತೆ, ಕವನಗಳನ್ನು ಬರೆದೆ ಎಂದು ಅವರೇ ಹೇಳಿಕೊಂಡಿದ್ದಾರೆ. (ಬುದ್ಧಿ ಬಾವ ಬದುಕು.... (೧೯೮೪ ಪುಟ ೪೩-೧೮).

ನಿರಂಜನ ಬರೆದ ಮೊದಲ ಕತೆ 'ಮೋಹಜಾಲ' ಇದನ್ನು ಬರೆದವ 'ಕಿಶೋರ', 'ಕುಳಕುಂದ ಶಿವರಾಯ' ಎಂಬ ಹೆಸರಿನ ಪದಗಳ ಮೊದಲ ಅಕ್ಷರಗಳನ್ನು ಆಯ್ದು ತಾನೇ ಟಂಕಿಸಿಕೊಂಡ ಹೆಸರು. ಮುಂದೆ ಇವರು 'ಕತೆಗಾರ', 'ಕುಶಿರಾ' ಮುಂತಾದ ಹೆಸರಿನಲ್ಲಿಯೂ ಬರೆದಿದ್ದಾರೆ.

ಕಿಶೋರ 'ಮೋಹಜಾಲ' ಕತೆ ಬರೆವಾಗ ಆತನಿಗೆ ಕೇವಲ ಹದಿಮೂರು ವರ್ಷ. ವರ್ಷ ಹದಿಮೂರು ಆದರೂ ಆಗಲೇ ಅನೇಕ ಕತೆ ಕಾದಂಬರಿಗಳನ್ನು ಓದಿ ಭಾವಕೋಶವನ್ನು ತುಂಬಿಕೊಂಡಾಗಿದೆ. ಆ ಮುಖಾಂತರ ಸಮಾಜವನ್ನು ಕಣ್ಣಿಟ್ಟು ನೋಡುವ ಚುರುಕುತನವೂ ಪ್ರಾಪ್ತವಾಗಿದೆ. 'ಮೋಹಜಾಲ' ಹದಿಮೂರು ವರ್ಷದ ಹುಡುಗನ ಅನುಭವವಲ್ಲ. ಆದರೆ ಸಮಾಜ ನಿರೀಕ್ಷಣೆಯಿಂದ ಬಂದ ಅನುಭವ. ಕುತೂಹಲಕ್ಕಾಗಿಯಾದರೂ ಅವರ ವಸ್ತು - ತಂತ್ರವನ್ನು ಗಮನಿಸಬೇಕು. ಕತೆಯ ಸಾರಾಂಶ ಹೀಗೆ: ಉಮಾನಾಥ ಎಂಬ ಯುವಕ ಹಳ್ಳಿಯಿಂದ ನಗರಕ್ಕೆ ಬಿ.ಎ. ಕಲಿಯಲು ಹೋಗಿದ್ದಾನೆ. ಹೋಗುವಾಗಲೇ ಮದುವೆಯಾಗಿದೆ. ಅಲ್ಲಿ ಆತ ಅವನ ಸಹ ಅಧ್ಯಯನಿಯ ಮೋಹಕ್ಕೆ ಒಳಗಾಗಿದ್ದಾನೆ. ಮನೆಗೆ ಬರಲೊಲ್ಲ. ಕೊನೆಗೆ ಆತ

ತನ್ನ ಖರ್ಚಿಗೆ ಕಡಿಮೆಯಾಗಿ ಅವಳಿಂದ ಹಣ ಲಪಟಾಯಿಸಲು ಸಹ ಪ್ರಯತ್ನಿಸುತ್ತಾನೆಂದು ತೋರುತ್ತದೆ. ಅವನನ್ನು ಬಂಧಿಸುತ್ತಾರೆ. ಶಿಕ್ಷೆಯಾಗುತ್ತದೆ.

ಈ ಕತೆ ಪತ್ರಗಳ ಮುಖಾಂತರ ನಿರೂಪಿಸಲ್ಪಡುತ್ತದೆ. ವಸ್ತು ವಿಸ್ತಾರವನ್ನು ಅಳವಡಿಸುವುದರಲ್ಲಿ ಈ ತಂತ್ರ ಸಹಕಾರಿಯಾಗಿದೆ ಹೆಂಡತಿಯಿಂದ ಯುವಕನಿಗೆ ಬರುವ ಮೊದಲ ಪತ್ರ ಇದು.

''ಪ್ರಿಯಾ''

ನೀವು ಇನ್ನೂ ಮನೆಗೆ ಯಾಕೆ ಬರುವುದಿಲ್ಲ? ಪರೀಕ್ಷೆಯ ಫಲಿತಾಂಶವನ್ನಂತೂ ತಿಳಿಸಿಯೇ ಇಲ್ಲ. ನಾನು ನಿಮ್ಮನ್ನು ಕಂಡುದೆಂದರೆ, ಅಂದು, ಮದುವೆಯ ದಿವಸ ಕದ್ದು ಕಂಡದ್ದೇ ಸರಿ. ಕಳೆದ ವರುಷ ಸೆಕೆ ಕಾಲದ ರಜೆಯಲ್ಲಂತೂ ನೀವು ಮನೆಗೆ ಬರಲೇ ಇಲ್ಲ.... ನನ್ನ ಮನಸ್ಸು ನಿಮ್ಮನ್ನು ಕಾಣದೆ ತಳಮಳಗೊಳ್ಳುತ್ತಿದೆ. ಈ ಕಾಗದ ತಲುಪಿದ ಕೂಡಲೇ ಹೊರಟು ಬನ್ನಿರಿ. ಖರ್ಚಿಗೆ ನಿಮ್ಮ ಮಾವ ಹತ್ತು ರೂಪಾಯಿ ಕಳಿಸುತ್ತಾರಂತೆ. ಪರೀಕ್ಷೆಯ ಫಲಿತಾಂಶ ತಂತಿಯ ಮೂಲಕ ತಿಳಿಸಿರಿ.

ಆತ ಹೆಂಡತಿಯನ್ನೇ ವಿಷ ಹಾಕಿ ಕೊಲ್ಲುವ ಉಪಾಯ ಹೂಡುತ್ತಾನೆ. ಆ ಕಾರಣಕ್ಕೆ ಪೌಷ್ಟಿಕ ಎಂದು ಒಂದು ಔಷಧಿಯನ್ನು ಕಳಿಸುತ್ತಾನೆ. ಆದರೆ ಅದು ವಿಷ ಎಂದು ಗೊತ್ತಾಗುತ್ತದೆ. ಆದ್ದರಿಂದ ಅವನ ತಂದೆ ಬಯ್ದು ಪತ್ರ ಬರೆಯುತ್ತಾನೆ. ಅದರ ಪ್ರತೀಕಾರ ಎಂಬಂತೆ ಹೆಂಡತಿಯ ಅಪ್ಪ (ಮಾವ)ನಿಗೆ ಆತ ಪತ್ರ ಬರೆಯುವುದು ಹೀಗೆ.

''ನಿಮ್ಮ ಮಗಳನ್ನು ಯಾರಿಗಾದರೂ ಕೊಟ್ಟುಬಿಡಿರಿ. ನಿಮ್ಮ ಮಗಳು ನನಗೆ ತಕ್ಕ ಹೆಂಡತಿಯಲ್ಲ. ಗೊಡ್ಡು ವೈದಿಕ ಮುತ್ತೈದೆ. ಒಂದು ಬೈತಲೆ ಹಾಕಲು ಗೊತ್ತಿಲ್ಲ. ವಾಕಿಂಗ್ ಹೋಗಲು ತಿಳಿದಿಲ್ಲ. ಸಿನಿಮಾಕ್ಕೆ ನನ್ನೊಡನೆ ಬರುವಂತಿಲ್ಲ. ನಿಮಿಷ ನಿಮಿಷಕ್ಕೂ ರಾಮಸ್ಮರಣೆ. ಹಣೆಗೆ ಮುಕ್ಕಾಲಿನಷ್ಟಗಲದ ಕುಂಕುಮ ಇಡುವಂಥವಳು... ಇದಕ್ಕೆ ನನ್ನ ತಂದೆಯವರು ಒಪ್ಪಲಾರರೆಂದು ನನಗೆ ಗೊತ್ತು. ನಾನು ಈಗ ಸ್ವತಂತ್ರನು. ಸ್ವತಂತ್ರ ಯುಗದ ಸ್ವತಂತ್ರ ಕುಮಾರ.''

ಇಷ್ಟು ವರ್ಷಗಳ ಮೇಲೆ ಈ ಕತೆಯನ್ನು ತಿರುಗಿ ನೋಡಿದಾಗ ಕೆಲವು ಕುತೂಹಲಕಾರಿ ಅಂಶಗಳು ಹೊಳೆಯುತ್ತವೆ. ಇದು ಕತೆಯ ನೇಯ್ಗೆಯ ಕುಶಲತೆಯಿಂದಾಗಲೀ, ಭಾಷೆಯ ಮುಖಾಂತರವಾಗಲೀ ಅಲ್ಲ. ಬದಲಾಗಿ ವಾಸ್ತವತೆಯ ಖಾಸಾ ದಾಖಲೆಯಾಗಿದೆ.

ಬ್ರಿಟಿಷ್ ವಸಾಹತುಶಾಹಿ ಮುಖಾಂತರ ಬಂದ ಆಧುನಿಕತೆ ನಮ್ಮ ಮೇಲೆ ಮಾಡಿದ ಪ್ರಭಾವ ಪರಿಣಾಮ ಅನೇಕ. ಅದು ಕೇವಲ ಸಾಮಾಜಿಕ ಮಟ್ಟದಲ್ಲಿ

ಮಾತ್ರವಲ್ಲ. ದಾಂಪತ್ಯದಂಥ ಖಾಸಗಿ ಸಂದರ್ಭದಲ್ಲೂ ಪ್ರಭಾವ ಮಾಡಿತು. ಈ ಪ್ರಭಾವವನ್ನು ಒಳಿತು ಕೆಡಕುಗಳ ಮುಖಾಂತರ ನಾನು ಇಲ್ಲಿ ನೋಡುತ್ತಿಲ್ಲ. ಆದರೆ ಗ್ರಾಮೀಣ ಪ್ರದೇಶದಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೋದ ಯುವಕನ ಸ್ಪಂದನ ತೀರ ಸಂಕೀರ್ಣವಾದುದು. ತಾನು ಸ್ವತಂತ್ರ ಎನ್ನುವ ಮನೋವೃತ್ತಿಯನ್ನು ಆಧುನಿಕತೆಯು ಕೊಡುವ ಸ್ಥಿತ್ಯಂತರದ ಸ್ವರೂಪ ಸಂಕೀರ್ಣವಾದುದು. ಆದರೆ ಕತೆಯಲ್ಲಿ ಗೆಲ್ಲುವುದು ಮಾನವತೆ ಎಂಬುದು ಮುಖ್ಯ.

'ಬಹಿಷ್ಕೃತೆ' ಎಂಬ ಕತೆಯಲ್ಲಿ ಆಗಿನ ಕಾಲದ ಬ್ರಾಹ್ಮಣ ವಿಧವೆಯರ ಅಸಹಾಯಕತೆಯ ಬಗ್ಗೆ ಬರೆಯುತ್ತಾರೆ. ಇಂಥಹ ಕತೆಗಳಿಗೆ ಸ್ವತಃ ನಿರಂಜನರ ಅನುಭವವೇ ಸಾಕ್ಷಿಯಾಗುತ್ತದೆ. ಸ್ವತಃ ತನ್ನ ತಾಯಿಯ (ಬಾಲವಿಧವೆಯಾಗಿ ನಂತರ ಮಗು ನಿರಂಜನರನ್ನು ಹಡೆದಳು) ದಾರುಣ ಚಿತ್ರ ಅವರ ಕಣ್ಮುಂದೆ ಇತ್ತು. ಇದು ಅವರ ಸಾಹಿತ್ಯದಲ್ಲಿ ಆಗಾಗ ಕಾಣಿಸಿಕೊಳ್ಳುವುದುಂಟು. ಇದರ ಆತ್ಮೀಯವಾದ ಮತ್ತು ವಿಸ್ತೀರ್ಣವಾದ ಚಿತ್ರ ಸಾಕಾರಗೊಂಡಿರುವುದು, ಅವರ 'ಬನಶಂಕರಿ' ಎಂಬ ಕಾದಂಬರಿಯಲ್ಲಿ.

ಶ್ಯಾಮೆ ಗರ್ಭ ಹೊತ್ತ ನಂತರ ವಿಧವೆಯಾಗಿದ್ದಾಳೆ. ಬಡವೆ. ಊರಿನ 'ಧರ್ಮೋದ್ಧಾರಕ ಸಂಘ'ದ ಯಜಮಾನ ಪುರುಷೋತ್ತಮಶಾಸ್ತ್ರಿ ಶ್ಯಾಮೆಯ ಮೇಲೆ ಕಣ್ಣು ಹಾಕುತ್ತಾನೆ. ಆದರೆ ಅವಳು ಬಗ್ಗದಿದ್ದಾಗ ಅವಳ ಮಗು ಅವಳು ವಿಧವೆಯಾದ ಮೇಲೆ ಜಾರಿಣಿತನದಲ್ಲಿ ಹುಟ್ಟಿದ್ದು ಎಂದು ಸುದ್ದಿ ಹಬ್ಬಿಸುತ್ತಾನೆ. ಕೊನೆಗೆ ಗುರುಗಳಿಂದ ಸಾಮಾಜಿಕ ಬಹಿಷ್ಕಾರವನ್ನು ಹಾಕಿಸುತ್ತಾನೆ. ಕೊನೆಗೆ ಅವಳು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಅವಳು ಒಂದು ಪತ್ರವನ್ನು ಬರೆದಿಟ್ಟಿರುತ್ತಾಳೆ. ಕತೆ ಕೊನೆಯಾಗುವುದು ಹೀಗೆ.

''ಬಹಿಷ್ಕೃತೆ ಶ್ಯಾಮೆಯ ಮಾತು ಜನಜಾಗೃತಿಯನ್ನುಂಟು ಮಾಡದೇ? ನನ್ನ ತಲೆಯಲ್ಲೆಲ್ಲ ಪ್ರಶ್ನೋತ್ತರ ತರಂಗಗಳ ಸುಳಿದಾಟ. ಒಂದು ಲೋಟ ಕಾಫಿ ಸಿಕ್ಕಿದರಾಗುತ್ತದೆಂದಿತು ಮನಸ್ಸು. ನಿಜಕ್ಕೂ ಶ್ಯಾಮೆ ಬಹಿಷ್ಕೃತಳೇ? ಇದಕ್ಕಾಗಿ ಕಣ್ಣು ತೆರೆಯಬೇಕಾದುದು ಸಮಾಜ''

ಇಲ್ಲಿ ಸಮಾಜ ಸುಧಾರಣೆಯ ಧೋರಣೆ ಒಳಗೊಂಡಿದೆ 'ಒಂದು ಹಿಡಿ ಹುಲ್ಲು' ಕತೆಯ ಟಿಪ್ಪಣಿಯಲ್ಲಿ ಲೇಖಕರು ಹೀಗೆನ್ನುತ್ತಾರೆ. 'ಐದನೆಯ ವಯಸ್ಸಿನಲ್ಲೇ ಕಂಡಿದ್ದ ಒಂದೆರಡು ಗ್ರಾಮ ಚಾವಡಿ ವಿಚಾರಣೆಗಳ ಒಂದಂಶ ಈ ಕಥೆಯ ಇಂಧನವಾಗಿದೆ. ಸನ್ನಿವೇಶ, ಘಟನೆ ಕಾಲ್ಪನಿಕ. ತಾಯಿಯ ಸಾವು ತನ್ನ ಎಳೆಯ ಮನಸ್ಸಿನಲ್ಲಿ ಸುಳಿದಿದ್ದೀತೇನೊ? ಹಳೆಯ ಗಾಯ ಈ ಕತೆಕಟ್ಟಲು ಪ್ರೇರಣೆ, ಗಮನಿಸಬೇಕಾದ ಅಂಶ ಇಲ್ಲಿ ಸಹ ಮೂರ್ತರೂಪ ಪಡೆದಿದ್ದು, ಪಕ್ಕಾ ಪಕ್ಕಾ ವಾಸ್ತವಾಂಶ ಎಂಬುದು.

'ಹಿಡಿ ಹುಲ್ಲಿನ' ಸುಬ್ಬಕ್ಕ ಕೂಡ ಬಾಲ ವಿಧವೆ. ಅನಂತರ ಮಗುವನ್ನು ಹಡೆದವಳು. ಬಡವೆ, ಎಮ್ಮೆಯನ್ನು ಸಾಕಿಕೊಂಡು ಹೊಟ್ಟೆ ಹೊರೆದುಕೊಳ್ಳುವಾಕೆ. ಎಮ್ಮೆಗೆ ಒಂದಿಷ್ಟು ಹುಲ್ಲನ್ನು ತರಲು ತಿಮ್ಮಪ್ಪಯ್ಯನ ಮನೆಗೆ ಹೋಗಿ, ಆತನ ಆಕ್ರೋಶಕ್ಕೆ ಗುರಿಯಾಗಿ ಪಂಚಾಯತ ಕಟ್ಟೆ ಹತ್ತಬೇಕಾಗುತ್ತದೆ. ಆ ಜನರ ಎದುರೇ ಆತನಿಂದ ಒದೆ ತಿಂದು ಸಾಯುತ್ತಾಳೆ.

ಹೀಗೆ ಹೆಣ್ಣಿನ ಶೋಷಣೆ, ಬಡತನ ಇಲ್ಲಿಯ ಕತೆಗಳ ಒಂದು ಪ್ರೇರಣಾಂಶವಾದರೆ ಜಾತಿ ಮತ್ತು ಅಸ್ಪೃಶ್ಯತೆ ಇನ್ನೊಂದು ಅಂಶವಾಗಿದೆ.

'ದೇಗುಲದಲ್ಲಿ ಪಾದರಕ್ಷೆ' ಒಂದು ವಿಶಿಷ್ಟವಾದ ಕತೆ. ಸುಬ್ಬು ಕೂಲಿ ಲಿಂಗನ ಮಗ. ಆತ ಅಸ್ಪೃಶ್ಯ. ದೊಡ್ಡ ಸಮಾರಂಭದಲ್ಲಿ ಸವರ್ಣೀಯರು ಉಂಡು ಒಗೆದ ಎಂಜಲೆಲೆಯಿಂದ ಅನ್ನ ಸಂಗ್ರಹಿಸಿ ಹೊಟ್ಟೆ ತುಂಬಿಸಿಕೊಳ್ಳುವ ಜಾತಿ. ದೇವಸ್ಥಾನದಲ್ಲಿ ದೊಡ್ಡ ಸಮಾರಂಭ. ಮೂರನೇ ದಿನ ಮುಕ್ತಾಯ; ಆ ದಿನ ಉಂಡು ಒಗೆದ ಎಂಜಲೆಲೆ ಹೆಕ್ಕಲು ಲಿಂಗನ ಜಾತಿಯವರಿಗೆ ಕರೆ. ಆದರೆ ಎರಡನೇ ದಿನವೇ ಸುಬ್ಬುವಿಗೆ ಹೋಗುವ ಆಶೆ. ಹೊಟ್ಟೆಗೆ ಏನೂ ಇಲ್ಲದ್ದನ್ನು ಅರಿತ ತಾಯಿಯೂ ಹೋಗೆನ್ನುತ್ತಾಳೆ. ಸುಬ್ಬು ದೇವಸ್ಥಾನಕ್ಕೆ ಹೋಗುತ್ತಾನೆ. ಹೊರಗೆ ತನ್ನ ಜಾತಿಯವರು ಯಾರನ್ನೂ ಕಾಣದ ಆತ ತಾನು ಮೆಟ್ಟಿಕೊಂಡ ಮರದ ತೊಗಟೆಯ ಕೆರವನ್ನು ಕೈಯಲ್ಲಿ ಬಚ್ಚಿಟ್ಟುಕೊಂಡು ಒಳ ಪ್ರವೇಶಿಸುತ್ತಾನೆ. ಒಳ ಆವರಣದಲ್ಲಿ ಅವನನ್ನು ಬ್ರಾಹ್ಮಣರು ನೋಡಿಬಿಡುತ್ತಾರೆ. ಎಲ್ಲ ಮೈಲಿಗೆಯಾಯಿತೆಂದು ಪೂಜಾರಿಗಳು ಬೊಬ್ಬೆ ಹೊಡೆದರು. ಮುಗಿಯಿತು. ಆರು ವರ್ಷದ ಸುಬ್ಬುವನ್ನು ಹಿಡಿದು ಹೊಡೆದರು. ಸುದ್ದಿ ಕೇಳಿ ಲಿಂಗ ಓಡಿಬಂದು ತಪ್ಪಿಸಿಕೊಂಡ.

ಕೆಲವೇ ದಿನಗಳಲ್ಲಿ ಅಧಿಕಾರಿ ವರ್ಗದ 'ದೊರೆ' ಕೆಳ ಅಧಿಕಾರಿಯ ಜೊತೆ ದೇವಸ್ಥಾನಕ್ಕೆ ಬಂದ. ಆತ ಒಳಗೆ ಬರುವಾಗ ಬೂಟನ್ನು ಹಾಕಿಕೊಂಡೇ ಬಂದ. ಪುರೋಹಿತರು ದೇವರಿಗೆ ಆರತಿ ಮಾಡಿ ಪ್ರಸಾದ ಕೊಡಲು ಓಡಿ ಬಂದರೆ ಆತ (ಇಂಗ್ಲೀಷ್ ದೊರೆ) ಅದನ್ನು ತಿರಸ್ಕರಿಸಿಯೇ ನಡೆದ. 'ಅವನೊಡನೆ ಹೊಲೆಯನಿದ್ದ' 'ಪಾದರಕ್ಷೆ ಕಳಚಲಿಲ್ಲ' ಇತ್ಯಾದಿ ಕೆಲವರು ಮಾತಾಡಿಕೊಂಡರೆ ಮೊಕ್ತೇಸರರು 'ಶ್‌ಽಽ' ಎಂಬ ಶಬ್ದದಿಂದ ಬಂದ್ ಮಾಡಿಸಿಬಿಡುತ್ತಾರೆ.

ಒಣಗಿದ ಹುಲ್ಲನ್ನು ಕೊಯ್ಯುತ್ತಿದ್ದ ಲಿಂಗ ಒಂದು ದಿನ ಸ್ವತಃ ಮೊಕ್ತೇಸರರೇ ಕೆರಮೆಟ್ಟಿ ದೇವಸ್ಥಾನದ ಒಳ ಹೊಕ್ಕುವುದನ್ನು ನೋಡುತ್ತಾನೆ. ಕೆರ ಮೆಟ್ಟಿಕೊಂಡೇ ಪೂಜಾರ್ಥಿಗಳು ದೇಗುಲಕ್ಕೆ ಬರುತ್ತಿದ್ದುದನ್ನು ನೋಡಿದ. ಸಮಾಜ ಧನಿಕರದು. ಅವರು ಹೇಗೂ ಇರಬಹುದು. ನಾವು ಮಾತ್ರ ನಿಯಮ ಪಾಲಿಸಬೇಕು, ಎಂದುಕೊಳ್ಳುತ್ತಾನೆ. ಮಗ ''ನಾನು ನಾಲ್ಕರಿಂದ ಐದಕ್ಕೆ ಪಾಸಾದೆ ಅವ್ವಾ'' ಎಂದ. ಲಿಂಗ ಮಗನನ್ನು

ತಬ್ಬಿಕೊಂಡ. ದೇವಸ್ಥಾನದಲ್ಲಿ ಪಾದರಕ್ಷೆಯ ಗಲಾಟೆ ನಡೆದ ಮೇಲೆ ಆತ ಮಗನನ್ನು ಆಲಂಗಿಸಿರಲಿಲ್ಲ. ಲಿಂಗನ ಕಣ್ಣೆದುರು, ಸುಬ್ಬ ದೊರೆಯ, ಮೊಕ್ತೇಸರರ, ಪೂಜಾರಿಯ ಪಾದರಕ್ಷೆ ಎಲ್ಲವೂ ಕಾಣುತ್ತಿದ್ದಿರಬೇಕು. ಆಗ "ಹಕ್ಕಿಯೊಂದು ಅವನು ತಂದಿದ್ದ ಹುಲ್ಲಿನ ಮೇಲೆ ಕುಳಿತು ಚಿಕ್ ಚಿಕ್ ಎಂದಿತು. ಲಿಂಗ ಕಣ್ಣರಳಿಸಿ ನೋಡಿದ. ಸುಬ್ಬ ನಗುತ್ತಿದ್ದ" ಎಂದು ಕತೆ ಮುಗಿಯುತ್ತದೆ. ಅಂತಿಮ ಜಾತಿಯ ಬವಣೆ, ಪುರೋಹಿತರುಗಳ ಡಾಂಭಿಕತೆ, ಅಧಿಕಾರಿಗಳ ಎದುರು ಹೇಡಿತನ ಹಾಗೂ ಲಿಂಗನ ಜಾತಿಯವರ ವಿಮೋಚನೆ ವಿದ್ಯೆಯಲ್ಲಿ ಇದೆ ಎಂಬ ಆಶೆಯ ಅಂಕುರವನ್ನು ಕತೆ ತೆರೆದು ತೋರಿಸುತ್ತದೆ.

'ಕಿಶೋರ'ನ ಅಂತರಂಗವನ್ನು ತಟ್ಟಿದ ಇನ್ನೊಂದು ಭಾವಾಂಶ ದೇಶದ ಸ್ವಾತಂತ್ರ್ಯಾಂದೋಲನ. ಗಾಂಧೀಜಿಯ ದಟ್ಟವಾದ ಪ್ರಭಾವ ಕಿಶೋರನ ಮೇಲೆ ಆಗಲೇ ಆಗಿದೆ. ದೇಶದ ಬಂಧನ ವಿಮೋಚನೆಗಾಗಿ ಮನಸ್ಸು ಹಾತೊರೆಯುತ್ತಿದೆ. ಅಂಥ ಹೋರಾಟದ ಭಾವೋದ್ವೇಗ ಕೂಡ 'ಕಿಶೋರ'ನ ಬರವಣಿಗೆಯ ಸ್ಫೂರ್ತಿ ಬಿಂದುವೇ ಆಗಿದೆ.

'ಸ್ವಾತಂತ್ರ್ಯಕೇ ಭೀಷಣ ರಣಮೇ' ದೇಶದ ಹೊರಗಿನ ಚಿತ್ರವಾದರೆ 'ಜಡುಗಡೆ' ದೇಶದ ಒಳಗಿನದು. ಬಡವನಾದ ಯುವಕನೊಬ್ಬನ ಹೋರಾಟದ ಕತೆ.

ಗಂಡು ಹೆಣ್ಣಿನ ಪ್ರೇಮ, ಸುಖಾಂತ, ದುರಂತದ ಕತೆಗಳೂ ಇವೆ. ಸಂಪ್ರದಾಯ, ಜಾತಿಭೇದ, ವರದಕ್ಷಿಣೆ, ಬಡತನ ಇತ್ಯಾದಿಗಳಿಂದ ಹೆಣ್ಣಿಗಾಗುವ ಶೋಷಣೆಯ ಚಿತ್ರವಿದೆ. ಆ ಮಧ್ಯೆಯೂ ಹೃದಯವಂತ ಹಿರಿಯರು, ಅಸಹಾಯಕ ಯುವಕರೂ ಕಾಣಸಿಗುತ್ತಾರೆ. ಆದರೆ ಲೈಂಗಿಕ ಕೇಂದ್ರೀಕೃತ ಸಮಸ್ಯೆಯ ಸುಳಿ ಇಲ್ಲ. ಕೈಹಾಕಿದಲ್ಲಿ ಕಾಣಸಿಗುವುದು ಬಡತನದ ಕರಾಳ ಶೋಷಣೆಯ ಚಿತ್ರವೇ. ಅದಕ್ಕೆ ಹೆಚ್ಚಾಗಿ ಬಲಿಯಾಗುವವರು ಹೆಂಗಸರೆ.

ಈ ಎಲ್ಲದರ ಒಂದು ಸಫಲವಾದ ಚಿತ್ರಣ 'ಅವರು'. ಅನೇಕ ದೃಷ್ಟಿಯಿಂದ ಗಮನೀಯ ಕತೆ. ಇದನ್ನು ಬರೆದುದು ೧೯೪೪ರಲ್ಲಿ. ಆಗ ಕಿಶೋರ, ಕುಳಕುಂದ ಶಿವರಾಯನಾಗಿ ಪರಿವರ್ತನೆ ಹೊಂದುತ್ತಾನೆ. ಅಲ್ಲಿಂದ ಅವರು ನಿಜ ಹೆಸರಿಂದ ಬರೆಯತೊಡಗುತ್ತಾರೆ. ಅವರ ಬರವಣಿಗೆಯಲ್ಲಿ ಕಿಶೋರತ್ವದ ಮುಗ್ಧತೆ ಮಾಯವಾಗುತ್ತದೆ. ಆಗ ಅವರಿಗೆ ಹದಿನೇಳು ವರ್ಷ. ಇಷ್ಟರಲ್ಲೇ ಅವರು ಮೂವತ್ತಕ್ಕಿಂತ ಹೆಚ್ಚು ಕತೆ ಬರೆದಿದ್ದಾರೆ. ಮುಖ್ಯವಾಗಿ ಈ ಕತೆಯಲ್ಲಿ ಹಿಂದಿನೆಲ್ಲ ಕತೆಗಳಿಗಿಂತ ಶಕ್ತಿಯುತವಾಗಿ ಬಡತನದ ಬವಣೆ ಮೂರ್ತಗೊಂಡಿದೆ. ಅದಕ್ಕೆ ಕಾರಣ ಅವರ ಘಟನಾ ನಿರೂಪಣೆಯಲ್ಲಿ ಬೆಳೆದ ಕೌಶಲ. ಹಾಗೆಯೇ ಭಾವಸ್ಪಂದಿಯಾದ

(ಭಾವುಕ ಅಲ್ಲ) ಭಾಷೆ. ಇಲ್ಲಿಯ ವಿವರಗಳು ಚಿತ್ರಣವನ್ನು ದಟ್ಟವಾಗಿಸುತ್ತದೆ. ಅಲ್ಲದೆ, ತಾತ್ವಿಕವಾಗಿ ಕೂಡ ಮಾನವೀಯ ಬಂಧುತ್ವದ ವಿಸ್ತರಣೆ ಇಲ್ಲಿದೆ.

ಚಿನ್ನಮ್ಮನ ಮಗ 'ಶಿ' ಐದು-ಆರರ ಹರೆಯದಲ್ಲಿ ತಾಯಿಯ ಸಂಗಡ ಒಮ್ಮೆ ಪರವೂರಿಗೆ ಹೋದಾಗ ತಮ್ಮಂತೆಯೇ ಬಡತನದಲ್ಲಿ ಬೇಯುತ್ತಿರುವ ಕುಟುಂಬದ ಪರಿಚಯವಾಗುತ್ತದೆ. ಆ ಕುಟುಂಬಕ್ಕೆ ಒಬ್ಬ ಅಜ್ಜಿಯೇ ಯಜಮಾನಿ, ಆನಂದು ಎಂಬ ಮೊಮ್ಮಗ; ಮತ್ತಿಬ್ಬರು ಹೆಣ್ಣುಮಕ್ಕಳು.

ಮತ್ತೆ ಒಂದೆರಡು ವರ್ಷದ ಮೇಲೆ ಹೋದಾಗ 'ಶಿ' ಅವರ ಮನೆಯಲ್ಲೇ ಕೆಲದಿನ ಉಳಿಯಬೇಕಾಯಿತು. ''ದರಿದ್ರರಾದ ನಮಗೆ ಹುಟ್ಟು ದರಿದ್ರರಾದ ಅವರು ಕೈಮೀರಿ ಸೌಕರ್ಯ ಒದಗಿಸಿಕೊಟ್ಟರು. ಗೆಳೆತನ ಬಂಧುತ್ವವಾಯಿತು. ಆಗಲೇ ಎಂಬತ್ತರ ಹೊಸ್ತಿಲನ್ನು ದಾಟಿದ್ದ ಮುದುಕಿ ನನಗೆ ಅಜ್ಜಿಯಾದಳು. ಎಂದಿಲ್ಲದ ಅಣ್ಣನನ್ನು ಅಕ್ಕನನ್ನು ಆಗ ಪಡೆದೆ'' ಎಂದುಕೊಳ್ಳುತ್ತಾನೆ.

ಇನ್ನೊಮ್ಮೆ ದಸರೆಯಲ್ಲಿ ಅವರ ಮನೆಗೆ 'ಶಿ' ಹೋಗುತ್ತಾನೆ. ''ಲೋಕದಲ್ಲಿ ದುಃಖಗಳೆಂದರೆ ನಮಗೆ ಮಾತ್ರವೇ ಎಂದುಕೊಂಡಿದ್ದ 'ಶಿ' ಆ ಮನೆಯ ಅವಸ್ಥೆಯನ್ನು ಕಂಡಾಗ ಜ್ಞಾನೋದಯವಾಗುತ್ತದೆ. ತನ್ನ ಅಜ್ಜಿ, ಬಡಕಲು ದೇಹದ ಅಜ್ಜಿ, ಹಾಸಿಗೆ ಹಿಡಿದು ಮಲಗಿದ್ದರು. ಒಂದೇ ಸವನೆ ಗೊಣಗುಟ್ಟುತ್ತ, ಹೂಂ ಗುಟ್ಟುತ್ತ ಕೆಮ್ಮುತ್ತಿದ್ದರು.

ಕೆಲವು ತಿಂಗಳ ಮೇಲೆ ಉದ್ಯೋಗ ದೊರಕಿಸಿಕೊಂಡ ನಂತರ ಅಜ್ಜಿಯನ್ನು ಕಾಣಲು ಹೋದರೆ ಅವಳು ಸತ್ತುಹೋದ ಸಂಗತಿ ತಿಳಿಯುತ್ತದೆ.

''ನನ್ನ ಬಂಧುಗಳು ಇಹವನ್ನಗಲಿದುದನ್ನು ಆ ತನಕ ಕಂಡದ್ದು ಇಲ್ಲ. ಆ ಬಗ್ಗೆ ಕೇಳಿಯೂ ಇಲ್ಲ. ಆದರೆ ಅಜ್ಜಿಯೊಬ್ಬಳು ಅನಾಯಾಸವಾಗಿ ದೊರೆತವಳು ಎಂಟೇ ದಿನಗಳ ಹಿಂದೆ ತೀರಿ ಹೋದುದಾಗಿ ಕೇಳಿದೆ. ನಾನಲ್ಲಿ ನಿಲ್ಲಬೇಕು: ಉತ್ತರ ಕ್ರಿಯೆಯಾಗದೆ ಹೊರಡದಾದೆ. ಅವರು ನನ್ನವರು'' ಎಂದು ಕತೆ ಮುಗಿಯುತ್ತದೆ. ರಕ್ತ ಸಂಬಂಧದ ಹೊರಗಿನ ಸಂಬಂಧವೊಂದು ಘನಗೊಳ್ಳುವುದು ಇಲ್ಲಿಯ ಹೆಚ್ಚುಗಾರಿಕೆ.

ಇಂಥ ವರ್ಗಮೂಲವಾದ ಅಥವಾ ಮಾನವೀಯ ಮೂಲವಾದ ಸಂಬಂಧದ ಆಶಯ ನಿರಂಜನರಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವುದುಂಟು. 'ವಿಮೋಚನೆ' ಕಾದಂಬರಿಯಲ್ಲಿ ಬರುವ ಓರ್ವ ಅಜ್ಜಿ ಕೂಡ ಇದೇ ಪ್ರಕಾರಕ್ಕೆ ಸೇರಿದವಳು.

-೨-

ಇಲ್ಲಿಂದ ಮುಂದೆ ನಿರಂಜನರ ಕತೆಗಳಲ್ಲಿ ಹೊಸ ಆಯಾಮ ಕಾಣಿಸಿಕೊಳ್ಳುತ್ತದೆ. ಕಲಾತ್ಮಕತೆಯ ಕಾಳಜಿಯಲ್ಲಿ ಬೆಳವಣಿಗೆ ಕಂಡಂತೆ ಸೈದ್ಧಾಂತಿಕತೆ ಬಹಳ ಮುಖ್ಯವಾದ ಪಾತ್ರ ವಹಿಸುತ್ತದೆ.

ಗಾಂಧಿವಾದ, ಸಮಾಜವಾದದ ಪರಿಚಯ ಪ್ರಭಾವ ಹೊಂದಿದ ಲೇಖಕರಿಗೆ ಮಾರ್ಕ್ಸ್‌ವಾದದ ಪರಿಚಯವಾಗುತ್ತದೆ.

ಕಯ್ಯೂರಿನ ರೈತ ಬಂಡಾಯಕ್ಕೆ, ಭೂಗತ ಜಗತ್ತಿನಲ್ಲಿಯ ಜನಸಂಪರ್ಕಗಳು ಅವರ ತಾತ್ವಿಕತೆಯನ್ನು ಹರಿತಗೊಳಿಸುತ್ತದೆ. ಮುಂದೆ ೧೯೪೨ರಲ್ಲಿ ಕಮ್ಯುನಿಸ್ಟ್ ಪಕ್ಷದ ಅಧಿಕೃತ ಸದಸ್ಯರಾಗುತ್ತಾರೆ. ೧೯೪೩. ರಲ್ಲಿ ಜೂನ್‌ನಲ್ಲಿ ಮುಂಬೈನಲ್ಲಿ ನಡೆದ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸುತ್ತಾರೆ.

ಇವೆಲ್ಲದರ ಪರಿಣಾಮ ಅವರ ಕತೆಗಳ ಮೇಲೆ ಆಗಿದೆ. ಅವುಗಳಲ್ಲಿ ಧನಾತ್ಮಕ ಪರಿಣಾಮವೆಂದರೆ ಸಮಸ್ಯೆಯನ್ನು ಒಂದು ಆಳವಾದ ಸೈದ್ಧಾಂತಿಕ ಚೌಕಟ್ಟಿನಲ್ಲಿ ನೋಡುವುದು ಮತ್ತು ವಿಶ್ಲೇಷಿಸುವುದು. ಹಾಗೆಯೇ ಮೊದಲಿನಿಂದಲೇ ಬಂದ ವಾಸ್ತವತೆಯ ಅನುಭವ ಸಮಾಜವಾದಿ ವಾಸ್ತವವಾಗಿ, ಸಮಾಜವಾದಿ ರಮ್ಯತೆಯಾಗಿ ಪರಿವರ್ತನೆ ಹೊಂದುವುದು. ಅಂದರೆ ಮೊದಲು ಲೇಖಕನ ಎದುರು ಅನುಭವ, ಮುಖ್ಯವಾಗಿ ಬಡತನದ ಅನುಭವವಿತ್ತು. ಆಗ ಅದು ಏಕೆ ಎಂಬ ಪ್ರಶ್ನೆ ಕೇಳಿಕೊಳ್ಳುತ್ತಿರಲಿಲ್ಲ. ಆದರೆ ಇಲ್ಲಿ ಅಂಥ ಪ್ರಶ್ನೆ ಮುಂದಾಗುತ್ತದೆ. ಇಲ್ಲಿಯ ಮುಖ್ಯಧಾರೆ ಇದು.

ಎರಡನೆಯದಾಗಿ ಕಥಾ ವಸ್ತು ಗ್ರಾಮೀಣ ಪ್ರದೇಶದಿಂದ ನಗರದ ಕಡೆ ಒಲಿಯುತ್ತದೆ. ಸ್ವತಃ ಕಾರ್ಮಿಕ ಸಂಘಟನೆಯಲ್ಲಿದ್ದ ಲೇಖಕ, ಕಾರ್ಮಿಕರ ಮತ್ತು ನಗರ ಪ್ರದೇಶದ ಬಡತನದ ಮತ್ತು ಸುಲಿಗೆಯ ರೀತಿಯ ಖಾಸಾ ಅನುಭವವನ್ನು ಹೊಂದುತ್ತಾರೆ. ಮತ್ತು ತಮ್ಮ ಕತೆಗಳಲ್ಲಿ ಅದನ್ನು ಸೆರೆ ಹಿಡಿಯುತ್ತಾರೆ. ಅದರ ಚಿತ್ರಣದಲ್ಲಿ ಒಂದು ಬಗೆಯ ವೀರ ಗುಣ ಕಾಣಿಸಿಕೊಳ್ಳುತ್ತದೆ. ಇಂಥ ಸಂದರ್ಭದಲ್ಲಿ ಸಿದ್ಧಾಂತ ಹೆಚ್ಚು ಎದ್ದು ಕಾಣುವಂತಾಗಿ ಕಲಾತ್ಮಕತೆಯ ಮಿತಿಗೆ ಒಳಗಾಗುತ್ತದೆ.

"ಬಾಪೂಜಿ: ಬಾಪೂ" ಮಹಾತ್ಮಾ ಗಾಂಧೀಜಿ ೧೯೪೧ ರಲ್ಲೇ ಕೊಲೆಯಾದರೆಂದು ಕಲ್ಪಿಸಿ ಬರೆದ ಕತೆ ಪ್ರಕಟವಾದದ್ದೂ ೧೯೪೧ ರಲ್ಲೇ. ಕತೆ ಶುರುವಾಗುವುದು ಭಾರತಕ್ಕೆ ಸ್ವಾತಂತ್ರ್ಯ ಬಂತು ಎಂಬ ತಿಳಿವಳಿಕೆಯಿಂದ. ಈ ಕತೆಯೊಳಗೆ ಚಿತ್ರಣಗೊಂಡ ಸಾಮಾಜಿಕ ಸ್ಥಿತಿ, ಬಡವರ ಶೋಷಣೆ ಇಂದಿನ ವಾಸ್ತವ ಕೂಡ ಆದಂತಿದೆ.

ಕಾರ್ಖಾನೆಯ ಕರ್ಣಭೇದಕ ಸದ್ದು ಚಲಿಸುವ ಯಂತ್ರಗಳ ಭೀಕರ ಸದ್ದು. ಅದರ ಮಾಲಿಕ ರಾಮಾರಾಮಜಿ ಹಿಂದಿನಿಂದಲೂ ಉದ್ದಿಮೆದಾರ, ಬಂಡವಾಳಶಾಹಿ ಪದ್ಧತಿಯ ಆಧಾರದ ಸ್ತಂಭ ಉತ್ಪಾದನಾ ಶಾಖೆಯ ಸಮಿತಿಯ ಸದಸ್ಯ. ಜನತೆಯ ಮತದಾನದ ಸೋಗಿನ ಮೂಲಕ ಆ ಹುದ್ದೆಗೆ ಏರಿದವನು. ಹಳ್ಳಿಯಿಂದ ನಗರಕ್ಕೆ ಬಡವರ ಆಕರ್ಷಣೆ; ಆದರೆ ಇಲ್ಲಿ ಬಂದ ಬಡವ ಇನ್ನೂ ಬಡವರಾಗುತ್ತಾರೆ.

''ದಿವಂಗತ ಬಾಪೂಜಿಯವರ ಸ್ಮಾರಕವಾಗಿ ಎಲ್ಲರೂ ಸದಾಕಾಲವೂ ಖಾದಿ ಟೋಪಿಗಳನ್ನು ಧರಿಸಬೇಕು'' ಎಂದು ಕೇಂದ್ರ ಸರಕಾರದ ಆಜ್ಞೆ, ಎಂಥ ವ್ಯಂಗ್ಯ!

ಸೇಠಜಿ ನಿದ್ರಿಸುತ್ತಿದ್ದರು. ಅವರ ಗುಡಾಣ ಹೊಟ್ಟೆ ನಿದ್ರಿಸುತ್ತಿತ್ತು. ಅವರ ಸ್ವಪ್ನದಲ್ಲಿ ಗಾಂಧಿ ಕಾಣಿಸಿಕೊಳ್ಳುತ್ತಾರೆ. ''ನನಗೆ ಪ್ರಣಾಮ ಮಾಡುವ ಯೋಗ್ಯತೆ ಇಲ್ಲ ನಿನಗೆ'' ಗಾಂಧೀಜಿ ರುಂಡ ಸಮಾಧಾನವಾಗಿ ಮಾತಾಡಿತು. ''ಸತ್ಯ? ಅಹಿಂಸೆ? ಗ್ರಾಮಗಳ ಉದ್ಧಾರ?'' ಸೇಠಜಿಗೆ ಪುನಃ ನಿದ್ರೆ.

''ಅಹಿಂಸೆ ಆ ಮಾತಿಗೆ ಅರ್ಥವಿಲ್ಲ.'' ಕೂಲಿಕಾರರಿಗೆ ಹಿಂಸೆ ಕೊಡದೇ ಹೋದರೆ ಅವರು ದುಡಿಯುವರೇ?'' ಗ್ರಾಮೋದ್ಧಾರ ಜಮೀನುದಾರರು ಆ ಭಾರ ಹೊತ್ತಿರುವಲ್ಲಿ! ಇಷ್ಟರಿಂದ ಬಾಪೂಜಿ ಸಂತುಷ್ಟರಾಗಬೇಕಲ್ಲವೇ? ಈ ಸರಕಾರ ನಮ್ಮದಲ್ಲ. ಬಂಡವಾಳಗಾರರು ನಮಗೆ ಮೋಸ ಮಾಡಿದ್ದಾರೆ. ಸಾಮ್ರಾಜ್ಯಶಾಹಿ ನೊಗಕ್ಕೆ ಹೇಗೆ ಹೆಣಗಿದೆವೋ ಹಾಗೆಯೇ ಈ ಅನ್ಯಾಯದ ಸರಕಾರದ ಅಂತ್ಯಕ್ಕಾಗಿ ಹೆಣಗೋಣ ಎಂಬ ಒಂದು ಧ್ವನಿ ಕೇಳುತ್ತದೆ. ಹರಿಜನ? ಆ ಪದ, ರೂಢಿಯಿಂದಲೇ ಅಳಿಸಿಹೋಗುತ್ತದೆ.

''ನನ್ನಲ್ಲಿ ವಿಶ್ವಾಸವಿಟ್ಟಿದ್ದ ಅಪಾರ ಜನಸ್ತೋಮವನ್ನು ನೀವು ಉಪಾಯದಿಂದ ವಂಚಿಸಿದ್ದೀರಿ'' ಬಾಪೂಜಿಯ ಧ್ವನಿ. ಕತೆಯ ಕೊನೆ ಊರುಗೋಲಿನ ಆ ಪಥಿಕರು - ಬಾಪೂಜಿಯ ಪ್ರತಿಛಾಯೆ ಕೊನೆಯಿಲ್ಲದ ಆ ಹಾದಿಯಲ್ಲಿ ನಡೆಯುತ್ತಿದ್ದರು. ಉಷಾ ಮೆಲ್ಲ ಮೆಲ್ಲನೆ ಎಚ್ಚರಾಗುತ್ತಿದ್ದಳು.

ಆದರೆ ಜಗತ್ತು ಇನ್ನೂ ಎಚ್ಚತ್ತಿಲ್ಲ. ಎಚ್ಚರಗೊಳ್ಳಬೇಕೆಂಬ ಆಶಯ ಇಲ್ಲಿಯದು.

ಎರಡನೇ ಜಾಗತಿಕ - ಯುದ್ಧದ ಮಹಾಬೇಗೆ ನಿರಂಜನರ ಕೃತಿಯಲ್ಲಿ ಮತ್ತೆ ಮತ್ತೆ ಬರುತ್ತದೆ. ಯುದ್ಧ ಕೇವಲ ರಣರಂಗದಲ್ಲಿ ಮಾತ್ರವಲ್ಲ. ಅದರ ದುಷ್ಪರಿಣಾಮ ಬಡವರ ಬಲಿತೆಗೆದುಕೊಳ್ಳುತ್ತದೆ. ವಿಚಿತ್ರವಾದ ರೀತಿಯಲ್ಲಿ ಸೂಕ್ಷ್ಮವಾದ ರೂಪದಲ್ಲಿ ಸಿರಿವಂತ ವ್ಯಾಪಾರಿಗಳ ಮನಸ್ಸು ರಣಹದ್ದಿನಂತಾಗುತ್ತದೆ. ಪಿಶಾಚಿ ಸಂಚಾರ ನಡೆಯುತ್ತದೆ.

''ಕರುಳಿನ ಕೂಗು'' ಕಣ್ಣನ ಸಂಸಾರ ಬಲಿಯಾಗುವ ರೀತಿಯನ್ನು ತೆರೆದು ತೋರುತ್ತದೆ. ''ಯುದ್ಧದ ಕಾರಣದಿಂದ ನೂಲಿನ ಬೆಲೆ ಏರಿದೆ. ಬಣ್ಣದ ಬೆಲೆಯೂ ದುಬಾರಿ. ಹೀಗಾಗಿ ನಿಮ್ಮ ಕೂಲಿಯಂತೂ ಆರು ಕಾಸಿನ ಕಡಿತ ಆಗಬೇಕು.'' ಅಂದರೆ ಅವರಿಗೆ ಸಿಕ್ಕುವ ದಿನಗೂಲಿ ಮೂರಾಣೆಯಲ್ಲಿ (ಆಣೆ ಎಂದರೆ ೧೨ ಕಾಸು, ೪ ಕಾಸು ಅಂದರೆ ಒಂದು ದುಡ್ಡು ೧೬ ಆಣೆ ಎಂದರೆ ಒಂದು ರೂಪಾಯಿ) ಆರು ಕಾಸು ಕಡಿತ.

ಇಲ್ಲಿ ಕಾರ್ಖಾನೆ ಮಾಲಿಕರು ಮತ್ತು ವ್ಯಾಪಾರಿಗಳ ನಡತೆಯನ್ನು ಗಮನಿಸಬೇಕು. ನಿಜವಾಗಿ ಆಹಾರ ಧಾನ್ಯಗಳ ಬೆಲೆ ಸಾಮಾನ್ಯವಾಗಿದ್ದಾಗ ಕೊಡುವ ಕೂಲಿಗಿಂತ ಜಿನಸಿನ ದರ ಹೆಚ್ಚಾದಾಗ ತುಟ್ಟಿಭತ್ತೆಯಾಗಿ ಕೂಲಿ ಹೆಚ್ಚು ಸಿಕ್ಕಬೇಕು. ಇಲ್ಲಿ ಅದಕ್ಕೆ ವಿರುದ್ಧವಾಗಿದೆ. ವ್ಯಾಪಾರಿ ಕೊಳ್ಳಬೇಕಾದ ಸಾಮಾನು ತುಟ್ಟಿಯಾದುದನ್ನು ಕೂಲಿಗಳ ಮೇಲೆ ಹೊರಿಸುತ್ತಾನೆ. ಹಾಗಂತ ತಾನು ಮಾಲು ಮಾರುವಾಗ ಮೊದಲಿನ ದರಕ್ಕೇ ಕೊಡುವುದಿಲ್ಲ. ಇಲ್ಲಿ ಸಾವುಕಾರನಿಗೆ ಎರಡು ಬಗೆಯಿಂದಲೂ ಲಾಭ.

ಎರಡನೆಯದಾಗಿ ಸಾಮಾನ್ಯ ಪರಿಸ್ಥಿತಿಯಲ್ಲಿ ದುಡಿಸಿಕೊಂಡ ಕೂಲಿಗಳನ್ನು ತುಟ್ಟಿ ಕಾಲದಲ್ಲೂ ಪೋಷಿಸಬೇಕಾದುದು ಮಾಲಿಕರ ಕರ್ತವ್ಯ. ಆದರೆ ಮಾಲಿಕರು ಕೂಲಿಗಳ ಸಂಖ್ಯೆಯನ್ನೇ ಕಡಿತಗೊಳಿಸಿ ಹೆಚ್ಚು ತಾಸು ದುಡಿಸಿಕೊಂಡುಬಿಡುತ್ತಾರೆ. ಕೂಲಿ ಮಾತ್ರ ಕಡಿತದ ದರ.

ಕಣ್ಣನ ಹೆಂಡತಿಗೆ ಹಳ್ಳಿಯಿಂದ ಬರುವಾಗ ಒಂದು ಮಗುವಾಗಿತ್ತು. ಈಗ ಒಂದು ಮಗು ಹೆತ್ತು ಮಲಗಿದ್ದಾಳೆ. ಇನ್ನೂ ಹಸಿಮೈ. ಮುದಿತಾಯಿ ಇದ್ದಾಗ ಬಿಡುವಿದ್ದಾಗ ರಾಟಿಯಲ್ಲಿ ನೂಲುತ್ತಿದ್ದಳು. ಕಣ್ಣನ ಮಗನಿಗೆ ಈಗ ಐದು ವರ್ಷ, ಶಾಲೆಗೆ ಹೋಗುವ ವಯಸ್ಸು. ಆದರೆ ದುಡಿವವರ ಮಕ್ಕಳಿಗೆ ಶಾಲೆಗೆ ಹೋಗುವುದುಂಟೆ? ಎಂಬ ಮಾತು ಬರುತ್ತದೆ. ಬಡತನ ಅವಿದ್ಯೆ, ಅಜ್ಞಾನ. ಜಿನಸಿನ ಬೆಲೆ ಏರುತ್ತಲೇ ಹೋಯಿತು. ಒಂದು ಮಧ್ಯಾಹ್ನ ಆತನಿಗೆ ಒಂದು ಸ್ವರ ಕೇಳಿತು - ಐದು ರೂಪಾಯಿಗೆ ಒಂದು ಮುಡಿ ಅಕ್ಕಿ. ರಾಚಪ್ಪನ ಅಂಗಡಿ ಲೂಟಿ ಮಾಡಿ ಜನಕ್ಕೆ ಹಂಚುತ್ತಿದ್ದರು. ಆದರೆ ಕಣ್ಣನಲ್ಲಿ ಐದು ರೂಪಾಯಿ ಎಲ್ಲಿದೆ? ಇಡೀ ಮನೆ ಹುಡುಕಿ ಐದು ರೂಪಾಯಿ ಪಡೆದು ಕಣ್ಣ ಓಡಿದ.

''ನನಗೊಂದು ಮುಡಿ ಅಕ್ಕಿ: ತಗೊಳ್ಳಿ ಐದು ರೂಪಾಯಿ'' ಕೂಗಿದ. ಆದರೆ ಅಂಥ ಮಾತಿಗೆ ಉತ್ತರವೆಂದು ಗುಂಡು ಹಾರಿದ ಸದ್ದಾಯಿತು. ಕ್ಷಣಾರ್ಧದಲ್ಲಿ ಕಣ್ಣ ನೆಲಕ್ಕುರುಳಿದ.

ಇದೊಂದು ಕತೆಯಲ್ಲ ಕತೆಯ ರೂಪದಲ್ಲಿದೆ. ಹೆಂಡತಿ ಕೇಳುತ್ತಾಳೆ. ''ಓದುವವರು ಏನನ್ನಬೇಕು?'' ''ಹೌದು ಓದುವವರು ಏನನ್ನಬೇಕು? ಇಂತಹ ಜೀವನ ಚಿತ್ರ ನಮ್ಮ ಜನಕ್ಕೆ ಬೇಕಾಗಿಲ್ಲ. ಎಲ್ಲಿ ಸುಳ್ಳಿದೆಯೋ, ಮನೋರಂಜನೆಯಿದೆಯೋ, ಅಲ್ಲಿ ಅವರು ವಾಸ್ತವತೆಯ ಮುಖದ ಮೇಲುಗುಳಿ, ಇದು ವಾಸ್ತವತೆ ಅಂತ ನಾವೊಪ್ಪುವುದಿಲ್ಲ, ಎನ್ನುವವರು ಎಷ್ಟು ಜನರಿಲ್ಲ.'' ಎಂದು ಕತೆ ಮುಗಿಯುತ್ತದೆ. ಪ್ರಗತಿಶೀಲ ಸಾಹಿತ್ಯದ ಮುಖ್ಯ ದರ್ಶನಗಳಲ್ಲಿ ಇಂದು ಶೋಷಿತರ ಬದುಕಿನ ವಾಸ್ತವ ಚಿತ್ರಣ.

ಯುದ್ಧದ ಪರಿಣಾಮವನ್ನು ಚಿತ್ರಿಸುವ ಇನ್ನೊಂದು ಕತೆ 'ಎಣ್ಣೆ ಚಿಮಣಿ ಎಣ್ಣೆ' ಕತೆ ರೌದ್ರವಾಗಿದೆ. ಪ್ರಭಾವಪೂರ್ಣವಾಗಿದೆ. ಕತೆ ಸೈದ್ಧಾಂತಿಕ ಪದರವನ್ನು ತೆರೆದು ತೋರುವ ಆಶಯವನ್ನು ಹೊಂದಿದೆ.

''ಸೋಮ ಎಣಿಕೆ ಹಾಕಿದ, ಟಪ್ಪಾಲು ಬಸ್ಸು ಬಂದಾಗ ಮಾರಿದ ಬೀಡ ೨೧, ಬೇರೆ ಮಾರಾಟ ೯, ಶಾಲೆ ಹುಡುಗರು ಕೊಂಡು ಕೊಂಡದ್ದು ೧೦ ಪೈಯದು. ಟೀ ಮಾರಾಟ ೬ ಪೈಯದು. ನೆಲಗಡಲೆ ಗಿರಾಕಿ ಬರಲಿಲ್ಲ. ಅಂತೂ ನಾಲ್ಕಾಣೆಯ ವ್ಯಾಪಾರವಾಯಿತು.

ಇಂಥ ವ್ಯಾಪಾರಿ ಸೋಮ. ರಾಯರ ಬಂಡಸಾಲೆಯ ಖಾಯಂ ಗಿರಾಕಿ. ನಗದು ಹಣ ಕೊಟ್ಟು ಸಾಮಾನು ಕೇಳುತ್ತಿದ್ದ. ರಾಯರಿಗೆ ಇಷ್ಟವಾದ ವ್ಯಕ್ತಿ.

ಯುದ್ಧದಿಂದಾಗಿ ಜಿನಸಿನ ದರ ಏರಿದ ಪರಿಣಾಮ ಜಿನಸಿನ ಅಂಗಡಿ ಲೂಟಿ ಆದ ಸುದ್ದಿ ಕೇಳಿ ರಾಯರು ಹೆದರಿದರು. ''ಬರಲಿ ನೋಡುವ ನಾನಿದ್ದೇನೆ ಎಚ್ಚರ, ದರೋಡೆಕೋರರು, ಮೈಮುರಿದು ದುಡಿಯುವುದಕ್ಕೆ ಇವರಿಗೆ ರೋಗ'' ಎಂದ ಸೋಮ.

ಇಲ್ಲಿಯ ಸೂಕ್ಷ್ಮತೆಯನ್ನು ಗ್ರಹಿಸಬೇಕು. ಸೋಮ ನಿಜಕ್ಕೂ ಬಡವನೆ. ಆತ ರಾಯರ ಅಂತಸ್ತಿಗೆ ಬರಲಾರ. ಆದರೂ ಅವನದೊಂದು ಅಂಗಡಿ ಇದೆ. 'ದರೋಡೆಕೋರರು ಮೈಮುರಿದು ದುಡಿಯಲು ರೋಗ' ಎಂದು ಆತ ಹೇಳುವುದು ಕೂಲಿಕಾರರಿಗೆ - ಅವರೂ ಇವನಂತೆ ಬಡವರು. ಸೋಮ ಪೆಟಿಭೂರ್ಜ್ವಾ ವರ್ಗದ ಒಂದು ಸೂಕ್ಷ್ಮ ರೂಪ (ಮಿನಿಯೇಚರ್). ಆದರೆ ಮುಂದೆ ಜಿನಸಿನ ಬೆಲೆ ಏರುತ್ತಿತ್ತು. ಜನ ವ್ಯಾಪಾರಿಗಳೆಲ್ಲ ಬಡವರನ್ನು ಸುಲಿಯುತ್ತಾರೆ' ಎನ್ನುತ್ತಿದ್ದರು. ಆಗ ಸೋಮ 'ಛೇ ಛೇ ಹಾಗೂ ಉಂಟೆ?' ಎನ್ನುತ್ತಿದ್ದ. ಇಲ್ಲಿ ಆತನ ಧ್ವನಿ ತುಸು ಬದಲಾಗುವುದನ್ನು ಗಮನಿಸಬೇಕು. ಆದರೆ ನಂಬಿಗೆ ಮೊದಲಿನದ್ದೇ ಎಂಬುದನ್ನೂ ಗ್ರಹಿಸಬೇಕು.

ರಾಯರು ''ಸರಕಾರಿ ಅಧಿಕಾರಿಗಳು ಬಂದು ನೋಡುವರಂತೆ, ಹೆಚ್ಚಿನ ಬೆಲೆಗೆ ಮಾರಿದರೆ ಶಿಕ್ಷಿಸಬಹುದಂತೆ'' ಎಂದು ಗರ್ಜಿಸಿದರು. ಸೋಮ ಇದು ಕೆಟ್ಟ ಕ್ರಮ ಎಂದುಕೊಳ್ಳುತ್ತಾನೆ.

''ಅರ್ಧಸೇರು ಅಕ್ಕಿ'' ಎಂದ ಸೋಮ.

''ಐದು ದುಡ್ಡು'' ಎಂದರು ರಾಯರು. ''ಬೇಕಾದರೆ ಕೊಂಡು ಹೋಗು ಇಲ್ಲದಿದ್ರೇ ಕಲೆಕ್ಟರಲ್ಲಿಗೆ ಹೋಗು'' ಎಂದರು ರಾಯರು. ಚಿಮಣಿ ಎಣ್ಣೆ ಬಾಟಲಿಗೆ (ಉತ್ತಮ) ೩ ಆಣೆ ೭ ಪೈ, ಕೀಳು ತರಹದ್ದಕ್ಕೆ ೩ ಆಣೆ ೨ ಪೈ ಎಂದು ಸರಕಾರ ನಿಶ್ಚಿತಗೊಳಿಸಿದೆ.

ರಾಯರಲ್ಲಿ ಸೋಮ ಚಿಮಣಿ ಎಣ್ಣೆ ಕೇಳಿದ. ಕಾಲು ಬಾಟ್ಲಿಗೆ ಒಂದಾಣೆ ಎಂದರು ರಾಯರು. ತುಂಬಾ ಹೆಚ್ಚಾಯಿತು ಎಂದ ಸೋಮ. ''ರಾಯರು ಮಾತಾಡಲೇ ಇಲ್ಲ. ಬೇಕಾದರೆ ಕೊಳ್ಳಬೇಕು.''

ಯಾರೋ ಹೇಳಿದರು: ಸರಕಾರ ನಿಶ್ಚಯಿಸಿದ್ದಕ್ಕಿಂತ ಹೆಚ್ಚಿಗೆ ಹೇಳಿದರೆ ವೋಚರ್ ಕೇಳಬೇಕು. ಅದನ್ನು ಕಲೆಕ್ಟರಿಗೆ ತಲ್ಪಿಸಿದರೆ ಸಾವುಕಾರರನ್ನು ಶಿಕ್ಷಿಸುತ್ತಾರೆ.

ಮಾರನೇ ದಿನ ಬೇರೆ ಕಡೆ ಹೋದಾಗ ಹಾಲು ಬಾಟಲಿಗೆ ೧ ಆಣೆ ೧ ಪೈಸೆ ಎಂದರು. 'ವೋಚರ್ ಕೊಡಿ' ಎಂದ ಸೋಮ. ಅವರು ವಿಕಟವಾಗಿ ನಕ್ಕು ಎಂಥ ವೋಚರ್ ಎಂದರು. ಸೋಮನಿಗೆ ಸಿಟ್ಟೆಲ್ಲ ಹೊರಬಂತು. ''ಪಾಪ ಕಟ್ಟಿಕೊಳ್ಳಬೇಡಿ. ಬಡವರನ್ನು ಕೊಲ್ಲಬೇಡಿ' ಎಂದು ಕಿರುಚಿದ. ಅಂಗಡಿಯ ಆಳು ಅವನನ್ನು ಹೊರಗಟ್ಟಿದ. ಅಂಗಡಿಯ ವ್ಯಾಪಾರಿಗಳು ಹಿಟ್ಲರನ್ನು ಹೊಗಳುತ್ತಿದ್ದರು. ಅವನಿಂದ ಯುದ್ಧ, ಯುದ್ಧದಿಂದ ವ್ಯಾಪಾರಿಗಳಿಗೆ ಲಾಭ.

''ರಾತ್ರಿ, ಜಡಿಮಳೆ ಬೀಸಿತು, ಮಾಡು ಹಾರಿತು, ಗೋಡೆ ಕುಸಿಯಿತು. ಬೆಳಿಗ್ಗೆ ನೋಡುವಾಗ ಮಗುವಿನ ಮೈ ಕೆಂಡದಂತೆ ಕಾದಿತ್ತು. ಸೋಮಾ ತಲೆಯನ್ನು ಕೆದರಿಕೊಂಡ. ಕಣ್ಣುಗಳು ಊದಿದ್ದವು. ''ಅನ್ಯಾಯ'' ಎಂದು ಕೂಗಿದ.... ಪೋಲೀಸ್ ಸುಪರಿಂಟೆಂಡೆಂಟ್‌ರು ಕವಾಯತು ನೋಡುತ್ತಿದ್ದರು. ಸೋಮ ಅವರ ಬಳಿ ಓಡಿ ''ಎಣ್ಣೆ'' ಎಂದ.

ಸಾಹೇಬರು ಕ್ಷಣಹೊತ್ತು ದಿಟ್ಟಿಸಿ ನೋಡಿದರು. ಸೋಮ ಅವರ ಮುಖದ ಹತ್ತಿರ ದೀಪದ ಬುಡ್ಡಿಯನ್ನು ನೂಕಿ ''ಎಣ್ಣೆ ಕೊಡು'' ಎಂದ. ಬಿಸಿಲಿನಲ್ಲಿ ಬಿದ್ದಿದ್ದ ಸೋಮನಿಗೆ ಎಚ್ಚರಾಯಿತು. ಸುತ್ತಲೂ ಪೋಕರಿ ಹುಡುಗರು 'ಎಣ್ಣೆ' ಎಂದರು. ಸೋಮ ತನ್ನ ಕೈ ನೋಡಿದ. ಜಜ್ಜಿಹೋದ ದೀಪದ ಬುಡ್ಡಿ ಹತ್ತಿರವೇ ಇತ್ತು. ಸೋಮ ಅದನ್ನೆತ್ತಿ ಹಿಡಿದು ಎಣ್ಣೆ ಎಂದ. ಹುಡುಗರು 'ಹುಚ್ಚ' ಎಂದರು. ಸೋಮ ಓಡಿದ.

''ಒಂದು ಕಾರು ಬೇರೆ ಬೀದಿಯಿಂದ ಸರಕ್ಕನೆ ಹಾದು ಬಂದು ಸೋಮನನ್ನು ಚರಂಡಿಗೆ ಎಸೆದು ಮುಂದಕ್ಕೆ ಧಾವಿಸಿತು. ನಿಂತು ಹೊರಡುವುದೆಂದರೆ ವೃಥಾ ಪೆಟ್ರೋಲ್ ಖರ್ಚು'' ಕತೆ ಮುಗಿಯಿತು. ರಾಯರಿಗೆ ಹಣ ಮುಖ್ಯ, ಸೋಮನ ಒಳ್ಳೆತನವಲ್ಲ. ಸೋಮ ರಾಯರ ಅಂತಸ್ತು ಸೇರಲು ಸಾಧ್ಯವಿಲ್ಲ. ಅವನು ಕೂಡಿಕೊಳ್ಳಬೇಕಾದುದು ಕೂಲಿಗಳಲ್ಲಿ ಮತ್ತು ಪೆಟಿಭೂರ್ಜ್ವಾಗಳ ಸ್ಥಿತಿ ಇಳಿಯುವುದು ಆ ಮಟ್ಟಕ್ಕೆ. ಯುದ್ಧದ ಮತ್ತು ವರ್ಗ ಸ್ವಭಾವದ ಅಮಾನವೀಯತೆಯ ರುದ್ರ ಚಿತ್ರಣವಿದು.

'ಕೃಷ್ಣಾ ವಿ-ಕೃಷ್ಣ' ಕತೆಯಲ್ಲಿ ಕೊರಗ (ಅಸ್ಪೃಶ್ಯ) ಜಾತಿಯ ಒಂದು ಕೂಲಿ ಕುಟುಂಬ ಹೇಗೆ ದೌರ್ಜನ್ಯಕ್ಕೆ ಒಳಗಾಗುತ್ತದೆ ಎಂಬ ಒಂದು ದಾರುಣ ಚಿತ್ರವಿದೆ.

ಚಾಪೆ ಹಿಡಿದು ಮಲಗಿದ ಗಂಡ; (ಕೊರಗ) ಈಗ ಅವನ ಹೆಂಡತಿಯೇ ದುಡಿವಾಕೆ. ಧಣಿಯ ಮನೆಯ ಕೆಲಸ, ಒಂದು ದಿನ ಮಗನಿಗೆ ಮೈಬೇಯುವ ಜ್ವರ, ಅಂದೇ ಕೃಷ್ಣ ಜನ್ಮದಿನ 'ಧಣಿಗಳ ಮನೆಯಲ್ಲಿ ಮತ್ತು ಕೊರಗನ ಮನೆಯಲ್ಲಿ ನಡೆಯುವ ಕೃಷ್ಣ ಜನ್ಮದಿನದ ವೈದೃಶ್ಯ ಚಿತ್ರಣ ಹರಿತವಾದ ವ್ಯಂಗ್ಯವಾಗಿದೆ. ಧಣಿ ಮತ್ತು ಅಸ್ಪೃಶ್ಯ ಕೂಲಿಗಳ ಮಧ್ಯೆ ಬೆಸೆಯಲಾರದ ಬಿರುಕು ಇದೆ.

ಹಬ್ಬದ ದಿನ ಕೂಲಿಗಳಿಗೆ ಒಂದೊಂದು ತೆಂಗಿನಕಾಯಿ ಕೊಡುವುದು ಪದ್ಧತಿ. ಧಣಿ ಮನೆಯಿಂದ ಆ ಕಾಯಿ ಪಡೆದು ಮಗನಿಗೆ ಔಷಧಿ ತರಬೇಕೆಂಬುದು ದೇಯಿಯ ಆಶೆ. ''ಅಮ್ಮ ಮನೆಗೆ ಹೋಗಿ ಮದ್ದು ಕುಡಿಸಿ ಬರ್ತೇನೆ, ಹಾಗೆ ತೆಂಗಿನಕಾಯಿಯನ್ನೂ ಕೊಟ್ಟುಬಿಡಿ.''

''ಅಮ್ಮ ಗದರಿಸಿದರು. ಅಬ್ಬ ಇವಳು ಕುದುರೆಯ ಮೇಲೆ ಕುಳಿತಿದ್ದಾಳೆ, ರಾತ್ರಿ ಭಾಳ ಹೊತ್ತು ಇಲ್ಲಿ ಇರಬೇಕು. ಬೇಗ ಬಾ. ತೆಂಗಿನಕಾಯಿ ರಾತ್ರಿ ತೆಗೆದುಕೊಂಡು ಹೋಗುವಿಯಂತೆ.''

ಅಲ್ಲಿನ ಕೆಲಸ ಬೇಗ ಮುಗಿಸಿ, ತೆಂಗಿನಕಾಯಿ ಪಡೆದು ಅದನ್ನು ಮಾರಿ ಅರ್ಧ ಹಣದಿಂದ ಮಗುವಿಗೆ ಮದ್ದು ತರಬೇಕು. ಉಳಿದದ್ದರಲ್ಲಿ ಅರ್ಧ ಚಟಾಕು ಅಕ್ಕಿಯನ್ನಾದರೂ ತರಬೇಕು ಎನ್ನುವುದು ಅವಳ ತವಕ. ದೇಯಿ ಮತ್ತೆ ಧಣಿಗಳ ಮನೆಗೆ ಬಂದಳು.

ವೀಳ್ಯದೆಲೆ ಮೆದ್ದು ಮಹಡಿ ಏರಲು ಹೊರಟಿದ್ದರು ಅಮ್ಮ, ದೇಯಿ ತೆಂಗಿನಕಾಯಿ ನೆನಪಿಸಿದಳು. ''ಎಲ್ಲಿ ಬಿದ್ದಿದೆಯೋ ಏನೊ, ನಾಳೆ ಕೊಡೋಣ'' ಎಂದರು ಅಮ್ಮ. ಮಾರನೆಯ ದಿನ ಕೃಷ್ಣ ಹುಟ್ಟಿದ್ದು: ಧಣಿಯ ಮನೆಯಲ್ಲಿ ಸಂಭ್ರಮ. ದೇಯಿ ಮನೆಯಲ್ಲಿ ಕತ್ತಲು, ದೀಪ ಇರಲಿಲ್ಲ. ಹಟ್ಟಿಯ ಒಳಹೋಗುತ್ತ ದೇಯಿ ಗಂಡನನ್ನು ಎಡವಿದಳು. ಮಗ ಅಮ್ಮಾ ಎಂದು ಕ್ಷೀಣ ಸ್ವರದಲ್ಲಿ ಕಣ್ಣೀರು ಹರಿಸಿಬಿಟ್ಟ. ನಡುಗುವ ಸ್ವರದಲ್ಲಿ ಆಕೆಯೆಂದಳು. ದೇವರಿದ್ದಾನೆ ಮಗ, ಕೃಷ್ಣಪ್ಪ ದೇವರು ಹುಟ್ಟುತ್ತಿದ್ದಾನೆ. ಕೃಷ್ಣ ಕೃಷ್ಣ ಎನ್ನು ಮಗನೆ, ಹುಡುಗ ಬಹಳ ಕಷ್ಟಪಟ್ಟು 'ಕಿಷ್ಟ' ಎಂದ. ಅದು ಆ ಗಂಟಲಿನಿಂದ ಹೊರಬಿದ್ದ ಕೊನೆಯ ಪದ.

'ಸಂಧಿಕಾಲ' ಹೆಸರೇ ಹೇಳುವಂತೆ ಸೈದ್ಧಾಂತಿಕ ತಾಕಲಾಟವನ್ನು ಚಿತ್ರಿಸುವ ಕಾಲ ಸಂಧಿಕಾಲ.

ಬಾಬುಗಳು ಶ್ರೀಮಂತರು: ಜಮೀನುದಾರರು, ಅವರಿಗೆ ಮೂರು ಜನ ಗಂಡು ಮಕ್ಕಳು. ಇಲ್ಲಿ ಎರಡು ಜನ ಪ್ರಸ್ತುತ, ಎರಡನೆಯವ ಬಸಂತ, ಮೂರನೆಯವನು ನಿಖಿಲ. ಬಸಂತ ಗಾಂಧಿ ಭಕ್ತ. ನಿಖಿಲ ಕಮ್ಯುನಿಸ್ಟ. ಮಹಾಯುದ್ಧ ಶುರುವಾಗಿದೆ. ನಿಖಿಲ ಭೂಗತ. ಬಸಂತರಿಗೆ ಅಂಥ ಸಂಕಟವಿಲ್ಲ. ಗಾಂಧಿಭಕ್ತ ತಂದೆ. ಧಾನ್ಯದ ದರ

ಏರುತ್ತಿತ್ತು. ೨೫:೩೦:೩೨:೩೫ ಠಣ್ ಠಣ್ ಠಣ್ ನೂರರ ಮೇಲೆ ನೂರು, ಸಾವಿರದ ಮೇಲೆ ಸಾವಿರ ಹೀಗೆಯೇ ಲಕ್ಷ. ಬೇರೆ ಯಾವ ಕಡೆಗೂ ದೊಡ್ಡ ಬಾಬುಗಳ ಲಕ್ಷವಿರಲಿಲ್ಲ. ''ಜನದ್ರೋಹಿ ಆಗಬೇಡ'' ಎಂದು ಗುಪ್ತಪತ್ರ ಬರೆದ ನಿಖಿಲ. ದೊಡ್ಡ ಬಾಬುಗಳು ಕೋಪದಿಂದ ಉರಿದರು. ಮನೆಯೊಳಗಿನ್ನು ಕಾಲಿಡಲಿ, ಪೋಲೀಸರಿಗೆ ಹಿಡಿದುಕೊಡುವೆ. ಕುಲಕುಠಾರ್ ಎಂದರು; ಅವರು.

ಕಾಂಗ್ರೆಸ್ಸಿನ ಬಸಂತ ಬಾಬುಗಳ ತಲೆಯಲ್ಲಿ ತತ್ವಗಳ, ಭಿನ್ನ ಅಭಿಪ್ರಾಯಗಳ ಹೊಯ್ದಾಟ, ಅವರು ಕಾಂಗ್ರೆಸ್ ಎಂ.ಎಲ್.ಎ. ಆಗಬಯಸಿದ್ದರು. ಅವರ ಬಯಕೆ ಈಡೇರಲಿಲ್ಲ. ರಷ್ಯಾ ಹಿಟ್ಲರಿನ ವಿರುದ್ಧ ತಿರುಗಿಬಿತ್ತು. 'ಯುದ್ಧದ ರೂಪ ಬದಲಿಸಿತು. ಹಿಟ್ಲರ್ ಯುದ್ಧ, ಸಾರಿದ್ದಾನೆ'. ನಿಖಿಲ ಇದು ಜನತೆಯ ಯುದ್ಧ ಎಂದಿದ್ದಾನೆ.

''ನೋಡಿ ಜಪಾನನ್ನು ಎದುರಿಸಬೇಕೆಂತೆ'' ಎಂದು ನಿಖಿಲನನ್ನು ವ್ಯಂಗ್ಯ ಮಾಡುತ್ತಾರೆ. ಬಾಬು.

ಕೊನೆಗೆ ಬಸಂತ ಬಾಬುವಿನ ಬಂಧನವೂ ಆಗುತ್ತದೆ. ಕಾಂಗ್ರೆಸ್ ಯುದ್ಧ ವಿರೋಧಿ ಇತ್ತಲ್ಲ. ಅದಕ್ಕೆ ಒಂದು ವರ್ಷದ ಮೇಲೆ ಅವರನ್ನು ಸರಕಾರ ಬಿಟ್ಟಿತು. ನಿಖಿಲನಿಗಾಗಿ ಬೇಟೆ ನಡೆದೇ ಇತ್ತು. ಕೊನೆಗೆ ಅವನದೂ ಬಂಧನ, ಕಾಳ ಸಂತೆಕೋರರಾದ ದೊಡ್ಡ ಬಾಬುಗಳದೂ ಬಂಧನ. ಜಾಮೀನಿಗಾಗಿ ಬಸಂತ ಬಾಬು ಲಕ್ಷ ಕೊಡಲಿಲ್ಲ. ನಿಖಿಲನ ಬಂಧನವಾದಾಗ ''ಹೋಗಿ ನೋಡುವೆ. ಬಿಡುಗಡೆ ಸಾಧ್ಯವಾಗಬಹುದು'' ಎಂದರು ಬಸಂತಬಾಬು.

ಹೀಗೆ ಒಂದೇ ಮನೆಯಲ್ಲಿಯ ಒಂದು ಸಂಧಿಕಾಲದ ತಾತ್ವಿಕ ಹೊಯ್ದಾಟವನ್ನು ಇಲ್ಲಿ ಚಿತ್ರಿಸಲಾಗಿದೆ. ಕೊನೆಗೂ ಕಾಂಗ್ರೆಸ್ಸಿನ ಬಸಂತಬಾಬು ಕಮ್ಯುನಿಸ್ಟ ನಿಖಿಲನ ಕಡೆಗೆ ಒಲಿದು ಬರುವಂತೆ ಕಾಣುತ್ತದೆ. ನಿಖಿಲನ ಹೆಂಡತಿ ಅನುಪಮ ಜೈಲಿನಲ್ಲಿರುವ ಗಂಡನನ್ನು ನೋಡಲು ಭಾವನೊಟ್ಟಿಗೆ ಅಭಿಮಾನದಿಂದ ಹೋಗುತ್ತಾಳೆ.

'ಚಿಮಣಿ ಎಣ್ಣೆ' ಕತೆಯಲ್ಲಿ ಚಿಕ್ಕ ಅಂಗಡಿಕಾರನೊಬ್ಬ ಬಡ ಕೂಲಿಕಾರನ ಸ್ಥಿತಿಗೆ ಇಳಿಯುವ ಅಂದರೆ ಅವರಿಬ್ಬರ ವರ್ಗ ಒಂದಾಗಿ ಬೆಸೆಯುವಿಕೆಯಲ್ಲಿ ಅದರ ನಿಜತ್ವವಿದೆ ಎಂದು ಕಂಡುಕೊಂಡರೆ ''ಏಕಪ್ರವಾಹ''ದಲ್ಲಿ ಕೆಳ ಮಧ್ಯಮ ವರ್ಗದ ಬುದ್ಧಿ ಜೀವಿಗಳ ಸ್ಥಾನ ಕೂಡ ಕಾರ್ಮಿಕರ ಜೊತೆ ಎಂಬುದನ್ನು ದರ್ಶಿಸುತ್ತದೆ. ಪತ್ರಿಕಾಲಯದಲ್ಲಿ ವರದಿಗಾರ ಬಳಗದ ಸದಸ್ಯನಾದ ಪುಟ್ಟಣ್ಣ ಹಳ್ಳಿಯಿಂದ ಕೆಲಸ ಅರಸಿ ಪಟ್ಟಣಕ್ಕೆ ಬಂದವನು. ''ಹರಿದ ಪ್ಯಾಂಟು, ಮಾಸಿದ ಶರ್ಟು, ಕಳೆದ ನಾಲ್ಕು ತಿಂಗಳಿಂದ ಪಾಲಿಶ್ ಮಾಡದಿದ್ದ ಶೂಗಳು, ಎಣ್ಣೆ ಮುಗಿದಿದ್ದ ಕೂದಲೆಣ್ಣೆಯ ಬಾಟ್ಲಿ''

''ಈ ಎಣ್ಣೆ ಕೂದಲೆಣ್ಣೆಯೇ ಅಲ್ಲ. ಜೀವದೀವಿಗೆ ಎಣ್ಣೆ ಕುಂದುತಿದೆ, ಜ್ಯೋತಿ ನಂದುತಿದೆ ಎಂದು ಪುಟ್ಟಣ್ಣ ಮರುಕದ ವಚನ ಹಾಡಿದ.''

''ತನಗೆ ಇಪ್ಪತ್ತು ವರ್ಷ ವಯಸ್ಸು. ಸಿಗುವ ಸಂಬಳ ದಿನಕ್ಕೆ ನಾಲ್ಕು ಗಂಟೆಯ ದುಡಿತಕ್ಕಾಗಿ ಇಪ್ಪತ್ತೆರಡು ರೂಪಾಯಿ. ಇಪ್ಪತ್ತು ಸಂಬಳ, ಎರಡು ತುಟ್ಟಿಭತ್ತೆ. ಉಳಿದ ಹೊತ್ತಿನಲ್ಲಿ ಊರ ಹೊರಗಿನ ಪತ್ರಿಕೆಗೆ ವಾರ್ತೆ ಕಳಿಸಬಹುದು. ಹಾಗೆ ಸಿಗುವ ರೂಪಾಯಿ ಹತ್ತು. ಇನ್ನೊಂದು ಪತ್ರಿಕೆ, ಕಳೆದ ಮೂರು ತಿಂಗಳಿಂದ ಹಣ ಕೊಡಲಿಲ್ಲ. ಅಂಚೆ ವೆಚ್ಚವು ಕೈಯಿಂದಲೇ.''

ಸಂಪಾದಕರು ಕರೆದು ಇಂದೊಂದು ಮಹಿಳಾ ವೃಂದದ ಕಾರ್ಯಕ್ರಮವಿದೆ. ಹೋಗಿಬನ್ನಿ ಎನ್ನುತ್ತಾರೆ. ಪುಟ್ಟಣ್ಣ ತನ್ನ ವೇಷ ನೋಡಿಕೊಂಡ, ಎಲ್ಲಿಗೂ ಹೋಗುವುದಿಲ್ಲ ಎಂದು ನಿರ್ಧರಿಸಿಯೇ ಹೊರಟ. ಎದುರು ಒಂದು ಮೆರವಣಿಗೆ ಬರುತ್ತಿತ್ತು. ಕಾರ್ಮಿಕರ ಮೆರವಣಿಗೆ.

''ಇಂಕ್ವಿಲಾಬ್ ಜಿಂದಾಬಾದ್, ಕಾರ್ಮಿಕ ಮೆರವಣಿಗೆಯದು, ಗಂಡಸರು, ಹೆಂಗಸರು ಮತ್ತು ಮಕ್ಕಳು. ಅವರು ಘೋಷಿಸುತ್ತಿದ್ದರು: ಮೂರು ತಿಂಗಳ ಬೋನಸ್ ಕೊಡಬೇಕು. ತುಟ್ಟಿಭತ್ತೆ ಹೆಚ್ಚು ಸಿಗಬೇಕು. ಮಜೂರಿ ಹೆಚ್ಚಿಸಬೇಕು.''

''ತನ್ನ ವಿಚಾರದಲ್ಲೂ ಅದು ಎಷ್ಟು ಸತ್ಯ'' ಅವನ ತಲೆಯಲ್ಲಿ ರೂಪಗೊಳ್ಳುತ್ತಿದ್ದ ವಿಚಾರಗಳಿವು. ನಾವು ಮಧ್ಯಮ ವರ್ಗದವರೆಂಬುದು ಬರಿಯ ಸೋಗು. ನಮ್ಮ ಸ್ಥಾನ ದಲಿತರೆಡೆಯಲ್ಲಿ ನಾವು ಅವರ ಬಂಧುಗಳು. ಪ್ರೆಸ್ ಕಾರ್ಮಿಕರಂತೆ ಪತ್ರಿಕೋದ್ಯಮಗಾರರೂ ಕಾರ್ಮಿಕರೇ.

ಪುಟ್ಟಣ್ಣ ತನಗರಿಯದಂತೆಯೇ ಆ ಪ್ರವಾಹದಲ್ಲಿ ಸಿಕ್ಕು ತಾನೂ ಮೆರವಣಿಗೆಯಲ್ಲಿ ಸೇರಿಕೊಂಡ.

''ಮೆರವಣಿಗೆ ಮುಂದೆ ಸಾಗಿತು'' ಹೀಗೆ ಕತೆ ಕೊನೆಗಾಣುತ್ತದೆ.

''ಇಬ್ಬರು ಗುಂಡರು'' ಕತೆ ಈಗ ಐತಿಹಾಸಿಕವಾದದ್ದೇ. ೧೯೪೩ ರಲ್ಲಿ ಇದು ವರ್ತಮಾನ. ಉತ್ತರ ಕನ್ನಡ ಜಿಲ್ಲೆ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದು, ಇಲ್ಲಿ ಆಗಲೇ ಟೆನನ್ಸಿ ಎಂಬ ಭೂ ಸುಧಾರಣಾ ಕಾನೂನನ್ನು ಸರಕಾರ ತಂದಿತ್ತು. ಆದರೆ ಭೂಮಾಲಿಕರು ಒಂದಲ್ಲಾ ಒಂದು ರೀತಿಯಲ್ಲಿ ಅದಕ್ಕೆ ತಡೆಯೊಡ್ಡುತ್ತಿದ್ದರು. ಆದರೆ ರೈತರು ಸಂಘಟಿತರಾಗಿದ್ದರು. ಇದು ಕೆಂಬಾವುಟದ ಅಡಿಯಲ್ಲಿದ್ದು ಸರಕಾರದ ಕೆಂಗಣ್ಣಿಗೂ ಕಾರಣವಾಗಿತ್ತು.

''ಆದರೆ ರೈತರು, ಈಗಲೇ ಹೊಲ ವಶಪಡಿಸಿಕೊಳ್ಳುತ್ತೇವೆ ಎನ್ನಲಿಲ್ಲ. ಕಾಂಗ್ರೆಸ್ ಸರಕಾರ ತಂದ ಹೊಲ ಸಾಗುವಳಿ ಕಾನೂನು - ಟೆನೆನ್ಸಿ ಆಕ್ಟು - ಸರಿಯಾಗಿ ನಡೆಯಲಿ ಎಂಬುದೇ ಅವರ ಆಸೆ. ಅದನ್ನು ಅವರು ಸ್ವಾಗತಿಸುತ್ತಿದ್ದಾರೆ. ಆದರೆ ಆಕ್ಟಿನ ಕಣ್ಣು

ತಪ್ಪಿಸಿ ಜಮೀನ್ದಾರರು ಮೋಸ ಮಾಡುವುದು ಬೇಡ, ಮೋಸ ಮಾಡಲು ಬಿಡಲಾರೆವು ಎನ್ನುವುದು ರೈತರ ಸ್ಪಷ್ಟೋಕ್ತಿ''

ಈ ಹೋರಾಟಕ್ಕಾಗಿ ಎಪ್ಪತ್ತು ವರ್ಷದ ಮುದುಕ ಅಲಿಖಾನ್ ಮತ್ತು ಅರವತ್ತು ವರ್ಷದ ನೇಮ ನಾಯಕರಿಬ್ಬರನ್ನು ಸರಕಾರ ಬಂಧಿಸುತ್ತದೆ.

ಇದರ ವಿರುದ್ಧ ಮೆರವಣಿಗೆ ನಡೆಯುತ್ತದೆ. ಅವರನ್ನು ಒಯ್ದಲ್ಲಿಗೆ ಹೋಗಿ ಅಧಿಕಾರಿಗಳಿಗೆ ನೀವು ಮಾಡಿದ್ದು ತಪ್ಪು ಎಂದು ಹೇಳಿ ಬಿಡಿಸಿ ತರಬೇಕೆನ್ನುವುದು ರೈತರ ಆಶೆ.

ಕೋರ್ಟಿನಲ್ಲಿ ವಿಚಾರ ನಡೆಯಿತು.

''ನೀವು ಕೊಲೆ ಸುಲಿಗೆ ಮಾಡಲು ಪ್ರೇರೇಪಿಸುತ್ತಿದ್ದೀರಿ. ''ಸುಳ್ಳು, ನಾವು ರೈತ ಸಂಘದವರು. ಹಿಂಸೆ ಮಾಡುವ ದರೋಡೆಕೋರರಲ್ಲ. ನಮ್ಮದು ನ್ಯಾಯಬದ್ಧ ಹೋರಾಟ. ನಮ್ಮ ಹಳ್ಳಿಯಲ್ಲಿ ಹಿಂಸೆಯ ಕೃತಿ ಒಂದೇ ಒಂದೂ ಆಗಲಿಲ್ಲ..... ನಮ್ಮನ್ನು ಬಿಡಿ, ಹೊಲದೊಡೆಯರನ್ನು ಬಂಧಿಸಿರಿ.

ಒಂದು ಗಂಟೆಯ ನಂತರ ತೀರ್ಪು ದೊರೆಯಿತು. ಪೋಲೀಸ್ ಅಕ್ಟ್ ಗೂಂಡಾ ಕಾಯ್ದೆಯನ್ವಯ ನೇಮ ನಾಯಕ ಮತ್ತು ಅಲಿಖಾನ ಇಬ್ಬರನ್ನೂ ಜಿಲ್ಲೆಯಿಂದ ಹೊರಹಾಕಲಾಗಿದೆ.''

ಅವರನ್ನು ಹೊರ ಜಿಲ್ಲೆಗೆ ಕಳಿಸಲಾಯಿತು. ಅಲ್ಲಿ ನೇಮ ನಾಯಕ ''ಹೌದು ಅಲೀ, ಆ ಪ್ರಿಯ ಭೂಮಿಗೆ ಮತ್ತೆ ಹೋಗಿಯೇ ಹೋಗುತ್ತೇವೆ'' ಎನ್ನುತ್ತಾನೆ.

ರೈತರ ಹೋರಾಟವನ್ನು ಮತ್ತು ಕಮ್ಯುನಿಸ್ಟ ಬೆಳವಣಿಗೆಯನ್ನು ಉತ್ತರಕನ್ನಡ ಜಿಲ್ಲೆಯಲ್ಲಿ ತಡೆಯುವ ಅಂಗವಾಗಿ ಜಮೀನುದಾರರ ಮತ್ತು ಸರಕಾರದ ಪ್ರತೀಕಾರವನ್ನು ಒಂದು ಉದಾಹರಣೆಯಾಗಿ, ಆದರೆ ಯಥಾವತ್ ಆಗಿ ಚಿತ್ರಿಸುವ ಕತೆ ಇದು.

ನಿರಂಜನ ಕೇವಲ ಕಾರ್ಮಿಕರ ರೈತ ಹೋರಾಟದ ಉಗ್ರತೆಗೇ ತಮ್ಮ ಕಣ್ಣಿಗೆ ಪಟ್ಟಿ ಕಟ್ಟಿಕೊಂಡವರಲ್ಲ. ಬಡವರ ಬಾಳಿನ ಕಷ್ಟಗಳ ಮಧ್ಯೆಯೇ ಅವರು ಸಂಸಾರದ ಸುಖ-ದುಃಖಗಳನ್ನು ಆತ್ಮೀಯವಾಗಿ ಸೆರೆಹಿಡಿದಿದ್ದಾರೆ ಎನ್ನಲು ''ಹೊಸ ಕೂಸು'' ಒಂದು ಉದಾಹರಣೆ. ಕರೀಮ ಓರ್ವ ರೈಲ್ವೆ ಕಾರ್ಮಿಕ. ಅಪ್ಪ ಮುದುಕನಾಗಿ ಮನೆಯಲ್ಲಿದ್ದಾನೆ. ಉನ್ನಿಸಾ ಅವನ ಹೆಂಡತಿ. ಒಂದು ಮಗು ಆಗಿದೆ. ಆ ಹುಡುಗಿ ಕರೀಮನ ಮೀಶೆಯ ಮೇಲೆ ಕೈಯಾಡಿಸಿ ತಲೆಯ ದೊರಗು ಕೂದಲನ್ನು ಅಮುಕಿಸಿ ಹಿಡಿದು ''ಬಾಬಾ ಪೇಡ, ಪೇಡ ತಗೊಂಡು ಬಾ'' ಎನ್ನುತ್ತಿದ್ದಳು. ಆತ ಕೆಲಸಕ್ಕೆ ಸೇರಿದಾಗ ಹದಿನೈದು ರೂಪಾಯಿ ಸಂಬಳ. ಈಗ ಇಪ್ಪತ್ತೆರಡು. ಹೇಗೋ ಸಂಸಾರ ನಿಭಾಯಿಸುತ್ತಿದ್ದಳು ಉನ್ನಿಸಾ.

''ಹಿಂದೆ, ಲಗ್ನಕ್ಕೆ ಮುಂಚೆ ಎರಡು ಮೂರು ಸಾರಿ ಸೇರು ಪೇಡ ಕದ್ದೊಯ್ದು ಉನ್ನಿಸಾಳಿಗೆ ಕರೀಮ ಕೊಟ್ಟಿದ್ದ... ಅದು ಕನಸಿನ ಲೋಕ.

''ತಂದೆ ತಾಯಿಯನ್ನು ಉನ್ನಿಸಳನ್ನು ಮುಂದೆ ಹುಟ್ಟುವ ಮಕ್ಕಳು ಮರಿಗಳನ್ನು ಸುಖವಾಗಿಡಬೇಕೆಂದು ಕರೀಮ ಕನಸು ಕಾಣುತ್ತಿದ್ದ.''

ಉನ್ನಿಸಾ ಬಸರಿಯಾದಳು. ''ಎಂದೋ ಉನ್ನಿಸಳ ಎಳೆ ಹೃದಯ ಬಯಸಿದಾಗ ಕರೀಮನೂ ಎಡವಿದಾಗ ಮೂರನೇ ಅಧ್ಯಾಯ ಮೊದಲಾಯಿತು.'' ''ಮತ್ತೆ ಅಣುಕಿಸುತ್ತ ಬರುತ್ತಿತ್ತು ಬಡತನದ ಭೂತ-ಬಾಣಂತಿತನದ ವೆಚ್ಚ? ಕೂಸಿನ ಆರೈಕೆ?...''

ಕರೀಮ ರೈಲ್ವೆ ನೌಕರರ ಮಹಾಮಂಡಲದ ಕೌನ್ಸಿಲ್ ಸಭೆಗೆ ಪ್ರತಿನಿಧಿಯಾಗಿ ಹೊರಟಾಗಲೇ ಮಗಳಿಗೆ ನೆಗಡಿಯಾಗಿತ್ತು. ಕೌನ್ಸಿಲ್ ಸಭೆಯಲ್ಲಿ ಸಂಘವನ್ನು ಒಡೆಯಲು ಬಂದ ಪಂಚಮದಳದವರಿಗೂ ಕೂಲಿಕಾರ ಪ್ರತಿನಿಧಿಗಳಿಗೂ ಹೊಡೆದಾಟವಾಯಿತು. ಕಠಿಣ ಮನಸ್ಕನಾಗಿ ಕರೀಮ ಮರಳಿದ. ಆದರೂ ಮಗಳಿಗಾಗಿ, ಬಸರಿ ಉನ್ನಿಸಾಳಿಗಾಗಿ ಪೇಡ ತರದೇ ಇರಲಿಲ್ಲ.

ಮನೆ ಒಳಗೆ ಕಾಲಿಡುತ್ತಲೇ ಗೋಳೋ ಎಂದು ಅಳತೊಡಗಿದ. ಯಾಕೆಂದರೆ ಅತಿ ಜ್ವರದಿಂದ ಬಳಲಿದ ಮಗು ಸತ್ತಿದ್ದಳು. ಕರೀಮ ದುಃಖದಿಂದ ಹತಾಶನಾಗಿ ಕುಳಿತ. ಇದನ್ನು ಕಂಡ ಮುದುಕ ತಂದೆ ''ಹುಚ್ಚು ಸೂ - ಮಗನೆ ಉನ್ನಿಸಾಳನ್ನು ಸರಿಯಾಗಿ ನೋಡಿಕೋ. ಅವಳ ಹೊಟ್ಟೆಯಿಂದ ಕೂಸು ಹೊರಬರಬೇಕು. ಮೊಮ್ಮಗನ ಮುಖವನ್ನು ನೋಡಿ ಸಾಯುತ್ತೇನೆ'' ಎಂದ.

ಕರೀಮ ಹುಚ್ಚನಾಗಲಿಲ್ಲ, ಪೇ ಕಮೀಶನ್ ವರದಿ ಬಂತು. ಮೂವತ್ತು ರೂಪಾಯಿ ಹೆಚ್ಚಾಯಿತು.

''ಎಂಥ ಹೋರಾಟವಿದು; ಪ್ರಸವವೇದನೆ ಎಷ್ಟು ಕಠಿಣ, ಅವರೆಲ್ಲ ಬದುಕಬೇಕು. ಸಂಘಟಿತರಾಗಿ ಹೋರಾಡಬೇಕು. ಹೊಸ ಸಮಾಜ ಕಟ್ಟಬೇಕು. ಈ ಎಲ್ಲ ಪ್ರಯತ್ನ ಉನ್ನಿಸಾ ಹೊತ್ತಿದ್ದ ಕೂಸಿಗಾಗಿ, ಮುಂದಿನ ಪೀಳಿಗೆಗಾಗಿ ಯಾವ ಶೋಷಣೆಯೂ ಇಲ್ಲದ ಆ ಲೋಕ ಎಷ್ಟು ಮಧುರವಿದ್ದೀತು.''

''ಅಂಥ ಲೋಕದಲ್ಲಿ ನನ್ನ ಮಗ ಯಂತ್ರಜ್ಞನಾಗುವ ಮಗಳು ಹುಟ್ಟಿದರೆ? ಘೋಷಾದ ಹೊದಿಗೆ ಇಲ್ಲದೆ, ಅಜ್ಞಾನದ ಅವಕುಂಠನವಿಲ್ಲದೆ ಜಾಗೃತಿಯ ಬೆಳಕಿನಲ್ಲೇ ಆಕೆ ಬೆಳೆಯುವಳು.

''ಹಾಗೆ ಎಷ್ಟು ಹೊತ್ತು ನಿಂತಿದ್ದನೋ''

"ನೆರೆಮನೆಯ ಹಿಂದೂ ಹುಡುಗಿ ಪ್ರೇಮಾ ಕರೀಮನ ಕೈ ಹಿಡಿದು ಕಿವಿಯೊಡೆಯುವಂತೆ ಕಿರುಚುತ್ತಿದ್ದಳು. ಏ ಕರಿಯಣ್ಣ ಉನ್ನಿಸಾ ಬೆಹನ್ ಹೆತ್ತಾಳೆ. ಪೇಡ ತತ್ತಾ ಪೇಡ" ಎಂದಳು.

ಬಡವರು ಕಷ್ಟದಲ್ಲಿ ಸಿಕ್ಕಿದಾಗ ಅವರು ಎದುರಿಸುವ ಅದಮ್ಯ ನೋವು, ಆದರೂ ತಾಳ್ಮೆಯಿಂದ ಬದುಕನ್ನು ನೇರ್ಪಡಿಸಿಕೊಳ್ಳುವ ದಿಟ್ಟತನ (ತಂದೆಯ ಮಾತು) ಕುಟುಂಬದಲ್ಲಿ ಹೊಮ್ಮುವ ಹೊಸತನ, ಕನಸುಗಾರಿಕೆ ಎಲ್ಲವೂ ಕುಟುಂಬ ಪ್ರೀತಿಯಲ್ಲಿ ಒಂದು ಧನ್ಯತಾಭಾವವಾಗಿ ಮೂಡಿ ಬಂದಿದೆ. ಹುಟ್ಟಿದ ಶಿಶು ಹೊಸ ಕನಸಿನ ಸಂಕೇತವಾಗಿದೆ.

'ಚೀನಿಸತ್ಯದ ಕತೆ' ಮತ್ತು 'ಗೆರಿಲ್ಲಾ' ಅನುವಾದಿತ ಕತೆ. ಇವು ಅಲ್ಲಿಯ ಸ್ವಾತಂತ್ರ್ಯ ಹೋರಾಟದಲ್ಲಿ ಯುವಕರ ಪಾತ್ರವನ್ನು ಹೇಳುತ್ತದೆ.

ರಷ್ಯದ ಲೇಖಕರೇ ಆದ ಜೊಶುವಾ ಕುನಿಟರ್ ಅವರ "ಡಾನ್ ಓವರ್‌ಸಮರ್‌ಕಂದ್" ಎಂಬ ಕತೆಯ ಆಧಾರದಲ್ಲಿ ರಚಿತವಾದ 'ಬೆಳಕು ಹರಿಯಿತು' ಕತೆ ಬೇರೆ ಕತೆಗಳ ಆಧಾರಿತ ಅಥವಾ ಅನುವಾದಿತಗಳಲ್ಲಿ ಇದು ಮೂರನೆಯದು. ಇದು ಕೂಡ ನಿರಂಜನರ ಆದರ್ಶಕ್ಕೆ ಸರಿದೂಗುವಂತಹುದು ಎಂದು ಮತ್ತೆ ಹೇಳಬೇಕಿಲ್ಲ.

ಕಥಾನಾಯಕಿ ಖೋಸಿಯತ್‌ಳ ತಂದೆ ನೇಕಾರ, ದೈವಭಕ್ತ, ಹಿಟ್ಟು ತಯಾರಿಸುವ ಕಾರಖಾನೆಯಲ್ಲಿ ದುಡಿಯುತ್ತಿದ್ದ. ಸಂಪ್ರದಾಯಸ್ಥ ಮನೆತನ, ಖೋಸಿಯಳಿಗೆ ಮದುವೆಯಾಯಿತು. ಆರು ತಿಂಗಳು ಸುಖವಾಗಿ ಉಳಿದರು. ಮುಂದೆ ಗಂಡ ಹತ್ತಿಯ ತೋಟದಲ್ಲಿ ಕೆಲಸ ಮಾಡಲು ತಾಷ್ಕಂಟಿಗೆ ಹೋದ. ಆರು ತಿಂಗಳಲ್ಲಿ ತೀರಿಕೊಂಡ. ರಷ್ಯದಲ್ಲಿ ಕ್ರಾಂತಿ ಆಗುತ್ತಿದೆ ಎಂದು ಸುದ್ದಿ. ಶ್ರೀಮಂತರನ್ನು ಮುಗಿಸಿ ಬಡವರ ಸರಕಾರ ಸ್ಥಾಪಿಸಿದರಂತೆ. ನೆತ್ತರ ಹೊಳೆ ಹರಿಯಿತು. ಒಂದು ದಿನ ಪುಂಡರು ಖೋಸಿಯಾಳ ಗ್ರಾಮಕ್ಕೆ ಬಂದರು. ಸುಂದರವಾದ ಹುಡುಗಿಯರಿಗೆ ಉಳಿಗಾಲವಿಲ್ಲ. ಖೋಸಿಯಾಳನ್ನು ಅವಳ ಅತ್ತಿಗೆಯ ಸಂಗಡ ವೇಷಮರೆಸಿ ಬೇರೆ ಊರಿಗೆ ಕಳಿಸಿದರು. ಅಲ್ಲಿ ಧರ್ಮಗುರು ಇಶಾನಾನಲ್ಲಿ ಆಳಾಗಿ ದುಡಿಯಬೇಕು. ಇಶಾನಾನಿಗೆ ಮೂರು ಹೆಂಡಂದಿರು. ಕಿರಿಯವಳು ಖೋಸಿಯಾಳ ವಯಸ್ಸಿನವಳು.

ಇಶಾನನ ಕಿರಿಯ ಹೆಂಡತಿಗೆ ಅನಾರೋಗ್ಯವಾಯಿತು. ಹಸಿರು ಕಪ್ಪೆಯ ಮಾಂಸವನ್ನು ಹುರಿದು ಏಳು ದಿನ ತಿನ್ನಿಸಬೇಕು ಎಂದು ತಬೀಬ (ವೈದ್ಯ) ಹೇಳಿದ. ಕಪ್ಪೆ ಹಿಡಿಯಲು ಖೋಸಿಯಾ ಹೋದಳು.

ದಾರಿ ತಪ್ಪಿ ಯಾವುದೋ ಮಾರ್ಗಕ್ಕೆ ಅವಳು ಇಳಿದಳು. ಅಲ್ಲಿ ಒಂದು ಮೆರವಣಿಗೆಯನ್ನು ನೋಡಿದಳು. ಅದು ಹುಡುಗಿಯರ ಮೆರವಣಿಗೆ, ಕತ್ತಿ -

ಸುತ್ತಿಗೆಯ ಕೆಂಪು ಬಾವುಟ ಹಿಡಿದಿದ್ದಾರೆ. ''ಪರಂಜ (ಬುರುಕಿ) ನಿರ್ನಾಮವಾಗಲಿ ಮಧ್ಯ ರಷ್ಯಾದ ಸ್ವತಂತ್ರ ಸ್ತ್ರೀ ಚಿರಕಾಲ ಬಾಳಲಿ'' ಎಂಬ ಘೋಷಣೆ ಕೇಳುತ್ತಾಳೆ. ಗುಂಪಿನ ಜೊತೆ ಅವಳೂ ಸಾಗಿದಳು. ಅವಳು ತಿರುಗಿ ಬರಲಿಲ್ಲ. ಹೊಸಬಾಳು. ಖೋಸಿಯಾ ಅವಕುಂಠನ ಕಿತ್ತೊಗೆದಳು. ಕೂದಲನ್ನು ಅಂದವಾಗಿ ಬಾಬ್‌ಕಟ್ ಮಾಡಿದಳು. ಅಕ್ಷರಾಭ್ಯಾಸ. ಬಂಧಿಸಲ್ಪಟ್ಟ ಮೇಧಾಶಕ್ತಿ ಹುಚ್ಚು ಹೊಳೆಯಾಗಿ ಹರಿಯಿತು. ಬೆಳೆಯುತ್ತ ನಡೆದಳು. ಖೋಸಿಯಾಳ ಸಂಗಡಿಗನೊಬ್ಬನೊಡನೆ ಮದುವೆಯಾಯಿತು. ಆದರೂ ಕಲಿಕೆ ಮುಂದುವರಿಯಿತು. ಜೀವನ ಹೊಸದಾಯಿತು. ಗತಜೀವನ ಮರೆಯುತ್ತಿತ್ತು.

''ಮುಗ್ಧ ಮುಸ್ಲಿಂ ಹುಡುಗಿ ಖೋಸಿಯತ್‌ಳು ತನ್ನ ಘೋಷಾವನ್ನು ಕಳಚಿಕೊಂಡು ಕ್ರಾಂತಿಯ ಹಾದಿಯಲ್ಲಿ ಸಾಗುವ ಕತೆಯು, ಮಹಿಳೆ ತನ್ನ ಮುಗ್ಧತೆ ಹಾಗೂ ಸಮಾಜ ವಿಧಿಸುವ ಬಂಧನಗಳನ್ನು ಕಳಚಿಕೊಂಡು ವಿಮೋಚನೆಯತ್ತ ಹೆಜ್ಜೆ ಹಾಕುವ ಕತೆಯೂ ಆಗುತ್ತದೆ. ೧೯೪೪ರಷ್ಟು ಹಿಂದೆಯೇ ಬರೆದ ಕತೆಯು ಇಂದೂ 'ಸಮಕಾಲೀನ'ವೇ ಆಗಿರುವುದು.

'ಆ ಜೀವನದ' ಅಮ್ಮಿ ಎಂಟು ವರ್ಷಕ್ಕೆ ಮದುವೆಯಾದಳು. ಗಂಡ, ಮಾವ ಒಳ್ಳೆಯವರೇ. ೧೪ಕ್ಕೆ ಮೈನೆರೆಯುತ್ತಾಳೆ. ಮದುವೆಯಾಗಿ ಐದು ತಿಂಗಳಲ್ಲೇ ಅಮ್ಮಿ ವಿಧವೆ. ತೌರು ಮನೆ ಸೇರಿದಳು. ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಅಣ್ಣನೂ ತೀರಿಹೋದ. ದೂರದ ಅಜ್ಜಿಯೊಬ್ಬಳು ತನ್ನಲ್ಲಿ ಬಾ ಎಂದಳು. ಅಜ್ಜಿಯ ಸಂಗಡ ನಡೆದಳು. ವಿಧವೆಯೊಬ್ಬಳು ಸುಖದಿಂದ ಸಂಪ್ರದಾಯ ಸಮಾಜದಲ್ಲಿ ಬದುಕಲಾರಳು. ''ಸಮಾಜ ಸುಟ್ಟಿತು ನಾನು ಸುಖಕ್ಕಾಗಿ ಆಶೆ ಪಟ್ಟರೆ ಈ ವೈದಿಕ ಗೂಬೆಗಳಿಗೆ ಬಂದ ಆಪತ್ತೇನು'' ಎಂದುಕೊಂಡಳು. ಮಠದ ಪೂಜಾರಿಯೊಬ್ಬನೊಡನೆ ಸಂಬಂಧ ಬಂತು. ಅವನ ಉಪಪತ್ನಿಯಾದಳು. ಮೂವತ್ತು ವರ್ಷಕ್ಕೆ ಮಗುವನ್ನು ಹಡೆದಳು. ಮನೆ ಮನೆಯೂ ಪ್ರತಿಧ್ವನಿಸಿತು. ಅಮ್ಮಿ ಬಹಿಷ್ಕೃತೆಯಾದಳು. ಪಾಪ ಮಾಡಿ ಆ ಮಗುವನ್ನು ಪಡೆದಿದ್ದಿಯೇ ಎಂದಿತು ಸಮಾಜ. ''ಥೂ ಪಾಪಿ ನಿನ್ನಪ್ಪನ ಗಂಟೇನು ಹೋದದು. ಇಕೊ ಹೂ ಮುಡಿಯುವೆ, ತಿಲಕ ಇಡುವೆ, ಬೆಂಡೋಲೆ ಹಾಕಿಕೊಳ್ಳುವೆ'' ಎಂದಳು ಅಮ್ಮಿ.

ಅಮ್ಮಿ ದೂರ ನಡೆದಳು ಎಲ್ಲಿಗೆ ಹೋದರೂ ಕಾಮುಕರ ಹಾವಳಿ. ಆದರೆ ಎಲ್ಲರೂ ಸಂಭಾವಿತರೇ. ಅಮ್ಮಿ ಬಗ್ಗಲಿಲ್ಲ.

ಶಾಲೆಯಲ್ಲಿ ಮಗು ವೆಂಕಟುವನ್ನು ನಿನಗೆ ತಂದೆಯಿಲ್ಲ ಎಂದು ಸಹಪಾಠಿಗಳು ಹೀಯಾಳಿಸುತ್ತಿದ್ದರು.

ತಾಯಿ ದುಡಿದಳು. ನಲ್ವತ್ತು ವರ್ಷಕ್ಕೆ ತಲೆಗೂದಲೆಲ್ಲ ಬೆಳ್ಳಗಾಯಿತು. ಮುಖ ಸುಕ್ಕಟ್ಟಿತು. ''ನಾನಿನ್ನು ಹೆಚ್ಚು ಕಾಲ ಬದುಕುವೆನೆ? ಎರಡಂತಸ್ತಿನ ಮನೆ ಕಟ್ಟಿ ಮಗನಿಗೊಂದು ಮದುವೆ ಮಾಡಿಸಿ, ಹಿಂದೆ ನನ್ನನ್ನು ಬೈದವರೆಲ್ಲ ಬೆಟ್ಟು ಕಚ್ಚುವಂತೆ ಮಾಡುವೆನೆ? ಎಂದು ಆಕೆ ಚಿಂತಿಸತೊಡಗಿದಳು.

ವೆಂಕಟುವಿನ ತಂದೆ ಸತ್ತ ಸುದ್ದಿ ಅವನಿಗೆ ತಲ್ಪಿತು. ಅಮ್ಮನಿಗೆ ದುಃಖವಾಗುತ್ತದೆಂದು ಆತ ಹೇಳಲಿಲ್ಲ. ಆದರೆ ತಾಯಿ ಸಾಯುವಾಗ ತಿಳಿಸುತ್ತಾನೆ. ಮಗ ವೆಂಕಟನಿಗೆ ಇಪ್ಪತ್ತೆರಡು ವರ್ಷ. ತಾಯಿ ಸತ್ತಳು. ಸಾಯುವಾಗ ''ನನ್ನದೊಂದು ಕೊನೆಯ ಆಸೆಯಿದೆ ಎಂದಳು. ನನ್ನನ್ನು ಸುಡುವಾಗ ಈ ಮೂಗಿನ ನತ್ತನ್ನು ಹಾಗೆಯೇ ಸುಡಲು ಬಿಡು'' ಎಂದಳು.

ವೆಂಕಟು ತನ್ನ ತೋಳಿನಿಂದಲೇ ಎತ್ತಿಕೊಂಡು ಹೋಗಿ ಸುಟ್ಟುಬಂದ. ಈಗ ಆತ ಒಬ್ಬಂಟಿ ಅನಾಥ.

''ನಾನೊಬ್ಬನೇ ಅಲ್ಲ, ದಲಿತರ ಮಹಾಸೇನೆಯೊಂದಿಗೆ ನಾವು ಎದ್ದೇಳುತ್ತಿದ್ದೇವೆ. ಅಂತಿಮ ಸಂಗ್ರಾಮಕ್ಕೆ ಸಿದ್ಧರಾಗುತ್ತಿದ್ದೇವೆ'' ಎಂದು ಕಿರುಚಿದ ವೆಂಕಟ.

''ದೂರದ ಇಗರ್ಜಿ ಘಂಟಾರವ ಕೇಳಿಸಿತು. ಬೆಳಕು ಹರಿಯುತ್ತಿತ್ತು. ಮೆಲ್ಲ ಮೆಲ್ಲನೆ ಬೆಳಕು ಹರಿಯುತ್ತಿತ್ತು.'' ಎಂದು ಕತೆ ಮುಕ್ತಾಯವಾಗುತ್ತದೆ.

ಇಲ್ಲಿಯೂ ಲೇಖಕ ತನ್ನ ನಿಲುಮೆಯನ್ನು ಬಿಟ್ಟುಕೊಟ್ಟಿಲ್ಲ. ಆದರೆ ಅದು ಸಹಜವಾಗಿ ಅರಳಿ ಬಂದಿದೆ. ಈ ಸಾಮಾಜಿಕ ದೌರ್ಜನ್ಯ ಹೋಗಬೇಕಾದರೆ ಒಂದು ದೊಡ್ಡ ಹೋರಾಟವೇ ನಡೆಯಬೇಕಿದೆ. ಅದು ದಲಿತ (ಕಾರ್ಮಿಕ-ಬಡವರು ಇತ್ಯಾದಿ) ವರ್ಗದಿಂದ ಸಾಧ್ಯ. ತನ್ನ ಸ್ಥಾನವನ್ನು ವೆಂಕಟು ಅಲ್ಲಿ ಗುರುತಿಸಿಕೊಳ್ಳುತ್ತಾನೆ. ಆಶಾವಾದದಿಂದ ಕತೆ ಮುಗಿಯುತ್ತದೆ. ಬೆಳಕು ಅದರ ಸಂಕೇತ.

ಹೀಗೆ ಗ್ರಾಮೀಣ ಪ್ರದೇಶದ ಒಂದು ಪರಿಸರದಲ್ಲಿ ರಕ್ತಸಂಬಂಧ ಮೀರಿ ಬಂಧುತ್ವವನ್ನು ಸ್ಥಾಪಿಸುವ ಕತೆಯಂತೆಯೇ, ಅದೇ ಪರಿಸರದ ರೈತ ಹೋರಾಟದ ಸಂದರ್ಭದಲ್ಲಿ ಜಾತಿ, ಭಾಷೆ ಮತ್ತು ಪ್ರಾಂತವನ್ನು ಮೀರಿದ ಸಂದರ್ಭದಲ್ಲೂ ಕೇವಲ ಮಾನವೀಯ ಮತ್ತು ವರ್ಗಮೂಲವಾಗಿ ಬಂಧುತ್ವವು ಘನಗೊಳ್ಳುವ ಪರಿಯನ್ನು 'ರಕ್ತ ಸಂಬಂಧಿ' ಮತ್ತು 'ಅಗಲಿದ ಬಾಂಧವ' ಎಂಬ ಕತೆಯಲ್ಲಿ ರೂಪಿಸಿದ್ದಾರೆ. 'ಅಗಲಿದ ಬಾಂಧವ'ದ ಕಥಾನಾಯಕನಂತೂ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ರೈತ ಹೋರಾಟದಲ್ಲಿ ಭಾಗವಹಿಸಿದ ಐತಿಹಾಸಿಕ ವ್ಯಕ್ತಿ.

ರೈತ ಹೋರಾಟದಲ್ಲಿ ಭಾಗವಹಿಸಿದ ಪರಶುರಾಮನನ್ನು (ಗಣೂ ಎಂಬ ನಿಜ ವ್ಯಕ್ತಿ) ಪೋಲೀಸರು ಬಂಧಿಸಿ ಜೈಲಿಗೆ ಹಾಕುತ್ತಾರೆ. ಜೈಲಿನಲ್ಲಿ ನಡೆದ ಪ್ರತಿಭಟನೆಯಲ್ಲಿ

ಪೋಲೀಸರು ಗುಂಡು ಹಾರಿಸಿ ಅವನನ್ನು ಕೊಲ್ಲುತ್ತಾರೆ. ಕತೆ ಅಷ್ಟಕ್ಕೆ ನಿಲ್ಲುವುದಿಲ್ಲ. ಸಮಾಜವಾದಿ ಆಶಯದ ಫಲವಾಗಿಯೇ ಎಂಬಂತೆ ಮುಂದೆ ಅವನ ಮಗಳು "ತುಂಟ ಹುಡುಗಿ ಸರಳಾ ಬಾವುಟ ಹಿಡಿದು ಸಂಘದ ಹಾಡನ್ನು ಹಾಡುತ್ತಾ ಮುಂದಾಗುತ್ತಿದ್ದುದನ್ನು, ತನ್ನ ಓರಗೆಯವರನ್ನು ಒಂದುಗೂಡಿಸಿ ಹಳ್ಳಿಗೆ ಹಳ್ಳಿಯನ್ನೇ ಕುಣಿದಾಡಿಸುತ್ತಿರುವುದನ್ನು ನೀವು ನೋಡಬೇಕಿತ್ತು" ಎಂಬ ಚಿತ್ರಣ ಬರುತ್ತದಾದರೆ ನಾಯಕ ಸತ್ತ ನಂತರ ವರ್ಷಗಳಲ್ಲಿ ಅವಳು ಬೈಸಿಕಲ್ ಹೊಡೆಯುತ್ತ ಬರುತ್ತಾಳೆ. "ಆಕೆ ಮೆಡಿಕಲ್ ಕಾಲೇಜಿನಿಂದ ಮನೆಗೆ ಮರಳುತ್ತಿದ್ದಾಳೆ. ಹದಿನೆಂಟು ಹತ್ತೊಂಬತ್ತರ ಭಾವೀ ಡಾಕ್ಟರ್... ಯಾರಿಗೆ ಗೊತ್ತು ಯಾವ ರಹಸ್ಯಗಳು ಆ ನಿರ್ಮಲ ಹೃದಯದೊಳಗೆ ಅಡಗಿವೆಯೆಂದು? ಇರಬಹುದು, ತನ್ನ ಸಹಪಾಠಿಯೊಬ್ಬನನ್ನು ಸಂಗಾತಿಯಾಗಿ ಆಕೆ-ಆಯ್ದುಕೊಂಡಿರಬಹುದು. ಹುತಾತ್ಮನೊಬ್ಬನ ವೀರಪುತ್ರಿ, ಸ್ವಾತಂತ್ರ್ಯ ಸಮರದಲ್ಲಿ ಹೋರಾಡಿದ ಯೋಧ - ಆ ಅಧಿಕಾರ ಅವಳಿಗಿಲ್ಲ ಎನ್ನುವವರಾರು?" ಎಂಬ ನಿರೂಪಣೆ ಸಿಕ್ಕುತ್ತದೆ.

'ಮೋಡ ಚದುರಿತು' (೧೯೫೦) ಕತೆಯ ಟಿಪ್ಪಣಿಯಲ್ಲಿ ನಿರಂಜನ ಹೀಗೆ ಬರೆದಿದ್ದಾರೆ, ಕಥೆಯ ಕರ್ತೃ ನಿರಂಜನ, ಇನ್ನೂ ಮುಂದಿನ ಕತೆಗಳೆಲ್ಲವೂ ನಿರಂಜನ ಸೃಷ್ಟಿ. ಪಕ್ಷತ್ಯಾಗದ ಬಳಿಕ ಇದು ಅನಿವಾರ್ಯವೆನಿಸಿದ ನಾಮಾಂತರ. ಹೆಸರು ಬದಲಾಯಿಸಿದರೂ ಒಂದು ದಶಕ ಕಾಲ ಮೈಗಂಟಿದ, ರಕ್ತಗತವಾಗಿದ್ದ ಸಿದ್ಧಾಂತ ನಿಲುವು ಒಮ್ಮೆಲೇ ಮಾಯವಾಗುವುದಿಲ್ಲ. ಮುಂದೆಯೂ ಗತದಶಕ ಆಗೊಮ್ಮೆ ಈಗೊಮ್ಮೆ ಸೆಡ್ಡು ಹೊಡೆಯುವುದುಂಟು.

ಹೀಗೆ ಹೇಳುವಾಗ ನಿರಂಜನ ೮೭ ಕತೆಗಳನ್ನು ಬರೆದಿದ್ದರು.

-೩-

೧೯೪೮, ೪೯ ಮತ್ತು ೫೦ ರಲ್ಲಿ ಕಮ್ಯುನಿಷ್ಟ ಪಕ್ಷದ ವಿರುದ್ಧ ಸರಕಾರ ಅಸ್ತ್ರ ಹಿಡಿದಾಗ ಭೂಗತ ಬದುಕು. 'ಜನಶಕ್ತಿ'ಯ ಮೇಲೆ ನಿಷೇಧಾಜ್ಞೆ ಜಾರಿಯಾಗಿರುವವರೆಗೂ ಹುಬ್ಬಳ್ಳಿ, ಧಾರವಾಡಗಳಲ್ಲಿ ತಲೆ ಮರೆಸಿಕೊಂಡು ಪತ್ರಿಕೆಗೆ ಮ್ಯಾಟರ್ ಪೂರೈಕೆ, ಬಳಿಕ ಭೂಗತನಾಗಿ ಬೆಂಗಳೂರಿನಲ್ಲಿ ಸರಿ ತಪ್ಪುಗಳ ಸೈದ್ಧಾಂತಿಕ ತಾಕಲಾಟಗಳಲ್ಲಿ ಬೆಂದು ಪಕ್ಷದಿಂದ ಬಿಡುಗಡೆ ಬಯಸಿ ವರಿಷ್ಠರಿಗೆ ಪತ್ರ, (ನಿರಂಜನ ಅಭಿನಂದನ ೧೯೮೬ ಪು. ೪೮೦) ಕೊನೆಗೆ ನಿರಂಜನ ಪಕ್ಷದಿಂದ ಸಂಪೂರ್ಣ ಬಿಡುಗಡೆ ಹೊಂದುವುದು ೧೯೫೩ ರಲ್ಲಿ.

ಪಕ್ಷದಿಂದ ಹೊರ ಬರಲು ಸೈದ್ಧಾಂತಿಕ ತಾಕಲಾಟ ಮಾತ್ರ ಕಾರಣವಾಗಲಿಕ್ಕಿಲ್ಲ. ಅದರೊಟ್ಟಿಗೆ ಮನಸ್ಸಿನ ಒಳಗೆ ಕುಳಿತ ಒಬ್ಬ ಬರಹಗಾರ (ನಿರಂಜನ)ರ, ಕೃತಿ ರಚನೆಯಲ್ಲಿ ಪೂರ್ಣವಾಗಿ ತೊಡಗಿಕೊಳ್ಳುವ ಅದಮ್ಯ ತುಡಿತವೂ

ಕೂಡಿಕೊಂಡಿರಬೇಕು. ಇದಕ್ಕೆ ಪೂರಕವಾದ ಮಾತನ್ನು ನಿರಂಜನರೇ ಹೇಳಿದ್ದಾರೆ. ''ಸೃಜನಶೀಲ ಬರಹಗಾರ ಯಾವುದೇ ರಾಜಕೀಯ ಪಕ್ಷದ ಸದಸ್ಯನಾದಾಗ ಅದರಲ್ಲಿ ತನ್ನನ್ನು ಗಾಢವಾಗಿ ತೊಡಗಿಸಿಕೊಂಡಾಗ ಬರವಣಿಗೆ ನರಳುತ್ತದೆ.'' (ಉದ್ಧಾರಣೆ ಬಿದರಹಳ್ಳಿ ನರಸಿಂಹ ಮೂರ್ತಿ, 'ಧ್ವನಿ' ಪ್ರವೇಶಿಕೆ) ಹಾಗೆಯೇ ''ರಾಜಕಾರಣದ ಉರಿಯಲ್ಲಿ ನಾಶವಾಗಿ ಹೋಗಿಬಿಡಬಹುದೆಂಬ ಭಯ ನನಗೆ ಇದ್ದೇ ಇದೆ'' (ಮುಖತಃ ೧೯೮೫ ಮೇ ೪)

ಹೀಗಿದ್ದರೂ ನಿರಂಜನರ ಸಿದ್ಧಾಂತ ಮಾರ್ಕ್ಸ್‌ವಾದಿ ನಿಲುವಿನಿಂದ ಬದಲಾಗಿಲ್ಲ. ಅದನ್ನು ಅವರು ಸತತವಾಗಿ ಕಾದುಕೊಂಡು ಹೋಗಿದ್ದಾರೆ. ಮಾನವೀಯವಾದ ಮೂಲ ಸಿದ್ಧಾಂತಕ್ಕೆ ಬೇರೆ ಬೇರೆಯ ಮುಕ್ತ ಮನಸ್ಸಿನ ಚಿಂತನೆ ಇನ್ನಷ್ಟು ಸಮೃದ್ಧಿಗೊಳಿಸಿದೆ ಎಂಬುದನ್ನು ಅವರ ಮುಂದಿನ ಕತೆ ಕಾದಂಬರಿಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ಮಾರ್ಕ್ಸ್‌ವಾದದೊಡನೆಯ ತಮ್ಮ ಸಂಬಂಧವನ್ನು ಅವರೇ ಡಿ.ಆರ್. ನಾಗರಾಜರೊಡನೆಯ ಒಂದು ಸಂದರ್ಶನದಲ್ಲಿ ಹೇಳಿದ ಮಾತು ಹೀಗಿದೆ. ''..... ಅಂದ ಮಾತ್ರಕ್ಕೆ ನಾನು ಕಮ್ಯುನಿಸ್ಟ್ ವಿರೋಧಿಯಲ್ಲ. ಜಗತ್ತನ್ನು ಅರ್ಥಮಾಡಿಕೊಳ್ಳಲು ಮಾರ್ಕ್ಸ್‌ವಾದದ ಕೊಡುಗೆ ಅಪಾರವಾದದ್ದು. ಆದರೆ Thus for no further ಎನ್ನುವ ಧೋರಣೆಯನ್ನು ನಾನು ಒಪ್ಪುವುದಿಲ್ಲ. (ಪೂರ್ವೋಕ್ತ).

ಈ ಎಲ್ಲ ಹಿನ್ನೆಲೆಯಲ್ಲಿ ಅವರ ''ನಂ. ೨೦೮ ಮತ್ತು ನೀಲಿ ಬುಶ್ ಕೋಟ್'' ಕತೆಯನ್ನು ಗಮನಿಸಬೇಕು. ಇದನ್ನು ಬರೆದಿದ್ದು ೧೯೫೦ ರಲ್ಲೇ.

ಶಾರದಾಳ ತಂದೆಯ ಸಂಪಾದನೆ ತಿಂಗಳಿಗೆ ರೂ. ೫೦, ತಾಯಿಗೆ ಕಾಯಿಲೆ. ತಮ್ಮ ಶಾಲೆಗೆ ಹೋಗುತ್ತಾನೆ. ಶಾರದಾ ನಾಲ್ಕನೇ ಫಾರಂ ಓದಿದಾಕೆ. ಮದುವೆ ಮಾಡಲು ತಂದೆ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಮನೆಗೆ ಸಹಾಯ ಆಗಬಹುದೆಂದು ಶಾರದಾ ಹೊಲಿಗೆ ಕಲಿತಳು. ಒಂದು ಹೊಲಿಗೆ ಯಂತ್ರ ತೆಗೆಸಿಕೊಡಲೂ ತಂದೆಯಿಂದ ಆಗಲಿಲ್ಲ. ಹೀಗಾಗಿ ತಯಾರಿ ಪೋಷಾಕಿನ ಕಾರಖಾನೆಯೊಂದಕ್ಕೆ ಅವಳು ಸೇರ್ಪಡೆಯಾದಳು. ಅವಳ ನಂ. ೨೦೮.

ಅವಳ ತಮ್ಮನಿಗೆ ಸರಿಸಮಾನರಲ್ಲಿ ಬೆರೆಯುವಂತಹ ಉತ್ತಮ ಪೋಷಾಕು ಇಲ್ಲ. ಅವನಿಗೆ ಅವನ ಪ್ರೀತಿಯ ಬಣ್ಣವಾದ ನೀಲಿ ಬುಶ್‌ಷರ್ಟು ಒಂದನ್ನು ದೀಪಾವಳಿಗೆ ತೆಗೆಸಿಕೊಡುವುದಾಗಿ ಮಾತು ಕೊಡುತ್ತಾಳೆ. ದೀಪಾವಳಿ ಕಳೆದುಹೋಗುತ್ತದೆ. ಇನ್ನೂ ದಿನ ಕಳೆಯುತ್ತದೆ. ಪ್ರೀತಿಯ ತಮ್ಮ ಮಾತ್ರ ಚೇಡಿಸುತ್ತಲೇ ಇರುತ್ತಾನೆ.

ಈಗ ಆತ ವಿಷಮಜ್ವರವಾಗಿ ಆಸ್ಪತ್ರೆಯಲ್ಲಿ ಮಲಗಿದ್ದಾನೆ. ಆಕೆ ಅಂದುಕೊಳ್ಳುತ್ತಾಳೆ. ಈ ಸಂದರ್ಭದಲ್ಲಿ ತಾನು ಒಂದು ಉಡುಗೊರೆ ಕೊಡುವಂತಾದರೆ? ಓ ಸಾಧ್ಯವಾದರೆ?

ಕಟ್ಟಡದಲ್ಲಿ ನವ-ನಮೂನೆಯ ಪೋಷಾಕುಗಳು ತಯಾರಾಗುತ್ತಿದ್ದವು. "ಶಾರದೆಗೆ ಬೇಕಾದುದು ಒಂದೇ ಒಂದು ನೀಲಿ ಬುಶ್‌ಕೋಟು. ಸಣ್ಣ ಸೈಜಿನದು, ಪೂರ್ಣ ತೋಳಿನದು. ಕಣ್ಣೀರು ಒತ್ತರಿಸಿ ಬಂತು."

ಊಟದ ವೇಳೆಯಲ್ಲಿ ಸಂಗಾತಿಗಳು ಬೇರೆ ಕೋಣೆಗೆ ಹೋದರು.

"ಒಂದು ಸಲ ಹಿಂದಿರುಗಿ ನೋಡಿದಳು, ಶರೀರ ಕಂಪಿಸುತ್ತ, ಮೈಬೆವರಿತು; ಚಟ್ ಚಟ್ ಎಂದು ಮಿದುಳು ಸಿಡಿಯತೊಡಗಿತು. ಮೈಲು ದೂರಕ್ಕೂ ಕೇಳುವಂತೆ ಎದೆ ಗುಂಡಿಗೆ ಡವಡವಿಸಿತು. "ಕೈಗಳು ಕಳ್ಳತನ ಮಾಡಿದವು." ಆ ಅರೆಹೊಲಿದ ನೀಲಿ ಲಿನೆನ್ ಬುಶ್‌ಕೋಟು ಮುದುಡಿ ಮುದುಡಿ ಆಕೆಯ ಚಿಕ್ಕ ಟಿಫಿನ್ ಕ್ಯಾರಿಯರ್‌ನೊಳಗೆ ಅವಿತುಕೊಂಡಿತು. ಕುಸಿದು ಬೀಳುವಂತಾಯಿತಾಕೆಗೆ, ಕಾಲುಗಳು ಬಲಹೀನವಾದವು.

"ಶಾರದೆಗೆ ಬವಳಿ ಬರ್‍ತಾ ಇದೆ."

ಮತ್ತೊಬ್ಬಳು ಅರ್ಧ ದಿನ ರಜೆ ಹಾಕಿ ಹೋಗೆಂದಳು. ಶಾರದೆ ಹಾಗೇ ಮಾಡಿದಳು. ಹೊರ ಹೋದಳು. ಆದರೆ ಅವಳು ಹೋಗಲಿಲ್ಲ, ಅಲ್ಲೇ ನಿಂತಳು. ಎರಡು ಕ್ಷಣ ಬಳಿಕ ಅವಳು ಯಾಂತ್ರಿಕವಾಗಿ ಕಾರಖಾನೆಗೆ ಮರಳಿದಳು. "ಹೊರ ಆವರಣದ ಪಾರ್ಶ್ವದಲ್ಲಿತ್ತು ಯಜಮಾನರ ಆಫೀಸು, ಇಳಿವಯಸ್ಸಿನ, ನರೆಗೂದಲಿನ, ದಯಾಪೂರಿತವೆಂದು ಕಾಣುತ್ತಿದ್ದ ಕಣ್ಣುಗಳ ವ್ಯಕ್ತಿ ಆತ".

ಶಾರದೆ ತಾನು ಬುಶ್‌ಕೋಟು ತೆಗೆದ ವಿಚಾರ ಹೇಳಿದಳು. ಸಾವುಕಾರರು ಅವಳ ಸ್ಥಿತಿಯನ್ನೆಲ್ಲ ವಿಚಾರಿಸಿಕೊಂಡರು. ಅವಳಿಗೆ ಪೂರ್ತಿ ತಿಂಗಳ ಸಂಬಳವನ್ನು ಕೊಟ್ಟು, ನಾಳೆ ಕೆಲಸಕ್ಕೆ ಬಾರಮ್ಮ, ಏನೂ ಆಗಲಿಲ್ಲ ಎಂಬಂತೆ ಇದ್ದುಬಿಡು ಎಂದರು.

ಇಲ್ಲಿ ಗಮನಿಸಬೇಕಾದ ಸಂಗತಿ ಎರಡು. ಮಾನವೀಯ ಗುಣ ಒಂದನ್ನೊಂದು ಗುರುತಿಸಿದ್ದು. ಸೈದ್ಧಾಂತಿಕವಾಗಿ ನೋಡಿದರೆ ಯಜಮಾನರ ಮತ್ತು ಕೆಲಸಗಾರರ ಈ ಎರಡು ವರ್ಗಗಳು ವೈರಿ ವರ್ಗಗಳು. ಅವುಗಳ ಸಾಮೀಪ್ಯ ಅನಿವಾರ್ಯವಾದಂತೆ ಸಂಘರ್ಷ ಕೂಡ ಅನಿವಾರ್ಯ. ಇಲ್ಲಿಯೂ ವರ್ಗ ಸಂಬಂಧ ಇದ್ದೇ ಇದೆ. ಆದರೂ ವರ್ಗಸ್ವಭಾವವನ್ನು ಮೀರಿ ಇಲ್ಲಿ ಮಾನವೀಯತೆ ಮುಖ ತೋರಿದೆ. ಇದಕ್ಕೆ ಒಂದು ಬೇರೆ ಎಳೆ ಕೂಡ ಉಂಟು. ಅದು ಕತೆಯ ನೇಯ್ಗೆಯಲ್ಲಿ ಒಂದೆಳೆಯಾಗಿ ತಲೆಮರೆಸಿ ಸೇರಿಕೊಂಡಿದೆ. ಸಾವುಕಾರ ವಿಚಾರಿಸುತ್ತಾನೆ.

"ಯಜಮಾನರಿಗೆ ತನ್ನ ಬಾಲ್ಯದ ನೆನಪಾಯಿತು. ಒಂದು ಕಾಲದಲ್ಲಿ ಅವರೂ ಕಹಿ ಜೀವನ ಅನುಭೋಗಿಸಿದ್ದರು. ಬಡತನ ಅವರ ತಮ್ಮನೊಬ್ಬನನ್ನು 'ಅನೀತಿ' ಎನ್ನಿಸಿಕೊಳ್ಳುವ ಜಾರುಗುಂಡಿಯಲ್ಲಿ ಬಹಳ ಆಳಕ್ಕೆ ತಳ್ಳಿತ್ತು. ಆ ಪಾತಾಳದಿಂದ ಆತ ಚೇತರಿಸಿಕೊಂಡು ಎದ್ದೇ ಇರಲಿಲ್ಲ."

ಇಲ್ಲಿ ವರ್ಗಸ್ವಭಾವ, ಮಾನವೀಯ ಕಾಳಜಿ ಒಂದು ಸಂಕೀರ್ಣವಾದ ತಳಕು ಹಾಕಿಕೊಂಡು ಕತೆಗೆ ಹೆಚ್ಚು ಪುಷ್ಟಿಯನ್ನು ಕೊಟ್ಟಿದೆ. ವರ್ಗ ಸಂಘರ್ಷ ನೈತಿಕ ಸಂಘರ್ಷವಾಗಿದೆ ಮತ್ತು ಅದು ಗೆದ್ದಿದೆ. ಪರಿಣಾಮದಲ್ಲಿ ಹೊಸ ಚಲನೆಯಾಗಿದೆ.

೧೯೫೧ ರಲ್ಲಿ ಬರೆದ ಅವರ 'ಕೊನೆಯ ಗಿರಾಕಿ' ಕತೆಯಿಂದಾಗಿ ಕಥಾ ಸಾಹಿತ್ಯದಲ್ಲಿ ಅವರು ತಮ್ಮ ಉಚ್ಚಾಂಕವನ್ನು ಮುಟ್ಟುತ್ತಾರೆ. ಇದೂ ಸಹ ದಲಿತ ಬದುಕಿನ, ಅದರಲ್ಲೂ ಒಬ್ಬ ಹೆಣ್ಣಿನ ಕತೆ. ಈ ಕತೆಯು ಕನ್ನಡ ಮುಖ್ಯ ಪ್ರಾತಿನಿಧಿಕ ಸಂಕಲನಗಳಲ್ಲೆಲ್ಲ ಆಯ್ಕೆ ಹೊಂದಿದೆ.

ಈ ಕತೆ ಕನ್ನಡದ ಮುಖ್ಯ ವಿಮರ್ಶಕರೆಲ್ಲರ ಗಮನ ಸೆಳೆದಿರುವುದು ಈಗ ಇತಿಹಾಸ. ಈ ಕತೆಯಲ್ಲಿ ನಿರಂಜನರ ಮುಖ್ಯ ಸೈದ್ಧಾಂತಿಕ ನಿಲುವಾದ ಸಮಾಜ ಮತ್ತು ಸಮಾಜವಾದಿ ವಾಸ್ತವತೆಯ ಹಾಜರಾತಿ ಇದ್ದೇ ಇದೆ. ಆದರೆ ಅದು ಕತೆಯ ನೇಯ್ಗೆಯಲ್ಲಿ ಸೇರಿಹೋಗಿ ಕಲಾತ್ಮಕತೆ ಅವಿನಾ ಅಂಶವಾಗಿರುವುದು ಇಲ್ಲಿಯ ಹೆಚ್ಚಳ.

ಕಥಾನಾಯಕಿಯ ಹೆಸರು ಕಾಣಿ. ಕಾಣಿಯ ತಂದೆ ತಾಯಿಗಳಿಗೆ ಚಿಕ್ಕ ಗುಡಿಸಲಿತ್ತು. ಒಕ್ಕಲುತನಕ್ಕೆ ಚಿಕ್ಕ ಹೊಲವೂ ಇತ್ತು. ಆದರೆ ದೇಶಪ್ರೇಮಿಯಾದ ಆ ಹಿರಿಯ ಜಮೀನ್ದಾರ ಹೆಚ್ಚು ಗೇಣಿ ಕೇಳಿದ, ಕೊಡದೇ ಹೋದರೆ ಹೊಸ ಒಕ್ಕಲನ್ನು ಹುಡುಕುವುದಾಗಿ ಹೇಳಿದ. ಹಾಗೆಯೇ ಆಯಿತು... ಎಷ್ಟು ಸುತ್ತಾಡಿದರೂ ಕೆಲಸ ಸಿಗಲಿಲ್ಲ. ಬೇಡಿ ಬೇಡಿ ಸರ್ಮಿಸಾದ ಬಳಿಕ ಭಿಕ್ಷೆ ಎತ್ತಿದ, ಆ ಕೆಲಸ ಅವರಿಗೆ ಖಾಯಂ ಆಯಿತು.

ಕಾಣಿ ಒಬ್ಬ ಭಿಕ್ಷುಕನೊಡನೆ ಓಡಿಹೋದಳು. ಓಡಿ ಬಂದ ಮೇಲೆ ಅವಳು ಅವನೊಡನೆ ನಗರದಲ್ಲಿ ಕಳೆದದ್ದು ಹತ್ತೇ ದಿನ... ಹನ್ನೊಂದನೆಯ ಬೆಳಗು ಮುಂಜಾನೆ ಅವಳೊಬ್ಬಳೇ...

"ಆ ದಿನವೆಲ್ಲ ಆ ಮೂಕಿಯ ಕಣ್ಣುಗಳಿಂದ ಬಳಬಳ ಕಣ್ಣೀರು ಸುರಿಯುತ್ತಲೇ ಇತ್ತು. ಆಕೆ ಹೊಟ್ಟೆ ಹಿಸುಕಿಕೊಂಡಳು. ಕೂತಲ್ಲೇ ಗೋಡೆಗೆ ಹಣೆ ಚಚ್ಚಿಕೊಂಡು, ಗೊಳೋ ಎಂದು ರೋದಿಸಿದಳು. ಅಲ್ಲಿ ಇಲ್ಲಿ ಸುತ್ತಾಡಿದಳು. ಆತ ಸಿಗಲಿಲ್ಲ."

"ಆಕೆ ರೂಪವತಿಯಲ್ಲ, ತೆಳ್ಳನೆಯ ಜೀವ. ಆದರೆ ವಯಸ್ಸಿಗೆ ಮೀರಿ ಮೈತುಂಬಿತ್ತು. ಬರಿಯ ದೇಹ ಮಾಂಸಕ್ಕಾಗಿ ಹಂಬಲಿಸುವವರಿಗೆ ಆಕೆ ಮನದಣಿಯುವ ಊಟವಾಗಿದ್ದಳು."

ಫುಟ್‌ಪಾತಿನ ಮೇಲೆ ಒಂದು ದೇವದಾರು ಮರದ ಬಳಿ ಅವಳು ನಿಂತಳು. ಆತನೂ ಸಮೀಪ ಬಂದ. ತಿಂಡಿ ಪೊಟ್ಟಣವನ್ನು ಆತ ಮುಂದಕ್ಕೆ ನೀಡಿದ... ಕ ರಾ ಕ ಆ ಆ ಆ ಎಂದೇನೊ ಹೇಳಿದಳು. ಕಣ್ಣೀರು ಚಿಮ್ಮತೊಡಗಿತು.... ಯಾವುದೋ ಆಶ್ರಯದಲ್ಲಿ ಹಾಗೆ ಆ ರಾತ್ರಿ ಬೆಳಗಾಯಿತು.

ಮುಂದೆ ಆತ ಅವಳನ್ನು ಶೃಂಗರಿಸಿ ಮೂಕಿ ಎಂದು ತೋರಿಸಬಾರದು ಎಂದು ಹೊಸ ಗಿರಾಕಿಗಳನ್ನು ಕರೆದು ತಂದ. ಅವರಲ್ಲೊಬ್ಬ ಶುದ್ಧ ಪಶು. ಆಕೆಯ ಅಂಗಾಂಗವನ್ನೆಲ್ಲ ಹಿಡಿದು ನೋಯಿಸಿದ. ಆಕೆ 'ವೆ ವೆ ವೆ ವೆ' ಎಂದು ಪ್ರತಿಭಟಿಸಿದಳು. ಆಕೆಯ ಯಜಮಾನ ಬಡ ನಾಯಿಗೆ ಹೊಡೆದ ಹಾಗೆ ಹೊಡೆದ, ''ಅಂದಿನಿಂದ ಕಾಣಿ ಬಲು ಮೆದುವಾದಳು, ಮೊದಲ ಸಾರೆ ಮೊಂಡು ಕೈಯವನನ್ನು ಪ್ರೀತಿಸಿದ ಹಾಗೆ ಯಾರನ್ನು ಆಕೆ ಪ್ರೀತಿಸಲಿಲ್ಲ.''

ದಿನಗಳೆಯಿತು ಗಿರಾಕಿಗಳು ಬರಲಿಲ್ಲ ಕೆನ್ನೆಗಳು ಗುಳಿಬಿದ್ದವು, ಕಣ್ಣು ಕೆಳಕ್ಕಿಳಿಯಿತು. ಜ್ವರ ಬರತೊಡಗಿತು. ಮತ್ತಷ್ಟು ಹೆಚ್ಚು ಶೃಂಗಾರ ಮಾಡಿಕೊಂಡಳಾಕೆ.

''ಕೆಲವು ಪುಂಡರು ಆಕೆ ಮಲಗುತ್ತಿದ್ದ ಶಾಲೆಗೂ ಬರುತ್ತಿದ್ದರು ರಾತ್ರಿ ಹೊತ್ತು, ಆದರೆ ಪುಡಿಕಾಸು ಬಿಚ್ಚುತ್ತಿರಲಿಲ್ಲ. ಆಕೆ ಜಗಳಾಡುತ್ತಿದ್ದಳು. ಅವರು ಪೀಡಿಸಿ ಬಲಾತ್ಕರಿಸುತ್ತಿದ್ದರು. ಅವರ ನಗೆಯೋ ವಿಕಟ ಅಟ್ಟಹಾಸಗಳೊ; ಕಾಣಿ ಪ್ರತಿಭಟನೆ ವಿಫಲವಾದಾಗ ತಲೆಬಾಗುತ್ತಿದ್ದಳು.''

ಚರ್ಮಕ್ಕೇನೊ ರೋಗ ಬಡಿಯಿತು. ಯುವತಿ ಕಾಣಿ ತುಂಬ ನರಳಾಡಿದಳು. ಮೈಯಿಂದ ಕೆಟ್ಟ ವಾಸನೆ ಬರತೊಡಗಿತು.

''ಊರಿನ ಹೊಲ, ತಂದೆ ತಾಯಿ, ಮೊಂಡು ಕೈ ಜೊತೆಗಾರ, ಕೂಲಿಯಾಗಲೆಂದು ಮದರಾಸಿಗೆ ಹೋದ ಅಣ್ಣನೂ, ಜಗಳಾಡಿ ಮನೆಬಿಟ್ಟು ಹೋದ ತಮ್ಮನೂ ಎದುರಲ್ಲಿ ನಿಂತು 'ಕಾಣಿ' ಎಂದು ಕರೆದ ಹಾಗಾಗುತ್ತಿತ್ತು, ಹೃದಯವೆಲ್ಲ ನೋವಿನಿಂದ ತುಂಬಿತು.''

''ಕೊನೆಗೊಮ್ಮೆ ಗಿರಾಕಿ ಬಂದು ದೂರದಲ್ಲಿ ನಿಂತ. ಧಾಂಡಿಗ ದೇಹ, ಪೋಲಿ ಸ್ವರೂಪ. ತೋಳು ಬೀಸಿ ಸನ್ನೆ ಮಾಡಿದ. ಆಕೆ ಎದ್ದು ನಿಂತು ಪ್ರಯಾಸದಿಂದ ಕಾಲೆಳೆದುಕೊಂಡು ಆತನನ್ನು ಹಿಂಬಾಲಿಸಿದಳು.

''ಅತ ಹೊಸಬ, ಅಲ್ಲೇ ಪೊದರಿನಾಚೆ ಆಕೆಯನ್ನು ಕೆಡವಿದ. ''ಗೊರಕ್'' ಎಂದಳು ಕಾಣಿ. ಕಾಣಿ ಎದ್ದು ಕುಳಿತುಕೊಳ್ಳಲು ಯತ್ನಿಸಿದಳು. ಆದರೆ ಶಕ್ತಿಯೇ ಇರಲಿಲ್ಲ. ಆತ ಮತ್ತೊಮ್ಮೆ 'ಥೂತ್' ಎಂದು ಹೊರಟ.''

ಆತ ಕಾಸು ಕೊಡಲಿಲ್ಲ. 'ಲೊಬೆ ಲೊಬೆ' ಎಂದಾಕೆ ಬೊಬ್ಬೆಯಿಟ್ಟಳು. ಯಮಾ ಕ ಕ ಕಾ ಅ ಅ ಎಂದು ಚೀರಿದಳಾಕೆ.

ಈತ ದುಡ್ಡು ಕೊಡದೇ ಓಡುತ್ತಿದ್ದಾನೆ; ಆಕೆ ತನ್ನ ಭಾಷೆಯಲ್ಲಿ ನ್ಯಾಯ ಮೀರಿ ವರ್ತಿಸಬೇಡವೆಂದು ಹೇಳುತ್ತಿದ್ದಾಳೆ. ನಾಳೆಯ ಒಂದು ತುತ್ತು ಅನ್ನ ಕಸಿಯಬೇಡವೆಂದು ಮೊರೆಯಿಡುತ್ತಿದ್ದಾಳೆ... ಆ ಆಸಾಮಿ ಥಟಕ್ಕನೆ ಹಿಂತಿರುಗಿದ.

ಆಕೆಯ ಗಂಟಲಿಗೆ ಕೈಹಾಕಿ ಹಿಸುಕಿ ನೆಲಕ್ಕುರುಳಿಸಿದ, ಹೊಲಸು ರಂಡೆ; ಎಂದು ಶಪಿಸಿದ. ಆಕೆಯ ಹೊಟ್ಟೆಗೆ ಬೂಟುಗಾಲಿನಿಂದ ಒದೆದ.

''ಕಾಣಿ ಹಾಗೇ ಬಿದ್ದುಕೊಂಡಳು, ಗಂಟಲಲ್ಲಿ ಏನೋ ಸ್ವರ ಹೊರಡುತ್ತಿತ್ತು. ಆದರೆ ಅದು ಹೊರಗೆ ಕೇಳುತ್ತಿರಲಿಲ್ಲ.

''ಉಸಿರಾಡುತ್ತಿತ್ತು. ಮೆಲ್ಲ... ಮೆಲ್ಲನೆ ನಿಧಾನವಾಗಿ ಉಸಿರು, ಕೊನೆಯ ಒಂದೆರಡು ಉಸಿರಾಟ.

''ಬೆಳಗಾಯಿತು, ಸೂರ್ಯ ಮೇಲಕ್ಕೆ ಬಂದಂತೆ ಕಾವೇರತೊಡಗಿತು. ಸರ್ಕಲ್ಲನ್ನು ಹಾದುಹೋಗಲೇ ಬೇಕಾದವರು ಭೀತಿಯಿಂದೊಮ್ಮೆ, ಎಡಕ್ಕೆ ಕಣ್ಣು ಹೊರಳಿಸಿ, ಮತ್ತೆ ತಲೆಕೆಳಗೆ ಮಾಡಿ ಸರಸರನೆ ನಡೆದು ಹೋಗುತ್ತಿದ್ದರು.

''ಎಲ್ಲರೂ ಚಲಿಸುತ್ತಲೇ ಇದ್ದರು. ನಿಲ್ಲುವವರು ಯಾರೂ ಇರಲಿಲ್ಲ. ಪೌರ ಸಭೆಯ ವ್ಯಾನು ಬಂದು ಕಳೇಬರವನ್ನು ಒಯ್ಯುವುದೆಂದು ಯಾರೋ ಹೇಳುತ್ತಿದ್ದರು.

''ಕಾಣಿಯ ದೇಹದ ಮೇಲೆ ಎತ್ತರದಲ್ಲಿ ಗಿಡುಗವೊಂದು ಸುತ್ತಿ ಬರುತ್ತಿತ್ತು.''

''ಅದನ್ನೇ ನೋಡುತ್ತಿದ್ದ ಹಾಗೆ ಕಣ್ಣರಳಿಸಿ ಕಾಣಿ ಮಲಗಿದ್ದಳು ಸುತ್ತು ಬರುತ್ತಲೇ ಇತ್ತು ಗಿಡುಗ, ಕೆಳಗೆ ನೋಡುತ್ತ

''ಕೊನೆಯ ಗಿರಾಕಿ''

ಈ ದೃಶ್ಯವನ್ನು ಗಮನಿಸಿ ಹಿರಿಯ ವಿಮರ್ಶಕ ಎಲ್.ಎಸ್. ಶೇಷಗಿರಿರಾವ್, ''ಎಂದೆಂದಿಗೂ ಮರೆಯಲಾರದ, ಮೈ ನಡುಗಿಸುವ, ಅರ್ಥಪೂರ್ಣವಾದ ಪ್ರತಿಮೆ'' ಎಂದಿದ್ದಾರೆ.

'ಗಿಡುಗ' ಇಲ್ಲಿ ಕೊನೆಯ ಗಿರಾಕಿ. ಇಲ್ಲಿ ಗಿಡುಗವೆನ್ನುವುದಕ್ಕಿಂತ 'ಹದ್ದು' ಎಂದು ಹೇಳುವುದೇ ಹೆಚ್ಚು ಸೂಕ್ತವಾಗಿತ್ತು ಎಂದು ಆರ್.ಜಿ. ಹಳ್ಳಿ ನಾಗರಾಜ ಹೇಳುವುದು ಸರಿಯಾದುದೇ. ಆದಾಗಲೂ ಇಲ್ಲಿಯ ಸಾಂಕೇತಿಕತೆಗೆ ತೊಂದರೆಯೇನೂ ಆಗಲಿಲ್ಲ.

''ಪ್ರಗತಿಶೀಲ ಕತೆಗಳಲ್ಲಿ ಇದಕ್ಕೊಂದು ವಿಶೇಷ ಸ್ಥಾನ ಸಲ್ಲುತ್ತದೆ. ಪ್ರಗತಿಶೀಲ ಕತೆಗಳೆಲ್ಲ ಸರಳ ನಿರೂಪಣೆಯಲ್ಲಿ ವಾಸ್ತವವಾದ ನಿಷ್ಠುರವಾಗಿ ಅನುಸರಿಸುತ್ತದೆಯಾದರೆ ಈ ಕತೆ ಸಾಂಕೇತಿಕತೆಯಂಥ ಕಾವ್ಯ ತಂತ್ರಗಳನ್ನು ಬಳಸುತ್ತದೆ. ಸಂಕೇತಗಳ ಮೂಲಕ ನಿರಂಜನರು ಕಥೆಯ ಅರ್ಥವನ್ನು ವಿಸ್ತರಿಸಲು ಧ್ವನಿಶಕ್ತಿಯನ್ನು ಹೆಚ್ಚಿಸಲು ಯತ್ನಿಸಿದ್ದಾರೆ'' ಎಂದು ವಿಮರ್ಶಕ ಗಿರಡ್ಡಿ ಗೋವಿಂದರಾಜರು ಹೇಳಿದ್ದಾರೆ, ''ಶೋಷಕರನ್ನು ಕುರಿತು ಕ್ರಿಯಾಶೀಲವಾದ ಆಕ್ರೋಶ, ದಲಿತರನ್ನು ಕುರಿತು ಅಪಾರವಾದ ಸಹಾನುಭೂತಿ, ಈ ಭಾವತೀವ್ರತೆ ಕನ್ನಡ ಸಣ್ಣ ಕತೆಗೆ ಹೊಸದಾಯಿತು'' ಎಂದು ವಿಮರ್ಶಕ

ಕೆ. ನರಸಿಂಹಮೂರ್ತಿಯವರು ಹೇಳುತ್ತಾರೆ. ಇನ್ನೊಬ್ಬ ವಿಮರ್ಶಕ ಜಿ.ಹೆಚ್. ನಾಯಕರ ಅಭಿಪ್ರಾಯ ಹೀಗಿದೆ.

''ತಂತ್ರ ಯೋಜನೆಯ ಹೊಸತನದಿಂದಾಗಿ ಕೊನೆಯ ಗಿರಾಕಿಗೆ ಚಾರಿತ್ರಿಕ ಮಹತ್ವವೂ ಇದೆ. ಹತ್ತಾರು ಜನ ಹಾದುಹೋಗುವ ಸರ್ಕಲಿನಾಚೆ ಸತ್ತುಬಿದ್ದಿರುವ ಪರದೇಶಿ ಕಾಣಿ. (ನೋಡಿರಿ; ಈ ಅರ್ಥದ ಮಗ್ಗಲನ್ನು ಗಮನಿಸಬೇಕು) ನೋಡದೇ ಹೋಗುವವರನ್ನು ಬಿಡದೆ ಸುತ್ತುವ ಮೂಕಿ ಕಾಣಿಯ ಹೆಣದ ದುರ್ಗಂಧ ಕಥೆಯ ಪ್ರಾರಂಭ ಭಾಗದಲ್ಲೂ ಇದ್ದು, ತಿರುಗಿ ಕೊನೆಯ ಭಾಗದಲ್ಲೂ ಬರುವ ವಾಕ್ಯಗಳು, ಸಹಜ ಸಂಗತಿಗಳ ನಿರೂಪಣೆಯಾಗಿರುವುದು ಮಾತ್ರವಲ್ಲದೆ ಧ್ವನಿಪರಿವೇಷವನ್ನು ಹೊಂದಿದೆ. ಹಾಗೆಯೇ ಕೊನೆಯಲ್ಲಿ ಬರುವ ಶಕ್ತಿಶಾಲಿಯಾದ 'ಗಿಡುಗ'ದ ಪ್ರತಿಮೆ ಒಟ್ಟಿಗೆ ಏಕಕಾಲದಲ್ಲಿ ಮಾನವೀಯತೆ ಇಲ್ಲದ ಹತ್ತು ಜನರ ಸಮಾಜವನ್ನು ವಿಡಂಬಿಸುತ್ತದೆ; ಕಾಣಿಯ ಮೈಯ ಮಾಂಸದ ಮೇಲೆ ಕಣ್ಣಿಟ್ಟ ಶೋಷಕರೆಲ್ಲರನ್ನು ಸಂಕೇತಿಸುತ್ತದೆ; ಕಾಣಿಗೆ ಸಂಬಂಧಿಸಿದ ವಿವರಗಳಲ್ಲಿ ತೆಳುವಾಗಿ ಸೂಚಿತವಾದ ನಾಯಿಜನ್ಮ ಸ್ಥಿತಿಗೆ ಅರ್ಥ ತುಂಬುತ್ತದೆ'' ಎನ್ನುತ್ತಾರೆ (ಕನ್ನಡ ಸಣ್ಣಕತೆಗಳು - ಮರುಮುದ್ರಣ ೧೯೮೬ ಪ್ರಸ್ತಾವನೆ)

ಧ್ವನಿ ಸಂಪುಟಕ್ಕೆ ಪ್ರವೇಶಿಕೆಯನ್ನು ಬರೆದ ಕೆ. ನರಸಿಂಹಮೂರ್ತಿಗಳು, ''ನಿರಂಜನರು ಪ್ರಗತಿಶೀಲ ಮತ್ತು ನವ್ಯ ಚಳವಳಿಗಳ ಮುಖ್ಯ ಏಕೈಕ ಕೊಂಡಿಯಾದರು ಹಾಗೂ ದಲಿತ ಮತ್ತು ಬಂಡಾಯ ಚಳವಳಿಗಳ ಮುನ್ಸೂಚನೆ ನೀಡಿದರು'' ಎಂದಿರುವುದು ಸೂಕ್ತವಾದ ಅಭಿಪ್ರಾಯವಾಗಿದೆ.

''ಧ್ವನಿ'' ಕೂಡ ಇನ್ನೊಂದು ಬಹಳ ಮಹತ್ವದ ಕತೆ.

ಶೋಷಣೆಯ ಕ್ರೌರ್ಯದ ಅಸಾಧ್ಯತೆಯ ಪರಿಸ್ಥಿತಿಯಲ್ಲಿ ಕಾರಣದ ಮತ್ತು ಮೂಲಕ ಪ್ರಜ್ಞಾಪೂರಕವಾದ ತಿಳಿವಳಿಕೆಯಲ್ಲಿ ಜನಸಾಮಾನ್ಯರ ಒಂದಾಗುವಿಕೆ ಹಾಗೂ ಪ್ರತಿಭಟನೆಯನ್ನು ಮೂಕನೊಬ್ಬನು ಮಾತಾಡುವ ಮೂಲಕ ಧ್ವನಿಸುವ ರೀತಿ ಅಸದೃಶವಾಗಿದೆ.

ಕತೆ ''ಅವಳೊಬ್ಬ ತಾಯಿ, ಅವಳಿಗೊಬ್ಬ ಮಗ, ಅವನಿಗೆ ಹತ್ತೊಂಬತ್ತು ವರ್ಷ ಪ್ರಾಯ'' ಎಂದು ಶುರುವಾಗುತ್ತದೆ. ತಾಯಿ ಕಡಲೇಕಾಯಮ್ಮನೆಂದೇ ಹೆಸರಾಗಿದ್ದಾಳೆ. ಕಡಲೇಕಾಯಮ್ಮ ಚಿಕ್ಕವಳಿರುವಾಗಲೇ ಅಲೆಮಾರಿಯೊಬ್ಬನ ಕೈ ಹಿಡಿದಳು. ಆತ ಕುಡುಕ. ಗಂಡನನ್ನು ಅವಳೇ ಸಾಕಬೇಕಾಯಿತು. ಆತ ಇದ್ದು ಬದ್ದುದನ್ನೆಲ್ಲವನ್ನೂ ದೋಚಿಕೊಂಡು ಮನೆಬಿಟ್ಟ.

''ಕೂಸು ವೀವೀ ಎನ್ನುತ್ತಿತ್ತು. ಇತರ ಮಕ್ಕಳ ಹಾಗೆ ಅಳಲಿಲ್ಲ. ನೋಡಿದವರೆಲ್ಲ ಒಂದು ವರ್ಷ ಆದ ಮೇಲೆ ಸರಿಹೋಗಬಹುದೆಂದರು. ಒಂದಲ್ಲ ಎರಡು

ವರ್ಷಗಳಾದಾಗಲೂ ಸುಧಾರಿಸುವ ಲಕ್ಷಣ ಕಾಣಲಿಲ್ಲ, ಮಗುವಿಗೆ ಮಾತು ಬರಲಿಲ್ಲ.''

''ಕಳ್ಳೇಕಾಯಿ, ಕಳ್ಳೇಕಾಯಿ'' ಎಂದು ಕಳ್ಳೇಕಾಯಿ ಮಾರುತ್ತಿದ್ದಳು.

''ವರ್ಷಗಳು ರಾಷ್ಟ್ರದ ಪಾಲಿಗೆ ಕಂಟಕಪ್ರಾಯವಾಗಿದ್ದವು'' ಬರಗಾಲ, ನೀರಿಲ್ಲ, ಧಾನ್ಯವಿಲ್ಲ, ಕಳ್ಳತನ, ಲೂಟಿ ನಡೆದವು. ಇಷ್ಟಾದರೂ ಅರಮನೆಯ ದುಂದುವೆಚ್ಚ ನಿಲ್ಲಲಿಲ್ಲ. ಹೊಸ ಕರ ಹಾಕುವ ಪ್ರಸ್ತಾಪವೂ ಇತ್ತು. ಒಂದು ದಿನ ಪೋಲೀಸರು ಕಡಲೇಕಾಯಮ್ಮನನ್ನು ಸ್ಟೇಷನ್ನಿಗೆ ಒಯ್ದರು. ''ಏ ಕಳ್ಳೇಕಾಯಮ್ಮ, ನೀನು ಸರಕಾರಕ್ಕೆ ತೆರಿಗೆ ಕೊಡಬೇಕು ಎಂದರು. 'ಅದ್ಯಾಕೆ? ನಾ ಏನ್ಮಾಡ್ದೆ' ಎಂದು ಕೇಳಿದಳು. 'ತೆರಿಗೆ, ಬಂದ ಅರ್ಧಾಂಶದಲ್ಲಿ ಅರಸರಿಗೆ ಅರ್ಧ ಎಂದರು. ಅರ್ಧಬೇಡ ಪೂರ್ತಿ ತೆಗೆದುಕೊಳ್ಳಿ' ಎಂದಳು ಅವಳು.

ಪೋಲೀಸ ಬಾರಿಸು ಇವಳಿಗೆ, ಬಿಚ್ಚು ಸೀರೇನ ಅಂದ. 'ಅಣ್ಣಾ ಅಣ್ಣಾ ಹಾಗೇ ಬೇಡ್ತೇನೆ ವ್ಯಾಪಾರ ಮಾಡೋದಿಲ್ಲ' ಎಂದಳು. 'ಬಿಡ್ಬೇಡ, ಬಿಟ್ಟರೆ ದೇಶಕ್ಕೆ ನಷ್ಟ' ಎಂದರು ಅವರು. ಹಾಗಾದರೆ 'ಅಂಗಾರೆ ಏನ್ಮಾಡ್ಲಿ' ಎಂದರೆ,

'ಮಳ್ಳಿ; ದಿನಾ ಒಂದು ಒಂದು ಸೇರು ಕಳ್ಳೇಕಾಯಿ ಇಲ್ಲಿಗ್ತಂದು ಒಪ್ಪಿಸಿಹೋಗು'' ಎಂದರು.

ಹರಿತವಾದ ವ್ಯಂಗ್ಯವನ್ನು ಇಲ್ಲಿ ಕಾಣಬಹುದು.

ನಗರದಲ್ಲಿ ಸರಕಾರದ ವಿರುದ್ಧ ಪ್ರತಿಭಟನೆ ಶುರುವಾಯಿತು. ದೊಡ್ಡ ಜನಜಂಗುಳಿ. ವಿದ್ಯಾರ್ಥಿಗಳು, ಯುವಕರ ಮೆರವಣಿಗೆ ಬಂತು.

''ಕಡಲೇಕಾಯಮ್ಮ ಮೆರವಣಿಗೆಯುದ್ದಕ್ಕೂ ತಾನೂ ನಡೆದಳು''

''ಕಳ್ಳೇಕಾಯಿ, ಕಳ್ಳೇಕಾಯಿ''

ಅರಮನೆ ಸಮೀಪಿಸಿದಾಗ ಸೈನಿಕರು ಬಂದೂಕು ಹಿಡಿದು ನಿಂತಿದ್ದಾರೆ. ಮುಂದಿನ ಸಾಲಿನಲ್ಲಿ ತನ್ನ ಮೂಕ ಮಗ ನಿಂತಿರುವುದನ್ನು ಕಳ್ಳೇಕಾಯಮ್ಮ ನೋಡುತ್ತಾಳೆ.

''ಯಾಕೋ ಅಲ್ಹೋದೆ? ಉಚ್ಚ ಉಚ್ಚ ಬಾರೋ'' ಎಂದು ಕಿರುಚುತ್ತಾಳೆ. ಗುಂಡುಗಳ ಮಳೆಗರೆಯಿತು.

''ಎಲ್ಲರ ಗಂಟಲನ್ನು ಮೀರಿಸುವಂತೆ ಒಂದು ಅಟ್ಟಹಾಸ ಕಡಲೇಕಾಯಮ್ಮನಿಗೆ ಕೇಳಿಸಿತು'' ಅಮ್ಮಾ, ಇಲ್ಲಿ, ಇಲ್ಲಿನ್ನೀ.

''ಇದು ಭಾರೀ ಮೋಸ ಅಮ್ಮ; ಭಾರೀ ಅನ್ಯಾಯ; ಅವರ ತಾವ ಬಂದೂಕು. ನಮ್ತಾವ ಏನೂ ಇಲ್ಲ, ಸರಿನಾ ಅಮ್ಮ ಇದು? ಹಿಟ್ಟಿಲ್ಲ ಬಟ್ಟಿಲ್ಲ ತಲೇಮ್ಯಾಲೊಂದು ಸೂರಿಲ್ಲ ಇದು ಸರಿಯಾ ಅಮ್ಮ? ದೊರೆಗ್ಳು ಇಂಗ್ಮಾಡ್ಬಾದಾ ಅಮ್ಮಾ...

''ಇದು ಜಾತ್ರೆ; ಇದು ಉತ್ಸವ; ಇದು ಬೆಳಕಿನ ಹಬ್ಬ''

''ತನ್ನ ಮಗ ಮಾತಾಡುತ್ತಿದ್ದಾನೆ; ಹತ್ತೊಂಬತ್ತು ವರ್ಷಗಳ ಕಾಲ ಮಾತು ಆಡದೇ ಇದ್ದ ತನ್ನ ಕಂದ...''

ಈ ಕತೆಯು ಟಿಪ್ಪಣಿಯಲ್ಲಿ ''ಒಂದೆರಡು ವರ್ಷಗಳ ಹಿಂದೆ ಒಂದು ಸುದ್ದಿ ಓದಿದ್ದೆ. ಈಜಿಪ್ಟಿನ ಒಂದು ತಾಯಿ ತನ್ನ ಮೂಕ ಮಗನನ್ನು ವೈದ್ಯರಿಗೆ ತೋರಿಸಲು ಕೈರೋಗೆ ಒಯ್ದಿದ್ದಳು. ವೈದ್ಯರಿಗೆ ವೇಳೆ ಇಲ್ಲದ್ದರಿಂದ ಅಲ್ಲಿಯ ಕಡಲ ದಂಡೆಗೆ ಹೋದರು. ಅಲ್ಲಿ ಬಿಕನಿ ತೊಟ್ಟ ಯುವತಿಯರನ್ನು ನೋಡುತ್ತ ಮೂಕ ಅಮ್ಮಾ ನೋಡು ಎಂದು ಬಾಯ್ತೆರೆದ, ನನಗನ್ನಿಸಿತು, ನಗ್ನತೆಯ ಎದುರು ಮಾತಿಲ್ಲದವನಿಂದ ಧ್ವನಿ ಬರುತ್ತದೆ'' ಎನ್ನುತ್ತಾರೆ. 'ಮೂಕಜ್ಜಿಯ ಕನಸು' ಕಾದಂಬರಿಯಲ್ಲಿ ಮೂಕಜ್ಜಿಯ ಅತೀಂದ್ರಿಯ ಶಕ್ತಿಯನ್ನು ಸಮರ್ಥಿಸಿಕೊಳ್ಳಲು ಆದರ ಮೂಲಮಾತ್ರಿಕೆಯಾಗಿ ಅಂಥ ಒಂದು ಅಜ್ಜಿ ಇದ್ದುದನ್ನು ಓದಿದ್ದೆ, ಎಂದು ಕಾರಂತರು ಹೇಳುತ್ತಾರೆ.

ಅದೇನೇ ಇದ್ದರೂ ಇದೊಂದು ಪ್ಯಾಂಟಸಿಯಾಗಿ ಗ್ರಹಿಸಲು ತೊಂದರೆಯಾಗುವುದಿಲ್ಲ ಮತ್ತು ಅದರ ಸಾಂಕೇತಿಕತೆ ಅರ್ಥಪೂರ್ಣವಾಗೇ ಇರುತ್ತದೆ.

'ಧ್ವನಿ' ಕತೆ ಇಷ್ಟಕ್ಕೆ ನಿಲ್ಲುವುದಿಲ್ಲ. ಆಕೆ ತನ್ನ ಮಗನನ್ನು ಹಳ್ಳಿಗೆ ಕರೆದುಕೊಂಡು ಹೋಗುತ್ತಾಳೆ. ಆತ ಮತ್ತೆ ಮೂಕನಾಗುತ್ತಾನೆ.

ಬಹುಶಃ ನಿರಂಜನರಿಗೆ ಪ್ರತಿಭಟನೆ ತೀವ್ರತೆಯ ಬಿಂದುವನ್ನು ತಲ್ಪಿದಾಗ ಮೂಕದಂತಿರುವ ಜನತೆ ಮಾತಾಡುತ್ತದೆ. ಆಗ ಕ್ರಾಂತಿಕಾರಿಯಾಗುತ್ತದೆ ಎಂಬುದನ್ನು ಸೂಚಿಸುವುದಷ್ಟನ್ನು ಮಾತ್ರ ಸೂಚಿಸಿ ವಾಸ್ತವ ಆ ಸ್ಥಿತಿಗೆ ತಲ್ಪಲಿಲ್ಲ ಎಂಬುದನ್ನು ಸೂಚಿಸುವುದಿತ್ತೇನೋ. ಅಂತೂ ನಿರಂಜನರ ಮುಖ್ಯ ಕತೆಗಳಲ್ಲಿ ಇದೂ ಒಂದು.

''ಒಂದು ನಮೂನೆಯ ಹುಡುಗ ಮತ್ತು ಉತ್ಸವ ಭೋಜನ'' ಎಂಬುದು ನಿರಂಜನರು ೧೯೮೪ ರಲ್ಲಿ ಬರೆದ ಕತೆ. 'ಧ್ವನಿ'ಯಲ್ಲಿ ಸಂಗ್ರಹವಾದಂತೆ ಇದು ಅವರ ಕೊನೆಯ ಕತೆ.

ನಿರಂಜನರ ಅಬ್ಬೆ-ಮಕ್ಕಳ ಬದುಕು ಮತ್ತೆ ಮತ್ತೆ ಕತೆಯಲ್ಲಿ ಮರಳುವುದುಂಟು, ಅಂಥ ಒಂದು ಕತೆಯಿದು.

ಹುಡುಗನ ತಾಯಿ (ಅವಳು ವಿಧವೆ ಮತ್ತು ಬಹಿಷ್ಕೃತೆ) ದೇವಸ್ಥಾನದಲ್ಲಿ ನಡೆಯುವ ಉತ್ಸವದ ಭೋಜನಕ್ಕೆ ಹೋಗೆನ್ನುತ್ತಾಳೆ. ಆದರೆ ಹುಡುಗನಿಗೆ ಅದಾಗದು. ಆದರೂ ತಾಯಿಯ ಒತ್ತಡಕ್ಕೆ ಮಣಿದು ಹೋಗುತ್ತಾನೆ. ಆದರೆ

ಪಂಗ್ತಿಯ ಮಧ್ಯೆ ಕುಳಿತ ಹುಡುಗನ ವಿರುದ್ಧ ಆಕ್ರೋಶ ಕಾಣಿಸಿಕೊಳ್ಳುತ್ತದೆ. ಯಾಕೆಂದರೆ ಆತ ಬ್ರಾಹ್ಮಣ ಜಾತಿಯೇ ಆದರೂ ಬಹಿಷ್ಕೃತೆಯ ಮಗ. ಹುಡುಗ ದಾಕ್ಷಿಣ್ಯವಂತ ಎದ್ದು ಓಡುತ್ತಾನೆ. ಮಾಸ್ತರರು ಊಟ ಮಾಡಿ ಬಂದೆಯಾ ಎಂದು ಕೇಳಿದರೆ, ಹೌದೆನ್ನುತ್ತಾನೆ. ಆದರೆ ಕೆಲ ಹೊತ್ತಿನಲ್ಲೇ ಪಟೇಲರ ಮಗಳು ಬಂದು ಅಪ್ಪ ಹೇಳಿದ್ದಾನೆಂದು ಊಟಕ್ಕೆ ಕರೆದೊಯ್ಯುತ್ತಾಳೆ. ಅವನೊಬ್ಬನಿಗೇ, ಬೇರೆ ಬಡಿಸುತ್ತಾರೆ. ಒಂದೆರಡು ತುತ್ತು ಉಂಡು ಹೊಟ್ಟೆ ತುಂಬಿತೆಂದು ಓಡಿಬರುತ್ತಾನೆ.

ಕತೆಯಲ್ಲಿ ಸಮಾಜದ ವಿಸಂಗತಿ ಬಾಲಕನ ಮನಸ್ಸಿನ ಮೇಲೆ ಮಾಡುವ ಪರಿಣಾಮದ ಚಿತ್ರವಿದೆ. ಸಂಪ್ರದಾಯಸ್ಥರ ಮಧ್ಯೆಯೂ ಮಾನವೀಯ ಗುಣ ಬರುವುದೂ ಕಾಣುತ್ತದೆ. ಪಟೇಲರ ಮಗಳು ಆತನಿಗೆ ಅಕ್ಕನಂತೆ. ಮಕ್ಕಳಲ್ಲಿ ಇಲ್ಲದ ಸಾಮಾಜಿಕ ಅಸಮಾನತೆ ಕೃತ್ರಿಮವಾದುದೆಂಬ ಸೂಚನೆ ಕೂಡ ಉಂಟು.

ಒಂದು ರೀತಿಯಿಂದ ನೋಡಿದರೆ ನಿರಂಜನರ ಕಥಾ ಸಾಹಿತ್ಯ ಬಡತನದ ವಿವರಣೆಯೇ ಆಗಿದೆ. ಅದು ರೂಪು ಪಡೆಯುವ ಸನ್ನಿವೇಶ, ಸಂಘರ್ಷದ ರೀತಿ ಬೇರೆ ಬೇರೆಯಾಗಿದೆ. ಆದರೂ ಅಂಥ ಚಿತ್ರಣದ ಕರುಣಾಜನಕವಾದ ಹಾಗೂ ವ್ಯವಸ್ಥೆಗೆ ತಿವಿಯುವ ವ್ಯಂಗ್ಯದ ಮೊನೆ ತೀಕ್ಷ್ಣವಾಗಿ ರೂಪಗೊಂಡ ಈ ಅವಧಿಯ ಕತೆಗಳ ಸಾಲಿನಲ್ಲಿ 'ವಾರದ ಹುಡುಗ' 'ಕ್ಷಾಮದ ಶಿಶು', 'ಬಯಸದ ದೃಷ್ಟಿ' 'ಗಂಟೆ' 'ಕಾಯಾ ಶ್ರೀ ಗೌರಿ' ಮುಂತಾದವು ಸೇರುತ್ತವೆ.

'ಕಾಯಾ ಶ್ರೀ ಗೌರಿ' ಬಹಳ ಮುಖ್ಯವಾದ ಕತೆಯಾಗಿದೆ. ಪುಟ್ಟನಂಜ ಮತ್ತು ಚೆನ್ನಿ ಗಂಡ ಹೆಂಡಂದಿರು. ಅವರಿಗೆ ಚಿಕ್ಕ ಹೊಲವಿತ್ತು. ಆದರೆ ಋಣಸಂದಾಯಕ್ಕಾಗಿ ಹೊಲ ಕೈಬಿಟ್ಟಿತು. ಪುಟ್ಟನಂಜ ಕೃಷಿಕೂಲಿಕಾರನಾದ. ಹಿರಿಯ ಹುಡುಗ ಹೊಟ್ಟೆಯಲ್ಲಿದ್ದಾಗ ಚೆನ್ನಿ ಮೈಸೂರು ದಸರಾ ನೋಡಿ ಬರಬೇಕೆಂಬ ಆಶೆ ವ್ಯಕ್ತಪಡಿಸಿದ್ದಳು. ಆದರೆ ನವರಾತ್ರಿಯ ಸಮಯಕ್ಕೆ ಬಾಣಂತನವಾಯಿತು. ಮುಂದೆ ಹೋಗುವುದಾಗಲಿಲ್ಲ. ವರ್ಷದ ಅವಧಿಯಲ್ಲಿ ಹೊಲದ ಕೆಲಸವಿದ್ದಾಗ ಮಾತ್ರ ಕೂಲಿ ಸಿಗುತ್ತಿತ್ತು, ಚೆನ್ನಿಯ ಕಾಯಿಲೆಯಿಂದಾಗಿ ಸಂಪಾದನೆ ಮತ್ತಷ್ಟು ಕಡಿಮೆಯಾಯಿತು. ಜೀವನ ದುಸ್ತರವಾಯಿತು. ಬರಗಾಲವೂ ಬೇರೆ ಬಂತು. ''ಚೆನ್ನಿಗೆ ಅಂಟಿದ ಮಕ್ಕಳ ಹೊಟ್ಟೆಯನ್ನು ಆ ಎಲುಬು ಗೂಡುಗಳನ್ನು ಕಂಡು ಮಕ್ಕಳನ್ನು ಕೊಟ್ಟ ಆ ದೇವರನ್ನು ಆಕೆ ಶಪಿಸಿದಳು, ಇಂಥ ಕಷ್ಟ ಏಳು ಜನ್ಮದ ವೈರಿಗೂ ಬರಬಾರದು ಎಂದಳು.''

ಯಾರೋ ಮಲೆನಾಡಿನಲ್ಲಿ ಕೆಲಸ ಸಿಗತ್ತೈತೆ ಎಂದರು. ಚೆನ್ನಿ ''ಬಹಳ ಹೊತ್ತು ಯೋಚಿಸಿ ಮೈಸೂರಿನಲ್ಲಿ ಸಿಗಾಕಿಲ್ವಾ?'' ಎಂದಳು. ಅವರು ಮೈಸೂರು ಸೇರಿದ್ದಾಯಿತು. ಸಂಜೆ ವಿದ್ಯುದ್ದೀಪ ಹತ್ತಿಕೊಂಡಾಗ ಚೆನ್ನಿ ಬೆಕ್ಕಸ ಬೆರಗಾಗಿ

ನೋಡಿದಳು. ಎಂದೋ ಕಂಡಿದ್ದ ಕನಸು ಮರಳಿ ಚಿಗುರಿತು. ಮೈಸೂರಿನಲ್ಲಿ ಕೆಲಸ ಸಿಗಲಿಲ್ಲ. ಮೈಸೂರಿನ ಬೀದಿ ಬೀದಿಗಳಲ್ಲೆಲ್ಲ ಪುಟ್ಟನಂಜ, ಚೆನ್ನಿ ಇಬ್ಬರು ಮಕ್ಕಳೊಡನೆ ಮೆರವಣಿಗೆ ಹೋದರು. ಮಕ್ಕಳ ಜತೆ ಒಬ್ಬಳೇ ಇದ್ದ ಸಮಯ ಸಾಧಿಸಿ ಯಾವನೋ ಒಬ್ಬ ನಾಲ್ಕಾಣೆ ಕೊಡಲು ಬಂದ ''ಚೆನ್ನಿ ನಾವು ಭಿಕ್ಷದವರಲ್ಲ ಎಂದಳು. ಆತ ಹಲ್ಲು ಕಿಸಿದು ಭಿಕ್ಷಾ ಅಲ್ಲ ಅಮ್ಮಣ್ಣಿ ಇಂಗೇ ತಕೋ'' ಎಂದ. ಅವಳಿಗೆ ಅರ್ಥವಾಯಿತು. ''ಥೂ ನಿನ್ಮನೆ ಹಾಳಾಗ, ನಿಂಗೆ ಮಾರಿ ಬಡಿಯಾ'' ಎಂದಳು. ಆತ ಮಾಯವಾದ.

''ಅವರು ಭಿಕ್ಷೆ ಎತ್ತಲಿಲ್ಲ ಆ ಕೆಲಸ ತಿಳಿಯದು. ಬೆವರು ಸುರಿಸಿ ದುಡಿದು ಕಷ್ಟದ ಸಂಪಾದನೆಯ ಮೇಲೆಯೇ ಬದುಕುವ ಜನ ಅವರು.''

''ಇನ್ನೂ ಈ ಮಕ್ಕಳನ್ನು ನೋಡುದು ನನ್ಕೈಲಾಗಾಕಿಲ್ಲ ಚೆನ್ನಿ'' ''ಸ್ವರ ಅವನ ಗಂಟಲಿಂದ ಪ್ರಯಾಸ ಪಡುತ್ತ ಮತ್ತೆ ಹೊರಟಿತು ಪುಣ್ವಂತ್ರಿಗೆ ಕೊಟ್ಬಿಡಾನಾ?'' ಎಂಥ ಮಾತಾಡ್ತೀಯ ಎಂದಳು.

''ಕತ್ತಲಾಯಿತು ದೀಪಗಳೂ ಹತ್ತಿಕೊಂಡವು, ಬೆಳಕು ಬಂದರೂ ಹಗಲು ಕಳೆದು ಇರುಳಾಗಿಯೇ ಬಿಟ್ಟಿತು'' ಇಲ್ಲಿಯ ವ್ಯಂಗ್ಯವನ್ನು ಗುರುತಿಸಬೇಕು.

''ಪುಟ್ನಂಜನನ್ನು ಉದ್ದೇಶಿಸಿ ಯಾರೋ ಅಂದರು: ಮಕ್ಕಳ ಮಾರ್ತಾನಂತೆ ನಾಚ್ಕೆ ಇಲ್ದೋನು.''

ಪುಟ್ಟನಂಜ ಗೋಗರೆದು ''ದುಡ್ಡು ಬ್ಯಾಡಿ ಬುದ್ಧಿ ಅಂಗೇ ಕರ್ಕೊಂಡೋಗಿ, ಮಕ್ಳು ಉಪವಾಸ ಬಿದ್ದು ಸತ್ತೋಗ್ತವೆ. ಪುಣ್ವಂತ್ರೆ ಮಕ್ಕಳನ್ನು ಕಾಪಾಡಿಯಪ್ಪ.''

ಪೋಲೀಸನೊಬ್ಬ ಬಂದು ಎಂದ ''ಇಲ್ಲಿ ಇರ್ಬೇಡಿ, ಮಕ್ಕಳ್ನ ಮಾರೋದು ತಕ್ಸೀರಾಗ್ತದೆ, ಒಂಟೋಗಿ.''

ಈ ಕತೆ ಬಡತನದ ಕ್ರೌರ್ಯವನ್ನೂ ಜೊತೆಗೆ ವ್ಯವಸ್ಥೆಯ ಕ್ರೌರ್ಯವನ್ನೂ ಪ್ರದರ್ಶಿಸುತ್ತದೆ. ಮೈಸೂರು ದಸರಾ ನೋಡುವ ಹಂಬಲ ಮದುವೆಯಾದಾಗ ಮಾಡಿದ್ದಳು ಚೆನ್ನಿ. ಈಗ ದಸರೆಗೆ ಬಂದಿದ್ದಾಳೆ ಎಂಥಾ ಅವಸ್ಥೆಯಲ್ಲಿ!

ಬಡತನ ಕ್ರೌರ್ಯಕ್ಕೆ ಇದಕ್ಕಿಂತ ಹೆಚ್ಚಿನದೇನಿದೆ;

ಬಡತನದ ಕರುಣೆಯ ಉತ್ತುಂಗ ಶಿಖರವಾಗಿದೆ ಈ ಮುಕ್ತಕಗಳು. ಹಾಗೆಯೇ 'ಕಾಯಾ ಶ್ರೀ ಗೌರಿ'ಯಲ್ಲಿ ಕೂಡ ಜಾನಪದೀಯತೆಯು ಅಭ್ಯಾಸನೀಯವಾಗಿದೆ.

ಇದೇ ಸಾಲಿಗೆ ಸೇರಬೇಕಾದ ಕತೆ 'ವಾರದ ಹುಡುಗ', 'ಕ್ಷಾಮದಶಿಶು', 'ಗಂಟೆ', 'ಬಯಸದ ದೃಷ್ಟಿ' ಮುಂತಾದವು.

'ಬಯಸದ ದೃಷ್ಟಿ'ಯ ವ್ಯಂಗ್ಯ ಇನ್ನೊಂದು ರೀತಿಯದು. ಕುರುಡನೊಬ್ಬ ಬೇಡುತ್ತಿರುವುದನ್ನು ನೋಡಿ ಉದಾರಚರಿತರಾದ ಒಬ್ಬ ಕಣ್ಣಿನ ವೈದ್ಯ ಆತನಿಗೆ ಕಣ್ಣು ಶಸ್ತ್ರ ಚಿಕಿತ್ಸೆ ಮಾಡಿ ದೃಷ್ಟಿ ತಂದುಕೊಡುತ್ತಾರೆ.

''ಹೊಸ ದೃಷ್ಟಿ ಬಂದ ಸುಖ ಒಂದು ವರ್ಷವೂ ಆ ಬಡವನಿಗೆ ಇರಲಿಲ್ಲ. ನೌಕರಿ ಸಿಗಲಿಲ್ಲ. ಸಣ್ಣಪುಟ್ಟ ಚಾಕರಿ ಮಾಡಿದ. ಹೊಟ್ಟೆ ತುಂಬಲಿಲ್ಲ. ಮತ್ತೆ ಭಿಕ್ಷಕ್ಕೆ ಹೊರಟ ಯಾರೂ ಭಿಕ್ಷೆ ನೀಡಲಿಲ್ಲ.'' ಕತೆಯ ಅಂತ್ಯದಲ್ಲಿ ವೈದ್ಯರು ಹೇಳುತ್ತಾರೆ: ''ಎರಡು ತಿಂಗಳ ಹಿಂದೆ ನಾನು ಸರ್ಕೀಟಿನಲ್ಲಿದ್ದಾಗ ಒಮ್ಮೆ ಕಾಣಸಿಕ್ಕ, ಏನು ಮಾಡಿದ ಗೊತ್ತೇನು? ಈ ಕಣ್ಣು ಯಾಕೆ ಕೊಟ್ಟೆ ನಮ್ಮಪ್ಪಾ ಅಂತ ಧ್ವನಿ ತೆಗೆದು ಅತ್ತ. ನನ್ನ ಬಾಯಿಂದ ಮಾತೇ ಹೊರಡಲಿಲ್ಲ. ನೀವೇನಂತೀರಿ ಇದಕ್ಕೆ?''

ಈ ಪ್ರಶ್ನೆಗೆ ಉತ್ತರ ಕೊಡಬೇಕಾದ ಜವಾಬ್ದಾರಿಯಾದವರು ನಾವು, ನೀವು, ಒಟ್ಟೂ ವ್ಯವಸ್ಥೆ ಅಲ್ಲವೇ? ಇಡೀ ಕತೆ ಅಸಮಾನತೆಗೆ, ಬಡತನಕ್ಕೆ ಒಡ್ಡಿದ ಪ್ರತೀಕದಂತಿದೆ.

''ತಿರುಕಣ್ಣನ ಮತದಾನ'' ಸ್ವಾತಂತ್ರ್ಯ ನಂತರದ ನಮ್ಮ ಚುನಾವಣೆಯ ಮೋಸದಾಟಕ್ಕೆ ಹಿಡಿದ ಕನ್ನಡಿಯಂತಿದೆ. ಇಲ್ಲಿಯ ವ್ಯಂಗ್ಯ ಕೂಡ ಮಿದುಳನ್ನು ತಿವಿಯುವಂತಹುದು.

ಸ್ವಾತಂತ್ರ್ಯ ನಂತರದಲ್ಲಿ ಗೂಂಡಾಗಿರಿ ಪಡೆದುಕೊಂಡ ಅಧಿಕಾರ ಮತ್ತು ಕ್ರೌರ್ಯಕ್ಕೆ ಕನ್ನಡಿ ಹಿಡಿಯುವ ಕತೆ 'ಕಣ್ಣಾರೆ ಕಂಡವರು'.

ಜವನೂರಿನ ಜನ ಮೊದಲು ದಾರಿಯನ್ನು ಸುಲಭವಾಗಿ ನಡೆದು ಕ್ರಮಿಸುತ್ತಿದ್ದರು. ಆದರೆ ಕ್ರಮೇಣ ಪರಿಸ್ಥಿತಿ ಬದಲಾಯಿತು. ಬಸ್ಸು ಬಂತು, ಅಂಗಡಿ ಬಂತು, ಶಾಲೆ ಬಂತು, ಪೋಲೀಸರ ಚೌಕಿಯೂ ಬಂತು.

ಎಲ್ಲಪ್ಪನ ತಂಡವೊಂದಿತ್ತು. ನಾಮದೇವ ಅದರ ಸದಸ್ಯ. ಒಂದು ದಿನ ಒಬ್ಬ ಯುವಕ ಬರುತ್ತಾನೆ. ಅವನನ್ನು ಕಂಡು ನಾಮದೇವ ಅಸಂತುಷ್ಟನಾಗುತ್ತಾನೆ. ಆತ ಕುಲಕರ್ಣಿ ಮನೆಯನ್ನು ಅವಸಲ್ಲೇ ವಿಚಾರಿಸಿಕೊಂಡು ಅಲ್ಲಿಗೆ ಹೋಗುತ್ತಾನೆ. ಪಟ್ಟಣದಲ್ಲಿದ್ದ ದೇಸಾಯಿಯರು ಕೊಟ್ಟ ಪತ್ರವನ್ನು ಕುಲಕರ್ಣಿಗೆ ಕೊಡುತ್ತಾನೆ. ಅದರಲ್ಲಿ ತನ್ನ ಹೊಲದಲ್ಲಿ ಕೆಲವು ಗುಂಟೆಯನ್ನು ಪತ್ರ ತಂದ ಯುವಕನಿಗೆ ಕೊಡಬೇಕೆಂದು, ಆತ ಅಲ್ಲೆ ಮನೆ ಕಟ್ಟಿಕೊಂಡು ಹೊಲ ಸಾಗುವಳಿ ಮಾಡುತ್ತಾನೆಂದು ಬರೆದಿರುತ್ತಾರೆ. ಆದರೆ ಊರ ಕುಲಕರ್ಣಿ ಪತ್ರದ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ಮಾದಯ್ಯನನ್ನೇ ಕೇಳುತ್ತಾರೆ!

ಆ ಯುವಕ ಶಂಕರಪ್ಪ ಸಾತ್ವಿಕ. ದುಶ್ಚಟವಿಲ್ಲ, ಹರಟೆಯಿಲ್ಲ. ಬೆಳಿಗ್ಗೆ ಎದ್ದು ಸಂಜೆಯ ತನಕ ದುಡಿಯುತ್ತಿದ್ದ. ಇದು ಮಾದಯ್ಯನಿಗೆ ಹಿಡಿಸದಾಯಿತು.

ಒಂದು ಮುಂಜಾನೆ ಶಂಕರಪ್ಪ ಹೊಲದ ಅಂಚಿನ ಗುಂಟ ಸಾಗುತ್ತಿದ್ದ. ಸಮೀಪ ಸ್ಥಳ ಅಗೆಯುವ ಸದ್ದು ಕೇಳುತ್ತಿತ್ತು. ಶಂಕರಪ್ಪ ಉಸಿರು ಬಿಗಿ ಹಿಡಿದು ಸಾಗಿ ಅದನ್ನು ನೋಡಿದ. ಆ ಹೊಂಡದಲ್ಲಿ ಕೊಲೆ ಮಾಡಿ ತಂದ ಒಂದು ಮನುಷ್ಯನ ಹೆಣವನ್ನು ಹುಗಿಯುತ್ತಿದ್ದರು. ಇದನ್ನು ಶಂಕರಪ್ಪ ನೋಡಿದನೆಂದು ನಾಮದೇವ ತಂಡದವರಿಗೆ ಸಂಶಯ. ಶಂಕರಪ್ಪ ಓಡತೊಡಗಿದ. ನಾಮದೇವ ತಂಡದವರು ಅವನನ್ನು ಬೆನ್ನಟ್ಟಿದ್ದರು.

'ಅಯ್ಯೋ; ಹಯ್ಯೋ; ಕೊಲ್ತಾರಪ್ಪೊ', ಎಂದು ಶಂಕರಪ್ಪ ಬೊಬ್ಬೆ ಹೊಡೆದ. ಹತ್ತಾರು ಮನೆಗಳನ್ನು ದಾಟಿ ಹೋದರೂ ಯಾರೂ ಏಳಲಿಲ್ಲ. ರಕ್ಷಣೆಗೆ ಬರಲಿಲ್ಲ. ಪೋಲೀಸ ಚೌಕಿ ಎದುರೇ ಶಂಕರಪ್ಪ ಉರುಳಿದ. ಅವನನ್ನು ಹಿಡಿಯಲಾಯಿತು. ಕೆಲ ನಿಮಿಷದಲ್ಲೇ ಜೀವ ಹೋಯಿತು. ಈ ದೃಶ್ಯವನ್ನು ನೋಡುತ್ತ ಯಾವ ಭಾವವನ್ನೂ ತೋರದ ನೂರಾರು ಜನ ಸಮೀಪವೇ ನಿಂತಿದ್ದರು. ನಾಮದೇವ ''ಹೋಗಿ ಮನೆಗೆ'' ಎಂದ. ಎಲ್ಲರೂ ಪಿಟಿಕ್ ಎನ್ನದೇ ಚದುರಿದರು.

ಪೋಲೀಸ ದಂಡು ಬಂತು. ಅವರನ್ನು ನಾಮದೇವನೇ ಎದುರುಗೊಂಡ. ''ಏನಾಗಬೇಕು'' ಎಂದು ಕೇಳಿದ. ಅಧಿಕಾರಿ ಕೊಲೆಯ ಬಗ್ಗೆ ಚೌಕಾಶಿ ನಡೆಸಿದರು. ಆದರೆ ಯಾರೂ ಸಾಕ್ಷಿ ಹೇಳಲು ಮುಂದೆ ಬರಲಿಲ್ಲ. ಆದರೂ ನಾಮದೇವನ ತಂಡದವರನ್ನು ಲಾಕಪ್ಪಿಗೆ ಸೇರಿಸಿದರು.

''ಫಲಿತಾಂಶದಲ್ಲಿ ಯಾರಿಗೂ ಸಂಶಯವಿರಲಿಲ್ಲ. ಶಿಕ್ಷೆ ಗಲ್ಲಿನದೋ? ಇಲ್ಲವೇ ಜೀವಾವಧಿ ಕಾರಾಗೃಹವೊ? ಆದರೆ ಆರೋಪ ನ್ಯಾಯಸ್ಥಾನದಲ್ಲಿ ರುಜುವಾತಾಗಬೇಕು. ಅದಕ್ಕೆ ನಂಬಲರ್ಹವಾದ ಸಾಕ್ಷಿ ಬೇಕು. ಆ ಸಾಕ್ಷಿಗಳು ಈ ಮೊಕದ್ದಮೆಯಲ್ಲಿ ದೊರೆಯಲಿಲ್ಲ. ಸಾಕಷ್ಟು ಪುರಾವೆಗಳಿಲ್ಲದೆ ನಾಮದೇವನೂ ಅವನ ಸಂಗಡಿಗರೂ ನಿರಪರಾಧಿಗಳೆಂದು ಹೊರ ಬಂದರು.

ಜವನೂರಿನ ಆ ಜನಗಳನ್ನು ಬಿಟ್ಟರೆ ನಡೆದದ್ದನ್ನು ಕಣ್ಣಾರೆ ಕಂಡಿದ್ದವರು ಇಬ್ಬರು. 'ಒಬ್ಬ ಸೂರ್ಯ; ಉರಿಯುವ ಆ ಗೋಲಕ್ಕೆ ಮಾತು ಬಾರದಲ್ಲ?'

''ಇನ್ನೊಬ್ಬ ಶಂಕರಪ್ಪ, ಸತ್ತವನೆಂತು ಸಾಕ್ಷ್ಯಕೊಡಬಲ್ಲ'' ಈ ಗೂಂಡಾಗಳ ಬೆದರಿಕೆ ಊರಿನವರಿಗೆ ಮಾತ್ರವಲ್ಲ ಸ್ವತಃ ದೇಸಾಯಿಯವರಿಗೂ. ಈ ಗೂಂಡಾಗಿರಿಯನ್ನು ಮೈ ನಡುಗಿಸುವಂತೆ ತೆರೆದು ತೋರುತ್ತದೆ ಕತೆ. ಇದು ಇನ್ನೂ ಬೆಳೆಯುತ್ತಲೇ ಇದೆಯಲ್ಲವೇ?

ಸ್ವಾತಂತ್ರ್ಯ ನಂತರ ಪ್ರಗತಿಯಾದರೂ ಅಸಮಾನತೆ ಹೆಚ್ಚುತ್ತಲೇ ಹೋಗಿರುವುದನ್ನು ಬಡವರ ಬವಣೆಯನ್ನು ಮತ್ತು ಆಳುವವರ

ಸ್ವೈಚ್ಛಾನುಸಂಧಾನವನ್ನು 'ಮೆದ್ದವರು ಯಾರು?' ಮತ್ತು 'ಅನ್ನ ದೇವರ ರೈಲು' ಪ್ರವಾಸ ಚಿತ್ರಿಸುತ್ತದೆ. ಹೆಚ್ಚು ಭಾವಪ್ರದವಾಗಿದೆ. ಯುದ್ಧದ ಸಮಯಕ್ಕೆ ಜನ ಜಾಗೃತಿಗೆ ಸಲ್ಲುವಂತಹದು.

''ಬದುಕುವ ಬಯಕೆ'' ಕತೆಯ ಟಿಪ್ಪಣಿಯಲ್ಲಿ ವೇಶ್ಯೆಯನ್ನು ನಾಯಕಿಯನ್ನಾಗಿ ಮಾಡಿ ನಾನು ರಂಗು ರಂಗಿನ ಕಾದಂಬರಿ ಬರೆದಿಲ್ಲ... ನನ್ನ ಪ್ರಕಾರ ವೇಶ್ಯೆ ಮಾನವೀಯ ಅನುಕಂಪಕ್ಕೆ ಪಾತ್ರಳಾದ ಹೆಣ್ಣುಜೀವ'' ಎಂದು ಬರೆದಿದ್ದಾರೆ. ವೇಶ್ಯೆಯರ ಕುರಿತು ಅವರು ಬರೆದ ಕತೆಗಳಲ್ಲಿ ಆ ಅಂಶವು ಮುಪ್ಪರಿಗೊಂಡೇ ಬಂದಿದೆ.

ಬದುಕುವ ಬಯಕೆಯ ವೇಶ್ಯೆ ಕಮಲ ಆ ವೃತ್ತಿಯನ್ನು ಬಯಸಿ ಬಂದವಳಲ್ಲ. ಜೀವನ ಆಧಾರವೆಂದು ಅವಳ ಅಜ್ಜಿ, ನಮಗೆ ಅವಳು ಕ್ರೂರಿ ಎಂದು ಕಂಡರೂ, ಅವಳನ್ನು ಆ ವೃತ್ತಿಗೆ ನೂಕಿದ್ದಾಳೆ. ಕಮಲ ಅನಿವಾರ್ಯವಾಗಿ ಅದಕ್ಕೆ ಒಗ್ಗಿದ್ದಾಳೆ. ಆದರೆ ಅವಳ ಆಂತರಿಕ ಆಸೆ ಇರುವುದು - ಗೃಹಿಣಿಯಾಗುವುದರಲ್ಲಿ, ತಾಯಿ ಆಗುವುದರಲ್ಲಿ. ಆದರೆ ನರಳುವ ವೃತ್ತಿಯನ್ನು ಅವಳು ಬದುಕುವ ಆಸೆಗಾಗಿ ಕೈಕೊಳ್ಳಬೇಕಿದೆ.

''ಕಮಲೆ ಆಕೆಯ ಹೆಸರು. ಸಮಾಜ ಅವಳಿಗೆ ಸೂಳೆ ಎಂಬ ಹೆಸರು ಕೊಟ್ಟಿದೆ. ಕಮಲೆ ಎಂಬುದು ನಿಮ್ಮಲ್ಲಿ ಎಷ್ಟು ಜನರಿಗೆ ಪ್ರೀತಿಯ ಹೆಸರೋ ಏನೋ. ಒಬ್ಬ ಸೂಳೆಗೆ ಆ ಹೆಸರೇ? ಎಂದು ನೀವು ಕೆಲವರು ಸಿಟ್ಟಾಗಬಹುದು. ಎಳೆಯ ವಯಸ್ಸಿನಲ್ಲಿ ತೀರಿಕೊಂಡ ತನ್ನ ಮುದ್ದು ತಂಗಿಯೊಬ್ಬಳ ಹೆಸರಿತ್ತು'' ಎಂದು ಆತ್ಮೀಯತೆಯ ಭಾವವನ್ನು ತುಂಬುತ್ತದೆ. ಕಮಲ ದುರಂತ ಚಿತ್ರಣ ಇಲ್ಲಿದ್ದು ಕೊನೆಗಾಗಿ ಕಾಯುತ್ತಿರುವ ಕಥೆ ಎಂದು ಮುಗಿಯುತ್ತದೆ.

'ಅವಳಿಗೆ ಗೊತ್ತಿರಲಿಲ್ಲ' ಕತೆಯೊಂದು ಮನಸ್ಸನ್ನು ಕಲಕುವ ಕತೆ.

ಮೈಸೂರು ದಸರೆಗೆಂದು ಬಂದ ಅವಳು ಕಷ್ಟ ಕಾರ್ಪಣ್ಯದಿಂದ ಸೂಳೆಯಾಗಿದ್ದಾಳೆ. ಪ್ರತಿ ವರ್ಷದಂತೆ ಈ ವರ್ಷವೂ ಆಕೆ ಮೈಸೂರಿಗೆ ಬಂದಿದ್ದಾಳೆ. ಬಂದಾಗ ಅವಳು ಉಳಿದುಕೊಳ್ಳುವದು ನಂಜಪ್ಪನ ಮನೆಯಲ್ಲಿ. ನಂಜಪ್ಪ ಕದೀಮ. ಅವಳಿಗೆ ಗಿರಾಕಿ ಮಾಡಿಕೊಟ್ಟು ಅವಳನ್ನು ದುಡಿಸಿ ತಾನು ಹಣ ಮಾಡಿಕೊಳ್ಳುತ್ತಾ ಹೋಗುವಾಗ ಹೊಸಸೀರೆ, ಹೂವು ಕೊಟ್ಟು ತುಸು ಹಣವನ್ನು ಕೊಟ್ಟು ಕಳಿಸುವನು. ಆದರೆ ಈ ವರ್ಷ ಆತ ಇಲ್ಲ. ನೆರೆಮನೆಯವರು ಕೇಳುತ್ತಾರೆ ''ಯಾವೂರು ನಿಮ್ಮದು?''

ಉತ್ತರ ''ಬೆಂಗಾಡು ತಾಲ್ಲೂಕು ಸಾವೂರು''

ಇಲ್ಲಿಯ ಹೆಸರು ಸಾಂಕೇತಿಕವಾಗಿದೆ. ಇದ್ದ ತಾಲ್ಲೂಕು ಅಥವಾ ಪ್ರದೇಶ ಬೆಂಗಾಡು. ಬೆಂಕಿಯ ಕಾಡು, ಬೆಂದ ಕಾಡು ಇಲ್ಲಿ ಜೀವನ ನಡೆಸುವವಳಿಗೆ ಸಾವೂರೇ ಗತಿಯಲ್ಲದೆ ಬೇರೇನು? ಗಂಡ ಸತ್ತಾಗ ಅವಳಿಗೆ ಎಳೆ ಹರೆಯ. ಸಾವಕಾಶವಾಗಿ ನಿಂಗಣ್ಣ ಬಲೆ ಬೀಸಿದ. ಅಲ್ಲಿ ಅವಳು ಸಿಲುಕಿದಳು.

ಚಿಕ್ಕವ ಕೃಷ್ಣ ಮನೆಬಿಟ್ಟು ಓಡಿ ಹೋದ. ನಿಂಗಣ್ಣನೂ ಅವಳನ್ನು ಧಂದೆಯಲ್ಲಿ ತೊಡಗಿಸಿದ. ಅವನೂ ಮಾಯವಾದ. ಈಗ ನಂಜಪ್ಪನೂ ಇಲ್ಲ. ಆಕೆ ಒಬ್ಬಂಟಿ. ಮಕ್ಕಳ ಸಂಗಡ ತಿರುಗಾಡುವ ಹೆಣ್ಣು ಮಕ್ಕಳನ್ನು ನೋಡಿ ತನ್ನ ಮಗನನ್ನು ನೆನಸಿಕೊಳ್ಳುತ್ತಾಳೆ.

ರಾತ್ರಿಯಾಯಿತು. ಏನು ಮಾಡಬೇಕು? ಒಂದು ಕಲ್ಲು ಬೆಂಚಿನ ಮೇಲೆ ಕುಳಿತಳು. ಗಡಸು ಧ್ವನಿಯೊಂದು ಕೇಳಿತು. ''ಬರ್ತೀಯಾ'' ಓಣಿಗಳನ್ನು ದಾಟಿ ಸೇರಿದ ಕತ್ತಲುಗಾಡು, ಮನೆ ಇಲ್ಲ ದೀಪಗಳಿಲ್ಲ, ವಿದ್ಯುಚ್ಛಕ್ತಿ ಇಲ್ಲ. ಹರಕು ಚಾಪೆ, ಹೊಲಸು ವಾಸನೆ, ಕೆಟ್ಟ ಮಾತು.''

ನಿರಂಜನ ಸನ್ನಿವೇಶದ ವೈರುಧ್ಯವನ್ನು ಎದುರು ಬದರು ನಿಲ್ಲಿಸುವ ತಂತ್ರದಿಂದಾಗಿ ವ್ಯಂಗ್ಯಕ್ಕೆ ಗುರಿ ಮಾಡುವುದನ್ನು ಇಲ್ಲಿಯೂ ನೋಡಬಹುದು.

ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ ವಿಸ್ತಾರವಾದೊಂದು ಭವನದಲ್ಲಿ ನಡೆಯುತ್ತಿತ್ತು. ಬೀದಿಯಲ್ಲೊಬ್ಬ ಮೂರು ಬಣ್ಣದ ಬಾವುಟ ಹಿಡಿದು ಉಪವಾಸ ಕುಳಿತಿದ್ದ. ಆಮರಣ ಉಪವಾಸ. ಉಪವಾಸ ಮುರಿಯೋ ತನಕವೂ ಆಮರಣ ಉಪವಾಸ. ಯಾಕೆ ಗೊತ್ತೇ, ಏಕೀಕರಣದ ನಂತರ ಮೈಸೂರು ದಸರಾ ಉಳಿಯುವುದಿಲ್ಲ ಎಂಬ ಸುದ್ದಿ ಇತ್ತು. ದಸರಾ ಉಳಿಸಿಕೊಳ್ಳಲು ಉಪವಾಸ. ಇನ್ನೊಂದು ಕಡೆ ಅರಮನೆಯ ಸಮೀಪದಲ್ಲಿದ್ದ ಆ ಭವನವನ್ನು ಅಲಂಕರಿಸಿದ್ದರು. ಸಂಸ್ಕೃತ ಪ್ರಸಾರ ಸಪ್ತಾಹ.

''ಒಂದು ಇರುಳು, ಒಂದು ಹಗಲು, ಮತ್ತೊಂದು ಇರುಳು ಮಲಗಿದಲ್ಲೇ ನಾಳೆ ಏಳಬೇಕೆಂದು ಅವಳು ಮಲಗಿದಳು. ಆದರೆ ಕೊನೆಯಿಲ್ಲದ ನಿದ್ದೆ ಎಂದು ಆಕೆಗೆ ಗೊತ್ತಿರಲಿಲ್ಲ.''

''ಕೊನೆಯ ಗಿರಾಕಿ''ಯಂತಹದೇ ತಳಮಳವನ್ನು ಎಬ್ಬಿಸುವ ಕತೆಯಿದು.

ಸಂಕಟಕ್ಕೆ ಸಿಕ್ಕುವ ಬಗೆ ಹಲವು ಹನ್ನೊಂದು. ನಿರಂಜನರ ತೀಕ್ಷ್ಣದೃಷ್ಟಿ ಅದನ್ನು ಕಂಡಿರಿಸಿದೆ. ಬೆಳೆದು ಬಂದ ಸಂಬಂಧ ಎರಡು ವರ್ಷ ಇನ್ನೂ ದೂರ 'ಸುಮಂಗಲಾ ಶಿರೀಸ್' 'ಡಿಸೆಂಬರ್ ೧೯' ಮತ್ತು 'ಕಾತ್ಯಾಯನಿ'ಯಂತಹ ಕತೆಗಳು ಹರೆಯದ ಪ್ರೀತಿ- ಪ್ರೇಮ ಮದುವೆಗಳಿಗೆ ಸಂಬಂಧಿಸಿದಂತಹವು. ಮದುವೆಯ ಸಂಬಂಧಗಳು ಸಾಂಪ್ರದಾಯದ ಕಟ್ಟಿನಲ್ಲೇ ಮುಂದುವರಿಯಬೇಕಾಗಿಲ್ಲ, ಹಿಂದಿನ ಮಜಲುಗಳಲ್ಲೂ

ಈ ವೈಚಾರಿಕತೆ ಕಾಣಿಸಿಕೊಂಡೇ ಇದೆ. ಬೆಳೆದು ಬಂದ ಸಂಬಂಧದಲ್ಲಿ ಈ ಮಾತು ಬರುತ್ತದೆ. ನಾನು ಜೀವನ ಸುಖಪ್ರದವಾಗಲಿ ಎಂದೇನೋ ಹಾರೈಸಿದೆ. ಆದರೆ ನನಗೆ ಗೊತ್ತಿದೆ. ಈಗಿನ ಸಮಾಜ ಪದ್ಧತಿಯಲ್ಲಿ ಬಹು ಸಂಖ್ಯಾತ ಕುಟುಂಬಗಳ ಜೀವನಕ್ಕೆ ಸುಖವಿಲ್ಲ - ಭದ್ರತೆಯಿಲ್ಲ ''ಅದು ವಿಜಾತೀಯ ಸಂಬಂಧ. ಸಂಪ್ರದಾಯಕ್ಕೆ ವಿರುದ್ಧವಾದುದು. ಆದರೂ ವಿಮಲಾ - ನಾಣಿಯರ ಸಂಬಂಧ ನ್ಯಾಯೋಚಿತ ವಾದುದು. ಸುಮ್ಮನೆ ವಿಧಿ ತಂದ ಹೆಣ್ಣಲ್ಲ, ವಿಧಿಕೊಟ್ಟ ಗಂಡಲ್ಲ, ಬೆಳೆದು ಬಂದ ಸಂಬಂಧ. ಪರಸ್ಪರ ಪೂರಕವಾಗಿ ಒಂದರಲ್ಲಿ ಇನ್ನೊಂದು ಎರಕವಾಗಿ''

'ಕಾತ್ಯಾಯಿನಿ' ಕತೆ ಅಂತರ್ಯದಲ್ಲಿ ಇದೇ ಓಘ ಉಳ್ಳದ್ದು. ಆದರೆ ಸನ್ನಿವೇಶ ಇನ್ನೂ ಕಠಿಣವಾದುದು. ಕಷ್ಟತಮವಾದುದು. ಸಮಾಜದ ಸಾಂಸ್ಕೃತಿಕ ಅಂತಸ್ತು ಈ ಕತೆಯಿಂದ ಭಿನ್ನವಾದುದು. ಕತೆಯು ಹೆಚ್ಚು ಕಲಾತ್ಮಕವಾದುದು ಮತ್ತು ಸಂಕೀರ್ಣವಾದುದು.

ಕಾತ್ಯಾಯಿನಿ ಹದಿನೇಳರ ಹರೆಯದವಳು. ಅವಳು ಒಕ್ಕಲತಿ, ರಾಮ ಒಕ್ಕಲಿಗ. ''ಕುಡುಗೋಲನ್ನು ದಂಡೆಯ ಮೇಲಿರಿಸಿ ಕಾತ್ಯಾಯಿನಿ ನೀರಿಗಿಳಿದಳು. ಅವಳ ದೃಷ್ಟಿ ಸುತ್ತಲೂ ಸಂಚಾರ ಮಾಡಿತು. ರಾಮ ಬಂದಿರಲಿಲ್ಲ. ನಿಧಾನವಾಗಿ ಆಕೆ ಅಂಗೈಯಲ್ಲಿ ನೀರನ್ನೆತ್ತಿ ಆ ಕನ್ನಡಿಯಲ್ಲಿ ಮುಖ ನೋಡಿಕೊಂಡಳು. ನದಿ ಅವಳನ್ನು ನೋಡಿ ನಕ್ಕಿತು. ಮೀನುಗಳು ಕಿಸಕ್ಕೆಂದು ಹಲ್ಲು ಕಿಸಿದವು'' ಹೀಗೆ ಅವಳ ವ್ಯಕ್ತಿತ್ವ ನಿರೂಪಣೆ, ಪ್ರೇಮದ ಗಾಢತೆ ನಿರೂಪಗೊಳ್ಳುತ್ತಾ ಹೋಗುತ್ತದೆ.

ಅವನ ಕೈಬೆರಳನ್ನು ತನ್ನ ಅಂಗೈಯಲ್ಲಿರಿಸಿ ಆಟವಾಡುತ್ತ ಮೂಕಿಯಾಗಿ ಕುಳಿತಳು. ಕಾತ್ಯಾಯಿನಿ. ಮಾತಿಲ್ಲದ ಅಂಥ ಮೌನವೂ ಅವರ ಪಾಲಿಗೆ ಅಮೃತ ಸುಖ ನೀಡುತ್ತಿತ್ತು.

ಊರಿನಲ್ಲಿ ರೈತ ಸಂಘ ಬೆಳೆಯುತ್ತಿತ್ತು. ರಾಮ ಅದರ ಸದಸ್ಯನಾದ. ರೈತರಲ್ಲಿ ಜಾಗೃತಿ ಬೆಳೆಯುತ್ತದೆ. ರಾಮ ಕಾತ್ಯಾಯನಿಗೂ ರೈತ ಹೋರಾಟದ ಪಾಠ ಹೇಳಿದ. ರಾಮು ಹೇಳಿದ್ದ ''ಕೈಕಟ್ಟಿ ಕುಂತ್ರೆ ಯಾವ್ದೂ ಬರಾದಿಲ್ಲ ನೋಡು. ಬೆವರು ಸುರ್ಸಿ ರಕ್ತ ಹರ್ಸಿದ್ರೇನೆ ಬರೋದು'' ತಿಳೀತಾ?

ಸ್ವಾತಂತ್ರ್ಯ ಚಳವಳಿಗೆ ಕಾವೇರುತ್ತದೆ. ತಂತಿಗಳು ಕಡಿದು ಬಿದ್ದವು. ರೈಲು ಓಡಾಟ ನಿಂತಿತು. ರೈತರು ಸಶಸ್ತ್ರ ಹೋರಾಟಕ್ಕೆ ಸಿದ್ಧರಾದರು. ಭೂಗತರಾದರು. ತಾವೂ ಹೊರಡಲನುವಾದ ಎರಡು ಹೃದಯಗಳು ಒಂದಾದವು. ಎರಡು ದೇಹಗಳೊಂದಾದವು. ಆಮೇಲೆ ಒಬ್ಬರ ತೋಳು ಒಬ್ಬರಿಗೆ ಆಸರೆಯಾಗಿ ಕರಿಯ ಆಕಾಶದ ಚುಕ್ಕೆಗಳನ್ನು ದಿಟ್ಟಿಸುತ್ತ ಸ್ವಪ್ನ ಲೋಕದಲ್ಲಿ ವಿಹಾರ.

''ಕಾದಿರ್‍ತೀನಿ ರಾಮಾ''

''ಹೂಂ ಚಿನ್ನಾ, ಹೊಸ ಭೂಮಿಗೆ ವಾಪಸು ಬರ್‍ತೀನಿ'' ರಾಮ ಬರಲಿಲ್ಲ. ಕಾತ್ಯಾಯಿನಿ ಗರ್ಭಿಣಿ. ರೈತ ರಾಮ ಬಿತ್ತಿದ ಬೀಜ ಮೊಳಕೆ. ಹುತಾತ್ಮ ರಾಮನ ಈ ಮಡದಿಗೆ ಊರಿನ ಜನ ಅಗ್ನಿ ಪರೀಕ್ಷೆ ಕೇಳುವುದಿಲ್ಲ. ಬರಲಿರುವುದು ರಾಮನ ಸಂತಾನ... ತಮ್ಮ ಕಣ್ಣಾಗಿದ್ದ ಮಗನನ್ನು ಕಳೆದುಕೊಂಡ ರಾಮನ ತಾಯ್ತಂದೆಯರು ಕೂಡ.''

ಕಾತ್ಯಾಯಿನಿ ತಾಯಿಯಾಗಿದ್ದಾಳೆ. ಹಳ್ಳಿಯ ಸಂಘದ ಉಪಾಧ್ಯಕ್ಷೆ ಈಗ ''ನಾಳೆ, ನಾಳೆಯ ಭವ್ಯತೆ ಅವಳನ್ನು ಇಂದಿಗೆ ಕಟ್ಟು ಹಾಕಿದೆ. ಅಷ್ಟೇ ಬಲವಾದ ಸಾಕ್ಷಿಯಾಗಿ ತನ್ನ ಅಪಾರತೆಯೊಡನೆ, ಅಗಾಧತೆಯೊಡನೆ ತೇಜಸ್ವಿನಿ ನದಿ ಹರಿಯುತ್ತದೆ'' ಪ್ರಾರಂಭದಲ್ಲಿ ಬಂದ ನದಿ ಕೊನೆಗೆ ಮತ್ತೆ ಬಂದಿದೆ. ಜೀವನದ ಚಲನಶೀಲತೆಯ ಸಂಕೇತವಾಗಿ.

ನಿರಂಜನರ ಚಿರಸ್ಮರಣೆ ಕಾದಂಬರಿಯ ಮೂಲಮಾತೃಕೆಯಂತೆ ತೋರುವ ಈ ಕತೆ ಹೆಚ್ಚು ಗಂಭೀರವಾಗಿದೆ.

''ಒಂಟಿ ನಕ್ಷತ್ರ'' ಮತ್ತು ''ಯಾವ ಜನ್ಮದ ಶಾಪ'' ಎರಡೂ ಹಳೆ ಹೊಸ ವಿಚಾರಗಳ ಸಂಘರ್ಷವನ್ನು ಚಿತ್ರಿಸುತ್ತದೆ. ಒಂಟಿ ನಕ್ಷತ್ರದಲ್ಲಿ ಮಳೆಯಿಲ್ಲದ ಭೂಮಿಗೆ ಅಣೆಕಟ್ಟು ಕಟ್ಟಿ ನೀರು ಒದಗಿಸುವ ಯೋಜನೆಯಿದೆ. ಆ ಕಾರಣಕ್ಕೆ ಹನ್ನೆರಡು ಹಳ್ಳಿಯ ಜನ ಊರು ಬಿಡಬೇಕಾಗುತ್ತದೆ. ಪರಿಹಾರವಾಗಿ ಬೇರೆ ಕಡೆ ಜಮೀನು ಕೊಡುತ್ತಾರೆ.

ಇದು ಹೇಗೆ ಸಾಧ್ಯ? ಎಂಬುದು ಹಿರಿಯ ರೈತನ ಪ್ರಶ್ನೆ. ಆದರೆ ಮಗ ರಾಮ ಸಿದ್ಧನೆ. ಕೊನೆಗೆ ಅಣೆಕಟ್ಟು ಸಿದ್ಧವಾಗುತ್ತದೆ. ಆದರೆ ಹಿರಿಯ ರೈತನಿಗೆ ಭರವಸೆಯಿಲ್ಲ. ಅದನ್ನು ತೋರಿಸಲು ರಾಮ ಅಪ್ಪನನ್ನು ಕರೆದುಕೊಂಡು ಹೋದ.

ಅಣೆಕಟ್ಟಿನ ಎರಡೂ ದ್ವಾರಗಳಿಂದ ಕೋಟಿ ಶ್ವೇತಾಶ್ವಗಳು ಕರ್ಣಭೇದಕವಾಗಿ ಕೆನೆಯುತ್ತ, ಬಾಯ್ಗಳಿಂದ ನೊರೆಯುಗುಳುತ್ತ ಮುನ್ನುಗ್ಗುತ್ತಿದ್ದವು. ಕುಪ್ಪಳಿಸುತ್ತ, ಹಾರುತ್ತ ಕಿಲಕಿಲ ನಗುತ್ತ ನೀರು ಧುಮುಧುಮುಸಿ ಹರಿಯಿತು. ಕಾಲುವೆಗಳಲ್ಲಿ ಉಪ ಕಾಲುವೆಗಳಲ್ಲಿ. ''ಎಚ್ಚತ್ತ ಹಿರಿಯ'' ಓ ಎಂದ.

ಗುಡಿಸಲ ಮುಂದೆ ರಾಮನ ತಾಯಿ ನಿಂತಿದ್ದಳು. ಚಿಕ್ಕ ಹುಡುಗನಂತೆ ಓಡುತ್ತ ಬಂದ ಗಂಡನನ್ನು ನೋಡಿ ಆಕೆಯೆಂದಳು, ''ಲಚ್ಚಿಗೆ ಎರಿಗೆಯಾಯ್ತು'' ಗಂಡು ಮಗು.

ಪಶ್ಚಿಮದಲ್ಲಿ ಒಂಟಿಯಾಗಿಯೇ ಇದ್ದೊಂದು ನಕ್ಷತ್ರ ಅವನನ್ನು ಕಂಡು ನಕ್ಕಿತು. ಅದನ್ನು ಗಮನಿಸಿದ ಹಿರಿಯ ರುಮಾಲನ್ನೆಳೆದು ತಲೆಯಾಡಿಸುತ್ತ ಅಂದ; ಉಚ್ಮುಂಡೆ, ಆ ನಕ್ಷತ್ರ ಮತ್ತೆ ನಕ್ಕಿತು.

ಹೊಸದಾಗಿ ರಚನೆಯಾದ ಅಣೆಕಟ್ಟು ರೈತನ ಬಾನಿನಲ್ಲಿ ನಕ್ಷತ್ರವಾಗಿ ಮಿಂಚಿತು. ಮತ್ತೆ ಮನೆಯವರಿಂದ ತಾನೊಂದೇ ಬೇರೆಯಾಗಿ ಒಂಟಿ ನಕ್ಷತ್ರದಂತಿದ್ದ ಹಿರಿಯ ಎಲ್ಲರಲ್ಲಿ (ಹೊಸ ತಲೆಮಾರಿನವರಲ್ಲಿ) ಒಂದಾಗಿ ಹೋದ.

'ಯಾವ ಜನ್ಮದ ಶಾಪ'ದಲ್ಲಿ ಮಧ್ಯಮವರ್ಗವೊಂದು ಹೊಸ ವಿದ್ಯೆಗೆ (ಆಧುನಿಕತೆಗೆ) ತೆರೆದುಕೊಂಡಾಗ ಉಂಟಾಗುವ ಬಿಕ್ಕಟ್ಟು ತಲೆದೋರುತ್ತದೆ. ಹೆಚ್ಚಿನ ವಿದ್ಯೆ ಕಲಿತು ಪರದೇಶಕ್ಕೆ ಹೋಗಬಯಸುವ ಮಗ, ಮಗನನ್ನು ವರದಕ್ಷಿಣೆ ಸಹಿತ ಮದುವೆ ಮಾಡಿಸಿಕೊಂಡು ಇಲ್ಲೇ ಇಟ್ಟುಕೊಳ್ಳಬೇಕೆಂದು ಬಯಸಿದ ತಂದೆ, ಮಗಳ ಮದುವೆಗೂ ವರದಕ್ಷಿಣೆ ಬೇಕು ತಾನೇ?

ಮಗ ಪ್ರಸಾದ ಅಪ್ಪನ ಯೋಜನೆಗೆ ಕಲ್ಲು ಹಾಕಿ ಹೊರಟು ನಿಂತ. ತಂಗಿಯೊಡನೆ ಅಂದ. ''ಅಣ್ಣಯ್ಯನಿಗಾಗಲಿ, ಅಮ್ಮನಿಗಾಗಲಿ ಗೊತ್ತಾಗೋದಿಲ್ಲ. ಅವರದು ಹಳೇ ಕಾಲದ ಯೋಚನೆ. ಒಂದು ಗಂಡನ್ನು ಒಂದು ಹೆಣ್ಣನ್ನು ಅಂತೂ ಇಂತು ಗಂಟು ಹಾಕೋದು. ಇವರು ಸಂಸಾರ ಹೂಡಿ ಮಕ್ಕಳನ್ನು ಪಡೆಯೋದು. ಆ ಮೊಮ್ಮಕ್ಕಳನ್ನು ಎತ್ತಿ ಆಡಿಸಿ ವೃದ್ಧ ತಂದೆ-ತಾಯಿ ಕಣ್ಣು ಮುಚ್ಚೋದು ಅವರ ದೃಷ್ಟೀಲಿ ಅದು ಸಾರ್ಥಕ ಜೀವನ.''

ಆದರೆ ಮಧ್ಯಮ ವರ್ಗದ ಪರಿವರ್ತನೆಯ ಸಂದರ್ಭ ಇಷ್ಟು ಸರಳವಲ್ಲ. ಪ್ರಸಾದನಿಗೆ ಸರಳ, ನೇರ ಎಂದು ತೋರಿದ್ದು ಅವನ ತಂಗಿ ಗಿರಿಜೆಗೆ ಅಷ್ಟು ಸರಳವಲ್ಲ. ತಂದೆಯ ಸಂಕಟಕೂಡ ಕಾರಣ ರಹಿತವಲ್ಲ. ಆದರೆ ಹೊಸದರ ಕಡೆ ಧುಮಕುತ್ತದೆ ಕತೆ. ತಾಯಿ ''ಪ್ರಸಾದು, ಅಲ್ಲಿ ಅಮೇರಿಕದಲ್ಲಿ ನಿನಗೆ ಊಟ ಉಪಚಾರ ಸರಿಹೋಗುತ್ತೋ ಇಲ್ವೋ?'' ಎಂದರೆ ಮಗ, ''ಅದರದೇನೂ ಯೋಚನೆ ಇಲ್ಲಮ್ಮ. ನಮ್ಮೂರಿನವರು ಅಲ್ಲೂ ಬಹಳ ಜನ ಇದ್ದಾರೆ'' ಎನ್ನುತ್ತಾರೆ.. ರಕ್ತ ಸಂಬಂಧದ ಶ್ರೇಷ್ಠತೆ ಸಾಮಿಪ್ಯದ ಸಾರ್ವಭೌಮತ್ವವು ಸಡಿಲಾಗುವ, ಮುರಿದು ಬೀಳುವ ಸೂಚನೆ, ಒಲವು ಇಲ್ಲಿದೆ.

ಆದರೆ ಈ ದೃಶ್ಯ ಬಲು ಸಂಕೀರ್ಣವಾದುದು. ಆದ್ದರಿಂದಲೇ ಒಂಟಿ ನಕ್ಷತ್ರದಂತಲ್ಲ, ಇಲ್ಲಿ ಹಿರಿಯನ (ಅಪ್ಪನ) ಹಿಂಜರಿಕೆಯ ಮೇಲೆ ಹೆಚ್ಚು ಒತ್ತು ಬಿದ್ದಿದೆ. ಒಟ್ಟಾರೆಯಾಗಿ ಕುಟುಂಬದ ಘಟನೆಯ ನೋವಿನ ಮೇಲೆ ಹೆಚ್ಚು ಒತ್ತು ಬಿದ್ದಿದೆ.

'ಕೋದಂಡ ಮತ್ತು ಕರಗ' ಕತೆಯಲ್ಲಿ ಮಾನವೀಯ ಸಂಬಂಧದ ಪಟ್ಟವಾದ ಅಯಾಮವಿದೆ. ಅದೂ ಕೂಡ ಒಂದು ಸಮಾಜದರ್ಶನದ ಅಂಶವೆ.

ಬೆಂಗಳೂರಿನ ಕರಗದ ಉತ್ಸವದ ದಿನ. ಒಂದು ವರ್ಷದ ಕೆಳಗೆ ಜೈಲಿನಲ್ಲಿ ಜೊತೆ ಸಿಕ್ಕಿದ ಹುಡುಗನ ನೆನಪು ಇಲ್ಲಿ ಬಿಚ್ಚಿಕೊಳ್ಳುತ್ತದೆ. ಒಂದು ವರ್ಷದ ಕೆಳಗೆ ರಾಜಕೀಯ

ಕೈದಿಯಾಗಿ ಕತೆಯಲ್ಲಿ ಒಂದು ಪಾತ್ರವಾದ ನಿರೂಪಕ ಜೈಲಿಗೆ ಹೋಗುತ್ತಾನೆ. ಅಲ್ಲಿ ಆತ ಒಬ್ಬ ಹುಡುಗನನ್ನು ನೋಡುತ್ತಾನೆ. ಆತ ಹದಿನೈದು ಹದಿನಾರರ ಬಡಕಲು ಹುಡುಗ. ಮುಂಜಾನೆ ಎಚ್ಚತ್ತಾಗ ತನ್ನನ್ನು ನೋಡುತ್ತಿರುವ ಹಿರಿಯನನ್ನು ಕಂಡು ಅಳತೊಡಗಿದ. ಬೆಳಿಗ್ಗೆ ಎದ್ದು ಅಳ್ತಾರೇನಯ್ಯ ಯಾರಾದರೂ? ಅಳಬೇಡ ಸುಮ್ನಿರು ಎಂದು ಹಿರಿಯಣ್ಣನ ಹಾಗೆ ಸ್ವರವೇರಿಸಿ ನುಡಿದ.

ತೀರ ಅಪರಿಚಿತವಾದ ಕೊಳಕಾದ ಆ ಹುಡುಗನಲ್ಲಿಯ ಅನುಕಂಪ ಆತನನ್ನು ಹಿರಿಯಣ್ಣನ ಸ್ಥಾನಕ್ಕೆ ಏರಿಸಿದೆ. ಆ ಹುಡುಗನ ಹೆಸರೇ ಕೋದಂಡರಾಮ. ಅವರು ಗಾರೆ ಕೆಲಸಗಾರರು. ಕೆಲಸವಿದ್ದಾಗ ಇರುತ್ತಿತ್ತು. ಇಲ್ಲದಿದ್ದಾಗ ಉಪವಾಸ. ಅವನ ಭಾವ ಸಣ್ಣಪುಟ್ಟ ಕಳ್ಳತನಕ್ಕೆ ಈತನನ್ನು ಪುಸಲಾಯಿಸುತ್ತಿದ್ದ. ನಸುಕಿನಲ್ಲೊಂದು ದಿನ ಆ ಭಾವ ಬೀದಿಯ ಬದಿ ಬಿದ್ದ ನಾಲ್ಕು ಕಬ್ಬಿಣ ಸಲಾಕೆಯನ್ನೆತ್ತಿ ಕೋದಂಡನ ಕೈಗಿತ್ತ. ಕೋದಂಡ ನಡುಗಿಹೋದ. ಆತ ಓಡಿಹೋದ. ಪೋಲೀಸರು ಈತನನ್ನು ಹಿಡಿದರು. ಈತ ಇಲ್ಲಿ ''ನನಗೊಂದು ಕೆಲಸ ಕೊಡಿಸಿ ಸರ್?'' ಎನ್ನುತ್ತಾರೆ. ಸತ್ಯ ಹೇಳಿದರೆ ಬಿಟ್ಟುಬಿಡುತ್ತಾರೆ ಎಂದು ಹುಡುಗನ ವಿಚಾರ.

''ಕಾನೂನಿನಲ್ಲಿ ಸತ್ಯದ ಪ್ರತಾಪ! ಸತ್ಯ ಹೇಳಿದರೆ ಶಿಕ್ಷೆ ತಪ್ಪಿದ್ದಿಲ್ಲ. ವಯಸ್ಸು ಹದಿನೆಂಟು ಎಂದು ಬರೆಸಿ ಮೂರು ತಿಂಗಳೋ ಆರು ತಿಂಗಳೋ ಒಳಕ್ಕೆ ಎಸೀತಾರೆ'' ಇದು ಹಿರಿಯನ ನಿರೂಪಣೆ. ಪೋಲೀಸರ ಲೆಕ್ಕದಲ್ಲಿ ಆತ ದೊಡ್ಡ ಕೇಡಿ, ಮೋರೆ ತೊಳೆಯಲೆಂದರೂ ಕಕ್ಕಸಿಗೆ ಹೋಗುವಾಗಲೂ ಕೋಳ ತೊಡಿಸಬೇಕು. ಆದರೆ ಆ ಹುಡುಗ ಪುಕ್ಕ, ಸಂಭಾವಿತ, ಮುಗ್ಧ ಕೂಡ, ಆತನಿಗೆ ಧೈರ್ಯ ಹೇಳುತ್ತಾ ನಿರೂಪಕನಿಗೆ ಅನಿಸುತ್ತದೆ. ನನಗೆ ಒಬ್ಬ ತಮ್ಮನಿದ್ದರೆ ಹಾಗೇ ಹೇಳುತ್ತಿದ್ದನೇನೋ''

''ಮುಂದೆಲ್ಲ ಇದೆಲ್ಲ ಬದಲಾಗಬೇಕು. ಬದಲಾಯಿಸಲೇಬೇಕು'' ಎಂದು ಆತನಿಗೆ ವಿವರಿಸುತ್ತಾನೆ. ನಿರೂಪಕನಿಗೆ ಬಿಡುಗಡೆಯಾಗುತ್ತದೆ. 'ಹುಡುಗನಿಗೆ ಜಾಮೀನು ಕೊಡುವವರು ಯಾರೂ ಇಲ್ಲ. ಎರಡು ಹನಿ ಅವನ ಕಣ್ಣುಗಳಿಂದ. ನನಗೂ ಕಂಠ ಬಿಗಿದು ಬಂತು' ಎನ್ನುತ್ತಾನೆ ನಿರೂಪಕ.

ಅವನಿಗೆ ಶಿಕ್ಷೆಯಾಗಿ ಹೊರ ಬಂದ ಬಳಿಕ ಅವನು ನಿಜಕ್ಕೂ ಕಳ್ಳನಾಗಿದ್ದರೆ ಆಶ್ಚರ್ಯವಿಲ್ಲ. ಹಾಗಿದ್ದರೂ ಅವನನ್ನು ನೋಡುವ ಆಶೆ ನನಗೆ ''ನಿರೂಪಕ ಪೇಟೆಯಲ್ಲಿ ಸೈಕಲ್ ಓಡಿಸುತ್ತಿದ್ದಾನೆ. ಮನಸ್ಸು ಹೇಳುತ್ತದೆ'' ಸಾವಧಾನ' ವಾತಾವರಣದ ಆ ಶಿಶುವನ್ನು ನೀನು ಇಂದಲ್ಲ ನಾಳೆ ಕಂಡೇ ಕಾಣುವೆ, ತಾಳು.''

ಧಾರ್ಮಿಕ ಢಾಂಬಿಕತೆಯನ್ನು ಹೇಳುವ 'ಅನ್ನಪೂರ್ಣ' ಅನುವಾದಿತ ಕತೆ 'ತುಣುಕು ಚಾಪೀಸು', ಕಲಾವಿದರ ಬಗ್ಗೆ ಇರುವ 'ಅಮರ' 'ಆ ಕಾಳರಾತ್ರಿ', 'ನಾಸ್ತಿಕ

ಕೊಟ್ಟ ದೇವರು' ಮುಂತಾದವು ಮಹತ್ವದ ಕತೆಗಳು. ಎಮ್ಮೆ ಸಾಕಿ ಹಾಲು ಮಾರಿ ಜೀವನ ಸಾಗಿಸುತ್ತಿದ್ದ ಹಾಲಮ್ಮ ಎಮ್ಮೆ ಹಾಲು ಕಡಿಮೆಯಾಯಿತೆಂದು ಮಾರಲು ಬಂದ ಬೇರೆ ಎಮ್ಮೆಗಳೊಡನೆ ಅದಲಿ ಬದಲಿ ಮಾಡಿಕೊಂಡು, ಆದರೆ ಆ ಎಮ್ಮೆಯನ್ನು ಬೇರೆಯವರು ಕದ್ದು ತಂದದ್ದೆಂದು ಪೋಲೀಸರು ಹೊಡೆದುಕೊಂಡು ಹೋಗುವುದರಿಂದ ಎಲ್ಲವನ್ನು ಕಳಕೊಂಡ ಹಾಲಮ್ಮನ ಕರುಣಾ ಪೂರಕ ಸಂಗತಿ ತಿಳಿಸಿ ಹಾಸ್ಯದೊಡನೆ ತಳಕು ಹಾಕಿಕೊಂಡು ಆಕಾರ ಪಡೆದ 'ಹಾಲವ್ವ ಕಟ್ಟಿದ ಎಮ್ಮೆ?' ಒಂದು ಉತ್ತಮ ಕತೆ. ಬುದ್ಧನ ಕಾಲದ ಗಣರಾಜ್ಯ ಪದ್ಧತಿಯು ಗಣಮುಖ್ಯಸ್ಥ ತಪ್ಪು ಮಾಡಿದ ತನ್ನ ಮಗನಿಗೆ ಮರಣ ದಂಡನೆ ಕೊಡುವ ಕತೆ 'ಮಹಾಸಮ್ಮತನ ತೀರ್ಪು' ಗಮ್ಯವಾಗಿದೆ. ಹಾಗೆಯೇ ಸ್ವಾತಂತ್ರ್ಯ ಪ್ರೇಮವನ್ನು ಉತ್ತೇಜಿಸುವ ಐತಿಹಾಸಿಕ ಪ್ರಸಂಗವನ್ನು ಉಪಯೋಗಿಸಿಕೊಂಡ ಕತೆ 'ಹರಿಕೆಯ ಖಡ್ಗ', 'ಅದ್ಭುತ ಪವಾಡ', 'ಊರು ನೀರವವಾಯಿತು' ಇಲ್ಲಿ ಸೇರಿವೆ.

ನಿರಂಜನರ ಕತೆಗಳನ್ನು ಅವರ ಸಿದ್ಧಾಂತ ಮತ್ತು ಬೆಳವಣಿಗೆಯನ್ನು ಗಮನಿಸಿ ಮೂರು ಭಾಗ ಮಾಡಿಕೊಂಡಿದ್ದರೂ ಇದೇನೂ ಕೊರೆದಿಟ್ಟ ಖಂಡವಲ್ಲ. ಎಲ್ಲಾ ಕತೆಗಳಲ್ಲಿ ಕಾಣುವ ಮುಖ್ಯ ವಸ್ತು ಬಡತನ. ವಿವಿಧ ಬಗೆಯಲ್ಲಿ ಪ್ರಕಾಶನಗೊಂಡಿದೆ.; ಅವರೊಡನೆ ಅವಿರತವಾಗಿ ತಳಕು ಹಾಕಿಕೊಂಡ ಅಂಶ ಹೋರಾಟ; ಸಮಾಜದ ಪುನರ್ಘಟನೆಯನ್ನು ಹೊತ್ತ ಆಶಯ ಮುಖ್ಯವಾಗಿದೆ.

ವಿಷಯ ವೈವಿಧ್ಯತೆಯಿಂದ ಜೀವನ ಚಲನಶೀಲತೆಯನ್ನು ಗುರುತಿಸುವ ಕ್ರಿಯೆ ಅವ್ಯಾಹತವಾಗಿದೆ. ಬದುಕಿನ ಬಗ್ಗೆ ಅದಮ್ಯ ಬಯಕೆ ಇದೆ. ಅವರ ಯಾವ ಕತೆಯನ್ನು ತೆಗೆದರೂ ಚರಿತ್ರೆಯ ಚಲನೆಯ ಗುರುತನ್ನು ಕಾಣಬಹುದು. ಹಾಗೆಯೇ ಸಮಾಜ ಪರಿವರ್ತನೆಯ ಸಮಾಜವಾದಿ ಛಲ ಹಾಜರಿರುತ್ತದೆ. ಸೈದ್ಧಾಂತಿಕ ವೈರುಧ್ಯವನ್ನು ಎದುರು ಬದುರು ನಿಲ್ಲಿಸಿ ಪರಿಣಾಮವನ್ನು ಪ್ರಭಾವಿಗೊಳಿಸುವುದು ಅವರ ತಂತ್ರದ ಒಂದು ಮುಖ್ಯ ಅಂಶವಾಗಿದೆ.

ಕನ್ನಡ ಸಣ್ಣ ಕತೆಗಳಿಗೆ ಸಮಾಜವಾದಿ. ವಾಸ್ತವ್ಯದ ಮತ್ತು ಆಶಯದ ದೀಕ್ಷೆ ಕೊಟ್ಟ ಮುಖ್ಯ ಲೇಖಕರು ನಿರಂಜನ.

## ಅಧ್ಯಾಯ - ೩

# ಕಾದಂಬರಿಗಳು

ನಿರಂಜನರ ಒಟ್ಟೂ ಕಾದಂಬರಿಗಳ ಸಂಖ್ಯೆ ಇಪ್ಪತ್ತೈದು. ಅವುಗಳಲ್ಲಿ ಐತಿಹಾಸಿಕ ಕಾದಂಬರಿ ನಾಲ್ಕು. ಚಿರಸ್ಮರಣೆ (೧೯೫೫) ಮೊದಲನೆಯದು. ಕಲ್ಯಾಣ ಸ್ವಾಮಿ (೧೯೫೬) ಸ್ವಾಮಿ ಅಪರಂಪಾರ (೧೯೬೭) ಮತ್ತು ೧೯೭೫ ರಲ್ಲಿ ಮೃತ್ಯುಂಜಯ.

## ಮೃತ್ಯುಂಜಯ

'ಮೃತ್ಯುಂಜಯ' ನಿರಂಜನರ ಕೊನೆಯ ಕಾದಂಬರಿಯೂ ಹೌದು. ಹಾಗೆಯೇ ಕಾದಂಬರಿ ರಚನೆಯ ಕೌಶಲದಲ್ಲಿ ಅವರು ತಲ್ಪಿದ್ದ ಉಚ್ಛಾಂಕದ ಬಿಂದುವೂ ಹೌದು. ಕಾದಂಬರಿಯ ಕುರಿತು ಕನ್ನಡದ ಖ್ಯಾತ ವಿಮರ್ಶಕರಾಗಿದ್ದ ಡಿ.ಆರ್. ನಾಗರಾಜ ಅವರು ಹೇಳುವ ಮಾತು ಹೀಗಿದೆ. ''ಮೃತ್ಯುಂಜಯ'' ನಿರಂಜನರ ತುಂಬ ಕುತೂಹಲಕಾರಿ ಕೃತಿ. ನಿರಂಜನ ತಮ್ಮ ಬಹುಪಾಲು ಕೃತಿಗಳಲ್ಲಿ ಮನುಷ್ಯ ಜೀವನದ ದಾರಿದ್ರ್ಯದ, ಅಧಃಪತನದ ಮೂಲ ಎಲ್ಲಿ ಎಂದು ಶೋಧಿಸುವುದಕ್ಕೆ ಹೊರಟರು. ಶೋಷಣೆ ಇದಕ್ಕೆ ಉತ್ತರವಾಯಿತು. ಯಾವುದನ್ನು ಸಮಾಜದ ವಿವರಗಳಲ್ಲಿ ಕಾಣುತ್ತ ಬಂದರೋ ಅದು ಒಂದು ಮಹಾನ್ ರೂಪಕವಾಗಿ Socialistic Myth ಆಗಿ ರೂಪು ತಾಳಿತು. ಆದುದರಿಂದ ಕನ್ನಡ ಕಾದಂಬರಿಗಳ ಬಗ್ಗೆ ಚರ್ಚಿಸುವಾಗ ಮೃತ್ಯುಂಜಯ ಮಹತ್ವಪೂರ್ಣವಾಗುತ್ತದೆ. ಅದು ನಿರಂಜನರ ಈವರೆಗಿನ ಎಲ್ಲ ಸೃಜನಶೀಲ ಸಾಮಾಜಿಕ ಕಳಕಳಿಗಳನ್ನು ಮೂರ್ತೀಭವಿಸಿದಂತೆ ಕಾಣುವ ಕೃತಿ. ಸಾಮಾನ್ಯವಾಗಿ ಮಾರ್ಕ್ಸ್‌ವಾದಿ (ಬದ್ಧ) ಲೇಖಕರ ಕುರಿತು ಹೇಳುವ ಮಾತೊಂದುಂಟು, ಸಿದ್ಧಾಂತದ ಮುಂದಾಗಿ ಕಲೆಗಾರಿಕೆ ಹಿಂದಾಗುತ್ತದೆ ಎಂದು. ಆದರೆ ಮೃತ್ಯುಂಜಯ ಆ ಮಾತನ್ನು ಮೀರಿ ನಿಂತ ಕೃತಿ. ತಂತ್ರ, ಭಾಷೆ, ವೈಚಾರಿಕತೆ ಮತ್ತು ಹಾರ್ದಿಕತೆ ಎಲ್ಲವನ್ನೂ ಹದಗೊಳಿಸಿದ ಕಲಾಕೃತಿ. ಆದ್ದರಿಂದ 'ಮೃತ್ಯುಂಜಯ' ನಿರಂಜನರ ಸೃಜನಶೀಲ ಸಿದ್ಧಿಯ ಕೃತಿ. ಉಚ್ಛಾಂಕದ ಕೃತಿ.''

ಮೃತ್ಯುಂಜಯದ ಚರಿತ್ರೆ ಭಾರತ ದೇಶದ್ದಲ್ಲ. ಸುಮಾರು ನಾಲ್ಕೂವರೆ ಸಾವಿರ ವರ್ಷಗಳ ಹಿಂದಿನ ಐಗುಪ್ತ (ಇಜಿಪ್ತ) ದೇಶದ ಚರಿತ್ರೆಗೆ ಸಂಬಂಧಿಸಿದ್ದು. ಐಗುಪ್ತ ದೇಶ ಆ ಕಾಲದಲ್ಲಿ ಜಗತ್ತಿನ ಇತರೆಡೆಯ ದೇಶಗಳಿಗಿಂತ ಹೆಚ್ಚು ಸಂಪತ್ತು ಹೊಂದಿದ್ದ

ದೇಶ. ಭೂ ಮಾಲಿಕರ ಕೆಳಗೆ ಇರುವ ಗುಲಾಮ ಸಮಾಜ. ಆ ಸಮಾಜ ಭೂ ಮಾಲಿಕರ ವಿರುದ್ಧ ನಡೆಸಿದ ಒಂದು ಬಂಡಾಯದ ಐತಿಹಾಸಿಕತೆ ಇಲ್ಲಿಯ ವಸ್ತು.

ಅಲ್ಲಿಯ ಸಂಸ್ಕೃತಿ ವ್ಯವಹಾರ ಬೇರೆ, ಅಲ್ಲಿಯ ಹೆಸರುಗಳು ಸಹ ನಮಗೆ ಅಪರಿಚಿತ. ಹಾಗಿದ್ದರೂ ಕಾದಂಬರಿಯನ್ನು ಓದುತ್ತ ಹೋದಂತೆ ನಾವು ಆ ಪರಿಸರದೊಳಗಿನ ವ್ಯಕ್ತಿಗಳಂತೆಯೇ ಆಗುತ್ತೇವೆ. ಇದು ಅಲ್ಲಿಯ ಕುಶಲತೆ ಮತ್ತು ಲೇಖಕರ ಕಲ್ಪನೆಯ ನೇಯ್ಗೆಯಿಂದ ಸಾಧ್ಯವಾಗುತ್ತದೆ. ನಾಲ್ಕೂವರೆ ಸಾವಿರ ವರ್ಷಗಳ ಹಿಂದಿನ ಸಂಗತಿಗೆ ಜೀವ ಕೊಡುವಲ್ಲಿ ಲೇಖಕರ ಆಶಯವೇನು? ಚರಿತ್ರೆ ಯಾವುದು, ಕಲ್ಪನೆಯ ಸೃಷ್ಟಿ ಯಾವುದು ಎನ್ನುವದರ ಬಗ್ಗೆ ಕೆ.ವಿ. ತಿರುಮಲೇಶರು ಹೇಳುವ ಮಾತು ಕಾದಂಬರಿಯನ್ನು ಅರ್ಥೈಸುವಲ್ಲಿ ನಮಗೆ ಸಹಾಯಕವಾಗುತ್ತದೆ. ಅವರೆನ್ನುತ್ತಾರೆ, ''ಚಾರಿತ್ರಿಕ ಕಾದಂಬರಿ ಚರಿತ್ರೆಯ ಘಟನೆಗಳನ್ನು ಇದ್ದಕ್ಕಿದ್ದಂತೆ ಚಿತ್ರಿಸುವುದಿಲ್ಲ. ಚರಿತ್ರೆ ನಮ್ಮಿಂದ ದೂರ ಸರಿದಷ್ಟೂ ಅಲ್ಲಿ ಕಲ್ಪನೆಗೇ ಪ್ರಾಧಾನ್ಯ ಮತ್ತು ಚರಿತ್ರೆಯ ಸತ್ಯ ಮತ್ತು ಸಾಹಿತ್ಯದ ಸತ್ಯ ಇವೆರಡೂ ಸತ್ಯವೇ ಆಗಿದ್ದರೂ ಇವುಗಳ ರೀತಿಗಳು ಬೇರೆ ಬೇರೆ. ಚರಿತ್ರೆ ಸಂಭವಗಳನ್ನು ಮಾತ್ರ ಚಿತ್ರಿಸಿದರೆ ಸಾಹಿತ್ಯ ಸಂಭವನೀಯಗಳನ್ನು ಚಿತ್ರಿಸುತ್ತದೆ. ಸಂಭವನೀಯದೊಳಗೆ ಸಂಭವವೂ ಸೇರಿರುತ್ತದೆ. ಆದರೆ ಸಂಭವದೊಳಗೆ ಸಂಭವನೀಯವೆಲ್ಲವೂ ಸೇರಿರುವುದಿಲ್ಲ. ಸಂಭವನೀಯ ಜಗತ್ತು ಸಂಭವ ಜಗತ್ತಿಗಿಂತ ಮುಖ್ಯವಾದದ್ದು.'' (ನಿರಂಜನ ಅಭಿನಂದನ ಸಂ: ಬೋಳಂತಕೋಡಿ ಈಶ್ವರಭಟ್ಟ, ೧೯೭೫, ೩೮೮).

ಕಾದಂಬರಿಯ ಪ್ರವೇಶಕ್ಕೆ ಇದಿಷ್ಟು ಮುಖ್ಯ. ಕಾದಂಬರಿ ಶುರುವಾಗುವುದು ನೀರಾನೆ ಪ್ರಾಂತದ ಗುಲಾಮ ಜನರು ಅಬ್ಬುವಿಗೆ ಪ್ರವಾಸ ಹೊರಟಲ್ಲಿಂದ. ಒಟ್ಟೂ ನಲ್ವತ್ತು ಮಂದಿ ಇದ್ದಾರೆ. ''ಮೆನೆಪ್‌ಟಾ ಆ ಯಾತ್ರಿಕರಲ್ಲಿ ಒಬ್ಬ. ಪತ್ನಿ ನೆಫಿಸ್ ಮತ್ತು ಆರು ವರ್ಷದ ಪ್ರಾಯದ ಮಗ ರಾಮೆರಿಪ್‌ಟಾರೊಂದಿಗೆ ಐಗುಪ್ತ ದೇಶದ ಪರಮ ಪುಣ್ಯ ಕ್ಷೇತ್ರವಾದ ಅಬ್ಬುವಿನ ಸಂದರ್ಶನಕ್ಕೆ ಆತ ಹೊರಟಿದ್ದ. ಅವರಿಗೆ ಯಾತ್ರಾನುಭವ ಹೊಸದು. ಅವರಿಗಷ್ಟೇ ಅಲ್ಲ; ಒಬ್ಬಿಬ್ಬರ ಹೊರತಾಗಿ ತಂಡದ ಎಲ್ಲರೂ ಅಬ್ಬುವಿಗೆ ಬರುತ್ತಿದ್ದುದು ಅದು ಮೊದಲ ಬಾರಿ. ಅನುಭವಿ ಯುವಕ ಅಂಬಿಗ ಬಟಾನೇ ಅವರೆಲ್ಲರಿಗೆ ಮಾರ್ಗದರ್ಶಿ.''

ಈ ಪ್ರವಾಸದಲ್ಲಿ ನಮಗೆ ಅಲ್ಲಿಯ ಸಮಾಜ, ಸಂಸ್ಕೃತಿ, ಪುರಾಣ, ರೀತಿ ರಿವಾಜು ಮತ್ತು ನಿತ್ಯ ಜೀವನದ ವ್ಯವಹಾರಗಳ ಪರಿಚಯ ಮಾಡಿಕೊಡುತ್ತಾರೆ. ಹೀಗೆ ನಮ್ಮನ್ನು ನಾಲ್ಕೂವರೆ ಸಾವಿರ ವರ್ಷದ ವಾತಾವರಣದಲ್ಲಿ ಹೊಗಿಸುತ್ತಾರೆ.

ನೀಲನದಿಯಲ್ಲಿ ದೋಣಿ ಸಾಗುತ್ತಿದೆ. ಅಂಬಿಗರು ಹುಟ್ಟು ಹಾಕುತ್ತ ''ಓ ನೀಲ

ಐಸಾ ಓ ಖ್ನೆಮು ಐಸಾ...'' ಎಂದು ಸಾಗುತ್ತಾರೆ. ಅವರು ಅಬ್ಬುವಿನ ದೋಣಿ ಕಟ್ಟೆಯನ್ನು ತಲುಪುತ್ತಾರೆ 'ಅಬ್ಬು ಗುಡ್ಡದ ಕೆಳಗೆ ವಿಸ್ತಾರ ಪ್ರದೇಶದಲ್ಲಿ ಹೊಸ ನಗರವನ್ನು ನಿರ್ಮಿಸಿದಂತಿತ್ತು. ಹಲವು ಹದಿನೆಂಟು ಪ್ರಾಂತಗಳ ಜನಸ್ತೋಮ. ಇಲ್ಲಿ ಜನರ ಸಾಮಾಜಿಕ ಸ್ಥಾನಮಾನಗಳ ಪರಿಚಯ ಕೂಡ ನಮಗೆ ಆಗುತ್ತದೆ.

''ಮೆನೆಪ್‌ಟಾ ಗುಡ್ಡದತ್ತ ನೋಡಿದ. ಅದರ ಮೇಗಣ ಭವ್ಯಮಂದಿರ ಒಸೈರಿಸ್ ದೇವಾಲಯ ಎಂದು ಆತ ಕೇಳಿಬಲ್ಲ. ದಾರಿಯ ಕೊನೆಯ ಏರಿಗೆ ಮುನ್ನ ತಾಳೆ ಮರಗಳ ಒಂದು ಪುಟ್ಟ ತೋಪು ಕಾಣಿಸುತ್ತಿತ್ತು.''

ಆಗ ನಾಣ್ಯಗಳ ಚಲಾವಣೆ ಇದ್ದಿರಲಿಲ್ಲ. ಸರಕು ವಿನಿಮಯ ಪದ್ಧತಿ, ಅಂಗಡಿಗಳಲ್ಲಿ ಬೆಳ್ಳಿಯ ಬಂಗಾರದ ಉಂಗುರಗಳು, ಓಲೆಗಳು, ಹಾರಗಳು, ಮರದ ತೊಗಟೆಯ ಪಾದರಕ್ಷೆ, ಕಂಚಿನ ಚೂರಿ, (ಕಬ್ಬಿಣ ಗೊತ್ತಿಲ್ಲ) ಕವಡೆ ಚಿಪ್ಪುಗಳ ಸರಗಳು ಇತ್ಯಾದಿ. ಯಾತ್ರಿಕರು ತಾವು ತಂದ ಸರಕುಗಳ ಯೋಗ್ಯತೆಗೆ ತಕ್ಕಂತೆ ವಿನಿಮಯ ಮಾಡಿಕೊಂಡು ವಸ್ತುಗಳನ್ನು ಕೊಳ್ಳುತ್ತಿದ್ದರು. ಕಥಾನಾಯಕ ಮೆನೆಪ್‌ಟಾನನ್ನು ನಿರೂಪಕರು ಹೀಗೆ ಪರಿಚಯ ಮಾಡಿಕೊಡುತ್ತಾರೆ.

''ಮೆನೆಪ್‌ಟಾ ಅಂಬಿಗನಿಗೆ ಇಷ್ಟ. ದೃಢಕಾಯನಾದ ಮಿತಭಾಷಿ ಯುವಕ. ನೀಲನದಿಯ ಆಳಕ್ಕೆ ಸಮನಾದ ಗಾಂಭೀರ್ಯ. ಏನು ಕೇಳಿದರೂ ಆರೆಕ್ಷಣ ಯೋಚಿಸಿ, ಮುಗುಳ್ನಗೆ ಸೂಸಿ ಉತ್ತರವೀಯುತ್ತಿದ್ದ ಅವನ ಶಾಂತ ಮುಖ ಮುದ್ರೆ ಉಳಿದೆಲ್ಲವರ ಗಮನ ಸೆಳೆಯುತ್ತಿತ್ತು.''

ಮೆನೆಪ್‌ಟಾ ಕೊಂಡುದು ಲಿಪಿಸುರುಳಿ, ಅವನ ಮಗನಿಗಾಗಿ, ಲಿಪಿ ಸುರುಳಿಯೆಂದರೆ ಓದು ಕಲಿಯುವುದಕ್ಕಾಗಿ ಕೊಳ್ಳುವ ಸುರುಳಿ. ಇದು ಅವನ ವ್ಯಕ್ತಿತ್ವಕ್ಕೆ ತಕ್ಕಂತಿದೆ. ಗುಲಾಮರು ಯಾರೂ ಇನ್ನೂ ಲಿಪಿಸುರುಳಿ (ಅಕ್ಷರ) ಓದಿದವರಿಲ್ಲ. ಅದು ಏನಿದ್ದರೂ ಅರ್ಚಕರಿಗೆ ಸೇರಿದ್ದು, ಅಲ್ಲಿಯೂ ವರ್ಣವಿಭಜನೆ, ಆದರೆ ಅದು ಜಾತಿ ವಿಭಜನೆ ಅಲ್ಲ. ವರ್ಣವೆಂದರೆ ಅಲ್ಲಿ ವರ್ಗ. ಲಿಪಿ ಸುರುಳಿ ಕೊಳ್ಳುವುದು ಒಂದು ಸಂಘರ್ಷದ ಎಳೆ. ಅಲ್ಲಿ ಅನೇಕ ಲಿಪಿ ಸುರುಳಿಗಳಿವೆ. 'ಎಳೆಯರಿಗೆ ಬೆನ್ನಿದೆ. ಅದಕ್ಕೆ ಬಾರಿಸಿದಾಗಲೇ ಅವರು ಪಾಠದತ್ತ ಗಮನ ಹರಿಸುತ್ತಾರೆ. ಯಾಕೆಂದರೆ ಎಳೆಯರ ಕಿವಿ ಇರುವುದು ಅವರ ಬೆನ್ನಿನ ಮೇಲೆ ಎನ್ನುವುದೂ ಒಂದು. ಆದರೆ ಮೆನೆಪ್‌ಟಾ ಆರಿಸಿದ್ದು ನಿನ್ನ 'ತಾಯಿ ನಿನಗೇನು ಮಾಡಿರುವಳೆಂಬುದನ್ನು ನೀನೆಂದೂ ಮರೆಯಬಾರದು...' ಎಂಬುದನ್ನು ಲಿಪಿಕಾರ ''ನಿನ್ನ ಅಭಿರುಚಿಗೆ ಮೆಚ್ಚಿದೆ. ನೀನ್ಯಾಕೆ ಅಕ್ಷರ ಹೀನನಾಗಿ ಉಳಿದೆಯೋ? ಅಕ್ಷರ ಕಲಿತವ ಆಳಬಲ್ಲ - ಗಾದೆ ಕೇಳಿದಿಯಾ?'' ಎನ್ನುತ್ತಾನೆ. ''ನಾವು ದುಡಿಯೋ ಜನ''

ಎನ್ನುತ್ತಾನೆ ಮೆನೆಪ್‌ಟಾ. ಹೀಗೆ ಮೆನೆಪ್‌ಟಾನನ್ನು ಅಲ್ಲಲ್ಲಿ ಕಥಾ ನೇಯ್ಗೆಯಲ್ಲಿ ಪರಿಚಯಿಸುತ್ತ ಬೆಳೆಸುತ್ತಾ ಹೋಗುತ್ತಾನೆ ನಿರೂಪಕ.

ಅಲ್ಲಿ ಭಿಕ್ಷುಕರು, ಕುಷ್ಟ ರೋಗಿಗಳು, ಹುಡುಗರು, ಹಾಗೆಯೇ ಸೈನಿಕರು ವಿವಿಧ ಜನರ ಪರಿಚಯವಾಗುತ್ತದೆ. ಅಲ್ಲಿಯ ರಾಜ ಪೆರೊ. ಆತ ಸೂರ್ಯವಂಶದವ. ಅಂದರೆ ಮೂಲ ಪುರುಷ ಸೂರ್ಯ. ನಮ್ಮಲ್ಲಿ ಶ್ರೀರಾಮ ಸೂರ್ಯವಂಶ, ಕೌರವ-ಪಾಂಡವರು ಚಂದ್ರವಂಶ ಮುಂತಾಗಿ ಇದ್ದ ಹಾಗೆ.

ಪೆರೊ ಬಂಗಾರದ ಪಲ್ಲಕ್ಕಿಯ ಮೇಲೆ ಬರುತ್ತಾನೆ. ಪಲ್ಲಕ್ಕಿ ಹೊರುವವರು ಭೂ ಮಾಲಿಕರು. ಪಲ್ಲಕ್ಕಿ ಹೊರುವ ಅವಕಾಶ ಸಿಕ್ಕುವುದು ಅವರವರ ಭಾಗ್ಯ. ಐಗುಪ್ತ ದೇಶದ ಮಹಾ ಅರ್ಚಕ ಹೇಪಾಟ್. ಸಾಂಪ್ರದಾಯಿಕವಾಗಿ ಆತನದೇ ಕೊನೆಯ ಮಾತು.

ಪ್ರತಿವರ್ಷ ಕೊಯಿಲಿನ ಬಳಿಕ ನಡೆಯುವ ಭಾರೀ ಉತ್ಸವ. ಯಾವ ಆರೈಕೆಯೇ ಇಲ್ಲದೆ ಬೆಳೆಯುತ್ತಿದ್ದ ಗೋಧಿಯನ್ನು ರಾಣಿ ಐಸಿಸ್, ಅರಸ ಒಸೈರಿಸ್‌ಗೆ ತೋರಿಸಿದಳು. ಆತ ಪ್ರಜೆಗಳಿಗೆ ಪರಿಚಯಿಸಿದ. ಅವರು ಕೃಷಿ ಮಾಡಿದರು. ಸತ್ಯ ಸಂಧ ದೊರೆ ದುಷ್ಟ ಸೋದರನಿಂದ ಹತನಾದ. ಮೋಸದ ಕೊಲೆ. ಆಗ ಐಸಿಸ್ ತುಂಬು ಗರ್ಭಿಣಿ. ಆಕೆ ಪತಿಯ ಶವವನ್ನು ಅರಸುತ್ತ ಹೊರಟಳು. ಆತ ಹದಿನಾಲ್ಕು ಹೋಳುಗಳನ್ನು ಮಾಡಿ ದಿಕ್ಕು ದಿಕ್ಕಿಗೆ ಒಗೆದಿದ್ದ. ಅಡಗಿಸಿದ್ದ. ಅದನ್ನು ಅರಸುತ್ತ ರಾಣಿ ಹೊರಟಳು. ಹದಿಮೂರು ಹೋಳು ಸಿಕ್ಕುತ್ತದೆ. ಹದಿನಾಲ್ಕನೆಯ ಹೋಳಿಗಾಗಿ ಹುಡುಕುತ್ತಿದ್ದಾಳೆ ರಾಣಿ ಐಸಿಸ್. ''ಸಾವಿರಾರು ವರ್ಷ ಕಳೆದರೂ ಜನಮನವನ್ನು ಕದಡಿದ ಶೋಕ ಅದು. ಮುಂದೆ ಅನ್ಯಾಯಕ್ಕೆದುರು ಆಕೆಯ ಮಗನೂ ನಡೆಸಿದ ಹೋರಾಟ. ಲೋಕದೆಲ್ಲ ಸಂತ್ರಸ್ತರ ಹೋರಾಟ. ಒಸೈರಿಸ್ ಮೃತ್ಯುವನ್ನು ಜೈಸಿದವ'' ಪ್ರತಿವರ್ಷ, ಪ್ರತಿವರ್ಷದ ಹಬ್ಬದ ಆಚರಣೆ. ಒಸೈರಿಸ್ ದೇವತೆ, ಐಸಿಸ್ ಅವನ ರಾಣಿ. ಇದು ಇಜಿಪ್ತಿಯರ ಪುರಾಣ. ಇಲ್ಲಿ ಐಸಿಸ್ ದೇವತೆಯ ಆರ್ತತೆಯನ್ನು ಲೋಕದ ಎಲ್ಲಾ ಸಂತ್ರಸ್ತರ ಹೋರಾಟದ ರೂಪಕವನ್ನಾಗಿ ಮಾಡಲಾಗಿದೆ. ಇಂದಿಗೂ ಒಸೈಸಿಸ್‌ನ ಹದಿನಾಲ್ಕನೇ ಹೋಳು ಸಿಕ್ಕಲಿಲ್ಲ. ಅದು ಸಿಕ್ಕುವವರೆಗೂ ಹೋರಾಟ, ಸಮಾಜ ವರ್ಗವಾಗಿ ಒಡೆದಿದೆ. ''ಇಲ್ಲಿಯವರೆಗಿನ ಚರಿತ್ರೆಯೆಲ್ಲವೂ ವರ್ಗ ಹೋರಾಟದ ಚರಿತ್ರೆಯೇ ಆಗಿದೆ ಒಮ್ಮೆ ಪ್ರತ್ಯಕ್ಷವಾಗಿ ಒಮ್ಮೆ ಆಂತರಿಕವಾಗಿ ವರ್ಗ ರಹಿತ ಸಮಾಜ ನಿರ್ಮಾಣವಾಗುವವರೆಗೂ ಹೀಗೆ' ಇದು ಮಾರ್ಕ್ಸ್‌ವಾದಿ ವೈಚಾರಿಕತೆ.

ಜಾತ್ರೆಯನ್ನು ಮುಗಿಸಿಕೊಂಡು ಸಂತೃಪ್ತಿಯಿಂದ ಪ್ರವಾಸಿಗರು ಹಿಂದಕ್ಕೆ ತಮ್ಮ

ಪ್ರಾಂತಕ್ಕೆ ಬರುತ್ತಾರೆ. ಆದರೆ ಅವರ ಸಂತೋಷ ಬಹಳ ಹೊತ್ತು ಇರುವಂತಿರಲಿಲ್ಲ. ಅಷ್ಟು ಹೊತ್ತಿಗೆ ರಾಜಧಾನಿ ಮೆಂಫಿಸ್‌ನಿಂದ ಕಂದಾಯ ಅಧಿಕಾರಿಗಳು ಬಂದಿದ್ದರು!

''ದೋಣಿ ಕಟ್ಟೆಯಿಂದ ಕೂಗಳತೆಯ ದೂರದಲ್ಲಿ ತುಸು ಎತ್ತರದಲ್ಲಿ ನದಿಗೆ ಸಮಾನಾಂತರವಾಗಿ ಊರಿನ ಮುಖ್ಯ ಬೀದಿ. ಬೀದಿಯ ಎರಡು ಬದಿಗಳಲ್ಲಿ ಕುಶಲಕರ್ಮಿಗಳ, ಕೆಲ ರೈತರ ಮಣ್ಣಿನ ವಸತಿಗಳು. ಆ ಸಾಲುಗಳ ಹಿಂಬದಿಯಲ್ಲಿ ಬಡರೈತರ ಮಣ್ಣು ಮನೆಗಳು. ಇವು ವಿರಳವಾದಂತೆ ಅಲ್ಲೊಂದು ಇಲ್ಲೊಂದು ಗುಡಿಸಲು, ಪಶ್ಚಿಮದಲ್ಲಿ ಮತ್ತು ಮುಂದಕ್ಕೆ ಎತ್ತರದಲ್ಲಿ ದೇವಮಂದಿರ. ಅದನ್ನು ದಾಟಿ ಹೋದರೆ ಗೋರಿ ಪ್ರದೇಶ. ಮುಖ್ಯ ಬೀದಿ ಮುಗಿಯಿತು ಎನ್ನುವ ಕಡೆ ವಿಶಾಲ ಬಯಲಿನಲ್ಲಿ ಶ್ರೀಮಂತರ ಮಹಡಿ ಮನೆಗಳು, ಅವುಗಳ ನಡುವೆ ರಾಜಗೃಹ. ಅದು ಪೆರೋ (ರಾಜ)ನ ಪ್ರತಿನಿಧಿಯ ಪ್ರಾಂತಪಾಲನ ಅಧಿಕಾರ ಪೀಠ, ವಸತಿ ಕೂಡಾ''

ಕಂದಾಯಾಧಿಕಾರಿ ಮತ್ತು ಪ್ರಾಂತಪಾಲರು ಅಲ್ಲಿ ತಂಗಿದ್ದಾರೆ. ಬೆಳಗಾದರೆ ಕಂದಾಯ ವಸೂಲಿಗೆ ಬರುತ್ತಾರೆಂದು ಜನಕ್ಕೆ ತಿಳಿಯಿತು. ಅವರಿಗೆ ಒಂದು ಮನವಿ ಕೊಡಬೇಕೆಂದು ನಿರ್ಣಯಿಸಿರುತ್ತಾರೆ. ಆ ಸುದ್ದಿ ಗೂಢಾಚಾರರ ಮೂಲಕ ಕಂದಾಯ ಅಧಿಕಾರಿಗಳಿಗೆ ತಿಳಿಯುತ್ತದೆ. ಇದರಿಂದ ಆತ ಕ್ರುದ್ಧನಾಗುತ್ತಾನೆ. ಮುಂಜಾನೆ ರೈತರ ಅಹವಾಲು ಸ್ವೀಕರಿಸಲು ಸಿದ್ಧವಾಗಿ ಕೂಡ್ರುತ್ತಾರೆ. ರೈತರು ಮೆನೆಪ್‌ಟಾನನ್ನು ಮುಂದಿಟ್ಟುಕೊಂಡು ಹೋಗುತ್ತಾರೆ. ಅವರಿಗೆ ಉಪದೇಶಿಸಲಾಗುತ್ತದೆ. ''ಈ ಎಲ್ಲ ಸಾಧನೆಗೆ ಸಂಪತ್ತಿಗೆ ಐಶ್ವರ್ಯಕ್ಕೆ ಪೆರೋ (ರಾಜ) ಹೊಣೆ. ಆತ ಭೂಪತಿ. ಐಗುಪ್ತದ ಎಲ್ಲ ನೆಲಕ್ಕೆ ಆತ ಒಡೆಯ. ನೀಲ ನದಿಯ ಏರಿಳಿತಕ್ಕೆ ಹೊಲದ ಫಸಲಿಗೆ ಪ್ರಜೆಗಳ ಆರೋಗ್ಯಕ್ಕೆ ಅವನು ಹೊಣೆಗಾರ. ಪೆರೋ ವೈರಿ ಕುಠಾರ. ಅವನ ಸೈನ್ಯ ಆಕ್ರಮಣಕಾರರನ್ನು ಸದೆಬಡಿಯುತ್ತದೆ.

''ಅರಮನೆ ವೆಚ್ಚಕ್ಕೆ ಅಪಾರ ಧನಕನಕ ಬೇಕು. ಅದು ಬರೋದು ಪ್ರಜೆಗಳು ನೀಡೋ ಕಂದಾಯದಿಂದ, ತೆರಿಗೆಯಿಂದ ಹಾಗೆಯೇ ನಮ್ಮ ದೇವ ದೇವತೆಯರು...''

ಮೆನೆಪ್‌ಟಾ ಶಾಂತವಾಗಿದ್ದರೂ, ಆಲೋಚಿಸಿದ್ದರೂ ಎದೆ ಡವಡವ ಎನ್ನುತ್ತಿತ್ತು. ಆತ ಮುಗುಳ್ನಕ್ಕು ಮಾತು ಶುರುಮಾಡಿದ. ಚುಟುಕಾಗಿ ಹೇಳಲು ಅಪ್ಪಣೆಯಾಯಿತು. ''ಕುರುಡು ಹಕ್ಕಿಗೆ ನೋಡೋ ಆಸೆ, ಹಾರೋ ಆಸೆ, ಮಹಾಶಯ ತಲೆ ತಲಾಂತರಗಳ ಗೋಳಿನ ಕಥೆ ತೀರಾ ಚುಟುಕಾಗಿ ಹೇಳೋದು ಹ್ಯಾಗೆ....''

''ದಾಖಲೆಯಾದ ಹಾಗೆ ಕಳೆದ ವರ್ಷ 'ಒಳ್ಳೆಯ ನೀಲ' ಆದರೆ ಏನಾಯ್ತು? ಹಗ್ಗ ಎಳೆವವರು ಎಳೆದರು. ಮೋಜಣಿದಾರರು ನೆಲ ಅಳೆದರು. ನಾಲೆಗಳ ದುರಸ್ತಿ ಮಾತ್ರ ಆಗಲಿಲ್ಲ. ಕೆರೆಗಳ ಹೂಳು ತೆಗೆದು ನೀರು ಸಂಗ್ರಹಿಸುವ ಕೆಲಸ ನಡೀಲಿಲ್ಲ. ಇದು ಬಡ

ಪ್ರಜೆಗಳಿಂದ ಆಗುವಂತಹದೋ ಆಳುವವರಲ್ಲವೇ ಮಾಡಬೇಕಾದ್ದು? ನಮ್ಮ ಕಷ್ಟ ಮುದಿ ಹೋರಿಗೆ ಬದಲು ಹೊಸ ಹೋರಿ ಬೇಕು. ನೇಗಿಲಿಗೆ ಬೇರೆ ಮೊನೆ ಹಾಕ್ಬೇಕು. ಧಾನ್ಯ ಬೇಡವಾ? ಇನ್ನು ಇಲಿ, ಹೆಗ್ಗಣ, ಕಾಡು ಹಂದಿ, ಹುಳ ಹುಪ್ಪಟೆ, ಮಿಡಿತೆ, ಹಕ್ಕಿಗಳ ಕಾಟದ ವಿಷಯ ಎಷ್ಟು ಹೇಳಿದರೂ ಒಂದೇ. ಕಳ್ಳರೂ ಬರ್‍ತಾರೆ. ರಾಜ ಕಣಜಕ್ಕೆ ಹಿಂದೆ ಹತ್ತರಲ್ಲಿ ಒಂದಂಶ ಸಲ್ಲಿಸ್ತಿದ್ವಿ. ಈಗ ಕಂದಾಯ ಇಮ್ಮಡಿಯಾಗಿದೆ. ಹತ್ತರಲ್ಲಿ ಒಂದಂಶ ದೇವಮಂದಿರಕ್ಕೂ ಸಲ್ಲಬೇಕಾಗಿದೆ. ಕೈಯಲ್ಲಿದ್ದ ಚೂರುಪಾರು ಕಾಳು ಮುಗಿದಾಗ ನಾವು ಏನನ್ನು ತಿನ್ಬೇಕು? ಆಗ ಪೆಪ್ಪೈರಸ್ ದಂಟಿನ ಬುಡಭಾಗವೇ ನಮ್ಮ ಆಹಾರ...."

ನಿಮಗೆ ಕೆಲಸ ಕೊಡೋದಿಲ್ಲವಾ ಎಂದು ಅಧಿಕಾರಿಗಳು ಕೇಳುತ್ತಾರೆ. ಮೆನೆಪ್‌ಟಾ ಮುಂದುವರಿಸಿರುತ್ತಾನೆ.

"ಅಸಂಖ್ಯ ಗುಂಪುಗಳಾಗಿ ನಾವು ದುಡಿದಿದ್ದೇವೆ. ಕೋಲು ಹಿಡಿದ ಕಾಫೀರು ಕೈಯಲ್ಲಿ ಬಯ್ಗುಳ ತಿಂದಿದ್ದೇವೆ. ದಿನಗೆಲಸಕ್ಕೆ ಪ್ರತಿಫಲವಾಗಿ ನೀವು ಕೊಡಬೇಕಾದದ್ದು ರೊಟ್ಟಿ, ಯುವೆಸುಕಿ, ಈರುಳ್ಳಿ, ಒಣಮಾಂಸ, ಹುದುಗುಪುಡಿ, ಉಪ್ಪು. ಆದರೆ ವಾಸ್ತವವಾಗಿ ನಮಗೆ ಸಿಗೋದು ಏನಿರ್‍ತದೋ ಅದು ಹೊಟ್ಟೆಗೇನಾದರೂ ಹಾಕ್ತೀರಿ. ಶಕ್ತಿ ಬೇಕು ಕಲ್ಲಿನ ಕೆಲಸಕ್ಕೆ? ಕಾಲಕಾಲಕ್ಕೆ ಹರಳೆಣ್ಣೆಯನ್ನು ಕೊಡ್ತೀರಿ ನಮ್ಮ ಆರೋಗ್ಯ ಸರಿಯಾಗಿರಲಿ ಅಂತ"

ಆಡಳಿತದಾರರು ಸಿಟ್ಟಿಗೆದ್ದರು. ಸೈನಿಕರು ಮುತ್ತಿಗೆ ಹಾಕಿದರು. "ಅಂಗಳದಲ್ಲಿದ್ದ ನೂರಾರು ಕಂಠಗಳಿಂದ ಏಕಕಾಲದಲ್ಲಿ ಆರ್ತನಾದ ಹೊರಟಿತು. ನೀರಾವೆಯ ತೊಗಲಿನ ಚಾವಟಿ ಸುಂಯ್ ಽಽಗುಟ್ಟಿತು. ಮತ್ತೆ ಮತ್ತೆ ಮೆನೆಪ್‌ಟಾನ ಶರೀರದ ಸುತ್ತ ಅದು ಹಾರವಾಯಿತು." ಮೆನೆಪ್‌ಟಾ ಬಂಧನದಲ್ಲಿಟ್ಟು ಕಂದಾಯ ವಸೂಲಿ ಮಾಡಬೇಕೆಂದು ನಿರ್ಧರಿಸಿದರು.

ಇಪ್ಯುವರ್ ಸ್ಥಾನಿಕ ಲಿಪಿಕಾರ ಕೂಡ. ಪೂಜಾರಿ ವರ್ಗಕ್ಕೇ ಸೇರಿದವ. ಆದರೆ ಆತ ಬಡವ. ಆ ದೃಷ್ಟಿಯಿಂದ ಆತನದು ರೈತರ ವರ್ಗಕ್ಕೇ ಸಮಾನ. ಅವನಿಗೂ ಮೆನೆಪ್‌ಟಾನ ಕುರಿತು ಅಭಿಮಾನ. "ಅಸಾಧಾರಣ ಮನುಷ್ಯ ಮೆನೆಪ್‌ಟಾ. ಗೊತ್ತೇ ಇರಲಿಲ್ಲ. ಹೊಡೆದಾಗಲೂ, ಬಿಗಿದು ಕಟ್ಟಿದಾಗಲೂ ಮಿಸುಕಾಡಲಿಲ್ಲ. ಅದ್ಭುತ!" ಎಂದುಕೊಳ್ಳುತ್ತಾನೆ. ಹಸಿದ ಮೆನೆಪ್‌ಟಾಗೆ ಹುಗ್ಗಿಸಿ ಆಹಾರವನ್ನು ಕೊಡುತ್ತಾನೆ. ಬುದ್ಧಿಜೀವಿಗಳಾದರೂ ಸಣ್ಣಪುಟ್ಟ ನೌಕರರು ಬಡವರ್ಗದ ಕುರಿತು ಸಹಾನುಭೂತಿ ಉಳ್ಳವರಾಗಿದ್ದಾರೆ. ಅವರು ಕೊನೆಗೆ ಕೂಡಿಕೊಳ್ಳುವುದು ಶೋಷಿತ ವರ್ಗದೊಡನೆಯೇ.

ರಾತ್ರಿ ಊರಿನ ಜನ ಕೂಡುತ್ತಾರೆ. ಮೆನೆಪ್‌ಟಾನನ್ನು ಬಂಧಿಸಿಟ್ಟ ರಾಜಗೃಹದ ಮೇಲೆ ದಾಳಿ ಮಾಡುತ್ತಾರೆ. ಅಧಿಕಾರಿಗಳ ಸೈನಿಕರಿಗೂ ರೈತರಿಗೂ ಹೊಡೆದಾಟವಾಗುತ್ತದೆ. ಓ ಮೆನೆಪ್‌ಟಾ ಎಂದು ಜಯಘೋಷ ಮಾಡಿದರು. ಲಿಪಿಕಾರ ಇಪ್ಯುವರ್ ಕೂಡ ಜಯಘೋಷ ಕೂಗಿದ ಮೆನೆಪ್‌ಟಾನ ಬಂಧನದಿಂದ ಬಿಡಿಸಿದರು. ಅಧಿಕಾರಿಗಳು ಕದ್ದು ಬಿದ್ದು ಓಡಿ ಹೋದರು. ನೇಕಾರ ಅನ್ಸು ಸಾಯುತ್ತಾನೆ.

''ಇನ್ನು ನೀರಾನೆ ಪ್ರಾಂತಕ್ಕೆ ಯಾರೂ ಬೇಡ; ಮೆನೆಪ್‌ಟಾ ಅಣ್ಣ ತಮ್ಮ ನಾಯಕ, ಅವರೇ ಪ್ರಾಂತಪಾಲ, ಅವರೇ ಅಧಿಕಾರಿ. ನಮ್ಮನ್ನು ನಾವೇ ಆಳೋಣ'' ಎಂದು ನಿರ್ಣಯಿಸಿದರು.

ಮೆನೆಪ್‌ಟಾ ಅನ್ಸುವಿನ ಅಂತ್ಯಕ್ರಿಯೆಯನ್ನು ಅಲ್ಲಿಯ ಜಮೀನುದಾರರು ಮತ್ತು ಅರ್ಚಕ ವರ್ಗದವರು ಸತ್ತಾಗ ನಡೆಯುವಂತೆ ನಡೆಸುತ್ತಾನೆ. ಬೆಳಕಿನ ಆಗಮನದ ಪುಸ್ತಕ ಒದಗಿಸುವುದು. ಶವಕ್ಕೆ ತೈಲ ಲೇಪನ, ಗೋರಿಯಲ್ಲಿ ಶವ ಹೂಳುವಿಕೆ ಇತ್ಯಾದಿ. ಇದು ಒಂದು ಅಸಾಧಾರಣ ಘಟನೆ. ಈ ಹಿಂದೆ ರೈತರಿಗೆ ಇಂತಹದ್ದು ಆದುದಿಲ್ಲ. ಇದೊಂದು ಸಂಸ್ಕೃತೀಕರಣದ ಹಾಗೆ.

ಸ್ವತಃ ಲೇಖಕರಿಗೆ ಈ ದೈವಿಕ ಕ್ರಿಯೆಯಲ್ಲಿ ನಂಬಿಕೆ ಇರಲಿಕ್ಕಿಲ್ಲ. ಆದರೆ ನಿರೂಪಕ ಕಾಲದ ಮಿತಿಯನ್ನು ಮೀರುವುದಿಲ್ಲ. ಅಂಥಲ್ಲಿ ಸಮಾಜ ಚಲನೆಯೆಂದರೆ ದತ್ತ ಸನ್ನಿವೇಶದಲ್ಲಿ. ಅದು ಆ ರೀತಿ ದೈವ ಭಕ್ತಿಯ ಸಂದರ್ಭ. ರೈತರು ದಾಳಿ ಮಾಡುವ ಮೊದಲು ಅಂದುಕೊಳ್ಳುತ್ತಾರೆ. ''ನಮ್ಮದು ದೇವರ ಪಕ್ಷ! ನಮಗೆ ಜಯ! ನಮಗೆ ಸೋಲಿಲ್ಲ.''

ಈಗ ಮೆನೆಪ್‌ಟಾನ ಮುಂದಾಳ್ತನದಲ್ಲಿ ಅವರೇ ಆಡಳಿತ ವ್ಯವಸ್ಥೆ ಮಾಡಿಕೊಳ್ತಾರೆ. ಲಿಪಿಕಾರನಾಗಿ ಇಪ್ಯುವರ್ ಇರುತ್ತಾನೆ. ಆತನ ರೈತ ಮಕ್ಕಳಿಗೆ ಮುಂದೆ ಅಕ್ಷರವನ್ನು ಕಲಿಸುತ್ತಾನೆ. ಮೆನೆಪ್‌ಟಾ ಹೇಳುತ್ತಾನೆ. ಹೊಸ ವ್ಯವಸ್ಥೆಯಲ್ಲಿ ದಾಸ ದಾಸಿಯರಿಲ್ಲ. ಎಲ್ಲರು ಮುಕ್ತರು. ವಿಮುಕ್ತ ದುಡಿಮೆಗಾರರು. ರಾಜಗೃಹದ ಉದ್ಯೋಗಿಗಳಿಗೆ ಮುಂದೆಯೂ ಕೆಲಸವಿದೆ. ಆದರೆ ಭೋಜನ ಮಂದಿರದ ದಾಸಿಯರ ಅಗತ್ಯವಿಲ್ಲ. ಅವರು ಸ್ವತಂತ್ರರು, ಭೂಕಂದಾಯ ಅರ್ಧ ಇಳಿದದ್ದರಿಂದ ರೈತರ ಕೈಯಲ್ಲಿ ಧಾನ್ಯ ಶಿಲ್ಕು ಉಳಿಯಿತು. ಇದರಿಂದ ಅವರು ಬೇರೆ ಬೇರೆ ವಸ್ತು ಕೊಂಡು ಕೊಂಡರು. ಬೇಡಿಕೆಯಿಂದ ಕೈಗಾರಿಕೆ ಬೆಳೆಯಿತು. ಉದ್ಯೋಗ ಹೆಚ್ಚಾಯಿತು. ಜನರ ಅಭಿರುಚಿ ಬೆಳೆಯಿತು. ಇಂಥ ಒಂದು ಆದರ್ಶ ರಾಜ್ಯದ ಚಿತ್ರಣವನ್ನು ಇಲ್ಲಿ ಕೊಡುತ್ತಾರೆ. ಇಲ್ಲಿ ಬಿಟ್ಟಿ ದುಡಿಮೆ ಇರುವುದಿಲ್ಲ. ಒತ್ತಾಯದ ಕರಕಂದಾಯ ಇರುವುದಿಲ್ಲ. ಇಂಥ ಒಂದು

ಆಡಳಿತದ ವಿರುದ್ಧ ಭೂ ಮಾಲಿಕರು, ಅರ್ಚಕರು ಕೂಡಿಯೇ ಹುನ್ನಾರು ನಡೆಸುವುದು ವರ್ಗ ಸ್ವಭಾವ. ಅಂಥ ಘಟನೆ ಮುಂದೆ ನಡೆಯುತ್ತದೆ.

ಕೆಪ್ಟು ನೀರಿನ ಮೇಲಿನ ದೊಡ್ಡ ವ್ಯಾಪಾರಿ. ಅವನ ಹಡಗು ಭಾರತದ ಪಶ್ಚಿಮ ತೀರಕ್ಕೂ ಬಂದುದುಂಟು. ಶಸ್ತ್ರಾಸ್ತ್ರದಿಂದ ಹಿಡಿದು ಚಿನ್ನ, ಬೆಳ್ಳಿ ಇತರ ಕೈಗಾರಿಕಾ ಸರಕುಗಳ ವ್ಯಾಪಾರ ವಿನಿಮಯ ಅವನದು. ಇದರಿಂದಾಗಿ ನೀರಾನೆ ಪ್ರಾಂತದ ಬಂಡಾಯದ ನಂತರದ ಪ್ರಗತಿ ಬದಲಾದ ಜನಜೀವನದ ಪರಿಚಯ ರಾಜಧಾನಿಗೂ ಇತರೆಡೆಗೂ ತಲುಪುತ್ತದೆ. ಬಂಡಾಯದ ನಾಯಕ ಮೆನೆಪ್‌ಟಾನ ವ್ಯಕ್ತಿ ಪರಿಚಯ ರಾಜಧಾನಿಗೆ ಆಗುತ್ತದೆ. ಆಗಲೇ ಓಡಿ ಹೋದ ಭೂಮಾಲಿಕರು, ಅಲ್ಲಿದ್ದ ಹಿರಿಯ ಅರ್ಚಕರು ಒಳಗೊಳಗೇ ಮೆನೆಪ್‌ಟಾನ ವಿರುದ್ಧ ಮಸಲತ್ತು ನಡೆಸುತ್ತಾರೆ. ರಾಜನಿಗೂ ಕೈಬಿಟ್ಟು ಹೋದ ನೀರಾನೆ ಪ್ರಾಂತವನ್ನು ಕೂಡಿಕೊಳ್ಳುವ ತವಕ. ಇವೆಲ್ಲದರ ಪರಿಣಾಮವಾಗಿ ರಾಜಧಾನಿಯಲ್ಲಿ ನಡೆಯುವ ಸೆಡ್ ಉತ್ಸವಕ್ಕೆ ಮೆನೆಪ್‌ಟಾಗೆ ರಾಜನಿಂದ ಆಮಂತ್ರಣ ಬರುತ್ತದೆ.

ಸೆಡ್ ಉತ್ಸವವೆಂಬುದು ವಯಸ್ಸಾಗುತ್ತಿರುವ ರಾಜ ಪೆರೋಪೇಪಿಗೆ ಮರುತಾರುಣ್ಯ ತರಿಸುವ ಆಚರಣೆ. ರಾಜ್ಯಕ್ಕೆ ಸೇರಿದ ಎಲ್ಲ ಮುಖ್ಯ ಭೂ ಮಾಲಿಕರೂ ಪ್ರಾಂತಪಾಲರೂ ಅಲ್ಲಿ ಸೇರುತ್ತಾರೆ. ಅವರ ಮಧ್ಯೆ ಮೆನೆಪ್‌ಟಾನಿಗೂ ಸ್ಥಾನವಿರುತ್ತದೆ.

ಮೆನೆಪ್‌ಟಾ ರಾಜಧಾನಿಗೆ ಹೋಗುತ್ತಾನೆ. ಅಲ್ಲಿ ಮೊದಲು ಸ್ವಾಗತಿಸುವವನೇ ಬಂಡಾಯದಲ್ಲಿ ಊರು ಬಿಟ್ಟು ಓಡಿಹೋದ ಹಳೆಯ ಪ್ರಾಂತಪಾಲ ಗೇಬು ಎಂಬಾತ. ಆತನಿಂದ ರಾಜಧಾನಿಯ ವ್ಯವಸ್ಥಿತ ಪರಿಚಯ ಮೆನೆಪ್‌ಟಾನಿಗೆ ಆಗುತ್ತದೆ.

''ಹೇಳ್ತಿನೆ ನನಗೇನಂತೆ? ಅಮಾತ್ಯರಿಗೆ ವಯಸ್ಸಾಯ್ತು. ಆಡಳಿತದ ಮೇಲಿನ ಬರಸಿಡಿಲಾಗಿದೆ ಅಂತ ಟೆಹುಟಿಯ ದೂರು. ಅಮೆಬ್‌ರನ್ನು ಮನೆಗೆ ಕಳುಹಿಸಿ ತಾನೇ ಅಮಾತ್ಯನಾಗಬೇಕು ಅನ್ನೋ ಆಸೆ ಅವನಿಗೆ, ಆಗಲೇ ಗುಟ್ಟಾಗಿ ಮಹಾ ಅರ್ಚಕರ ಪಕ್ಷ ವಹಿಸಿದ್ದಾನೆ. ಚಾಣಾಕ್ಷ ಅಮೆಬ್‌ಗೆ ಇದೆಲ್ಲ ತಿಳಿಯದ್ದಲ್ಲ. ಉತ್ತರದ ಪ್ರಾಂತಗಳಲ್ಲಿ ಗಣತಿ ಕೆಲಸ ಕೊಟ್ಟು ಟಿಹುಟಿಯನ್ನು ಕಳುಹಿಸಿಬಿಟ್ಟಿದ್ದಾರೆ. ಸೆಡ್ ಉತ್ಸವಕ್ಕೆ ಅಂತ ನೀವೇನೋ ಬಂದಿದ್ದೀರಿ. ಆದರೆ ಉತ್ಸವಕ್ಕೆ ಇನ್ನೂ ದಿನ ಗೊತ್ತಾಗಿಲ್ಲ. ಮಹಾ ಅರ್ಚಕರೇ ರಾಜಧಾನಿಯಲ್ಲಿಲ್ಲ, ಅನ್‌ನಲ್ಲಿ ವಸತಿ ಮಾಡಿದ್ದಾರೆ. ಹಲವಾರು ಮುಖ್ಯ ದೇವ ಸೇವಕರನ್ನು ಅಲ್ಲಿಗೆ ಕರೆಸಿದ್ದಾರಂತೆ ಧಾರ್ಮಿಕ ಜಿಜ್ಞಾಸೆಯಂತೆ'' ಎಂದು ಗೇಬು ಹೇಳುತ್ತಾನೆ.

ಇಲ್ಲಿಯ ರಾಜಕಾರಣದ ಸ್ಥಿತಿ ಗೊಂದಲದಿಂದ, ಈರ್ಷೆಯಿಂದ ಕೂಡಿದ್ದೆಂಬ ಮೊದಲ ಅರಿವು ಮೆನೆಪ್‌ಟಾನಿಗೆ ಆಗುತ್ತದೆ. ಇದು ನೀರಾಸೆ ಪ್ರಾಂತದ ಬಂಡಾಯದ

ನಂತರದ, ಮೆನೆಪ್‌ಟಾನೆ ಮುಖ್ಯಸ್ಥನಾಗಿರುವ ವ್ಯವಸ್ಥೆಯ ಸರಳ ಮತ್ತು ಸಮಾನತೆಯ ವ್ಯವಸ್ಥೆಗೆ ವೈದೃಶ್ಯವಾಗಿದೆ. ಇದು ಸ್ವಾರ್ಥಪೂರ್ಣವಾದ ಹಿತಾಸಕ್ತ ರಾಜಕಾರಣವಾಗಿದೆ ಎಂಬುದರ ಪರಿಚಯ ಮಾಡುತ್ತಾನೆ. ಇಂಥ ಪರಿಚಯವೆಲ್ಲ ಕಾದಂಬರಿಯ ನೇಯ್ಗೆಯ ಹಾಸುಹೊಕ್ಕಾಗಿ ಸೇರಿಹೋಗುವುದರಿಂದ ತಂತ್ರಕ್ಕೊಂದು ವಿಶಿಷ್ಟವಾದ ಶಕ್ತಿ ಪ್ರಾಪ್ತವಾಗಿದೆ.

ಮೆನೆಪ್‌ಟಾ ಮತ್ತು ಅವನ ನಾಲ್ವರು ಹಿಂಬಾಲಕರಿಗೆ ರಾಜಧಾನಿಯಲ್ಲಿ ಪ್ರತ್ಯೇಕ ಏರ್ಪಾಡಾಗುತ್ತದೆ. ಆದರೆ ಅವರಿಗೆ ಗೊತ್ತಿರದ ಹಾಗೆ ಬಿಗಿ ಕಾವಲು ಇರುತ್ತದೆ. ಈ ಮಧ್ಯೆಯೇ ಮೆನ್ನ ಎಂಬ ಇನ್ನೊಂದು ಪಾತ್ರದ ಪರಿಚಯವಾಗುತ್ತದೆ. ಈತ ಕಿರಿಯ ಅರ್ಚಕರಲ್ಲಿ ಒಬ್ಬ. ಆದರೆ ಅರ್ಚಕ ವ್ಯವಸ್ಥೆಗೆ ಬೇಸತ್ತು ಬಂಡಾಯವೆದ್ದವ. ಆದರೆ ಅವನನ್ನು ಸ್ಥಾನಾಂತರಗೊಳಿಸಿ ಶಿಕ್ಷೆಗೆ ಒಳಪಡಿಸಿ ಹೀನೈಸಲಾಗಿದೆ. ಈಗ ಆತ ವಿಕ್ಷಿಪ್ತ ವ್ಯಕ್ತಿ. 'ಹುಚ್ಚಮೆನ್ನಯ್ಯ' ಎಂದೇ ಪರಿಚಿತನಾಗಿದ್ದಾನೆ. ಆತನಿಗೆ ಮೆನೆಪ್‌ಟಾನ ಸಂಪರ್ಕ ಬರುತ್ತದೆ. ಮೆನೆಪ್‌ಟಾನನ್ನು ಕಂಡು ಮೆನ್ನನಿಗೆ ತುಂಬ ಸಂತೋಷವಾಗುತ್ತದೆ. ಆಗ ರಾಜಧಾನಿಯ ಮತ್ತು ಪುರೋಹಿತರ ಅನೀತಿ ವ್ಯವಹಾರಗಳನ್ನು ಖಂಡಿಸಿ ಮಾತನಾಡುತ್ತಾನೆ. ''ದೇವ ಮಂದಿರದಲ್ಲಿ ತಿಂದು ತೇಗಿ ಸೋಮಾರಿಯಾಗಿ ಬಿದ್ದಿರುವ ಬೆಕ್ಕು. ಅದು ಸತ್ತಮೇಲೆ ಅದರ ಲೇಪಿತ ಶವವನ್ನು ಕಾಪಾಡೋದು, ಹೋರಸ್‌ನ ಅವತಾರ ಅಂತ ಗೂಳಿಗಳನ್ನು ಮಂದಿರಗಳಲ್ಲಿ ಸಾಕೋದು, ಮೇಕೆಗಳನ್ನು ಬೆಳೆಸೋದು, ಸುಂದರ ಸ್ತ್ರೀಯರನ್ನು ತಂದು ಸಂಭೋಗಕ್ಕಾಗಿ ಈ ಪ್ರಾಣಿಗಳ ಜತೆ ಬಿಡೋದು, ಇದು ಯಾವ ನಾಗರಿಕತೆ. ಇದರ ಬಗ್ಗೆ ಪೆರೋ ಅಹಮೋಸ್ ಏನು ಹೇಳಿದನೊ? ಇಂಥ ಪದ್ಧತಿ ನಿಲ್ಲೋವರೆಗೂ ಮನುಷ್ಯ ಎಷ್ಟು ಲಿಪಿಸುರುಳಿ ಓದಿದರೆ ಏನು ಪ್ರಯೋಜನ? ಎಷ್ಟು ಬಾರಿ ಸ್ನಾನ ಮಾಡಿದರೇನು? ಎಷ್ಟು ಬಾರಿ ಸುಗಂಧ ದ್ರವ್ಯ ಪೂಸಿಕೊಂಡರೇನು ಲಾಭ?'' ಎನ್ನುತ್ತಾನೆ.

ಅಲ್ಲಿ ಮೆನ್ನನ ವೈಚಾರಿಕತೆ ಮೆನೆಪ್‌ಟಾಗೆ ಲಭಿಸುತ್ತದೆ. ಮೆನ್ನ ಸುಧಾರಣಾವಾದಿ ಹಾಗೂ ಅವನ ಮಾನವೀಯ ಗುಣ ದೊಡ್ಡದು. ಶಾಸ್ತ್ರ ಪುರಾಣಗಳನ್ನು ಆತ ಇದ್ದಕ್ಕಿದ್ದಂತೆ ಒಪ್ಪುವವನಲ್ಲ. ಅವನ ದೃಷ್ಟಿಯಲ್ಲಿ ಅನೇಕ ಹಿತಾಸಕ್ತಿಗಳು ಕೆಲಸ ಮಾಡಿವೆ ಎಂಬ ಸುಧಾರಣಾವಾದಿ. ಶಾಸ್ತ್ರವಿರಲಿ, ಪುರಾಣವಿರಲಿ ಅದರ ಅಂತಿಮ ಪರೀಕ್ಷೆ ಮಾನವೀಯತೆಯ ಒರೆಗಲ್ಲಿನ ಮೇಲೆ, ಎಂಬುದು ಅವನ ಅಭಿಪ್ರಾಯ. ಇದರಲ್ಲಿ ಲೇಖಕರ ಅಭಿಪ್ರಾಯ ಸೇರಿಕೊಂಡಿದೆ ಎಂಬುದನ್ನು ಬೇರೆ ಹೇಳಬೇಕಿಲ್ಲ. ಹೋರೆಸ್ ದೇವರ ಅವತಾರ ಎಂದು ಬೆಳೆಸುವ ಗೂಳಿಗೆ ಸುಂದರ ಸ್ತ್ರೀಯರನ್ನು ಸಂಭೋಗಕ್ಕಾಗಿ

ಹೋರಿ ಬಿಡುವ ಸಂಗತಿ, ನಮ್ಮಲ್ಲಿ ಅಶ್ವಮೇಧ ಯಜ್ಞದಲ್ಲಿ ರಾಣಿಯೊಡನೆ ಅಶ್ವದ ಸಂಭೋಗ ನಡೆಸುತ್ತಿದ್ದರು ಎಂದು ಹೇಳುವ ಸಂಗತಿಯನ್ನು ನೆನಪಿಗೆ ತರುತ್ತದೆ.

ಅಲ್ಲಿ ಸೇರಿದ ಭೂ ಮಾಲಿಕರ ಮಧ್ಯೆ ಮಾತುಕತೆಯೊಂದು ಹೀಗೆ ನಡೆಯುತ್ತದೆ.

''ರಾಜನೀತಿ?''

''ಆಳೋದಕ್ಕೆ ಸಂಬಂಧಿಸಿದ್ದು, ರಾಜನೀತಿಗೆ ತಳಹದಿ ಸ್ವಹಿತ''

''ಸ್ವಹಿತ ಅಂದರೆ ಇವತ್ತು ಅರಮನೆ ಪಕ್ಷ - ನಾಳೆ ಮಹಾ ಅರ್ಚಕರ ಪಕ್ಷ?

ಪೆರೋವಿನಿಂದ ಮೆನೆಪ್‌ಟಾಗೆ ಒಂದು ಔತಣ ಕೂಡ ನೆರವೇರುತ್ತದೆ. ಅದರಲ್ಲಿ ಕೆಲವು ಮುಖ್ಯ ಭೂ ಮಾಲಿಕರೂ ಸೇರಿರುತ್ತಾರೆ. ಅದರಲ್ಲಿಯ ಹುನ್ನಾರೆಂದರೆ ಅದು ಮೆನೆಪ್‌ಟಾಗಾಗಿ ರಾಜಧಾನಿ ಏರ್ಪಡಿಸಿದ ಔತಣಕೂಟ ಎಂದಾದರೆ ಮೆನೆಪ್‌ಟಾಗೆ ಹೆಚ್ಚಿನ ಸ್ಥಾನ-ಕೀರ್ತಿ ಲಭಿಸುತ್ತದೆ. ಅದು ಹಾಗಾಗದ ಹಾಗೆ ಭೂ ಮಾಲಿಕರು, ಪ್ರಾಂತಪಾಲರು ವಗೈರೆ ಸೇರಿಸುತ್ತಾರೆ.

''ವಾಸ್ತವವಾಗಿ ಮೆನೆಪ್‌ಟಾಗೆ ಔತಣ; ನೀರಾನೆ ಪ್ರಾಂತ ತಂಡವನ್ನು ಬಿಟ್ಟು ಹೋಗಿರುವ ಹೋರಿ; ಅದಕ್ಕೆ ಮತ್ತೆ ಕುಣಿಕೆ ಹಾಕಿ ತಂಡದೊಳಕ್ಕೆ ಎಳೆ ತರಬೇಕು!'' ಮಹಾ ಅರ್ಚಕ ಬಂದ ಹೊರತು ಸೆಡ್ ಉತ್ಸವ ನಿಶ್ಚಯವಾಗುವುದಿಲ್ಲ. ಅವರು ಬರುವಂತೆ ಪತ್ರದೊಂದಿಗೆ ರಾಜದೂತನನ್ನು ಕಳಿಸಿದ್ದ. ಮುಖ್ಯ ಅರ್ಚಕ ಬರುವುದಾಗಿ ಉತ್ತರ ಕಳಿಸಿದೊಡನೆ ಈ ಔತಣದ ಏರ್ಪಾಟು. ಈ ಔತಣಕ್ಕೆ ಕರೆಕೊಡುವಾಗ ಅಮಾತ್ಯ ಮತ್ತು ಮೆನೆಪ್‌ಟಾನೊಡನೆ ಮಾತುಕತೆ ಹೀಗೆ ನಡೆಯುತ್ತದೆ. ಮೆನೆಪ್‌ಟಾ ಮಹಾ ಅರ್ಚಕರ ಉತ್ತರ ಬಂದ ಮೇಲೆ ಈ 'ಸರು' ಅಧಿವೇಶನ ಕರೆದಿರಬೇಕು.

''ಹೌದು ಆ ಉತ್ತರ ನಾನು ನೋಡಿದ್ದೇನೆ. ಬಹಳ ಸ್ಪಷ್ಟ, ಅನುಕೂಲವಾದಾಗ ಬರ್ತೇವೆ ಅಂದಿದ್ದಾರೆ.''

ಮಹತ್ವದ ಸಮಸ್ಯೆ ಉದ್ಭವಿಸಿದಾಗ ಹಿರಿಯ ಸಲಹೆಗಾರರ ಮಹಾ ಮಂಡಳಿಯ ಸಭೆ ಸೇರ್ತದೆ, ಅಲ್ಲವಾ?.......

''ಇವತ್ತು ಐಗುಪ್ತದಲ್ಲಿ ಯಾವ ಸಮಸ್ಯೆಯಿದ್ದರೂ ಅದು ಚೌಕಮಣೆ ಆಟದ ಒಂದಂಗವಾಗಲೇಬೇಕು'' ಚೌಕಮಣೆ ಆಟದ ಪ್ರತಿಮೆಯೊಂದು ಇಲ್ಲಿ ಪರಿಚಯವಾಗುತ್ತದೆ. ಇದರಲ್ಲಿ ಎಲ್ಲರೂ ದಾಳ ಉದುರಿಸಲು ಸಿದ್ಧರಾಗಿರುವುದು ಆಗತ್ಯ, ಅಮಾತ್ಯ, ಮಹಾ ಅರ್ಚಕ, ಭೂ ಮಾಲಿಕರು ಹೀಗೆ. ಆಗಾಗ ಕಥೆಯ ನೇಯ್ಗೆಯಲ್ಲಿ ಈ ಚೌಕಮಣೆ ಆಟ ಕಾಣಿಸಿಕೊಳ್ಳುತ್ತ ಹೋಗುತ್ತದೆ. ಇದರಿಂದಾಗಿ ಕತೆಗೆ ಒಂದು ಧ್ವನಿಪೂರ್ಣತೆ ಪ್ರಾಪ್ತವಾಗಿದೆ.

''ಸರು ಸಭೆ'' ಬಹಳ ವೈಭವಯುತವಾಗಿ ನಡೆಯುತ್ತದೆ. ಆಗ ನಮಗೆ ಪ್ರಾಚೀನ

ಇಜಿಪ್ತದ ಊಟ - ಆಹಾರ ಪಾನೀಯ ತಿಂಡಿ ತಿನಿಸು, ರಾಜ ವೈಭವ - ವಿಲಾಸ, ಉಡುಗೆ ತೊಡುಗೆ ಇತ್ಯಾದಿಗಳ ಪರಿಚಯದೊಡನೆ ಅನೇಕ ಮನಸ್ಸುಗಳ ಹಾರಾಟ - ಹೋರಾಟದ ಪರಿಚಯವಾಗುತ್ತದೆ.

ಮಹಾ ಅರ್ಚಕ ರಾಜಧಾನಿಗೆ ಬಂದಾಗ ರಾಣಿ ಆತನನ್ನು ಭೆಟ್ಟಿಯಾಗಲು ಬಯಸುತ್ತಾಳೆ. ಇಡೀ ಕಾದಂಬರಿಯಲ್ಲಿ ಪರಿಚಯವಾಗುವ ಅನೇಕ ಪಾತ್ರಗಳಲ್ಲಿ ರಾಣಿ ನೆಫರಟೀಮ್ ಬಹು ಸಂಕೀರ್ಣವಾದ ಪಾತ್ರಸೃಷ್ಟಿ. ರಾಣಿ ಪಲ್ಲಕ್ಕಿಯ ಮೇಲೆ ಬರುತ್ತಿರುವುದನ್ನು ನೋಡಿಯೇ ವಯಸ್ಸಾಗಿದ್ದರೂ ಅವಳ ಲಾವಣ್ಯದಿಂದ ಮಹಾ ಅರ್ಚಕ ವಿಚಲಿತನಾಗುತ್ತಾನೆ. ''ಹೇಪಾಟ್ ಎರಡೂ ತೋಳುಗಳನ್ನು ಸೂರ್ಯನತ್ತ ಚಾಚಿ 'ರಾ ರಾ' ಎಂದ...''

''ಓಲಾಡುತ್ತಿದ್ದ ತನ್ನ ಮನಸ್ಸನ್ನು ಕಂಡು ಹೆಪಾಟ್ ಕ್ರುದ್ಧನಾದ. ತನ್ನ ಸಂದರ್ಶನಕ್ಕೆ ಈಕೆ ಬರುತ್ತಿರಬೇಕು. ಇವತ್ತೇ ಯಾಕೆ? ಯಾರು ಹೂಡಿರುವ ಹಂಚಿಕೆ ಇದು? ಗೂಬೆ ಹೆಖ್ವೇಡ್ (ಮಾಯಾವಿನಿ) ನೀನು ಯಾವ ಬಲೆ ನೇಯಬಲ್ಲೆ ನನಗೆ ತಿಳೀದೆ?''

''ಮಹಾರಾಣಿಗೆ ಹೆದರಲೇ? ಸ್ತ್ರೀ ಜಾತಿಯೊಡನೆ ಮಾತನಾಡಿ ಎಷ್ಟು ಕಾಲವಾಯಿತು?...''

ಬಂಗಾರದ ಸರಿಗೆಗಳಿಂದ ಬಂಧಿಸಿದ್ದ ಜೊಂಟಿನ ಮೆದು ಪಾದರಕ್ಷೆಯನ್ನು ಮಹಾರಾಣಿ ಕಳಚಿದಳು. ಚಿರತೆಯ ಚರ್ಮದ ಸುರಳಿಯನ್ನು ತಾನು ಎತ್ತಿಕೊಂಡು, ಸದ್ದಾಗದಂತೆ ಹೆಜ್ಜೆ ಇಡುತ್ತ ಮಹಾ ಅರ್ಚಕನನ್ನು ಸಮೀಪಿಸಿ ಸುರಳಿಯನ್ನು ಕೆಳಗಿರಿಸಿ ಅವನೆದುರು ಮಂಡಿಯೂರಿದಳು. (ಮಹಾ ಅರ್ಚಕನ ಆಪ್ತ ಸಹಾಯಕ ವಿಸ್ಮಿತ. ಅಷ್ಟು ಹತ್ತಿರಕ್ಕೆ ಮಹಾರಾಣಿ ಹಿಂದೆಂದೂ ಹೋಗಿರಲಿಲ್ಲ) ಬಾಹ್ಯ ನೋಟಕ್ಕೆ ಮುಚ್ಚಿದಂತಿದ್ದರೂ ಧರ್ಮಗುರುವಿನ ಕಣ್ಣುಗಳು ಅರ್ಧ ತೆರೆದೇ ಇದ್ದವು. 'ಅಸ್ತಮಿಸುತ್ತಿದ್ದ ರಾಣಿಗೆ ಹೇಪಾಟ್ ವಂದನೆ ಸಲ್ಲಿಸುತ್ತಿದ್ದುದನ್ನು ಪೀಠ ಪಲ್ಲಕ್ಕಿಯಿಂದ ಇಳಿಯುವುದಕ್ಕೆ ಮೊದಲೇ ನೆಫರ್‌ಟೀಮ್ ಕಂಡಿದ್ದಳು. ಅಷ್ಟು ಬೇಗನೆ ಧ್ಯಾನದಲ್ಲಿ ತಲ್ಲೀನವಾಗುವುದು ಸುಳ್ಳು. ಅಲ್ಲಿ ನಿಂತಿದ್ದ ದೇವಸೇವಕ ಸುದ್ದಿ ತಿಳಿಸದೆ ಇರುತ್ತಾನೆಯೇ? ರಾಣಿ ಕಣ್ಣು ಮುಚ್ಚಿ ಅದೇ ಭಂಗಿಯಲ್ಲಿ ಕಾದಳು!

ಹೇಪಾಟ್ ಎವೆಗಳ ಸಂದಿಯಿಂದಲೇ ಮಂಡಿ ಊರಿದ್ದವಳ ಸೊಬಗನ್ನು ಸವಿದ. ಪುನಃ ಕರಗುತ್ತಿದ್ದೇನೆ ಎಂದು ಕಸಿವಿಸಿ, ''ಯಾರು?'' ಎನ್ನುತ್ತ ಕಣ್ಣು ತೆರೆದ.

ಕಣ್ಣು ಮುಚ್ಚಿಕೊಂಡೇ ರಾಣಿ ಎಂದಳು.

''ನಾನು ನೆಫರ್‌ಟೀಮ್, ಐಗುಪ್ತದ ರಾಜಕುಮಾರನ ತಾಯಿ...''

ಇದೊಂದು ಮನಸ್ಸಿನ ವಿವಿಧ ಬಣ್ಣಗಳ ಚಿತ್ರಮಾಲೆಯಂತಿದೆ. ಉನ್ನತ ಮಟ್ಟದ ನಾಟಕೀಯ ಚಿತ್ರಣ ತುಂಬ ಜಾಣ್ಮೆಯಿಂದ ಹೆಣೆದ ಕುಶಲ ಸನ್ನಿವೇಶ.

ರಾಣಿಯನ್ನು ಹಗುರಾಗಿ ಗ್ರಹಿಸುವುದಾಗುವುದಿಲ್ಲ. ಅವಳು ಉಸುರುವ ಮೊದಲ ಮಾತೇ ತಾನು ಐಗುಪ್ತದ ರಾಜಕುಮಾರನ ತಾಯಿ ಎಂದು. ಇವಳು ತಾಯಿ; ಕೇವಲ ತಾಯಿಯಲ್ಲ; ರಾಜಮಾತೆ, ಅದನ್ನು ಎಚ್ಚರಿಸುತ್ತಾಳೆ. ರಾಣಿ ಪಟ್ಟದಿಂದ ರಾಜಮಾತೆಯ ಪಟ್ಟಕ್ಕೆ ಸರಿಯುವ ಸೂಚನೆ. ಕುಮಾರನನ್ನು ರಾಜನನ್ನಾಗಿ ಮಾಡುವ ಅರ್ಚಕನ ಕರ್ತವ್ಯದ ಎಚ್ಚರಿಕೆಯೂ ಇರಬಹುದು. ಅದಕ್ಕೂ ಮೊದಲು 'ಸೆಡ್' ಉತ್ಸವ ಆಗಬೇಕು. ಹಾಗಾಗುವಾಗ ಅದಕ್ಕೆ ಅರ್ಚಕ ಸೂಚನೆ ನೀಡಬೇಕು; ನಡೆಸಬೇಕು. "ಗುರುಮನೆಯ ವಿಷಯದಲ್ಲಿ ಅರಮನೆಯಿಂದ ಮುಂದೆ ಯಾವ ಅಪಚಾರವೂ ಆಗುವುದಿಲ್ಲ" ಎಂದು ಭರವಸೆ ಕೊಡುತ್ತಾಳೆ.

ಇಲ್ಲಿ ಇಬ್ಬರೂ ಚೌಕಮಣೆ ಆಟ ಆಡುವವರೆ, ಇಬ್ಬರೂ ಪರಸ್ಪರ ದಾಳವನ್ನು ಉರುಳಿಸಲು ಹವಣಿಸುತ್ತಿದ್ದಾರೆ. ತಟ್ಟನೆ ರಾಣಿ ಕೇಳುತ್ತಾಳೆ. ನೀವು ಬಯಸುವ ಬಲಿ ಯಾವುದೂ ಅಂತ ತಿಳಿಯೋದಕ್ಕೆ ಬಂದಿದ್ದೇನೆ" ಇಲ್ಲಿಯ ಒಂದೊಂದು ಮಾತೂ ತೂಕ ಮಾಡಿ ಎದುರು ದಾಳವನ್ನು ಉದುರಿಸಲು ಬಲು ನಾಜೂಕಿನಿಂದ ಬೀಸಿದ ಹೊಡೆತ.

ಮಹಾ ಅರ್ಚಕ ಒಪ್ಪಿಕೊಳ್ಳುತ್ತಾನೆ. ಮೆನೆಪ್‌ಟಾನೆ ಆ ಬಲಿ! ಆತನ ಬಂಧನವಾಗುತ್ತದೆ.

"ಅಬ್ಬುವಿನ ಮಹಾ ಅರ್ಚಕನನ್ನು ಮೆನೆಪ್‌ಟಾ ಕಂಡಿದ್ದ. ಇಲ್ಲಿ ಅತಿಥಿಗೃಹದ ಮುಂದುಗಡೆಯಿಂದ ಆತ ಹೋದಾಗ ಇನ್ನಷ್ಟು ಹತ್ತಿರದಿಂದ ನೋಡಿದ. ಆತ ಯಾವ ಕಡೆಗೆ ಹೆಜ್ಜೆ ಇಟ್ಟರೂ ಇಕ್ಕೆಲಗಳಲ್ಲೂ ಮಂಡಿಯೂರಿ ನಮಿಸುತ್ತಿದ್ದರು. ಬೆಳ್ಳಿ ಹಿಡಿಯ ಕೋಲು ಕೈಯಲ್ಲಿದ್ದ ಅಧಿಕಾರ, ಮುಖದ ಮೂಳೆಗಳು ಕಾಣಿಸುತ್ತಿದ್ದ ಈ ವ್ಯಕ್ತಿಯ ಬಗೆಗೆ ಇಷ್ಟೊಂದು ಭಯ-ಭಕ್ತಿ! ಧಾರ್ಮಿಕ ಕಟ್ಟು-ಕಟ್ಟಳೆಗಳಲ್ಲಿ ಜನ ಸಮುದಾಯಕ್ಕೆ ಇಂಥ ನಿಷ್ಠೆ! ಐಗುಪ್ತದಾದ್ಯಂತ ಇರುವ ಸಾವಿರಾರು ಸಣ್ಣ ದೊಡ್ಡ ಮಂದಿರಗಳಲ್ಲಿ ಗುಡಿಸಲುಗಳಲ್ಲಿ ಸಹಸ್ರ ಸಹಸ್ರ ದೇವಸೇವಕ, ದೇವಸೇವಕಿಯರು, ಎಷ್ಟೋ ಸಹಸ್ರ ದಾಸಜನ, ಅಪಾರ ಧನಕನಕ ಇಷ್ಟೆಲ್ಲಕ್ಕೂ ಜವಾಬುದಾರ ಈತ. ಧರ್ಮಗುರು ಪ್ರಸನ್ನನಾಗಬೇಕೆಂದು ರಾಜವಂಶ ಹಾತೊರೆಯುತ್ತದೆ. ಅವನ ಆಶ್ರಯಕ್ಕಾಗಿ ಭೂ ಮಾಲಿಕರು ಬಾಯಿ ಬಿಡುತ್ತಾರೆ. ಹಾಗೆ ಯೋಚಿಸುತ್ತ ಮೆನೆಪ್‌ಟಾಗೆ ಅನಿಸಿತು; ಸಮಾಜವನ್ನು ಬಿಗಿಯಾಗಿ ಹಿಡಿದಿರುವ ಶಕ್ತಿಗಳು ಮೂರು. ಸಮೀಪದಿಂದ ಭೂ ಮಾಲಿಕರ ಗಣ, ದೂರದಿಂದ ಪೆರೋ ಮತ್ತು ಮಹಾ ಅರ್ಚಕ."

ಇಲ್ಲಿ ಬರುವ ವಿವರಗಳು ಮೆನೆಪ್‌ಟಾನ್‌ನ ಬೆಳವಣಿಗೆಯನ್ನು ತೋರಿಸುತ್ತದೆ. ಮಾತ್ರವಲ್ಲ, ಕತೆಯ ಕೊನೆಯ ನಿರ್ಧಾರಕ ವಿಧಿಯನ್ನು ಇದು ಒಡಲಲ್ಲಿ ಹೊತ್ತಿದೆ ಎಂಬುದು ಮಹತ್ವದ್ದಾಗಿದೆ. ಇಲ್ಲಿಯ ಒಂದು ಪರಿಕಲ್ಪನೆ ಕೂಡ ರೂಪ ಪಡೆಯುತ್ತದೆ. ಅದು ಸಮಾಜ ಶಕ್ತಿಗೆ ಸಂಬಂಧದ ಪಡಿಯಚ್ಚು. ಮತ್ತು ಅದೇ ವಿಮೋಚನೆಯ ಹೋರಾಟದ ನಿಯಮಗಳನ್ನು ರೂಪಿಸುತ್ತದೆ. ಅಂದರೆ ಮೊದಲು ಸಂಘರ್ಷ ಪ್ರಾರಂಭವಾಗುವುದು ದುಡಿಯುವ ನಗರದ ಹತ್ತಿರದ ಶೋಷಕ ವೃತ್ತದೊಡನೆ. ಇಲ್ಲಿ ಪ್ರಾಂತಪಾಲ ಮತ್ತು ಭೂಮಾಲಿಕ ವರ್ಗದೊಡನೆ ಇದು ಬೆಳೆದು ಭೂ ಮಾಲಿಕರಿಗೆ ಆಶ್ರಯ ಕೊಡುವ ಅಧಿಕಾರ ಕೇಂದ್ರ ಅಂದರೆ ಸರಕಾರದೊಡನೆ ಈ ರೀತಿಯ ಹೋರಾಟದ ನಿಯಮ ಚಿರಸ್ಮರಣೆ, ಸ್ವಾಮಿ ಅಪರಂಪಾರ, ಕಲ್ಯಾಣ ಸ್ವಾಮಿ ಮತ್ತು ವಿಮೋಚನೆಯಲ್ಲೂ ಕಂಡು ಬರುತ್ತದೆ.

ಈ ಪರಿಕಲ್ಪನೆಯಡಿ ಕೆಲಸ ಮಾಡುವ ವೈಚಾರಿಕತೆಯೆಂದರೆ ಸಮಾಜ ಸಂಪೂರ್ಣ ಬಂಧನದ ಬಿಡುಗಡೆಯಾಗಬೇಕಾದರೆ ಅತ್ಯಂತ ಕೆಳಗಿನ (ತುಳಿಯಲ್ಪಟ್ಟ) ಜನವರ್ಗಗಳ ಬಿಡುಗಡೆಯಾಗಬೇಕು. ಮತ್ತು ಮುಖ್ಯ ಸಂಘರ್ಷ ಏರ್ಪಡುವುದು ಈ ವರ್ಗದೊಡನೆಯೇ. ನಿಜ ಸ್ವಾತಂತ್ರ್ಯವೆಂದರೆ ಅಂಚಿನ ಮನುಷ್ಯರ ಬಿಡುಗಡೆ.

ಈ ಕಾದಂಬರಿಯಲ್ಲಿ ನೀರಾನೆ ಗುಲಾಮರ ಸಂಘರ್ಷ ಶುರುವಾಗುವುದು ಪ್ರಾಂತಪಾಲ ಮತ್ತು ಭೂಮಾಲಿಕರು ಒಟ್ಟಾದ ವೃತ್ತದೊಡನೆ. ಅನಂತರ ಅದು ವಿಸ್ತರಿಸಿಕೊಂಡು ಪೆರೋ-ರಾಜಧಾನಿ ಅಧಿಕಾರ ಶಕ್ತಿಯನ್ನು ಆವರಿಸಿಕೊಳ್ಳುತ್ತದೆ.

ಇಲ್ಲಿ ಆ ವೃತ್ತದಲ್ಲಿ ಸಿಕ್ಕುವುದು ರಾಜ್ಯ ಅಧಿಕಾರ ಮಾತ್ರವಲ್ಲ. ಹಾಗೆ ಕೇಳಿದರೆ ರಾಜ ಪೆರೋಗೆ ಆಗಲಿ, ರಾಣಿ ನೆಫರಟಿಮ್‌ಳಿಗಾಗಲಿ ಮೆನೆಪ್‌ಟಾನೊಡನೆ ವೈರವಿಲ್ಲ. ಆದರೆ ನಿಜಸ್ಪರ್ಧೆ ಇರುವುದು ಮಹಾ ಅರ್ಚಕನೊಡನೆ, ಅಂದರೆ ಗುರು ಮನೆಯೊಡನೆ.

ಇಲ್ಲಿ ಅರಮನೆ ಮತ್ತು ಗುರುಮನೆಯಲ್ಲಿ ಸಂಘರ್ಷವಿದೆ. ಆ ಎರಡು ವರ್ಗವೂ ಚೌಕಮಣೆ ಆಟದಲ್ಲಿ ಪರಸ್ಪರ ದಾಳ ಹೊಡೆದುರುಳಿಸುವಲ್ಲಿ ತೊಡಗಿದೆ. ಭೂ ಮಾಲಿಕರು ಗುರುಮನೆ ಪಕ್ಷ ವಹಿಸಿದ್ದಾರೆ. ನಿಜವಾದ ಸಂಘರ್ಷ ಈಗ ಗುರುಮನೆಗೂ ಗುಲಾಮರಿಗೂ ಮಧ್ಯೆ ನಡೆಯಬೇಕು. ಆದರೆ ಈ ಗುರುಮನೆ ಮತ್ತು ಅರಮನೆಯವರ ಚೌಕಮಣೆ ಆಟದಲ್ಲಿ ಮೆನೆಪ್‌ಟಾ (ಗುಲಾಮಿ ರೈತರು) ದಾಳವಾಗುತ್ತಾನೆ. ಇಬ್ಬರೂ ಕೂಡಿ ಈ ದಾಳವನ್ನು ಹೊಡೆದುರುಳಿಸುತ್ತಾರೆ. ಆಟದ ನಿಯಮ ಸಂಕೀರ್ಣವಾಗುತ್ತದೆ. ಸಿ.ಎನ್. ರಾಮಚಂದ್ರನ್ ಸೂಕ್ತವಾಗಿ ಹೇಳುವ ಹಾಗೆ ''ಅಂದರೆ ಇಲ್ಲಿ ಲೇಖಕರು ಸೂಕ್ಷ್ಮವಾಗಿ ತೋರಿಸುವ ವಿಚಾರಗಳು ಎರಡು: (೧) ಸತ್ತೆಯ ಮೂಲಕ ನಡೆಯುವ ಶೋಷಣೆಗಿಂತ ಧರ್ಮದ ಹೆಸರಿನಲ್ಲಿ

ನಡೆಯುವ ಶೋಷಣೆ ಹೆಚ್ಚು ಕರಾಳವಾದದ್ದು. ಮತ್ತು ತೊಡೆದು ಹಾಕಲು ಕಠಿಣವಾದುದೆಂದು. (೨) ಪರಸ್ಪರ ಭಿನ್ನಾಭಿಪ್ರಾಯಗಳೇನೇ ಇರಲಿ, ತಂತಮ್ಮ ಸತ್ತೆಗೆ ಅಪಾಯ ಬಂದರೆ ಎಲ್ಲರೂ ಒಂದಾಗುತ್ತಾರೆ. ತೋರಿಕೆಗೆ ನೂರಾರು ವರ್ಗಗಳಿದ್ದರೂ ಇಂತಹ ನಿರ್ಣಾಯಕ ಸಂದರ್ಭಗಳಲ್ಲಿ ಉಳಿಯುವುವು ಎರಡೇ ವರ್ಗಗಳು, ಉಳ್ಳವರು ಮತ್ತು ಇಲ್ಲದವರು.'' (ನಿರಂಜನ ಅಭಿನಂದನ ಪೂರ್ವೋಕ್ತ ಪು: ೨೮೦.)

ಮೆನೆಪ್‌ಟಾನ ಬಂಧನವಾದ ನಂತರದ ಘಟನೆಗಳು ನಿಬಿಡವಾಗಿ ಜರುಗುತ್ತವೆ. ಅಲ್ಲಿ ಮನುಷ್ಯ ವರ್ಗದ ವರ್ಗ ಸ್ವಭಾವ, ಉದಾತ್ತತೆ ಹಾಗೆಯೇ ಭೂಮಾಲಿಕರ ಸೈನಿಕರ, ಧರ್ಮಾಧಿಕಾರಿಗಳ ಅಮಾನವೀಯತೆಗಳೆಲ್ಲ ತೆರೆದುಕೊಳ್ಳುತ್ತವೆ. ಅವರೊಡನೆ ಆ ಕಾಲದ ಐತಿಹಾಸಿಕ ಸನ್ನಿವೇಶದ ವಾತಾವರಣ ನಿರ್ಮಾಣ ಹೀಗೆ ಪ್ರವಾಹೋಪಾದಿಯಲ್ಲಿ ನಡೆಯುತ್ತದೆ.

ಮೆನೆಪ್‌ಟಾನ ಬಂಧನದ ಸುದ್ದಿ ನೀರಾನೆಗೆ ತಲುಪುತ್ತದೆ. ಅಲ್ಲಿಂದ ಬಂಧನ ವಿಮೋಚನೆಗಾಗಿ ಜನ ಬರುತ್ತಾರೆ. ಎಲ್ಲವೂ ರಹಸ್ಯ ಘಟನೆಗಳೇ. ಬಿಗಿ ಬಂದೋಬಸ್ತಿನ ನಡುವೆಯೇ ಈ ಹೊರಗಿನವರಿಗೆ ಮೆನೆಪ್‌ಟಾನ ಸಂಪರ್ಕವೇರ್ಪಡುತ್ತದೆ. ಮೆನೆಪ್‌ಟಾನನ್ನು ಮರೆಮಾಚಿ ಬಿಡಿಸಿಕೊಂಡು ಹೋಗುವ ಯೋಜನೆ ನಿರೂಪಿಸಲ್ಪಡುತ್ತದೆ. ಆದರೆ ಮೆನೆಪ್‌ಟಾ ಅದಕ್ಕೆ ಒಪ್ಪುವುದಿಲ್ಲ.

ಮೆನೆಪ್‌ಟಾನ ವಿಚಾರಣಾ ಸಭೆ ಏರ್ಪಡುತ್ತದೆ. ಆತ ಅಂದುಕೊಳ್ಳುತ್ತಾನೆ ''ಇವರೆಲ್ಲರ ಚೌಕಮಣೆ ಆಟದಲ್ಲಿ ನೀರಾನೆ ಪ್ರಾಂತ ಒಂದು ಕಾಯಿ ಅಲ್ಲವೇ? ನಾನೇ ಆ ಕಾಯಿ. ಆದರೆ ಉಸಿರಾಡುವ ಕಾಯಿ, ಮಾತನಾಡುವ ಕಾಯಿ, ನಾವೆಲ್ಲ ಗೆದ್ದೆವು ಎನ್ನುತ್ತಿರುವ ಆಟಗಾರರಿಗೆ ಈ ಕಾಯಿ ಸವಾಲು ಹಾಕುತ್ತದೆ. ಈ ಸವಾಲು ನೈತಿಕ ಸವಾಲಾಗಿದೆ. ಒಂದು ಬಗೆಯಿಂದ ವಿಚಾರಣೆ ಮೆನೆಪ್‌ಟಾನದಾಗಿರದೆ ಆಳುವ ವರ್ಗದವರದಾಗಿರುತ್ತದೆ'' ಅಲ್ಲಿ ಮೆನೆಪ್‌ಟಾ ಅಪರಾಧಿಯಲ್ಲ, ನ್ಯಾಯಾಧೀಶ ಅಪರಾಧಿ. ಕಾದಂಬರಿ ತನ್ನ ನೈತಿಕ ಪ್ರಜ್ಞೆಯನ್ನು ಹೀಗೆ ಸ್ಥಾಪಿಸಿಕೊಳ್ಳುತ್ತದೆ.

ಅವರು ನೀರಾನೆ ರೈತನ ಮೇಲೆ ಏನೇನು ಆರೋಪ ಹೊರಿಸುತ್ತಾರೋ ಅವೆಲ್ಲಾ ಅವರ ವರ್ತನೆಯ ವಿಡಂಬನೆಯಾಗಿ, ನೀರಾನೆಯವರ ಋಜುತ್ವದ ಸಾಕ್ಷಿಯಾಗಿ ನಮಗೆ ತೋರುತ್ತದೆ. ಈ ವಿರೋಧ ಅರ್ಥವನ್ನು ಇಲ್ಲಿ ಸಂಯೋಜಿಸಲಾಗಿದೆ.

ಮೆನೆಪ್‌ಟಾ ಅತ್ಯಂತ ಗಂಭೀರವಾಗಿ ಆದರೆ ಸಹಜವಾಗಿ ತನ್ನ ವಾದವನ್ನು ಮಂಡಿಸುತ್ತ ಹೋಗುತ್ತಾನೆ. ಅಲ್ಲಿ ಅಧಿಕಾರಿಗಳ ಮತ್ತು ಅರ್ಚಕರ ಮಧ್ಯೆ ಇರುವ ಬಿರುಕು. ಭೂಮಾಲಿಕರ ಕೊಳಕು, ಎಲ್ಲವನ್ನು ಎಳೆ ಎಳೆಯಾಗಿ ಬಿಡಿಸಿಡುತ್ತಾನೆ. ಆತನ ಮಾತು ನಿರ್ಣಾಯಕ ಹಂತಕ್ಕೆ ಬರುತ್ತದೆ.

''ಸುಲಿಗೆಯ ಸೂತ್ರ ಈ ವ್ಯವಸ್ಥೆಯನ್ನು ಬಿಗಿದು ಕಟ್ಟಿದೆ. ಅಂದರೆ ನಮ್ಮ ಪ್ರಾಚೀನರ ಮಾತಿನಂತೆ ಮುಂಗೈ ಜೋರಿನಿಂದ ಏನನ್ನೂ ಸಾಧಿಸಲು ಆಗುವುದಿಲ್ಲ. ಆದರೆ ನಮ್ಮ ನಡವಳಿಕೆ ಆ ಮಾತನ್ನು ಸುಳ್ಳು ಮಾಡಿದೆ. ಕಂದಾಯ ವಸೂಲಿ, ಗೋರಿ ನಿರ್ಮಾಣ, ಗಣಿಕೆಲಸ, ಇವೆಲ್ಲ ಬಲಪ್ರಯೋಗದಿಂದಲೇ ನಡೆಯುತ್ತವೆ. ದಾಸದಾಸಿಯರ ಬಲಾತ್ಕಾರದ ದುಡಿಮೆಯಿಂದ ನಮ್ಮಲ್ಲಿ ಸಂಪತ್ತು ಉತ್ಪನ್ನವಾಗ್ತದೆ. ಇದು ಸ್ವರ್ಣ ಪಿಶಾಚಿಗಳ ಸಮಾಜ. ಮನುಷ್ಯ ಜೀವಕ್ಕೆ ಇಲ್ಲಿ ಬೆಲೆಯಿಲ್ಲ. ಹೋರಾಟದಲ್ಲಿ ಸೆರೆ ಸಿಕ್ಕವರು ನಮ್ಮ ವ್ಯವಸ್ಥೆಯ ಗುಲಾಮರಾಗ್ತಾರೆ. ಅವರನ್ನು ಕೆಡವಿದಾಗ ಅವರ ಬಲಗೈಯನ್ನೋ ಯೋನಿಯನ್ನೋ ಕತ್ತರಿಸಿ ತರ್ತಾರೆ ನಮ್ಮ ವೀರಯೋಧರು ಅರಮನೆಯ ಲೆಕ್ಕಿಗನಿಗೆ ತೋರಿಸಿ ದಾಖಲೆ ಇಡಿಸೋದಕ್ಕೆ. ಈ ಸಾಧನೆಯ ಪ್ರಮಾಣಕ್ಕೆ ಅನುಸಾರವಾಗಿ ಬಹುಮಾನ; ಇವೆಲ್ಲವೂ ನಾಗರಿಕತೆ....''

''ಅಂಥ ನಾಗರಿಕತೆಗೆ ರೋಸಿ, ಸುಲಿಗೆಗೆ ಒಪ್ಪದೆ, ನಾವು - ದಲಿತರು, ಸೆಟೆದು ನಿಂತಿದ್ದೇವೆ. ಎಲ್ಲರೂ ನೆಮ್ಮದಿಯಿಂದ ಬಾಳುವ ಹೊಸ ವ್ಯವಸ್ಥೆಯನ್ನು ರೂಪಿಸಿದ್ದೇವೆ. ಇಷ್ಟು ಕಾಲ ಕುರಿಗಳಾಗಿ ಕಟುಕನ ಕತ್ತಿಗೆ ತಲೆಯೊಡ್ಡಿದ್ದು ಸಾಲದೆ? ದೇವರ ಹೆಸರಿನಲ್ಲಿ ಅರ್ಚಕರ ಮುಷ್ಟಿಯೊಳಗೆ ಹಿಪ್ಪೆಯಾದದ್ದು ಸಾಲದೆ?

''ಆಯಿತು ಕೊನೆಯ ಮಾತು. ಇಷ್ಟು ದಿನ ನಿಮ್ಮ ಚೌಕಮಣೆ ಆಟದಲ್ಲಿ ಕಾಯಿಯಾಗಿದ್ದೆ. ಈಗ ನೀವೆಲ್ಲ ಒಂದಾಗಿದ್ದೀರಿ. ಸದ್ಯಕ್ಕೆ ಆಟ ಮುಗಿದಿದೆ. ಕಾಯಾಗಿದ್ದ ನನ್ನ ಆಗತ್ಯ ನಿಮಗಿಲ್ಲ. ಸ್ನೊಪ್ರು, ಸೆಬೆಕ್ಸು, ನಮ್ಮ ಪ್ರಾಂತದ ಹಿರಿಯ ಸದಸ್ಯರು ಖ್ನೆಮ್, ಹೊಪೆಟ್ ಎಲ್ಲರ ದೃಷ್ಟಿಯಲ್ಲಿ ನಾನೊಬ್ಬ ಶಾಂತ ಸ್ವಭಾವದ ನಾಯಕ; ಬಟಾ ಕೇಳಿದ ಒಂದು ಪ್ರಶ್ನೆ ಇದು. ಅಣ್ಣ ನಿನಗೆ ಸಿಟ್ಟು ಬರೋದು ಯಾವತ್ತು? (ಮೆಲ್ಲನೆ, ಯಾವತ್ತು? ಯಾವತ್ತೂ? ಕ್ರಮೇಣ ಧ್ವನಿ ಏರಿಸುತ್ತ) ಮಹಾ ಪ್ರಭುಗಳೇ, ಮಹಾ ಅರ್ಚಕರೇ, ಅಮಾತ್ಯರೇ, ಪ್ರತಿಷ್ಠಿತರೇ, ಕಿವಿಗೊಟ್ಟು ಕೇಳಿ. ನಮಗೆ ಜನರಿಗೆ ಸಿಟ್ಟು ಬಂದಾಗ ಅದು ಮಹಾಪೂರವಾಗುತ್ತದೆ. ಅದರಲ್ಲಿ ನೀವೆಲ್ಲ ಕೊಚ್ಚಿ ಹೋಗ್ತೀರಿ, ಹೊಸದು; ಆ ಮಹಾಪೂರ ಇಳಿದಾಗ ಕಂಡುಬರುವ ಜಗತ್ತು ಹೊಸದು. ಆ ನೂತನ ಸೃಷ್ಟಿ ನಿರಾತಂಕವಾಗಲಿ ಅಂತ ಇಗೊ-ರಾನನ್ನು, ಪೆಟಾನನ್ನು, ಆಮನನನ್ನು ಅನನ್ಯ ಭಾವದಿಂದ ಪ್ರಾರ್ಥಿಸುತ್ತೇನೆ.''

ಮೆನೆಪ್‌ಟಾನ ಈ ಹೇಳಿಕೆಯಲ್ಲಿ ಕಾದಂಬರಿಯ ವೈಚಾರಿಕತೆ ಹರಳುಗಟ್ಟಿದೆ. ಶೋಷಣೆಗೆ ಒಳಗಾದ ವರ್ಗದಿಂದಲೇ ಕ್ರಾಂತಿ ಸಂಭಾವ್ಯ ನಿಜ ಶಕ್ತಿಯುಳ್ಳ ವರ್ಗ ಅದು. ಇತರ ವರ್ಗಗಳು ತನ್ನ ಕರ್ತೃತ್ವಶಕ್ತಿಯನ್ನು ಮುಗಿಸಿಕೊಂಡಾಗಿದೆ. ಹೊಸ ಸಮಾಜ ನಿರ್ಮಾಣಕ್ಕೆ ಆ ವರ್ಗದ ಅಳಿವು ಅನಿವಾರ್ಯ.

ಈ ಪ್ರಾರ್ಥನೆ ಐಗುಪ್ತರ ಮುಖ್ಯ ಮೂರು ದೇವರ ಹೆಸರಿನಲ್ಲೇ ಸಲ್ಲುವುದು ಚಾರಿತ್ರಿಕ ಮಿತಿಗೆ ಸಹಜವಾಗಿದೆ.

ಹೀಗೆ ಬಂಡಾಯದ ನಾಯಕನ ಕೊಲೆಯಿಂದ ಕಾದಂಬರಿ ಮುಗಿಯುವುದು ಸಹಜವಿತ್ತು. ಆದರೆ ಕಾದಂಬರಿ ಮುಂದೆ ಹೋಗುತ್ತದೆ. ಮತ್ತು ಹಾಗೆ ಮುಂದೆ ಹೋಗುವುದು ಕಾದಂಬರಿಯ ವೈಚಾರಿಕ ಲೋಕಕ್ಕೆ ಅವಶ್ಯವಾಗಿದೆ.

ವಧಿಸಲ್ಪಟ್ಟ ಶವವನ್ನು ಮಾರನೇ ದಿನ ಪ್ರದರ್ಶಿಸುವುದಕ್ಕಾಗಿ ಕಾವಲು ಇಡಲಾಗಿತ್ತು. ಆದರೆ ನೀರಾನೆಯಿಂದ ಹೋದ ಜನರು ರಾಜಧಾನಿಯೊಳಗಿನ ಬಡಜನರ ಸಹಾಯದಿಂದ ಶವವನ್ನು ಅಪಹರಿಸಿ ತರುತ್ತಾರೆ. ಅದನ್ನು ನೀರಾನೆಗೆ ಸಾಗಿಸಲು ಆಗಿಂದಾಗಲೇ ಹೊರಡುತ್ತಾರೆ. ಅವರ ಸಂಗಡ ಹುಚ್ಚಮೆನ್ನನೂ ಹೊರಡುತ್ತಾನೆ.

ನೀರಾನೆಗೆ ತಲ್ಪಿದೊಡನೆ ಶವಕ್ಕೆ ಮೇಲು ವರ್ಗದ ಜನಕ್ಕೆ ಸಲ್ಲುವ ಸಂಸ್ಕಾರವನ್ನು ಮಾಡಲಾಗುತ್ತದೆ. ಅರ್ಚಕರ ಆ ಎಲ್ಲ ಜವಾಬ್ದಾರಿಯನ್ನು ಮೆನ್ನಯ್ಯ ಹೊತ್ತುಕೊಳ್ಳುತ್ತಾನೆ.

ಆತನನ್ನು ನೋಡಲು ರೈತರು, ಮೋಚಿಗಳು, ನೇಕಾರರು, ಬಡಗಿಗಳು ಮತ್ತಿತರ ಕುಶಲ ಕರ್ಮಿಗಳು, ಕಲ್ಲುಕುಟುಕರು ಇತ್ಯಾದಿ ಜನ ಸೇರುತ್ತಾರೆ. ಈ ಮೂಲಕ ಆತ ಬಡಜನ ವರ್ಗದಲ್ಲಿ ಹೇಗೆ ಜನಪ್ರಿಯನಾಗಿದ್ದ ಎಂಬುದು ತಿಳಿದು ಬರುತ್ತದೆ.

ಆತನಿಗಾಗಿ ಗೋರಿ ಸಿದ್ಧವಾಗುತ್ತದೆ. ಈ ಕುರಿತಾದ ಸಂಸ್ಕಾರದ ವಿವರವಾದ ಚಿತ್ರಣ ಕೊಡಲಾಗಿದೆ. ಗುಲಾಮಿ ರೈತರಲ್ಲಿ ಈ ರೀತಿಯ ಸಂಸ್ಕಾರ ಇದೇ ಮೊದಲು. ಶವಲೇಪಿತವಾದೊಡನೆ ಮೆರವಣಿಗೆ ಹೊರಡುವಾಗ ಜನ ಓ ಒಸೈರಿಸ್ ಓ ಒಸೈರಿಸ್ ಓ ಮೆನೆಪ್‌ಟಾ ಎಂದು ಘೋಷಣೆ ಕೂಗುತ್ತಾರೆ.

ಒಸೈರಿಸ್ ದೇವಪುತ್ರ. ಸೂರ್ಯವಂಶದ ರಾಜ. ಅವನ ಜೊತೆ ಮೆನೆಪ್‌ಟಾನನ್ನು ಜೋಡಿಸಲಾಗುತ್ತದೆ. ರಾಜಮನೆತನದ ಎಲ್ಲ ಸಂಸ್ಕಾರಗಳು ನಡೆಯುವುದು ಸಹ ಆತನನ್ನು ರಾಜನ ಸ್ಥಾನಕ್ಕೆ ಮತ್ತು ದೇವರ ಸ್ಥಾನಕ್ಕೆ ಏರಿಸುವ ವಿಧಾನವೇ ಆಗಿದೆ.

ಹೆಣದ ಮೆರವಣಿಗೆ ಆತನ ಮನೆಗೆ ಬಂದಾಗ ಅವನ ಮಡದಿ ನೆಫಿಸ್ ಎಚ್ಚರ ತಪ್ಪುತ್ತಾಳೆ. ಸಾವಕಾಶವಾಗಿ ಎಚ್ಚರಾದಂತೆ ಅವಳ ಬಾಯಿಂದ ಬರುವ ಮಾತೇ ''ಹದಿನಾಲ್ಕು ಹೋಳು ಎಂದಳು ಮೆಲ್ಲಗೆ.''

ಈಗ ಅವಳು ಐಸಿಸ್ ದೇವತೆಯ ಸ್ಥಾನಕ್ಕೇರುತ್ತಾಳೆ. ಅವಳ ಗಂಡನನ್ನು ಅವನ ತಮ್ಮ 'ಸೆತ್' ಕೊಂದ ಪುರಾಣಕತೆಯನ್ನು ಪ್ರಾರಂಭದಲ್ಲಿಯೇ ಹೇಳಲಾಗಿದೆ. 'ಸೆತ್' ತನ್ನ ಅಣ್ಣನನ್ನು ಹದಿನಾಲ್ಕು ಹೋಳು ಮಾಡಿ ಒಂದೊಂದು ಕಡೆ ಬಚ್ಚಿಟ್ಟ. ಅದನ್ನು

ಹುಡುಕುತ್ತಾಳೆ ಐಸಿಸ್. ಹದಿನಾಲ್ಕನೇ ಹೋಳು ಸಿಕ್ಕಲಿಲ್ಲ. ಅದರ ಹುಡುಕಾಟವೇ ಆರ್ತರ ಹೋರಾಟ ಎಂಬುದಾಗಿ ರೂಪಕ ನಿರ್ಮಾಣ ಮಾಡಿರುವುದನ್ನು ತಿಳಿದಿದ್ದೇವೆ. ಈಗ ಮೆನೆಪ್‌ಟಾನಾ ಹೆಂಡತಿ ನೆಫಿಸ್‌ಳ ಬಾಯಲ್ಲಿ ಬರುವ ಮಾತು ಹದಿನಾಲ್ಕು ಹೋಳು. ಆ ಪ್ರತಿಮೆಯು ಕತೆಯ ಆಂತರ್ಯದಲ್ಲೇ ಬೆಳೆದು ಬಂದು ಅದು ನೆಫಿಸ್‌ಳಲ್ಲಿ ಪ್ರತ್ಯಕ್ಷವಾಗುತ್ತದೆ. ಮೆನೆಪ್‌ಟಾ ಒಸೈರಿಸ್ ಆದರೆ ನೆಫಿಸ್ ಐಸಿಸ್.

ಮೆನೆಪ್‌ಟಾನ ಅಂತ್ಯಕ್ರಿಯೆ ಸಾಗುತ್ತಿದ್ದಂತೆ ರಾಜಧಾನಿಯಿಂದ ಮಹಾ ಅರ್ಚಕನ ನೇತೃತ್ವದಲ್ಲಿ ಸೈನ್ಯ ಬರುತ್ತದೆ. ಅದರ ಉದ್ದೇಶ ನೀರಾನೆ ಪ್ರಾಂತದ ಮೇಲೆ ದಾಳಿ ಮಾಡಿ ವಶಪಡಿಸಿಕೊಳ್ಳುವುದು. ಅಲ್ಲಿ ಹೊಸ ವ್ಯವಸ್ಥೆಯನ್ನು ನಾಶಮಾಡುವುದು.

ಸೈನ್ಯ ದಂಡೆಗೆ ಬಂದಿಳಿದಾಗ ಗೊಂದಲ ಏರ್ಪಡುತ್ತದೆ. ನೀರಾನೆಯವರೂ ಬಿಲ್ಲುಬಾಣ ಕತ್ತಿ ಚಾಕು ಹಿಡಿದು ಯುದ್ಧಕ್ಕೆ ಹೊರಡುತ್ತಾರೆ. ಸಿದ್ಧರಾಗಿ ನದಿದಂಡೆಯಲ್ಲಿ ನಿಂತಿರುವಾಗಲೇ ಮಹಾ ಅರ್ಚಕನ ದೋಣಿ ಹತ್ತಿರ ಬರುತ್ತಿತ್ತು. ಅಲ್ಲಿ ಎಲ್ಲರಿಗಿಂತ ಎತ್ತರದಲ್ಲಿ ಮೆರೆಯುತ್ತಿತ್ತು - ಪಟಾ ದೇವಮೂರ್ತಿಯ ಭವ್ಯಾಕಾರ. ಹೆಚ್ಚು ಕಡಿಮೆ ಊರಿನ ದೇವಮಂದಿರ ಮೂರ್ತಿಯದೇ ರೂಪ. ಆದರೆ ಅದಕ್ಕಿಂತ ದೊಡ್ಡದು. ಹೆಚ್ಚು ಸಮರ್ಥರಾದ ಬಡಗಿಗಳು ಕಡೆದುದು.

''ಮಹಾ ಅರ್ಚಕ ಪೀಠದಿಂದ ಇಳಿದ. ಪಿಸುದನಿ ಹಾವಾಗಿ ಬಯಲಿನಲ್ಲಿ ಹರಿಯಿತು. ಹೇಪಾಟ್! ಹೇಪಾಟ್'' ''ಇಡಿಯ ಜನಸಮುದಾಯವೇ ಮಂಡಿಯೂರಿತು'' ಅರ್ಚಕನ ಸೈನಿಕರು ಕೈಗೆ ಸಿಕ್ಕವರನ್ನು ಕೊಂದರು. ಕೆಲವರನ್ನು ಸೆರೆ ಹಿಡಿದರು. ಹೊಲದಲ್ಲಿ ಬೆಳೆದು ನಿಂತ ಬೆಳೆಗೆ ಬೆಂಕಿ ಹಾಕಿದರು. ಸೈನಿಕರು ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆಸಿದರು. ಹೀಗೆ ನಡೆಯುತ್ತಿರುವಾಗ ನೀರಾನೆಯ ಆಡಳಿತದಾರರು ಅಂದರೆ ಮೆನೆಪ್‌ಟಾನ ಹಿಂಬಾಲಕರು ತಮ್ಮ ಕುಟುಂಬದ ಜೊತೆ ಬೇರೆ ಪ್ರದೇಶಕ್ಕೆ ದೋಣಿಯ ಮೇಲೆ ತಪ್ಪಿಸಿಕೊಂಡು ವಲಸೆ ಹೋದರು.

ಮಹಾ ಅರ್ಚಕ ನೀರಾನೆ ಪ್ರಾಂತದ ಬಂದರದ ಬಾಗಿಲಲ್ಲಿ ನಿಲ್ಲಿಸಿದ ಶಿಲೆಯ ಆನೆಯನ್ನು ಚೂರು ಮಾಡಲು ಆಜ್ಞಾಪಿಸಿದ. ಆದರೆ ಅದು ಜಾರಿ ಹೊಳೆಯಲ್ಲಿ ಮುಳುಗಿಹೋಯಿತು. ತಪ್ಪಿಸಿಕೊಂಡು ಹೋಗುವವರ ಜೊತೆ ಮೆನ್ನ ಕೂಡ ಇದ್ದ. ಆತ ಹೇಳುತ್ತಾನೆ. ''ಇಲ್ಲಿ ಕೇಳ್ರಿ, ಮಹಾಶಿಲ್ಪಿ, ಆ ನೀರಾನೆ ನದಿಯ ಆಳದಿಂದ ಮತ್ತೆ ಎದ್ದು ಬರ್ತದೆ.'' ತಾವು ಬೆಂಕಿಯಲ್ಲಿ ಸುಟ್ಟು ಹೋದೆವೆಂದು ಅವರು ತಿಳಿದುಕೊಳ್ಳುತ್ತಾರೆಂದು ಅಂದುಕೊಳ್ಳುತ್ತ ''ಶರೀರ ನಷ್ಟವಾದರೂ ಮತ್ತೆ ರೆಕ್ಕೆ ಬಡಿಯುವ ಬೆನ್ನು ಹಕ್ಕಿಗಳು ನಾವು'' ಎಂದುಕೊಳ್ಳುತ್ತಾರೆ.

ಒಸೈರಿಸನನ್ನು ಸೆತ್ ಮೋಸದಿಂದ ಕೊಂದಿದ್ದು. ಆಮೇಲೆ ಅವನ ಮಗ ಹೋರೆಸ್

ಸೆತ್‌ನನ್ನು ಕೊಂದು ಸೇಡು ತೀರಿಸಿಕೊಂಡ ಕತೆಯನ್ನು ಮೆನ್ನ ಹೇಳುತ್ತಾನೆ. ಮೆನೆಪ್‌ಟಾನ ಮಗ ರಾಮೆರಿಗೆ ಹೇಳುತ್ತಾನೆ 'ನಿಮ್ಮ ತಂದೆ ಈ ಕಾಲದ ಒಸೈರಿಸ್, ನೀನು ನಿನ್ನ ತಮ್ಮ ಇಬ್ಬರೂ ಒಸೈರಿಸ್‌ನ ಸಂತಾನ, ಹೋರಸ್ ವೀರರು.'

ರಾಮೆರಿ ಮೌನ ತಾಳಿದ ಕಂಠ ಉಮ್ಮಳಿಸಿತು. ಮೆನ್ನ ಕೇಳಿದ ''ಅಳ್ತಿದ್ದೀಯಾ?'' ''ಇಲ್ಲ ಇಲ್ಲ ನನಗೆ ಸಂತೋಷವಾಗಿದೆ''

ಒಸೈರಸ್ - ಹೋರೆಸ್‌ರ ಕತೆ ಮತ್ತೆ ಇಲ್ಲಿ ಮೂಡಿ ಬರುತ್ತದೆ. ಅಂದರೆ ಈ ಕತೆ ಕಾದಂಬರಿಯು ಒಳ ಚಲನೆಯಲ್ಲಿದ್ದು, ಆಗಾಗ ಕಾಣಿಸಿಕೊಳ್ಳುತ್ತದೆ. ಅಂದರೆ ಇದೊಂದು ಮಹಾ ಪ್ರತಿಮೆಯಾಗಿ ಕಾದಂಬರಿಯನ್ನು ಬಂಧಿಸಿಟ್ಟಿರುತ್ತದೆ.

ಹೀಗೆ ಹೇಳುವ ಮೂಲಕ ಸೆತ್ ಬಚ್ಚಿಟ್ಟ ಹದಿನಾಲ್ಕನೆಯ ಹೋಳನ್ನು ಹುಡುಕುವ ಕ್ರಿಯೆ ಚಲನೆಯಲ್ಲಿರುತ್ತದೆಂಬ ಸೂಚನೆಯಿದೆ. ಮತ್ತು ಈ ಹುಡುಕಾಟ ಎಲ್ಲ ಆರ್ತರ ಹುಡುಕಾಟ. ಅಂದರೆ ಅಸಮಾನತೆ, ಶೋಷಣೆಗಳಿಗೆ ಇದಿರಾಗಿ ನಡೆವ ಬಡವರ ಹೋರಾಟ. ನೀರಾನೆಯಲ್ಲಿ ಸೋಲು ಕಂಡದ್ದು ತಾತ್ಕಾಲಿಕ. ಅದು ಅಲ್ಲಿಗೆ ನಿಂತು ಹೋಗುವುದಿಲ್ಲ. ಬಡವರ ಹೋರಾಟ ನಿರಂತರ. ಅದು ಸಮಾನತೆಯ ಗುರಿ ತಲುಪುವವರೆಗೂ, ಇದಕ್ಕೆ ಶಿಖರ ಪ್ರಾಯವಾದಂತೆ ಕಾದಂಬರಿಯ ಕೊನೆಯ ವಾಕ್ಯ ಬರುತ್ತದೆ. ''ಮೆನ್ನ ಹೇಳಿದ: ಕತ್ತಲಾದ ಮೇಲೆ ಬೆಳಕು ಹರೀತದೆ. ಇದು ಸಾಮಾನ್ಯ ಅಂತ ತೋರುವ ಅಸಮಾನ್ಯ ವಿಷಯ ನೆನಪಿಡಿ.''

ಹೀಗೆ ಸಮಾಜವಾದಿ ಆಶಯದ ವೈಚಾರಿಕತೆ ಇಲ್ಲಿ ಸಾಕಲ್ಯವಾಗಿ, ಅಸಾಮಾನ್ಯವಾಗಿ, ಅಸಾಧಾರಣಕತೆಯಾಗಿಯೂ ಮೂಡಿದೆ. ಈ ವೈಚಾರಿಕತೆ ಕೂಡ ಸಾವಿಲ್ಲದ್ದು 'ಮೃತ್ಯುಂಜಯ' ನಿರಂಜನರು ತಮ್ಮ ಕಾದಂಬರಿಗೆ ಹೆಸರಿಡುವಲ್ಲೂ ಅದನ್ನು ಮರೆತಿಲ್ಲ!

## ಚಿರಸ್ಮರಣೆ

ಮೃತ್ಯುಂಜಯದ ನಂತರ 'ಚಿರಸ್ಮರಣೆ'ಯನ್ನು ನಮೂದಿಸುತ್ತಿರುವುದು ಅವರ ರಚನೆಯ ಕ್ರಮದಲ್ಲಿ ಅಲ್ಲ. ಮೃತ್ಯುಂಜಯ ಪ್ರಕಟವಾದುದು ೧೯೭೬. ಆದರೆ ಚಿರಸ್ಮರಣೆ ಪ್ರಕಟವಾದುದು ೧೯೫೫. ರೈತ ಹೋರಾಟದ ವಸ್ತುವನ್ನೇ ಹೊಂದಿರುವ 'ಮೃತ್ಯುಂಜಯ', 'ಚಿರಸ್ಮರಣೆ' 'ಕಲ್ಯಾಣ ಸ್ವಾಮಿ' ಮತ್ತು 'ಸ್ವಾಮಿ ಅಪರಂಪಾರ' ಒಂದೆಡೆಗೆ ತರುವುದು ಒಳ್ಳೆಯದೆಂದುಕೊಂಡಿದ್ದೇನೆ. ಕೊನೆಯದೆರಡು ನೇರ ರೈತ ಹೋರಾಟಕ್ಕೆ ಸಂಬಂಧಿಸದೆ ಕೊಡಗು ಸಂಸ್ಥಾನದ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ್ದಾದರೂ ರೈತ ಸಮಸ್ಯೆಯನ್ನು ಕೂಡ ಒಳಗೊಂಡಿದೆ.

''ಚಿರಸ್ಮರಣೆ'' ಐದನೇ ಸಲ (೧೯೮೭) ಮುದ್ರಣಗೊಂಡಿರುವುದು, ಇಂಗ್ಲೀಷ್, ಮಲೆಯಾಳಂ, ತೆಲುಗು, ತಮಿಳು, ಮರಾಠಿ, ಬಂಗಾಳಿ ಮತ್ತು ತುಳುವಿನಲ್ಲಿ ಪ್ರಕಟವಾಗಿರುವುದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

''ಮೃತ್ಯುಂಜಯ ಪ್ರಾಚೀನ ಕಾಲದ ವಸ್ತುವನ್ನು ಹೊಂದಿದ್ದರೆ, ಚಿರಸ್ಮರಣೆ ಐತಿಹಾಸಿಕ ವಸ್ತುವನ್ನು ಹೊಂದಿದೆ. ಹಾಗೆಯೇ ಮೃತ್ಯುಂಜಯ ವಿದೇಶಿ ನೆಲದಲ್ಲಿಯ (ಇಜಿಪ್ತ) ಕತೆಯಾಗಿದ್ದರೆ ಚಿರಸ್ಮರಣೆ ಅವರ ಕಣ್ಮುಂದೆಯೇ ನಡೆದ (ದೇಶೀಯ) ಘಟನೆಯಾಗಿದೆ. ಚಿರಸ್ಮರಣೆಯ ವಸ್ತು ಮತ್ತು ರಚನೆಯ ಕುರಿತು ಸ್ವತಃ ನಿರಂಜನರೇ ಹೇಳುವ ಮಾತು ಹೆಚ್ಚು ಮಹತ್ವದ್ದಾಗಿದೆ. ಅದು ಹೀಗಿದೆ: ''ನೀಲೇಶ್ವರದ ವಾಸ್ತವ್ಯದ ಕೊನೆಯ ವರ್ಷ ಬಂತು. ೧೯೪೧ ರಲ್ಲಿ ದೊಡ್ಡ ಪರೀಕ್ಷೆಗೆ ನಾನು ಅಣಿಯಾಗುತ್ತಿದ್ದಂತೆ ಹತ್ತಿರದ ಕುಗ್ರಾಮ ಕಯ್ಯೂರಿನಲ್ಲಿ ಜನತೆಯ ಪರೀಕ್ಷೆಗಾಗಿ ಅಗ್ನಿಕುಂಡ ಸಿದ್ಧವಾಗುತ್ತಿತ್ತು. ನೀಲೇಶ್ವರ ನನ್ನನ್ನು ಹಗಲಿರುಳೂ ತಟ್ಟುತ್ತಿತ್ತು. ಆ ಧಗೆ ಕಯ್ಯೂರಿನಲ್ಲಿ ಒಮ್ಮೆಲೇ ಭುಗಿಲೆಂದಿತು ... ಮಂಗಳೂರಿಗೆ ಹೊರಟ ನನ್ನ ಗಂಟು ಗದಡಿಗಳಲ್ಲಿ ಅಗ್ನಿಕುಂಡದ ಒಂದು ಕಿಡಿ ಇತ್ತು. ಆರದ ಕಿಡಿ ಹದಿಮೂರು ವರ್ಷಗಳ ಅನಂತರ ಚಿರಸ್ಮರಣೆ ಕಾದಂಬರಿಯನ್ನು ಬರೆಯಲು ಕಾರಣವಾಯಿತು... ಕಯ್ಯೂರ ಹೋರಾಟಕ್ಕೆ ಸಂಬಂಧಿಸಿ ಕೈದಿಗಳನ್ನು ಬಂಧಿಸಿ ಮಂಗಳೂರಿಗೆ ತಂದಿದ್ದರು. ಸೆರೆಮನೆಯಲ್ಲಿ ಆ ಕೈದಿಗಳನ್ನು ಭೆಟ್ಟಿಯಾದೆ. ದೀರ್ಘ ವಿಚಾರಣೆಯ ವೇಳೆ ವರದಿಗಾರನಾಗಿ ಪ್ರತಿದಿನವೂ ಅವರ ಸಾಮಿಪ್ಯದ ಸವಿಯುಂಡೆ.'' ಹೀಗೆ ನಿರಂಜನರಿಗೆ ಚಿರಸ್ಮರಣೆಯ ವಸ್ತು ವಾಸ್ತವವಾಗಿತ್ತು. ಈಗ ಚರಿತ್ರೆಯಾಗಿರುವ ವಸ್ತುವನ್ನು ಅವರು ಪುಸ್ತಕದಿಂದ ಓದಿ ತಿಳಿಯಬೇಕಾಗಿರಲಿಲ್ಲ. ಪ್ರತ್ಯಕ್ಷ ದರ್ಶಕನ ಅನುಭವ ಅವರದಾಗಿತ್ತು. ಅವರೆನ್ನುತ್ತಾರೆ. ''ಚಿರಸ್ಮರಣೆ ಒಂದು ಕಾದಂಬರಿ; ಚರಿತ್ರೆಯಲ್ಲ. ಈ ಕೃತಿಯಲ್ಲಿ ನಾನು ಮಾಡಿರುವುದು ಕಯ್ಯೂರಿನ ಹೋರಾಟದ ಅಂತಃಸ್ಸತ್ವವನ್ನು. ಆ ಕಾಲಾವಧಿಯ ಚೇತನವನ್ನು ಕಲೆಯಲ್ಲಿ ಸೆರೆಹಿಡಿಯುವ ಪ್ರಯತ್ನ.''

ಕಯ್ಯೂರು ಕರ್ನಾಟಕದ ದಕ್ಷಿಣ ತುದಿಯಲ್ಲಿರುವ ಕೇರಳ ರಾಜ್ಯದ ಒಂದು ಕುಗ್ರಾಮ. ಅಲ್ಲಿ ನಂಬಿಯಾರ ಎಂಬುವ ಜಮೀನುದಾರ. ಅವನ ಕೈಕೆಳಗಿನ ಊರಿನ ಒಕ್ಕಲು ಅಂದರೆ ಅವರ ಗೇಣಿದಾರ ಒಕ್ಕಲು ಒಗ್ಗಟ್ಟಾಗಿ ರೈತ ಸಂಘ ಸ್ಥಾಪಿಸಿಕೊಂಡು ಒಡೆಯರ ವಿರುದ್ಧ ಪ್ರತಿಭಟನೆ ಮಾಡಿ ಹುತಾತ್ಮರಾದ ಸಂಗತಿಯೇ ಇಲ್ಲಿಯ ಕಥಾವಸ್ತು. ಇದನ್ನು ತಮ್ಮ ವೈಜ್ಞಾನಿಕ ದೃಷ್ಟಿಕೋನದ ಹಿನ್ನೆಲೆಯ ವಿಶ್ಲೇಷಣೆಯೊಂದಿಗೆ ನಿರಂಜನ ಒಂದು ಶ್ರೇಷ್ಠ ಮಟ್ಟದ ಕಲಾಕೃತಿಯನ್ನಾಗಿಸಿ ಕಡೆದು ನಿಲ್ಲಿಸಿದ್ದಾರೆ. ಭೂ ಮಾಲಿಕರ ದರ್ಪ, ಪೋಲೀಸರ ಮತ್ತು ಸೈನಿಕರ ದೌರ್ಜನ್ಯ ರೈತರ ಬದುಕು ಬವಣೆ

ಇವುಗಳನ್ನೆಲ್ಲ ಎಳೆ ಎಳೆಯಾಗಿ ಚಿತ್ರಿಸುವುದರ ಮೂಲಕ ಐತಿಹಾಸಿಕ ಈ ಬದುಕು ಜೀವತಳೆದು ನಮ್ಮೆದುರು ನಿಲ್ಲುತ್ತದೆ.

ನಿರಂಜನರ ಸೈದ್ಧಾಂತಿಕ ದೃಷ್ಟಿಕೋನ ಎಲ್ಲಿಯೂ ತಾನೇ ತಾನಾಗಿ ಕಾಣಿಸಿಕೊಂಡಿಲ್ಲ. ಅದು ಬೀಜ ಬಿದ್ದು ನೆಲಸೇರಿ ನೀರು ಕುಡಿದು ಫಲಿಸಿ ಮೊಳಕೆಯೊಡೆದು ರೆಂಬೆ ಕೊಂಬೆಗಳಾಗಿ ಚಿಗುರಿ ಬೆಳೆದು ಪಲ್ಲವಿಸುವ ರೀತಿಯಲ್ಲಿ ಸಹಜವೋ ಸಹಜ ಎಂಬಂತೆ ಆಕಾರ ತಳೆಯುತ್ತದೆ. ಕಯ್ಯೂರಿನಲ್ಲಿ ಒಂದು ಖಾಸಗಿ ಶಾಲೆಯಿತ್ತು. ಪ್ರಾಥಮಿಕ ಅಧ್ಯಯನ ಮುಗಿದೊಡನೆ ಎಳೆಯರಿಬ್ಬರೂ ಅಪ್ಪು ಮತ್ತು ಚಿರುಕಂಡ ಮಾಸ್ತರರ ಪ್ರೀತಿಯ ಶಿಷ್ಯರು, ನೀಲೇಶ್ವರಕ್ಕೆ ಕಲಿಯಲು ಹೋಗಬೇಕೆಂದು ಬಯಸಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ.

ಅಪ್ಪು ಮನೆಯಲ್ಲಿ ಹಿರಿಯ ಮಗ. ಚಿರುಕಂಡ ಹೆತ್ತವರ ಏಕಮಾತ್ರ ಸಂತಾನ. ಹೊಲದ ಕೆಲಸದಲ್ಲಿ ಹಿರಿಯವರಿಗೆ ಅವರು ನೆರವಾಗಬೇಕು. ಓದು ಅಲ್ಲಿಗೇ ನಿಂತಿತ್ತು.

ಆದರೂ ಅವರು ಮಾಸ್ತರ ಸಾಮೀಪ್ಯ ಸಹವಾಸದಲ್ಲೇ ಇದ್ದರು. ಚಿರುಕಂಡ ಮತ್ತು ಅಪ್ಪು ಹದಿನೈದು ಹದಿನಾರರ ಹದಿಹರೆಯದವರು. ಒಂದು ದಿನ ಅವರು ಮಾಸ್ತರರ ಸೂಚನೆಯಂತೆ ರಹಸ್ಯವಾಗಿ ಸಮೀಪದ ಹಳ್ಳಿಗೆ ಹೋಗಿ ಬಂದರು. ಅಲ್ಲಿ ಮಾಸ್ತರ ಜೊತೆ ಪಂಡಿತರೆಂಬುವರೊಬ್ಬರು ಇದ್ದರು. ಅವರು ಸಮಾಜ ಬೆಳವಣಿಗೆಯ ಕುರಿತು ವಿಶ್ಲೇಷಣೆ ಮಾಡಿದರು. ಲೋಕ ಹುಟ್ಟಿದ ಕತೆ. ಮಾನವರ ಆರಂಭದ ಬದುಕು, ಈಗಿನ ಸಮಾಜ, ಸಮಾಜದಲ್ಲಿ ವರ್ಗಯಂತ್ರ, ರಚನೆ, ಜ್ಞಾನ ಸಂಪಾದನೆ, ವಸಾಹತುಶಾಹಿ, ಭಾರತದ ಕರ್ಮಕಥೆ, ರಷ್ಯಾದಲ್ಲಿ ಕ್ರಾಂತಿ ಇತ್ಯಾದಿ.

''ದುಡಿಯುವ ಜನರೆಲ್ಲ ಒಂದಾದರೆ ಸುಲಿಯುವ ಜನರೆಲ್ಲ ಸೋತು ಹೋಗ್ತಾರೆ. ನಮ್ಮನ್ನು ಬಿಗಿದಿರುವ ಬೇಡಿಗಳು ಪುಡಿಪುಡಿಯಾಗ್ತವೆ. ಜನ ಕ್ರಾಂತಿ ಬೇರೆಯಲ್ಲ, ರೈತ ಕ್ರಾಂತಿ ಬೇರೆಯಲ್ಲ. ಹಳ್ಳಿ ಹಳ್ಳಿಯಲ್ಲಿ ರೈತ ಸಂಘ ಸ್ಥಾಪಿಸ್ಬೇಕು'' ಇನ್ನೂ ಏನೇನೋ ಅವೆಲ್ಲ ಹುಡುಗರಿಗೆ ಅರ್ಥವಾಗಲಿಲ್ಲ. ಎಲ್ಲವನ್ನು ಇಲ್ಲಿ ನಿರೂಪಕ ಹೇಳುವುದೂ ಇಲ್ಲ. ಪಯಣಿಗನೊಬ್ಬ ತನ್ನ ಚೀಲದಲ್ಲಿ ಬುತ್ತಿಯನ್ನಿಟ್ಟುಕೊಂಡು ನಡೆಯುತ್ತ ಹಸಿವಾದಾಗ ಅಗತ್ಯಕ್ಕೆ ತಕ್ಕಷ್ಟೇ ತಿನ್ನುತ್ತ ಮುಂದೆ ಹೋಗುವ ಬಗೆಯಲ್ಲಿ ಪಂಡಿತರು - ಮಾಸ್ತರು ಹೇಳಿದ ಸೈದ್ಧಾಂತಿಕ ಸೂಕ್ತಿಯನ್ನು ತಮ್ಮ ಬದುಕಿನಲ್ಲಿ ಘಟನೆಗಳು ಪ್ರತ್ಯಕ್ಷವಾದಾಗ ಹಂಬಲಿಸಿಕೊಂಡು ಗಟ್ಟಿಗೊಳ್ಳುತ್ತ ಹೋಗುವ ವಿಧಾನ ಇಲ್ಲಿಯದು. ಇದರಿಂದ ಕಥೆಯ ಕುತೂಹಲ ಮತ್ತು ಕ್ರಾಂತಿಯ ಬೆಳವಣಿಗೆ ಸಮಸಮವಾಗಿ ಒಂದರೊಳಗೊಂದಾಗಿ ಸಾಗುತ್ತದೆ.

ಆ ಮಕ್ಕಳು ಪಂಡಿತರಿಂದ ಹಿಂದಿರುಗಿ ಬರುವಾಗ ತುಸು ರಾತ್ರಿಯಾಗಿತ್ತು. ಚಿರುಕಂಡನ ಮನೆಯಲ್ಲಿ ದೀಪ ಉರಿಸಲು ಚಿಮಣಿ ಎಣ್ಣೆಯೇ ಇರಲಿಲ್ಲ. ಅಪ್ಪ ಜಮೀನುದಾರರ ಕರೆಯ ಮೇರೆಗೆ ಅಲ್ಲಿಗೆ ಹೋಗಿದ್ದ. ಆಗ ಚಿರುಕಂಡನಿಗೆ ಹಿಂದೊಮ್ಮೆ ಯಾವುದೋ ರೈತ ಒಡೆಯರಿಗೆ ಕೊಡಬೇಕಾದ ಸಾಲದ ವಸೂಲಿಗಾಗಿ ಆತನನ್ನು ಜೀವ ಹೋಗುವ ತನಕ ಹೊಡೆದದ್ದರ ನೆನಪಾಗುತ್ತದೆ. ಭೂ ಮಾಲಿಕರ ದೌರ್ಜನ್ಯದ ಬಗೆ ಹೆಪ್ಪುಗಟ್ಟುತ್ತದೆ. ಇದೇ ಸಂಗತಿ ಅಪ್ಪುವಿಗೆ ತಿಳಿದಾಗ ಮಾಸ್ತರು ಹೇಳಿದ ಮಾತು ಅವನಿಗೆ ನೆನಪಾಗುತ್ತದೆ. ಹೊಲ ಕಳಕೊಂಡ ರೈತ ಬಡವನಾಗ್ತಾನೆ; ಭಿಕಾರಿಯಾಗ್ತಾನೆ, ಆ ಮೇಲೆ ದೇಹದ ಶ್ರಮದ ಹೊರತಾಗಿ ಅವನಲ್ಲಿ ಏನೂ ಉಳಿಯೋದಿಲ್ಲ. ಪಟ್ಟಣಕ್ಕೆ ಹೋಗಿ ಕೂಲಿಯಾಗಿ ಆ ಶ್ರಮವನ್ನೇ ಆತ ಮಾರ್‍ತಾನೆ'' ಎಂಬುದು ಹೇಗೆ ಎಂದು ಅರ್ಥವಾಗುತ್ತದೆ.

ಅಪ್ಪು ಮತ್ತು ಅವನ ಸ್ನೇಹಿತ ಚಿರುಕಂಡ ಅಪ್ಪುವಿನ ತಾಯಿಯ ಸಂಗಡ ತಿರುಗಾಡಲು ಹೋದಾಗ ''ರಾತ್ರಿ ತಿರುಗಾಡುವ ಸಂಚಾರಿಗಳಿಗಾಗಿ ಅಪ್ಪು ಬ್ಯಾಟ್ರಿ ಬೇಕು ಎನ್ನುತ್ತಾನೆ ಎಂದು ಚಿರುಕಂಡ ಎಂದಾಗ; ಹಾಗೇ ಒಬ್ಬೊಬ್ಬರ ಕೈಲಿ ಒಂದೊಂದು ಬೆತ್ತವೂ ಇರಬೇಕು'' ಎಂದು ಅಪ್ಪು ಹೇಳುವ ಮಾತಿನಲ್ಲಿ ಬ್ಯಾಟರಿ ಬೆಳಕು ಸೈದ್ಧಾಂತಿಕತೆಯೂ, ಬೆತ್ತ ಹೋರಾಟವೂ ಅವು ಎರಡೂ ಒಂದಾಗಿ ಸಾಗಬೇಕಾಗಿರುವ ನಿಯಮವೂ ಹುಡುಗರಲ್ಲಿಯ ಬೆಳವಣಿಗೆಯಾಗಿ ಸೂಚಿತವಾಗುತ್ತದೆ.

ಪಂಡಿತರ ಭೆಟ್ಟಿಯಾಗಿ ಬಂದ ಮೇಲೆ ಮಾಸ್ತರು ರಾತ್ರಿ ಶಾಲೆ ತೆರೆಯುತ್ತಾರೆ. ಅಲ್ಲಿ ಬರುವವರು ರೈತ ಮಕ್ಕಳು. ಅವರ ಜವಾಬ್ದಾರಿ ಚಿರುಕಂಡ ಮತ್ತು ಅಪ್ಪು ಅವರ ಮೇಲೆ ಇರುತ್ತದೆ. ಆದ ಕಾರಣ ರೈತರೂ ಶಾಲೆಗೆ ಬರುತ್ತಾರೆ. ಪತ್ರಿಕೆಯ ಓದು ಶುರುವಾಗುತ್ತದೆ. ರೈತ ಮಹಿಳೆಯರು ಸಹ ಬರಲು ಶುರು ಮಾಡುತ್ತಾರೆ.

ಅಕ್ಷರ ಕಲಿಕೆ ಜ್ಞಾನಕ್ಕೆ ದಾರಿ ಮತ್ತು ಸಮಾಜ ಪರಿವರ್ತನೆಯ ಸಾಮಾನ್ಯ ನಿಯಮ ಎಂಬಂತಿದೆ. ಮೃತ್ಯುಂಜಯದಲ್ಲಿ ಮೆನೆಪ್‌ಟಾ ಯಾತ್ರೆಗೆ ಹೋದವನು ತನ್ನ ಮಗನಿಗಾಗಿ ಮೊದಲು ಕೊಳ್ಳುವುದು 'ಲಿಪಿಸುರುಳಿ' ರೈತರು ಈ ತನಕ ''ಲಿಪಿಸುರುಳಿ'' ಕೊಂಡದ್ದಿಲ್ಲ ಎಂದು ಅದನ್ನು ಮಾರುವಾತ ಹೇಳುತ್ತಾನೆ.

ಮಾಸ್ತರು ಪ್ರಾರಂಭಿಸಿದ ರಾತ್ರಿ ಶಾಲೆಯ ಸುದ್ದಿ ಭೂಮಾಲಿಕ ನಂಬಿಯಾರ್‌ಗೆ ತಿಳಿದೊಡನೆ ಸಿಟ್ಟುಗೊಳ್ಳುತ್ತಾರೆ. ಮಾಸ್ತರಿಗೆ ಕರೆ ಕಳಿಸುತ್ತಾರೆ. ಅದನ್ನು ನಿರೂಪಕ ಹೀಗೆ ನಿರೂಪಿಸುತ್ತಾನೆ.

''ಆ ಊರಿನ ಪ್ರಮುಖ ಜಮೀನುದಾರರು ಇಬ್ಬರು. ಒಬ್ಬರು ಮಹಾಬ್ರಾಹ್ಮಣ

ನಂಬೂದರಿ, ಅವರ ಮನೆಯ ಹೆಂಗಸರು ಬಾಗಿಲಿನಿಂದ ಹೊರಕ್ಕೆ ಮುಖವಿಡುತ್ತಲೇ ಇರಲಿಲ್ಲ. ಇನ್ನೊಬ್ಬರು ನಂಬಿಯಾರ್, ಹೊಲೆಯರನ್ನಾದರೂ ಸರಿಯೇ ಮೈಕುಟ್ಟಿಯೋ ಬೆನ್ನು ತಟ್ಟಿಯೋ ಕೆನ್ನೆಗೆ ಏಟು ಬಿಗಿದೋ ಮಾತನಾಡಿಸುವ ಸಾಮರ್ಥ್ಯ.''

ಮಾಸ್ತರು ಪತ್ರಿಕೆ ತರಿಸುತ್ತಿದ್ದರೆಂದು ತಿಳಿದಾಗ ನಂಬಿಯಾರರು ಭುಜ ಕುಪ್ಪಳಿಸಿದ್ದರು. ''ಹೋಗಲಿ ವಿದ್ಯಾವಂತ ಓದುವ ಚಟವಾದರೂ ಮರೀಬಾರದು. ಇಲ್ಲಿದ್ರೆ ಹುಡುಗರಿಗೆ ಪಾಠ ಏನು ಹೇಳಿ ಕೊಡ್ತಾನೆ'' ಎಂದು ಸುಮ್ಮನಿದ್ದರು. ಆದರೆ ಶಾಲೆಯ ಜಗಲಿಯ ಮೇಲೆ ಸಂಜೆ ರೈತರು ಕುಳಿತುಕೊಳ್ಳಲು ತೊಡಗಿದುದು ತಿಳಿದಾಗ ನಂಬಿಯಾರರಿಗೆ ರೇಗಿತು.''

ಅವರು ಮಾಸ್ತರನ್ನು ಕರೆಸುತ್ತಾರೆ. ಅವರಿಗೆ ತಾಕೀತು ಕೊಡುತ್ತಾರೆ. ''ನಿಮಗೆ ತಿಳಿಯೋದಿಲ್ಲ ಮಾಸ್ತರೆ, ಈ ಜನ ಎಂಥವರು ಅನ್ನೋದು ನನಗೆ ಗೊತ್ತಿದೆ. ನಾವು ಅವರನ್ನು ದೂರ ಇಟ್ಟರೆ ಮಾತ್ರ ನಮಗೆ ಅವರು ಗೌರವಿಸುತ್ತಾರೆ. ವಿದ್ಯೆ ಇಲ್ಲದೋರು, ಸಂಸ್ಕೃತದಲ್ಲಿ ಅದೇನೋ ಗಾದೆ ಇದೆಯಲ್ಲ, ಹಾಗೆ ಬರೇ ಮೃಗಗಳು. ಅವರನ್ನು ಮೃಗಗಳೆಂದೇ ನೋಡಬೇಕು. ಅದಕ್ಕೆ ಅರ್ಥವಾಗೋದು ಒಂದೇ ಭಾಷೆ. ಬಾರುಕೋಲಿನ ಭಾಷೆ. ಏನು ಹೇಳ್ತೀರಾ.''

ಈಗ ರಾತ್ರಿಶಾಲೆ ಬೇರೆ ಕಡೆಗಾಯಿತು. ಅದೇ ಸಂದರ್ಭದಲ್ಲಿ ರೈತ ಸಂಘ ಸ್ಥಾಪಿಸುವ ಕುರಿತು ರಹಸ್ಯವಾಗಿ ನಿಶ್ಚಯಿಸಲಾಗಿತ್ತು. ಆ ಸಂದರ್ಭದಲ್ಲಿ ಮಾಸ್ತರು ಒಮ್ಮೆ ಶಾಲೆ ಜಗಲಿಯ ಮುಂದೆ ಅಂಗಳದಲ್ಲಿ ನಿಂತು ಚಿಗುರುತ್ತಿರುವ ಮಾವಿನ ಸಸಿಯನ್ನು ನೋಡುತ್ತ ನಿಂತಾಗ ಅಪ್ಪು 'ಅದೇನು ನೋಡ್ತೀರಿ ಸರ್' ಎಂದಾಗ ಮಾಸ್ತರರು ''ಬೀಜ ಮೊಳೆತು ಪುಟ್ಟ ಮರವಾಗಿದೆ. ಈ ಗಿಡ ಮರವಾಗಿ ಹಣ್ಣು ಕೊಡೋದಕ್ಕೆ ಎಷ್ಟು ಕಾಲವಾದೀತು ಅಂತ ಯೋಚಿಸ್ತಿದ್ದೇನೆ'' ಎನ್ನುತ್ತಾರೆ. ಅಪ್ಪುಗೆ ಅರ್ಥವಾಗುವುದಿಲ್ಲ. 'ಬಹಳ ಕಾಲ ಬೇಕಿಲ್ಲ ಸರ್' ಅಂದಾಗ ಮಾಸ್ತರರು ಹೇಳುತ್ತಾರೆ.

''ಪ್ರತಿಯೊಂದು ಹಾಗೆಯೇ, ಬೀಜ ಮೊಳೆತು, ಗಿಡವಾಗಿ ಮರವಾಗಿ ಫಲ ಬಿಡೋದಕ್ಕೆ ಸಮಯ ಬೇಕು. ತಾಳ್ಮೆಯಿಂದ ನಾವು ಕಾಯುತ್ತ ದುಡೀಬೇಕು. ಪ್ರತಿಯೊಂದೂ ಹಾಗೇ.''

ಈ ಮಾತು ಅರ್ಥವಾಗಿ ಚಿರುಕಂಡ.. ತಿಳಿವಳಿಕೆಯ ನಗೆ ನಕ್ಕ. ಸ್ವಲ್ಪ ತಡೆದು ಅಪ್ಪುವಿಗೂ ಅರ್ಥವಾಗಿ ಆತನೂ ನಕ್ಕ ಎಂಬ ವಿವರ ಬರುತ್ತದೆ. ಮಾವಿನ ಗೊರಟೆ ಮಣ್ಣಿಗೆ ಬಿದ್ದಿತು, ಎಂಬ ವಿವರ ಹಿಂದೆ ಬಂದಿದೆ. ಅದು ಈಗ ಗಿಡವಾಗಿದೆ.

ಏಕಕಾಲಕ್ಕೆ ಅದು ಚಿರುಕಂಡ ಮತ್ತು ಅಪ್ಪುವಿಗೆ ಅನ್ವಯಿಸಿದರೆ ಕ್ರಾಂತಿಯ ನಿಯಮಕ್ಕೂ ಅನ್ವಯಿಸುತ್ತದೆ. ಕ್ರಾಂತಿಗೆ ಅದರದೇ ಆದ ನಿಯಮವಿದೆ. ಹುಲ್ಲು ಹಾಲಾಗುವಂತೆ ಸಮಾಜ ಪರಿವರ್ತನೆಯ ಅಥವಾ ಕ್ರಾಂತಿಯ ನಿಯಮ. ಇದನ್ನು ವಾಚಕರ ಗಮನಕ್ಕೆ ತರುತ್ತಲೇ ಚಿರುಕಂಡ ಮತ್ತು ಅಪ್ಪುವಿನ ಬೆಳವಣಿಗೆ ಭವಿಷ್ಯವನ್ನು ಸೂಚಿಸುತ್ತದೆ. ಹಾಗೆಯೇ ಆ ಇಬ್ಬರ ವ್ಯಕ್ತಿ ವಿಶಿಷ್ಟತೆಯನ್ನು ಕೂಡ ಧ್ವನಿಸುತ್ತದೆ. ಹೀಗೆ ಒಂದು ಕಲಾತ್ಮಕ ಹಂದರ ಒಳಮೈಯಲ್ಲಿ ಹೊರೆದು ಬರುವ ವಿಶಿಷ್ಟತೆ ಇಲ್ಲಿಯದು.

ತಳಿಪರಂಬ ಜಾತ್ರೆಗೆಂದು ಕಯ್ಯೂರಿನ ರೈತರು ಹೋಗುತ್ತಾರೆ. ನಂಬಿಯಾರರಿಗೆ ತಿಳಿಸದೇ ಹೋಗುವುದು ಅದು ಮೊದಲ ಬಾರಿ. ಆದರೆ ಅವರು ನಿಜವಾಗಿ ಹೋಗುವುದು ರೈತ ಸಮ್ಮೇಳನಕ್ಕೆ.

ಮಾರನೆಯ ಮುಂಜಾವದಲ್ಲಿ ತಳಿಪರಂಬ ಜಾತ್ರೆಗೆ ಹೋಗಿದ್ದವರೆಲ್ಲ ಮರಳಿ ಬಂದರು. ರೈತ ಜಾಗೃತಿಯನ್ನು ಕಣ್ಣಾರೆ ಕಂಡ ಅನುಭವ ಅವರೆಲ್ಲರಲ್ಲಿ ಹೊಸ ಶಕ್ತಿಯನ್ನು ತುಂಬಿತ್ತು. ಪ್ರವಾಸದಿಂದ ದಣಿದಿದ್ದರೂ ಬೆನ್ನುಗಳು ನೇರವಾಗಿದ್ದವು; ಕಪೋಲಗಳು ಬತ್ತಿದ್ದರೂ ಆತ್ಮವಿಶ್ವಾಸದ ನಗೆ ತುಟಿಗಳ ಮೇಲೆ ನರ್ತಿಸುತ್ತಿತ್ತು. ಕಯ್ಯೂರಿನಲ್ಲಿ ರೈತ ಸಂಘ ಸ್ಥಾಪನೆಯಾಗುವುದು ಬಹಿರಂಗವಾಯಿತು. ನಂಬಿಯಾರ ಮಾಸ್ತರರನ್ನು ಕರೆದರು. ವಿದ್ಯಮಾನ ವಿಚಾರಿಸಿದರು. ಮಾಸ್ತರು ತಿಳಿಯದಂತಿದ್ದರು. ''ಒಳ್ಳೆ ಕನ್ನಡಿ ಹಾವು ಕಣಯ್ಯ ನೀನು; ಎಂಥವ್ನ ಇಷ್ಟು ಕಾಲ ಸಾಕ್ದೆ ಅಬ್ಬ'' ಎಂದು; ಪರೀಕ್ಷೆ ಮುಗಿದೊಡನೆ ಚಾರ್ಜುಕೊಟ್ಟು ಮಾಸ್ತರಿಗೆ ಮನೆಗೆ ಹೋಗಲು ಹೇಳಿದರು.

ರೈತ ಸಂಘಕ್ಕೆ ಪೊಡವರ ಕುಇಂಬ ಸ್ಥಳಕೊಟ್ಟ. ಅಷ್ಟು ಹೊತ್ತಿಗೆ ಅಬೂಬಕರ ನಗರದಿಂದ ಬಂದು ಸೇರಿಕೊಂಡ. ಆತನು ಸ್ಥಾಪಿಸಿದ ಬಾಲಪಥಕ್ಕೆ ಕೃಷ್ಣ ನಾಯರ್ ಎಂಬ ಬಾಲಕ ಮುಖ್ಯಸ್ಥನಾದ. ಈಗ ಕ್ರಾಂತಿ ಸಂಘಟನೆಗೆ ಐವರಾದರು. ಅವರಲ್ಲಿ ಅಪ್ಪು ಮತ್ತು ಚಿರುಕಂಡ ಮುಖ್ಯಸ್ಥರು. ಮಾಸ್ತರು ಊರು ಬಿಟ್ಟು ಹೊರಡುವಾಗ, ಬೆಳಿಗ್ಗೆ ಹೊರಡುತ್ತಿದ್ದಂತೆ ಶಾಲೆಯ ಹಿತ್ತಲಲ್ಲಿ ಎರಡೂ ಕಡೆ ಎತ್ತರಕ್ಕೆ ಬೆಳೆದಿದ್ದ ಎರಡು ಮಾವಿನ ಸಸಿಗಳತ್ತ ಗಮನ ಹರಿಯಿತು. ಎದುರು ನೆರೆದಿದ್ದವರನ್ನು ನೋಡಿ ಮಾಸ್ತರರೆಂದರು ''ಗಿಡಗಳು ಬೆಳೀತಾ ಇವೆ. ಆದರೂ ಫಲ ಕೊಡೋ ಸ್ಥಿತಿಗೆ ಇನ್ನೂ ಬಂದಿಲ್ಲ.''

ಸಂಘ ಸ್ಥಾಪನೆಯಾದಾಗ ದಿನಾ ಬೆಳಿಗ್ಗೆ ಪಥ ಚಲನೆ ನಡೆಯುತ್ತಿತ್ತು. ಅದರಲ್ಲಿ ರೈತ ಮಕ್ಕಳು ಇರುತ್ತಿದ್ದರು. ಅದು ನಂಬಿಯಾರರ ಉಗ್ರ ಸಿಟ್ಟಿಗೆ ಕಾರಣವಾಯಿತು. ಸರಕಾರಕ್ಕೆ ರೈತರು ಸರಕಾರದ ವಿರುದ್ಧ ಕ್ರಾಂತಿ ಎದ್ದಿದ್ದಾರೆಂದು ವರದಿ ಮಾಡಿದರು. ಸರಕಾರ ಒಬ್ಬ ಪೋಲೀಸನನ್ನು ಕಳಿಸಿತು.

ಒಂದು ದಿನ ಪಥ ಚಲನೆಯಾಗುವಾಗ ಪೋಲೀಸ ಸುಬ್ಬಯ್ಯ ಅವರನ್ನು

ಹಿಂಬಾಲಿಸಿ ವೇಗದಿಂದ ನಡೆದು ಮುಂದೆ ಹೋಗಿ ಅಡ್ಡಗಟ್ಟಿದ. ಸ್ವಯಂ ಸೇವಕರು ದಾರಿ ಬಿಡುವಂತೆ ಹೇಳಿದರು. ಸುಬ್ಬಯ್ಯ ನೂಕಿದ. ಬಾಲಕ ಕೃಷ್ಣ ನಾಯರ್‌ಗೆ ಹೊಡೆದ. ಸುಬ್ಬಯ್ಯನಿಗೆ ಹೊಡೆತ ಬಿತ್ತು. ಸುಬ್ಬಯ್ಯ ಓಡಿದ. ಹಿಂದಿನಿಂದ ಸ್ವಯಂ ಸೇವಕರು ಬೆನ್ನಟ್ಟಿದ್ದರು. ಸುಬ್ಬಯ್ಯ ಹೆದರಿ ನದಿಗೆ ಹಾರಿದ. ದಂಡೆಯಿಂದ ಇವರು ಕಲ್ಲು ಬೀಸಿದರು. ಕಲ್ಲಿನ ಹೊಡೆತ, ಈಜಿನ ದಣಿವು ಸುಬ್ಬಯ್ಯ ಸತ್ತ. ಆಗ ಸಂಘದ ಅಧ್ಯಕ್ಷ ಕಾರ್ಯದರ್ಶಿಗಳಾದ ಅಪ್ಪು ಮತ್ತು ಚಿರುಕಂಡ ಅಲ್ಲಿದ್ದಿರಲಿಲ್ಲ. ಘಟನೆಯ ಕರಾಳತೆ ಅವರಿಗೆ ಅರ್ಥವಾಯಿತು. ಆದರೆ ಹಿಂದೆ ಸರಿಯುವಂತಿರಲಿಲ್ಲ. ಮುಂದಿನ ಸುರಕ್ಷತೆಯ ಬಗ್ಗೆ ಅವರು ಯೋಚಿಸಿದರು.

ಸರಕಾರಕ್ಕೆ ಸುದ್ದಿ ಹೋಯಿತು. ಸರಕಾರ ಸೈನಿಕರನ್ನು ಕಳಿಸಿತು. ಕಯ್ಯೂರಿನ ಪ್ರಕರಣಕ್ಕೆ ಅತ್ಯಂತ ಮಹತ್ವ ಬಂತು. ನಿರೂಪಕ "ಒಬ್ಬ ಪೋಲೀಸು ಸತ್ತನೆಂದೇನೂ ಅದು ತಲ್ಲಣಗೊಂಡಿರಲಿಲ್ಲ. ಸಾಮ್ರಾಜ್ಯಶಾಹಿಯ ಉದ್ಯಾನದಲ್ಲಿ ಸುಬ್ಬಯ್ಯನೊಂದು ಗರಿಹುಲ್ಲು. ಗಾಬರಿಯಾದುದಕ್ಕೆ ನಿಜವಾದ ಕಾರಣ ಭಾರತದ ನರಕುರಿ ಆ ಹುಲ್ಲನ್ನು ಮೂಸಿ ನೋಡಿದೆಯೆಂದು" ಎನ್ನುತ್ತಾರೆ. ಕಯ್ಯೂರ ರೈತ ಸಂಘ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಬಿಸಿಯನ್ನು ತಲ್ಪಿಸಿತು. ಕಯ್ಯೂರಿನಲ್ಲಿ ಸೈನಿಕರ ನರಬೇಟೆ ಶುರುವಾಯಿತು. ೬೦ ಜನರ ಮೇಲೆ ರಾಜದ್ರೋಹದ ಪ್ರಕರಣ ಅವುಗಳಲ್ಲಿ ಚಿರುಕಂಡ, ಅಪ್ಪು, ಕುಞಂಬು, ಅಬೂಬಕರ್ ಮತ್ತು ಕೃಷ್ಣ ನಾಯರ್ ಕೊಲೆಪಾತಕಿಗಳು. ಅಪ್ಪು ಮತ್ತು ಅಬೂಬಕರ ಭೂಗತರಾಗಿದ್ದರು. ಚಿರುಕಂಡ ಸಂಘದ ಕಾರ್ಯದರ್ಶಿ ಊರಲ್ಲೇ ಉಳಿದು ಕಾರ್ಯನಿರ್ವಹಣೆ ಮಾಡುತ್ತಿದ್ದ. ರಾತ್ರಿ ಆದಷ್ಟು ಹೆಂಗಸರನ್ನು ಊರಾಚೆ ಸಾಗಿಸಲಾಯಿತು. ಆದರೂ ಸೈನಿಕರಿಂದ ಕೆಲವರ ಅತ್ಯಾಚಾರ ನಡೆಯಿತು. ಅರವತ್ತರಲ್ಲಿ ೫೮ ಜನರ ಬಂಧನವಾಯಿತು. ಮಾಸ್ತರರನ್ನು ಬಂಧಿಸಲಾಗಿತ್ತು.

ಭೂಗತರಾಗಿದ್ದ ಅಪ್ಪು, ಅಬೂಬಕರ ತಮ್ಮ ಹಿಂದಿನ ಗುರುತಿನವರ ಮನೆಗೆ ಗುಪ್ತವಾಗಿ ತಲ್ಪಿದಾಗ ಊರಿನಲ್ಲಿ ಸೈನಿಕರೆಸಗಿದ ದೌರ್ಜನ್ಯವನ್ನು ತಿಳಿದು ನಿರಾಶರಾದರು. "ಹಾಗಾದರೆ ಎಲ್ಲಾ ಮುಗಿದಂತೆ" ಎಂದು ನಿರಾಶೆ ತೋರಿದಾಗ ಆ ಮನೆಯವರು "ನೀವು ಯಾಕೋ ಎಳೆ ಮಗುವಿನ ಹಾಗೆ ಆಡ್ತಿದ್ದೀರಿ, ಸಂಗಾತಿ. ಜನತೆಯ ಹೋರಾಟ ಎಂದರೇ ಹೀಗೆ. ಸಾವಿರ ಕಡೆ ಚಕಮಕಿಯಾಗಿ ಕಿಡಿ ಹಬ್ಬಿದ ಮೇಲೆ ದೊಡ್ಡ ಬೆಂಕಿಯಾಗ್ತದೆ."

"ಅದಕ್ಕೂ ಮುಂಚೆ ಕಿಡಿ ಆರಿದರೆ?"

"ಆರೋದು ಯಾವತ್ತಿಗೂ ಇಲ್ಲ. ಜನರ ಹೃದಯದಲ್ಲಿ ಕಿಡಿ ಇದ್ದೇ ಇರುತ್ತದೆ. ಅದು ಪ್ರಜ್ವಲಿಸೋದಕ್ಕೆ ಪ್ರೇರಕ ಶಕ್ತಿಯೊಂದಿದ್ದರೆ ಸರಿ."

ಮೊದಲೇ ಹೇಳಿದಂತೆ ಕ್ರಾಂತಿಯ ನಿಯಮ, ಸಂಘರ್ಷದ ನಿಯಮ ಹನಿ ಹನಿಯಾಗಿ ಹೋರಾಟಗಾರರಿಗೆ ತಕ್ಕ ಸಮಯದಲ್ಲಿ ಲಭಿಸುತ್ತ ಹೋಗುತ್ತದೆ. ಇದು ಕಾದಂಬರಿಯ ತಂತ್ರದ ರೀತಿ ಎಂಬುದನ್ನು ಮತ್ತೊಮ್ಮೆ ನೆನಪು ಮಾಡಿಕೊಳ್ಳಬಹುದು.

ಅಪ್ಪು ಮತ್ತು ಅಬೂಬಕರ ಇಬ್ಬರೂ ಪೋಲೀಸರಿಗೆ ಶರಣಾಗುತ್ತಾರೆ. ಇದರಿಂದ ಊರಲ್ಲಿಯ ರೈತರ ಬೇಟೆ ನಿಲ್ಲುತ್ತದೆ. ಒಂದು ದಿನ ಜೇಲರ ಬಂದು ಮಾಸ್ತರಿಗೆ ಹೇಳಿದ. ''ಕಲ್ಲಿಕೋಟೆಯಲ್ಲಿ ಕಯ್ಯೂರಿನ ಕೈದಿಗಳ ರಕ್ಷಣಾ ಸಮಿತಿ ಅಂತ ಮಾಡಿದಾರಂತೆ... ಸಮಿತಿಯವರು ಪ್ರಖ್ಯಾತ ವಕೀಲರನ್ನು ನೇಮಿಸ್ತಾರಂತೆ, ಅಂತೂ ಪ್ರಚಂಡರು ನೀವು. ಊರಲ್ಲಿ ಗೋರಿ ತೋಡಿದರೆ ಇನ್ನೆಲ್ಲೋ ಪ್ರತ್ಯಕ್ಷವಾಗ್ತೀರಲ್ಲ.''

ಕಯ್ಯೂರಿನ ಪ್ರಕರಣ ಸಾರ್ವಜನಿಕ ಪ್ರಕರಣವಾಯಿತು. ಮೊದಲ ಕೋರ್ಟಿನಿಂದ ಸ್ಪೆಷಲ್ ಕೋರ್ಟಿಗೆ ಹೋಯಿತು. ಅಲ್ಲಿಂದ ಸ್ಪೆಷಲ್ ನ್ಯಾಯ ವಿಚಾರಣೆಯ ನಾಟಕ ನಡೆಯಿತು. ಅಲ್ಲಿ ಮಾಸ್ತರರನ್ನೊಳಗೊಂಡು ಅನೇಕರಿಗೆ ದೀರ್ಘಾವಧಿಯ ಜೈಲು ಶಿಕ್ಷೆಯಾಯಿತು. ಆದರೆ ಐದು ಜನರಿಗೆ ಚಿರುಕಂಡ, ಅಪ್ಪು, ಅಬೂಬಕರ, ಕುಇಂಚು ಮತ್ತು ಕೃಷ್ಣನಾಯರ್‌ಗೆ ನೇಣುಗಂಬದ ಶಿಕ್ಷೆ. ಅದರಲ್ಲಿ ಕೃಷ್ಣ ನಾಯರ್ ಅಪ್ರಾಯಸ್ಥನೆಂದು ಮರಣದಂಡನೆ ರದ್ದಾಯಿತು.

ಆದರೂ ಸಾರ್ವಜನಿಕ ಹಿತಾಸಕ್ತರು ಸುಮ್ಮನೆ ಕೂಡ್ರಲಿಲ್ಲ. ಪ್ರಿವಿಕೌನ್ಸಿಲ್‌ಗೆ ಅರ್ಜಿ ಸಲ್ಲಿಸಲಾಯಿತು. ಆದರೂ ಮರಣದಂಡನೆ ಖಚಿತವಾಯಿತು. ಅವರನ್ನು ಬೇರೆ ಬೇರೆ ಕೋಣೆಯಲ್ಲಿ ಇಡಲಾಯಿತು.

ಅವರ ತಂದೆ ತಾಯಿಗಳು ಹೆಂಡಂದಿರು ಜೈಲಿಗೆ ನೋಡಲು ಬರುತ್ತಾರೆ. ಅದೊಂದು ಹೃದಯವಿದ್ರಾವಕ ದೃಶ್ಯ. ಕರುಣೆಯ ಕೋಡಿ, ಓದಿಯೇ ಅನುಭೋಗಿಸಬೇಕಾದ ಭಾಗ.

ಕೊನೆ ಆಸೆ ಏನಿದೆ ಎಂದು ಜೈಲರ್ ಶಿಕ್ಷಿತರನ್ನು ಕೇಳುತ್ತಾನೆ. ''ಸಾಮ್ರಾಜ್ಯಶಾಹಿ ನಾಶವಾಗೋದನ್ನು ನೋಡಿ ಸಾಯ್ಬೇಕೂಂತ ನಮ್ಮ ಆಸೆ. ನಡೆಸಿಕೊಡ್ತೀರಾ ಕೇಳು ಚಿರುಕಂಡ'' ಎಂದು ಅಬೂಬಕರ ಹೇಳುತ್ತಾನೆ.

ನೇಣುಗಂಬ ಏರಿಸಲಾಗುತ್ತದೆ. ಉಚ್ಚ ಕಂಠದಿಂದ ಚಿರುಕಂಡ ಕೂಗಿದ. 'ಇಂಕ್ವಿಲಾಬ್' ಎಲ್ಲರೂ ಕೂಗಿದರು. 'ಜಿಂದಾಬಾದ್ ಕ್ರಾಂತಿಗೆ ಜಯವಾಗಲಿ.'

ಸುದ್ದಿ ತಿಳಿದ ಮಾರನೇ ದಿನ ನಂಬಿಯಾರ ಬಂದು ಶಾಲೆಯ ಎದುರು ಬೆಳೆದು ನಿಂತ ಎರಡು ಮಾವಿನ ಮರಗಳನ್ನು ಕಡಿದುರುಳಿಸಲು ಆದೇಶ ನೀಡಿದ.

ಅವರ ಸ್ಮಾರಕ ಶಿಲೆಯ ಮೇಲೆ ''ಬದುಕನ್ನು ಪ್ರೀತಿಸಿದ ಈ ಬಾಂಧವರು ಒಳ್ಳೆಯ ಬದುಕಿಗೋಸ್ಕರ ದುಡಿದರು; ಮಡಿದರು'' ಎಂದು ಕೆತ್ತಿಸಲಾಗುತ್ತದೆ.

ಕತೆಯ ಸಾರಾಂಶ ಇದಾದರೂ ಚಿತ್ರಣದಲ್ಲಿ ಅನೇಕ ಆಯಾಮವಿದೆ. ಲೇಖಕರು ಬಹು ಕುಶಲತೆಯಿಂದ ವರ್ಗ ಹೋರಾಟದ ಮಧ್ಯೆ ನುಸುಳಿ ಬರುವ ವರ್ಣ ಸಂಘರ್ಷವನ್ನು ತಂದಿದ್ದಾರೆ. ಅದು ಮಂದವಾದರೂ ಹಾಜರಾಗಿದೆ. ಬ್ರಾಹ್ಮಣ ನಂಬೂದರಿಗೆ ಊರಿಗೆ ಶಾಲೆ ತರುವ ಮನಸ್ಸಿಲ್ಲ. ಯಾಕೆಂದರೆ ಶೂದ್ರರಿಗೆ ಅಕ್ಷರಸಲ್ಲ. ಆದರೆ ನಂಬೂದರಿ ಶೂದ್ರನಾದರೂ ಭೂಮಾಲಿಕ. ಅವನಿಗೆ ಅಕ್ಷರಬೇಕು. ಆದ್ದರಿಂದ ನಂಬೂದರಿಯನ್ನು ಮೀರಿ ಊರಿಗೆ ಶಾಲೆಯನ್ನು ತಂದ. ಆದರೆ ಆದೇ ಅವನಿಗೆ ರೈತ ಮಕ್ಕಳಿಗೆ ಅಕ್ಷರ ಕೊಡುವ ಮನಸ್ಸಿಲ್ಲ. ಈ ರೀತಿ ಶಾಲೆಯ ''ಸ್ಥಾಪನೆಗೆ ನಾವೇ ಮೂಲ ಕಾರಣವಾದರೂ ರೈತರ ಮಕ್ಕಳಿಗೆಲ್ಲ ವಿದ್ಯೆ ಕೊಡೋ ವಿಷಯದಲ್ಲಿ ನನ್ನದೇ ಆದ ಅಭಿಪ್ರಾಯವುಂಟು. ಈ ಜನ ಯಾರೂ ಕಾಲೇಜಿಗೆ ಹೋಗಬೇಕಾಗಿಲ್ಲ. ಹೈಸ್ಕೂಲು ಇವರಿಗೆ ಅಗತ್ಯವಿಲ್ಲ. ರೈತರ ಮಕ್ಕಳು ಸಹಿ ಹಾಕೋದಕ್ಕೆ ಕಲಿತರೆ ಸಾಕು. ಇಷ್ಟು ವಿದ್ಯೆಯಾದರೂ ಯಾಕೆ ಗೊತ್ತೇ? ಬರೇ ಹೆಬ್ಬೆಟ್ಟಿನ ರುಜುವೇ ಇದ್ದರೆ ಏನೂ ತಿಳೀದೋರಿಗೆ ಮೋಸ ಮಾಡ್ತಾ ಇದ್ದಾರಂತ ಇವರು ಬಡ್ಕೋಬಹುದು. ಮುಂದೆ ಹಾಗಲ್ಲ. ಕರಾರು ಪತ್ರ ಏನಿದ್ದರೂ ಬರೆದದ್ದು ಪೂರ್ತಿ ಅರ್ಥವಾಗಿದೇಂತ ಹೇಳಿ ಅವರು ಅಕ್ಷರದಲ್ಲೇ ಸಹಿ ಹಾಕ್ಬಹುದು. ಏನು ಹೇಳ್ತಿರಾ?'' ಎಂದು ನಂಬಿಯಾರ್ ಮಾಸ್ತರೊಡನೆ ಹೇಳುತ್ತಾನೆ. ಇದು ವರ್ಗ ಸ್ವಭಾವದ ನೀಚತನದ ಪ್ರಕಟಣೆ. ನಂಬೂದರಿ ಮತ್ತು ನಂಬಿಯಾರರಲ್ಲಿ ಶೀತಲ ಸಮರ ಇದ್ದರೂ ರೈತರ ಸಂದರ್ಭದಲ್ಲಿ ಅವರು ಒಂದಾಗುತ್ತಾರೆ. ನಿರಂಜನರ ಮಂಡನೆಯಲ್ಲಿ ವರ್ಗಸ್ವಭಾವ ನೇರ ನಡೆ ಉಳ್ಳದ್ದು. ಆದ್ದರಿಂದಲೇ ಜಾತಿ ಮಂದವೂ ಅಪ್ರತ್ಯಕ್ಷವೂ ಆಗಿರುತ್ತದೆ.

ಇಲ್ಲಿಯ ಪ್ರತಿಯೊಂದು ಪಾತ್ರವೂ ತನ್ನದೇ ವೈಶಿಷ್ಟ್ಯತೆಯಿಂದ ಮೂಡಿಬರುತ್ತದೆ. ಅಪ್ಪುವಿನ ಹಾಗೆ ಚಿರುಕಂಡನಿಲ್ಲ. ಮಾಸ್ತರರ ಹಾಗೆ ಪಂಡಿತರಿಲ್ಲ. ಕಣ್ಣನ ಹಾಗೆ ಕೋರನಿಲ್ಲ. ಅಲ್ಲದೆ ಇರುವಿಕೆಯ ಅಂತಸ್ತಿನಲ್ಲಿ ಕೂಡ ಭಿನ್ನತೆಯುಂಟು. ಆದರೆ ರೈತ ಸಂಕಷ್ಟದ ಸಂದರ್ಭದಲ್ಲಿ ಜಮೀನ್ದಾರಿಕೆಯ ಎದುರಿನಲ್ಲಿ ಒಂದು ವರ್ಗವಾಗಿ ಬೆಸೆಯುತ್ತಾರೆ. ಹಾಗೆಯೇ ರೈತ ಸಂಘ ಭೂಮಾಲಿಕರಲ್ಲಿ ಎದೆ ನಡುಕ ಹುಟ್ಟಿಸುತ್ತದೆ. ಕೊನೆಗೂ ಶೋಷಿತ ವರ್ಗದ ಬಂಧಮುಕ್ತಿಯೇ ಅಂತ್ಯವಾಗಬೇಕೆಂಬುದು ಆಶಯ. ಅದಕ್ಕನುಸಾರ ಕತೆ ಮುಗಿತಾಯಕ್ಕೆ ಬರುತ್ತದೆ.

ಈ ಕಾದಂಬರಿಯ ಕುರಿತು ಖ್ಯಾತ ವಿಮರ್ಶಕ ಶ್ರೀ ಕೀರ್ತಿನಾಥ ಕುರ್ತಕೋಟಿಯವರು ''ಇವರ 'ಚಿರಸ್ಮರಣೆ' ಇವರ ಕೃತಿಗಳಲ್ಲೆಲ್ಲಾ ಶ್ರೇಷ್ಠವಾದುದಷ್ಟೇ ಅಲ್ಲ, ಕನ್ನಡ ಕಾದಂಬರಿಗಳಲ್ಲಿ ಒಂದು ಮಹತ್ವದ ಸ್ಥಾನವನ್ನು ಗಳಿಸಬಲ್ಲ ಕೃತಿಯಾಗಿದೆ'' ಎನ್ನುತ್ತಾರೆ. (ಯುಗಧರ್ಮ ಮತ್ತು ಸಾಹಿತ್ಯ ದರ್ಶನ-ಕಾದಂಬರಿ ಇತಿಹಾಸ ಪ್ರಬಂಧ ಪುಟ ೨೦೦.)

## ಕಲ್ಯಾಣ ಸ್ವಾಮಿ ಮತ್ತು ಸ್ವಾಮಿ ಅಪರಂಪಾರ

'ಕಲ್ಯಾಣ ಸ್ವಾಮಿ' ಮತ್ತು 'ಸ್ವಾಮಿ ಅಪರಂಪಾರ' ಎರಡೂ ಕಾದಂಬರಿಗಳು ಕೊಡಗಿನ ರೈತ ವೀರರು ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟದ ದುರಂತ ಕತೆಯಾಗಿದೆ. ಇದನ್ನು ಬಂಡಾಯ, ಕಳ್ಳಾಟ ಎಂದೆಲ್ಲ ಇಂಗ್ಲೀಷರು ಕರೆದರು. ಆದರೆ ಚರಿತ್ರೆಯ ದಾಖಲೆ ಬೇರೆ ಹೇಳುತ್ತದೆ ಎಂದರು ನಿರಂಜನ.

''ಬೋಪು ದಿವಾನರಿಗೂ ಆತನ ಜನರಿಗೂ ಕಂಪನಿ ಸರಕಾರದವೆರು ಜಹಗೀರು ಭೂಮಿಗಳನ್ನು ಯುದ್ಧದಲ್ಲಿ ಸತ್ತುಹೋದವರ ಕುಟುಂಬಗಳಿಗೆ ಮೂರು ತಲೆಮಾರುಗಳವರೆಗೆ ಪೆನ್ಶನ್‌ನನ್ನು, ಕಾಟಕಾಯಿಯಲ್ಲಿ (ದಂಗೆ ಅಡಗಿಸಲು) ಭಾಗವಹಿಸಿದವರ ಯೋಗ್ಯತೆಗನುಸಾರವಾಗಿ ಚಿನ್ನ, ಬೆಳ್ಳಿ ಪದಕಗಳನ್ನು ಕೊಟ್ಟರು. ಚಿನ್ನದ ಪದಕವು ಸರಪಣಿ ಸಮೇತ ಹನ್ನೊಂದೂವರೆ ತೊಲೆ ತೂಕವುಳ್ಳದ್ದಾಗಿತ್ತು. ಆ ಪದಕದ ಒಂದು ಬದಿಯಲ್ಲಿ ಕೊಡಗು ವೀರನು ಯುದ್ಧ ಮಾಡುವ ಹಾಗೆ ಅಚ್ಚೊತ್ತಿದೆ. ಇನ್ನೊಂದು ಬದಿಯಲ್ಲಿ ಪೀಚೆಕತ್ತಿ ಮತ್ತು ಒಡಿಕತ್ತಿಗಳನ್ನು ಒಂದು ಹಾರದಲ್ಲಿ ಕಟ್ಟಿ ಸಿಕ್ಕಿಸಿದ ಹಾಗೆ ಬಿಡಿಸಿದೆ. ಇದಲ್ಲದೆ ಪದಕದ ಒಂದು ಬದಿಯಲ್ಲಿ ಇಂಗ್ಲೀಷ್‌ನಲ್ಲಿ "For distinguished conduct loyalty to British Government Coorg, 1837'. ಎಂದು ಬರೆದಿದೆಯೆಂದರು. ಕಳ್ಳನನ್ನು ಹಿಡಿದರೆಂಬ ಕಾರಣದಿಂದ ವೀರರಿಗೆ ಇಷ್ಟೊಂದು ಸತ್ಕಾರ ಮಾಡಿದರೆಂದು ನಂಬುವುದು ಕಷ್ಟ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಕಥಾ ನಾಯಕ ಕಲ್ಯಾಣ ಸ್ವಾಮಿಯ ಪಾತ್ರವನ್ನು ನಾನು ಸೃಷ್ಟಿಸಿದೆ. ಇತಿಹಾಸದ ನಿರ್ಮಾತೃಗಳು ಜನರೇ ಎಂಬ ಸಾರ್ವತ್ರಿಕ ತತ್ವವನ್ನು ಮರೆಯದೆ ಈ ಕಾದಂಬರಿಯನ್ನು ರಚಿಸಿದ್ದೇವೆ'' ಎಂದು 'ಕಲ್ಯಾಣ ಸ್ವಾಮಿ'ಯ ಮುನ್ನುಡಿಯಲ್ಲಿ ಹೇಳುತ್ತಾರೆ. ಈ ಮಾತಿನ ಹಿಂದಿರುವ ಚರಿತ್ರೆಯ ಕುರಿತಾದ ದೃಷ್ಟಿಕೋನವೇ ಸ್ವಾಮಿ ಅಪರಂಪಾರದಲ್ಲೂ ಕೆಲಸ ಮಾಡಿದೆ.

ಘಟನೆ ನಡೆದದ್ದು ೧೯ನೇ ಶತಮಾನದಲ್ಲಾದರೂ ಕಾದಂಬರಿಯ ರಚನೆಯ ಕಾಲ ಸ್ವಾತಂತ್ರ್ಯ ಹೋರಾಟದ್ದಾದ್ದರಿಂದ ನಡೆಯುತ್ತಿರುವ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ಕೊಡುವ ಉದ್ದೇಶ ಆವೇಶಕ್ಕೆಡೆ ಮಾಡಿದೆ ಎಂಬುದು ಇಲ್ಲಿ ಎದ್ದು ಕಾಣುತ್ತದೆ.

''ಕಲ್ಯಾಣ ಸ್ವಾಮಿಯ'' ಪುಟ್ಟ ಬಸಪ್ಪನಾಗಲಿ, 'ಅಪರಂಪಾರ'ದ ಅಪರಂಪಾರನಾಗಲಿ ಜನರೆದುರು (ರೈತರೆದುರು) ಇಡುವ ಸಮಸ್ಯೆಯೆಂದರೆ ತಮ್ಮ ರಾಜ್ಯ ಹೇಗೆ ಇಂಗ್ಲೀಷರ ಕುತಂತ್ರದಿಂದ ಹಾಗೂ ತಮ್ಮವರೇ ಆದ ಕೆಲವರ ಸ್ವಾಮಿದ್ರೋಹದ ವಂಚನೆಯಿಂದ ತಮ್ಮರಾಜನು ಉಚ್ಚಾಟಿಸಲ್ಪಟ್ಟು ತಾವು ಬಿಳಿಯರ

ಗುಲಾಮರಾದೆವು ಎಂಬುದಾಗಿದೆ. ಈ ಸಮಸ್ಯೆಯನ್ನು ಮುಂದಿಡುವಾಗ ಅವರ ಭಾಷೆ ಸ್ವಾಭಿಮಾನದ ಭಾವೋದ್ವೇಗದಿಂದ ಕಂಪಿಸುತ್ತದೆ.

"ಒಬ್ಬರ ವಿರುದ್ಧ ಒಬ್ಬರನ್ನು ಎತ್ತಿಕಟ್ಟಿ ಇಬ್ಬರನ್ನೂ ಶಕ್ತಿಕುಂದಿಸಿ ಮಧ್ಯೆ ತಮ್ಮ ಬಾವುಟವನ್ನು ಭದ್ರವಾಗಿ ನೆಡಿಸಿದ್ದ ಸಮರ್ಥರು ಇಂಗ್ಲೀಷರು" ಎಂದು ಕಲ್ಯಾಣ ಸ್ವಾಮಿಯ ನಂಜಯ್ಯ ಹೇಳುತ್ತಾನೆ. ಕೊಡಗಿನ ದಳಪತಿಗಳು "ಪರದೇಶೀಯರ ಸೊಕ್ಕು ಮುರಿಯಬೇಕು. ಆತನ ಮೊಮ್ಮಕ್ಕಳಿಗೂ ಮರಿಮಕ್ಕಳಿಗೂ ಪಾಠ ಕಲಿಸಬೇಕು" ಎನ್ನುತ್ತಾನೆ. ತಮ್ಮ ವಿರುದ್ಧ ಬಂಡೆದ್ದ ಕಲ್ಯಾಣಸ್ವಾಮಿ, ಬಂಗರಾಜ, ರಾಮೇಗೌಡ ಮತ್ತು ಅಣ್ಣಿಗೌಡರನ್ನು ಇಂಗ್ಲೀಷರು ಸೆರೆ ಹಿಡಿದಿದ್ದಾರೆ. ಹೀಗೆ ಕಲ್ಯಾಣ ಸ್ವಾಮಿಯ ಮುಂದಾಳ್ತನದಲ್ಲಿ ನಡೆದ ಸ್ವಾತಂತ್ರ್ಯ ಸಮರ ವಿಫಲವಾಗಿದೆ.

ಆದರೆ ಇದರಿಂದ ಅವರು ವಿಚಲಿತರಾಗುವುದಿಲ್ಲ. ಘಟನೆ ಸೋಲಿನಲ್ಲಿ ಪರ್ಯವಸಾನವಾದರೂ ಅದರ ಅಂತ್ಯ ಮಾತ್ರ ಆಶಾವಾದದೊಂದಿಗಾಗುತ್ತದೆ.

ಶಿಕ್ಷೆ ವಿಧಿಸಲು ಅವರು ಮಾಡುತ್ತಿದ್ದ ಸಿದ್ಧತೆಯನ್ನು ಕಲ್ಯಾಣ ಸ್ವಾಮಿ ನೋಡುತ್ತಾ ನಿಂತ. ಗುಂಡು ತಗಲಿದ ಆತನ ಬಲಗೈ ಜೋತಾಡುತ್ತಿದ್ದರೂ ಭುಜಗಳು ಇಳಿದಿದ್ದಿರಲಿಲ್ಲ. ಯಾರ ಎದುರಿನಲ್ಲೂ ತಲೆ ಬಾಗಿರಲಿಲ್ಲ . ನೇಣಿಗೆ ಕೊರಳು ಕೊಟ್ಟು ಕಲ್ಯಾಣ ಸ್ವಾಮಿ ಸ್ವಾತಂತ್ರ್ಯ ಸೇವೆಗೆ ಜಯವಾಗಲಿ ಎನ್ನುತ್ತಾರೆ. ಚಿರಸ್ಮರಣೆಯಲ್ಲಿ ಚಿರುಕಂಡ, ಅಪ್ಪು ಮೊದಲಾದವರು ಇಂಕ್ವಿಲಾಬ್-ಜಿಂದಾಬಾದ್ ಎಂದ ಹಾಗೆ. ಈ ಸ್ವಾತಂತ್ರ್ಯದ ಹಸಿವು, ವೀರಪರಂಪರೆ ನಿಂತು ಹೋಗುವುದಲ್ಲ ಎನ್ನುವಲ್ಲಿ ಲೇಖಕರ ಒತ್ತು ಇದೆ. ಈ ವೀರ ಪರಂಪರೆಯ ಸ್ಪಷ್ಟ ಸೂಚನೆ ಅವನ ಹೆಂಡತಿ ಗಿರಿಜವ್ವ ಗರ್ಭಿಣಿಯಾಗಿರುವುದು ಮತ್ತು ಗಿರಿಜಾ ಬಸಿರಲ್ಲಿ ಪುಟ್ಟಬಸವನ (ಕಲ್ಯಾಣ ಸ್ವಾಮಿ) ಅಂಶವನ್ನು ಹೊತ್ತಿದ್ದಳು ಎನ್ನುವಲ್ಲಿ.

ಚಿಕ್ಕವೀರದೇವರಾಯನ ಸಂಪೂರ್ಣ ಸೋಲಿನ ನಂತರ ಆತನ ಸ್ವಾಮಿ ಭಕ್ತರಾದ ಪುಟ್ಟ ಬಸವ (ಈತನೆ ಕಲ್ಯಾಣ ಸ್ವಾಮಿಯಾಗಿ) ಬ್ರಿಟಿಷರ ವಿರುದ್ಧ ಹೋರಾಟ ನಡೆಸುತ್ತಾನೆ. ಸೋಮಯ್ಯ ಮೊದಲಾದವರು ಇಂಗ್ಲೀಷರ ವಿರುದ್ಧ ಹೋರಾಡುತ್ತಾರೆ. ಆದರೆ ಬಂಡಾಯದ ಸುದ್ದಿ ಆಗಲೇ ಇಂಗ್ಲೀಷರಿಗೆ ತಿಳಿದು ಹೋಗುತ್ತದೆ. ಇದು ರಾಜದ್ರೋಹದಿಂದಾದುದು. ಬಂಡೆದ್ದವರಿಗೆ ಸೋಲಾಗುತ್ತದೆ. ಇಲ್ಲಿ ದೇಶದ್ರೋಹದಿಂದಲೇ ಬ್ರಿಟಿಷರಿಗೆ ಗೆಲುವಾಯಿತು ಎಂಬಂತಿದೆ. ಆದರೆ ಹೀಗೆ ಬಂಡಾಯದ ಸುದ್ದಿ ತಿಳಿದಿದೆಯೆಂದು ತಿಳಿದ ಮೇಲೆ ಬಂಡಾಯಗಾರರು ವ್ಯಕ್ತಪಡಿಸುವ ಭಾವಾವೇಶ ಮತ್ತು ವೀರತ್ವವನ್ನೇನೋ ನಾವು ಪ್ರಶಂಸಿಸಬಹುದು. ಆದರೆ ಅದು ರಾಜಕೀಯ ಚಾಣಾಕ್ಷತನವಾಗುತ್ತದೆಯೇ ಎಂದು ನೋಡಬೇಕು.

ಇಲ್ಲಿಯ ಸೋಲು ದೇಶದ್ರೋಹಕ್ಕಿಂತ ಸ್ವಂತ ಎಚ್ಚರಗೇಡಿತನದಿಂದಾಗಿದೆ ಯೆನ್ನಬಹುದು. ಆದರೆ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಈ ಚಿತ್ರಣ ಇದೆ ಎನ್ನುವುದು ಇಲ್ಲಿ ಗಮನಿಸಬೇಕಾದುದಾಗಿದೆ. ಕಲ್ಯಾಣ ಸ್ವಾಮಿಯ ಹೆಚ್ಚಳಕ್ಕೆ ಕಾರಣವಾಗಿರುವ ಇನ್ನೊಂದು ಸಂಗತಿಯ ಕಡೆ ಲಕ್ಷ್ಯ ಕೊಡಬೇಕು. ರೈತರ ಸ್ವಾಮಿಭಕ್ತಿಯ ಹಿನ್ನೆಲೆಯಲ್ಲಿ ಭೂ ಸಂಬಂಧದ ಬೆಸುಗೆ ಇದೆ.

ಸುಳ್ಯದ ಸಮೀಪ ಅಟ್ಲೂರಿನ ರಾಮಪ್ಪಯ್ಯ ಅಂತ ಒಬ್ಬ ಜಮೀನುದಾರನಿದ್ದ. ಆತ ದುಷ್ಟ. ಅವನಿಗೆ ಇಂಗ್ಲೀಷರ ಬೆಂಬಲವಿದೆ. ಆದ್ದರಿಂದ ಇಂಗ್ಲೀಷರನ್ನು ಪ್ರತಿಭಟಿಸುವವರಿಗೆ ರಾಮಪ್ಪಯ್ಯನಂಥ ಜಮೀನುದಾರ ಮೊದಲು ಶತ್ರುವಾಗುತ್ತಾನೆ. ಚಿರಸ್ಮರಣೆಯ ರೀತಿ ಇದು. ಅಲ್ಲಿ ಮೊದಲು ನಂಬಿಯಾರ, ಎರಡನೇ ಸುತ್ತಿನಲ್ಲಿ ಇಂಗ್ಲೀಷರು (ಸರಕಾರ). ಇಲ್ಲಿ ಎರಡನೆ ಸುತ್ತ ಜಮೀನುದಾರ. ಆದರೂ ಪರಿಣಾಮ ಒಂದೇ. ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೊಂದಿದೆ. ದೇಶದ ಸ್ವಾತಂತ್ರ್ಯ ರೈತರ ಸ್ವಾತಂತ್ರ್ಯದೊಡನೆ ತಳಕು ಹಾಕಿಕೊಂಡಿದೆ. ರೈತರಿಗೆ ಕಾರ್ಮಿಕರಿಗೆ ಪೂರ್ಣ ಸ್ವಾತಂತ್ರ್ಯ ಸಿಕ್ಕುವವರೆಗೂ ದೇಶದ ಸ್ವಾತಂತ್ರ್ಯ ಪೂರ್ಣ ಸ್ವಾತಂತ್ರ್ಯವಲ್ಲ. ಚಿರಸ್ಮರಣೆಯ ಮುಕ್ತಾಯ ಧ್ವನಿ ಇಲ್ಲಿಯೂ ಇದೆ. ಸ್ವಾಮಿ ಅಪರಂಪಾರದಲ್ಲೂ ಈ ದೃಷ್ಟಿ ಮುಂದುವರಿದಿದೆ.

ಅಪರಂಪಾರ ಕಲ್ಯಾಣ ಸ್ವಾಮಿಯ ಸಮಕಾಲೀನ, ಈತನೂ ಇಂಗ್ಲೀಷರಿಂದ ಚಿಕ್ಕರಾಜೇಂದ್ರನ ಸ್ವಾತಂತ್ರ್ಯ ಅಪಹರಣದ ನಂತರ ಅವನ ದೊಡ್ಡಪ್ಪನ ಮಗ ವೀರಪ್ಪಸ್ವಾಮಿ ಜಂಗಮ ವೇಷ ತೊಟ್ಟು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆಸಿದವ. ಕಲ್ಯಾಣ ಸ್ವಾಮಿಯ ಹೋರಾಟಕ್ಕೂ ಇವನದಕ್ಕೂ ಬಹಳ ಸ್ವಾಮ್ಯವಿದೆ. ಈತನ ಸೋಲಿನ ಕುರಿತು ನಾವು ಕಲ್ಯಾಣ ಸ್ವಾಮಿಯ ಸೋಲಿನ ಕಾರಣವನ್ನು ಗಣಿಸಬೇಕಾಗುತ್ತದೆ. ಇಲ್ಲಿ ಮಿತಿ ಮೀರಿದ ಆತ್ಮವಿಶ್ವಾಸವೂ ಕೂಡಿಕೊಂಡಿದೆ.

ಸ್ವಾಮಿ ಅಪರಂಪಾರ ಹಳ್ಳಿ ಹಳ್ಳಿಗಳನ್ನು ತಿರುಗಿ ಜನರನ್ನು ಓಲೈಸಿದ. ಸೋತ ರಾಜರನ್ನು ಒಟ್ಟೊ ಮಾಡಿದ. ಸ್ವತಃ ಶಿವಾ ಸ್ವಾಮಿಗಳೇ ಅವನಿಗೆ ಕೊಡಗಿನ ಸ್ವಾತಂತ್ರ್ಯಕ್ಕಾಗಿ ಹೋರಾಟಕ್ಕೆ ಪ್ರೋತ್ಸಾಹಿಸುತ್ತಾರೆ; ಆಶೀರ್ವದಿಸುತ್ತಾರೆ.

''ಹಣತೆಯೂ ಇದೆ. ಬತ್ತಿಯೂ ಇದೆ. ತೈಲ ಒಂದಿದ್ದರಾಯಿತು ಜ್ಯೋತಿ ಬೆಳಗುತ್ತದೆ. ಕೊಡಗಿನ ಮನೆ ಮನೆಯೂ ಹಣತೆ, ಸತ್ಪ್ರಜೆಗಳೆಲ್ಲ ಬತ್ತಿಗಳು ನೀನು ತೈಲವಾಗಿ ಅವರನ್ನು ತೋಯಿಸಬೇಕು. ಸ್ವಾತಂತ್ರ್ಯ ಜ್ಯೋತಿಯುರಿದು ಆ ಪ್ರಭೆ ಕತ್ತಲೆಯನ್ನು ಓಡಿಸುತ್ತದೆ'' ಎಂದು ಅನುಗ್ರಹಿಸುತ್ತಾರೆ.

ಅಪರಂಪಾರ ಸೆರೆಸಿಕ್ಕುತ್ತಾನೆ. ಬಂಧನದಲ್ಲಿ ಅಪರಂಪಾರನ ಧೀಮಂತ ವ್ಯಕ್ತಿತ್ವ

ಇಮ್ಮಡಿಸಿತ್ತು. ಆಘಾತದಿಂದ ಬೀಗಿಕೊಂಡಿದ್ದ ತುಟಿಗಳು ಈತ ಅದಮ್ಯ ಎಂಬ ಭಾವನೆಗೆ ಪುಟ ಕೊಡುತ್ತಿದ್ದವು.

ಅಪರಂಪಾರನ ಕಣ್ಣು ಕೀಳಿಸುತ್ತಾರೆ. ಆಗಲೂ ಆತ ಅಳುತ್ತ ತನ್ನ ಊರಿನ ಮಣ್ಣಿಗೆ ಪಾದಸ್ಪರ್ಶ ಮಾಡಿದಾಗ ಒಂದು ಮುಷ್ಟಿ ಮಣ್ಣನ್ನು ತೆಗೆದು ತಲೆಯ ಮೇಲೆ ಹನಿಸಿಕೊಂಡು ಮಾತೃಭೂಮಿಯ ಭಕ್ತಿಯನ್ನು ತೋರುತ್ತಾನೆ.

ಇದಕ್ಕೆಲ್ಲ ತಮ್ಮ ದೇಶದ ಸ್ವಾತಂತ್ರ್ಯ ಹೋರಾಟ ಹಿನ್ನೆಲೆಯಾಗಿದೆ ಎಂಬುದನ್ನು ಮರೆಯಬಾರದು.

## ೨ನೆಯ ಭಾಗ

ಈ ಭಾಗದಲ್ಲಿ ವಿಮೋಚನೆ, ರಂಗಮ್ಮನ ವಠಾರ, ಅಭಯ, ನಂದಗೋಕುಲ, ನೋವು ಬನಶಂಕರಿ ಮತ್ತು ಸೌಭಾಗ್ಯ ಕಾದಂಬರಿಗಳು ಸೇರುತ್ತವೆ. ಇದಕ್ಕೆ ಕಾರಣವೆಂದರೆ ಭಾಗ ಒಂದರಲ್ಲಿ ಬಂದ ಕಾದಂಬರಿಗಳು ಊಳಿಗಮಾನ್ಯ ವ್ಯವಸ್ಥೆಯ ಅಸ್ತಿತ್ವದಲ್ಲಿಯ ಸಂದರ್ಭವಾಗಿದ್ದರೆ ಈ ಭಾಗದಲ್ಲಿ ಹೆಸರಿಸಿರುವ ಕೃತಿಗಳು ಬಂಡವಾಳಶಾಹಿ ನೆಲೆಗೊಳ್ಳುತ್ತಿರುವ ಸಮಾಜದ ಪ್ರಕ್ರಿಯೆಯಾಗಿ ಮೂಡಿ ಬರುತ್ತವೆ.

### ವಿಮೋಚನೆ

'ವಿಮೋಚನೆ' ಈ ಭಾಗದ ಮೊದಲ ಕಾದಂಬರಿಯಾದಂತೆ ಮೊದಲ ಸ್ಥಾನದ ಕಾದಂಬರಿ ಕೂಡ ಹೌದು. ಚಂದ್ರಶೇಖರ ಎಂಬವನಿಗೆ ಫಾಶಿ ಶಿಕ್ಷೆಯಾಗಿದೆ. ಸದ್ಯ ಜೈಲಿನಲ್ಲಿದ್ದಾನೆ. ಇನ್ನೊಂದು ವಾರ ಅವನ ಜೀವಿತಾವಧಿ ಈ ಅವಧಿಯಲ್ಲಿ ಆತ ತನ್ನ ದಿನಚರಿಯನ್ನು ಬರೆಯುತ್ತಾನೆ. ಮಂಗಳವಾರ ದಿನಚರಿಯನ್ನು ಮಾಡಿ ಮುಂದಿನ ಮಂಗಳವಾರಕ್ಕೆ ಮುಗಿಸುತ್ತಾನೆ. ಈ ಬೇಸಿನಲ್ಲಿ ತನ್ನ ಬಾಲ್ಯದಿಂದ ಮಧ್ಯ ವಯಸ್ಸಿನಲ್ಲಿ ಸಾಯುವವರೆಗಿನ ಘಟನಾವಳಿಗಳನ್ನು ನಿರೂಪಿಸುತ್ತಾನೆ. ದಿನಚರಿಯಲ್ಲಿ ಆತ ತನಗೆ ತಾನೇ ಒಂದು ಪ್ರಶ್ನೆ ಹಾಕಿಕೊಳ್ಳುತ್ತಾನೆ ''ಮತ್ತೆ ಬಾಳು ನಿನಗೆ ದೊರೆಯಿತೆಂದರೆ ನೀನೇನು ಮಾಡುವೆ?'' ಅದಕ್ಕೆ ಅವನದೇ ಉತ್ತರ. ''ಈಗ ನಾನು ಪಡೆದಿರುವ ಈ ಪ್ರಪಂಚದ ಜ್ಞಾನದ ನೆರವಿನಿಂದ ಈವರೆಗೆ ಮಾಡಿರುವ ತಪ್ಪುಗಳನ್ನು ಇನ್ನೊಮ್ಮೆ ಮಾಡದೆಯೇ ನಾಲ್ಕು ಜನರಿಗೆ ನೆರವಾಗುವಂತಹ ಬಾಳ್ವೆ ನಡೆಸುವೆ.''

ಹೀಗೆ ಹೇಳುತ್ತಿದ್ದರೂ ಚಂದ್ರಶೇಖರ ನಾಲ್ಕು ಜನರಿಗೆ ಸಹಾಯ ಮಾಡುವ ಪ್ರವೃತ್ತಿಯನ್ನು ಪ್ರಕಟಿಸಿಯೇ ಇದ್ದಾನೆ.

ಇಲ್ಲಿ ಚಿತ್ರಿತವಾಗುವ ಸಮಾಜ ಚಿತ್ರಣ ಬೆಂಗಳೂರು ಮತ್ತು ಮುಂಬೈಗಳಲ್ಲಿ

ಬಂಡವಾಳಶಾಹಿ ನೆಲೆಗೊಂಡು ತನ್ನ ದೌರ್ಜನ್ಯದ ಕರಾಳ ಸ್ವರೂಪವನ್ನು ಹರಡುತ್ತಿರುವ ಸಮಯ ಮತ್ತು ಅದರ ಚಾರಿತ್ರಿಕ ಕಾಲ ಇಪ್ಪತ್ತನೆಯ ಶತಮಾನದ ಮೂವತ್ತರ ಮತ್ತು ನಲ್ವತ್ತರ ದಶಕ. ಚಂದ್ರಶೇಖರ ಮುಂಬೈಗೆ ಹೊರಟುಹೋಗಿ ಉದ್ಯೋಗಕ್ಕಾಗಿ ಗಲ್ಲಿಗಲ್ಲಿಗಳನ್ನು ಅಲೆದರೂ ಆತನಿಗೆ ಕೆಲಸ ಸಿಕ್ಕುವುದಿಲ್ಲ. ಅದು ೧೯೩೦ರ ಕಾಲದ ಆರ್ಥಿಕ ಕುಸಿತದ ಕಾಲವಾಗಿತ್ತು ಎಂದು ಕಾದಂಬರಿಯಲ್ಲಿ ನಮೂದಿಸಲ್ಪಡುತ್ತದೆ.

ಚಂದ್ರಶೇಖರನ ತಂದೆ ಹಳ್ಳಿಯಲ್ಲಿ ತಾನು ಮಾಡಿದ ಸಾಲಕ್ಕೆ ತನ್ನ ಚಿಕ್ಕ ಜಮೀನನ್ನು ಕಳಕೊಂಡು ಪಟ್ಟಣ ಸೇರುತ್ತಾನೆ. ದಾರಿಯಲ್ಲಿಯೇ ಹೆಂಡತಿಯನ್ನು ಕಳೆದುಕೊಳ್ಳುತ್ತಾನೆ. ಆಗ ಚಂದ್ರಶೇಖರನಿಗೆ ಆರುವರ್ಷ. ಪಟ್ಟಣಕ್ಕೆ ಬಂದು ಒಂದೆರಡು ದಿನ ಉಪವಾಸವೇ ಇದ್ದು, ಅಂಥದೇ ಬಡಕೂಲಿಯೊಬ್ಬರ ಸಹಾಯದಿಂದ ರಸ್ತೆ ಜಲ್ಲಿ ತುಂಬುವ ಕೆಲಸಕ್ಕೆ ಹೋಗುತ್ತಾನೆ. ಅಷ್ಟರಲ್ಲಿ ಆತ ಒಬ್ಬ ಅಜ್ಜಿಯ ಮನೆಯಲ್ಲಿ ಬಾಡಿಗೆ ಖೋಲಿ ಹಿಡಿದು ಉಳಿಯುತ್ತಾನೆ. ಮುದುಕಿ ಬ್ರಾಹ್ಮಣ ವಿಧವೆ; ಮಡಿವಂತೆ. ಅವಳಲ್ಲಿ ಒಂದು ಎಮ್ಮೆ ಇದ್ದು ಹಾಲು ಮಾರಿ ಬದುಕು ಸಾಗಿಸುತ್ತಿದ್ದಳು. ಆ ಎಮ್ಮೆಯ ಸಗಣಿ ತೆಗೆಯುವುದು ಮತ್ತು ಮನೆವಾರ್ತೆಯವರಿಗೆ ಮುಂಜಾನೆ ಹಾಲು ಮುಟ್ಟಿಸುವುದು ಚಂದ್ರಶೇಖರನ ಕೆಲಸವಾಗುತ್ತದೆ.

ಮಗ ಓದು ಕಲಿತು ದೊಡ್ಡವನಾಗಬೇಕೆಂಬುದು ತಂದೆಯ ಬಯಕೆ. ಆ ಪ್ರಕಾರ ಶೇಖರ ಶಾಲೆಗೆ ಸೇರುತ್ತಾನೆ. ರಸ್ತೆಗೆ ಜಲ್ಲಿ ಹಾಕುವ ಕೆಲಸ ಮುಗಿದಾಗ ತಂದೆ ನಿರುದ್ಯೋಗಿ. ಅನಂತರ ಸೌದೆ ಒಡೆಯುವ ಕಸುಬು ಮಾಡುತ್ತಾನೆ. ಹೀಗೆ ದಿನ ಕಳೆದಂತೆ ಆತನಿಗೆ ಕ್ಷಯರೋಗ ಅಂಟುತ್ತದೆ. ಔಷಧೋಪಚಾರಕ್ಕೆ ಹಣ ಇರುವುದಿಲ್ಲ. ಆ ಕಾರಣಕ್ಕೆ ಶೇಖರ ಶಾಲೆ ಬಿಟ್ಟು ಪೇಪರ್ ಮಾರುವ ಹುಡುಗನಾಗುತ್ತಾನೆ. ಹೀಗೆ ಒಮ್ಮೆ ಮಾರುವಾಗ ಒಬ್ಬರ ಕಿಸೆಗಳ್ಳತನ ನಡೆಯುತ್ತದೆ. ಹತ್ತಿರವೇ ಇದ್ದ ಬಡ ಹುಡುಗ ಶೇಖರನನ್ನು ಅವರು ಹಿಡಿಯುತ್ತಾರೆ. ಪೋಲೀಸ ಕಛೇರಿಗೆ ಒಯ್ಯುತ್ತಾರೆ. ಆತ ತಾನೆಷ್ಟು ನಿರಪರಾಧಿ ಎಂದು ಹೇಳಿದರೂ ಪೋಲೀಸ್ ಅಧಿಕಾರಿ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ. ಆತನನ್ನು ಲಾಕಪ್‌ನಲ್ಲಿ ಇಡಲಾಗುತ್ತದೆ. ಈ ಸುದ್ದಿ ತಂದೆಗೆ ತಿಳಿದು ಆತ ಮಗನನ್ನು ಬಿಡಿಸಿಕೊಳ್ಳಲು ಪೋಲೀಸ್ ಕಛೇರಿಗೆ ಬರುತ್ತಾನೆ. ಆದರೆ ಆಗುವುದಿಲ್ಲ. ಮುಂಜಾನೆ ಶೇಖರನನ್ನು ಬಿಟ್ಟಾಗ ಅವನಿಗೆ ಆಶ್ಚರ್ಯಕರವಾಗಿ ತಿಳಿಯುವುದೆಂದರೆ ಅಪ್ಪ ರಾತ್ರಿಯಿಡೀ ಕಛೇರಿಯ ಹೊರಗೆ ಚಳಿಯಲ್ಲಿ ನಡುಗುತ್ತಲೇ ಕುಳಿತಿದ್ದ.

ಮುಂದೆ ತಂದೆ ಸಾಯುತ್ತಾನೆ. ಶೇಖರ ಮುಂಬೈಗೆ ಹೋಗುತ್ತಾನೆ. ಚೆನ್ನಾಗಿ ಇಂಗ್ಲೀಷ್ ಬರುವ, ಆದರೆ ಪರೀಕ್ಷೆ ಮುಗಿಸದ ಆತ ಕೆಲಸ ಹುಡುಕುತ್ತಾನೆ. ಅದೇ

ಮೂವತ್ತರ ಸಮಯ. ಎಲ್ಲಿ ಹೋದರೂ ಕೆಲಸ ಇಲ್ಲ ಎಂಬ ಬೋರ್ಡು. ರೈಲ್ವೆ ಸ್ಟೇಷನ್‌ನಲ್ಲಿ ಕೂಲಿ ಮಾಡತೊಡಗುತ್ತಾನೆ.

ಒಂದು ಸಂದರ್ಭದಲ್ಲಿ ಅಮೀರನ ಪರಿಚಯವಾಗುತ್ತದೆ. ಸ್ನೇಹ ಬೆಳೆಯುತ್ತದೆ. ಅಲ್ಲಿಂದ ಆತ ಕಿಸೆಗಳ್ಳನಾಗಿ ಪರಿವರ್ತಿತನಾಗುತ್ತಾನೆ.

ಅಜ್ಜಿಯಿಂದ ತನಗೆ ತೀವ್ರ ಕಾಯಿಲೆ ಬಾ ಎಂದು ತಂತಿ ಬರುತ್ತದೆ. ಅಮೀರನ ಸಂಸಾರದಲ್ಲಿ ಒಂದಾಗಿದ್ದ ಶೇಖರ ಬೆಂಗಳೂರಿಗೆ ಹಿಂದಿರುಗುತ್ತಾನೆ. ಆದರೆ ಅಜ್ಜಿಯನ್ನು ಬದುಕಿಸಿಕೊಳ್ಳಲು ಆಗುವುದಿಲ್ಲ. ಶೇಖರ ಬೆಂಗಳೂರಿನಲ್ಲಿಯೇ ಮುಂದುವರಿಯುತ್ತಾನೆ. ಅಲ್ಲಿ ಆತನಿಗೆ ಚಲಂ ಎನ್ನುವ ಇನ್ನೊಬ್ಬ ಕಳ್ಳನ ಪರಿಚಯವಾಗುತ್ತದೆ. ಪಿಕ್‌ಪಾಕೆಟ್ ಮತ್ತಿತರ ಸಣ್ಣಪುಟ್ಟ ಕಳುವು ಮಾಡುವ ಒಂದು ಗ್ಯಾಂಗೇ ಅಲ್ಲಿರುತ್ತದೆ. ಶೇಖರನ ಒಡನಾಟ ಅವರೊಡನೆ, ಹೀಗಾಗಿ ಆತ ಪೋಲೀಸರಿಗೆ ಬೇಕಾದ ಮುಖ್ಯ ವ್ಯಕ್ತಿಯೇ ಆಗುತ್ತಾನೆ.

ಮುಂದೆ ಅಕಸ್ಮಾತ್ ಆತನಿಗೆ ತನ್ನ ಸಹಪಾಠಿ ನಾರಾಯಣನ ಭೆಟ್ಟಿ. ನಾರಾಯಣ ಕಾರಖಾನೆಯ ಕೂಲಿಕಾರ ಬುದ್ಧಿಜೀವಿ. ತುಂಬ ಬಡತನದ ಜೀವನ. ಆತ್ಮೀಯ ವ್ಯಕ್ತಿ. ಆತನಿಗೆ ತನ್ನ ಗುಟ್ಟು ಬಿಟ್ಟು ಕೊಡುವುದಿಲ್ಲ ಶೇಖರ. ಅದೇ ನಗರದಲ್ಲಿ ಮತ್ತೊಬ್ಬ ಸಹಪಾಠಿ ಶ್ರೀಕಂಠನ ಭೆಟ್ಟಿಯಾಗುತ್ತದೆ. ಶ್ರೀಕಂಠ ಕಾರಖಾನೆಯ ಮಾಲಿಕ. ಅವನಲ್ಲಿ ಕಾರ್ಯದರ್ಶಿಯಾಗಿ, ಸಹಪಾಠಿಯಾದದ್ದರ ಮುಂದುವರಿಕೆಯ ಗೆಳೆಯನಾಗಿ ಅಲ್ಲಿ ನಿಲ್ಲುತ್ತಾನೆ. ನಾರಾಯಣ ಕೂಲಿಕಾರ, ಶ್ರೀಕಂಠ ಬಂಡವಾಳಿಗ. ಈ ಎರಡರ ಬೆಳವಣಿಗೆಯ ಮಧ್ಯ ಶೇಖರ. ಕೌರವ-ಪಾಂಡವರ ಮಧ್ಯೆಯ ಕರ್ಣ.

ಶ್ರೀಕಂಠ ತನ್ನ ಮಾವನ ಅನುಗ್ರಹದಿಂದ ಶ್ರೀಮಂತನಾದವನು. ಹೆಂಡತಿ ಸುಂದರಿ. ಆದರೆ ಸಂಸಾರ ಸುಖವಿಲ್ಲ. ಒಂದು ಕೆಟ್ಟ ಗಳಿಗೆಯಲ್ಲಿ ಹೆಂಡತಿಯ ಕುತ್ತಿಗೆ ಹಿಚುಕಿ ಕೊಂದುಬಿಡುತ್ತಾನೆ. ನಂತರ ಭಯಗ್ರಸ್ತನಾಗಿ ಶೇಖರನಿಗೆ ಶರಣು ಹೋಗುತ್ತಾನೆ. ಶೇಖರ ತಾನೇ ಕೊಲೆ ಮಾಡಿರುವುದಾಗಿ ಹೇಳುತ್ತಾನೆ. ಶೇಖರನಿಗೆ ಮರಣದಂಡನೆಯಾಗುತ್ತದೆ. ಜೈಲಿನಲ್ಲಿ ಹಿಮ್ಮುಖದಲ್ಲಿ ತನ್ನ ಜೀವನದ ಡೈರಿ ಬರೆಯುತ್ತಾನೆ.

ಶೇಖರನ ದಿನಚರಿ ಅವನ ಬದುಕಿನ ದಿನಚರಿ ಮಾತ್ರ ಆಗಿರುವುದಿಲ್ಲ. ಅದು ಬಂಡವಾಳಶಾಹಿ ಸಮಾಜದ ಅಂತರಂಗದ ದಿನಚರಿಯಾಗುತ್ತದೆ. ಬಂಡವಾಳಶಾಹಿ ತನ್ನೆಲ್ಲ ಕರಾಳತೆಯಿಂದ ಕಾಣಿಸಿಕೊಳ್ಳುತ್ತದೆ. ಈ ಕರಾಳತೆಯ ಒಡಲಿಂದ ವರ್ಗ ಸಂಘರ್ಷ ಮೂಡಿಬರುತ್ತದೆ. ಈ ಸಂಘರ್ಷದಲ್ಲಿ ಬಂಡವಾಳಶಾಹಿ ಮತ್ತು ಅಧಿಕಾರಶಾಹಿಯ ಎಲ್ಲ ನೀಚತನವೂ ಕಾಣಿಸಿಕೊಳ್ಳುತ್ತದೆ.

ಸ್ವಾತಂತ್ರ್ಯ ಹೋರಾಟದಲ್ಲಿ ನೇತೃತ್ವ ವಹಿಸಿದ ಕಾಂಗ್ರೆಸ್ ಮುಂದಾಳುಗಳ (ಇದು ಒಟ್ಟಾರೆಯಾಗಿ ಭೂಮಾಲಿಕ ವರ್ಗ ಮತ್ತು ಬಂಡವಾಳಶಾಹಿ ವರ್ಗದ ನೇತೃತ್ವ ಎಂಬಂತೆ) ಸ್ವಾರ್ಥ ರಾಜಕಾರಣವನ್ನು ತೀವ್ರವಾಗಿ ವಿಡಂಬಿಸುತ್ತದೆ.

ಕಾದಂಬರಿಯಲ್ಲಿ ಅನೇಕ ಹೃದಯವಿದ್ರಾವಕ ಸನ್ನಿವೇಶಗಳಿವೆ. ಉಳ್ಳವರ ಮತ್ತು ಇಲ್ಲದವರ ಮಧ್ಯೆಯ ಸಂಘರ್ಷ (ಮನೋಭಾವದ ಬೆಳವಣಿಗೆ) ಸೂಕ್ಷ್ಮವಾಗಿ ಮತ್ತು ಮೂಲಮಾತ್ರಿಕೆ (ಅರ್ಜಿಟೈಪ್) ಆಗಿ ರೇಖಿಸಲ್ಪಡುತ್ತದೆ.

ಶ್ರೀಮಂತರ ಸ್ವಾರ್ಥ, ನೀಚತನ ಇದ್ದ ಹಾಗೇ ಬಡವರ ಕ್ಷುಲ್ಲಕತನವೂ ಕಾಣುತ್ತದೆ. ಬಡವರಲ್ಲೂ ಪುರುಷ ಯಜಮಾನ್ಯದ ಚಿತ್ರಣವಿದ್ದಂತೆ, ಶ್ರೀಕಂಠನ ಮತ್ತು ಕೂಲಿಕಾರ ನಾರಾಯಣನ ಸಂಸಾರಗಳ ವಿರುದ್ಧ ದಿಕ್ಕಿನ ಪರಸ್ಪರ ಚಿತ್ರಣವಿದೆ. ನಾರಾಯಣ ಬಡವನಾದರೂ ಸಂಸಾರದಲ್ಲಿ ಆತ್ಮೀಯತೆಯಿದೆ. ಕಳ್ಳಚಲಂ, ಅಮೀರರ ಸಂಸಾರದಲ್ಲಿ ಆತ್ಮೀಯತೆಯಿದೆ. ಕುಟುಂಬ ನಿಷ್ಠೆಯಿದೆ. ಆದರೆ ಭದ್ರತೆಯಿಲ್ಲ. ಅದಕ್ಕೆ ವಿರುದ್ಧವಾಗಿ ಶ್ರೀಮಂತರ (ಶ್ರೀಕಂಠನ) ಸಂಸಾರದ ಚಿತ್ರಣವಿದೆ. ಅಲ್ಲಿ ಆಡಂಬರವಿದೆ. ಬಾಹ್ಯ ಬಿನ್ನಾಣವಿದೆ. ತೃಪ್ತಿಯಿಲ್ಲ. ಹಾದರವಿದೆ. ಪ್ರೀತಿಯಿಲ್ಲ. ''ಶ್ರೀಕಂಠನ ಬಾಹ್ಯಜೀವನ ಮತ್ತು ಅಂತರಿಕ ಜೀವನ ಹೊರಗೆ ಆತ ಮಾಲಿಕರ ಮುಖಂಡನಾಗಿದ್ದ, ಒಂದು ಶಕ್ತಿಯ ಸೇನಾನಿಯಾಗಿದ್ದ, ಆ ಕೈಗಾರಿಕೋದ್ಯಮದ ವೃದ್ಧರೂ ಕೂಡ ಶ್ರೀಕಂಠನ ಕರ್ತವ್ಯ ದಕ್ಷತೆಯಲ್ಲಿ ನಂಬಿಕೆ ಇಟ್ಟಿದ್ದರು. ಆದರೆ ಮನೆಯೊಳಗೆ? ಅದು ಕಲಹ ರೋದನಗಳ ಕುರುಕ್ಷೇತ್ರವೇನೂ ಆಗಿರಲಿಲ್ಲ. ಅಲ್ಲಿ ಒಂದು ರೀತಿಯ ಮೌನ ನೆಲೆಸಿರುತ್ತಿತ್ತು. ಯಾರಾದರೂ ಅತಿಥಿಗಳು ಮನೆಗೆ ಬಂದರೆ ಶಾರದ ಮಿಸೆಸ್ ಶ್ರೀಕಂಠಯ್ಯನಾಗುವಳು. ಉಳಿದ ಹೊತ್ತಿನಲ್ಲಿ ಏಕಾಂತಪ್ರಿಯೆ, ಮಿಸ್ ಶಾರದೆ...'' ಇದಕ್ಕೆ ವಿರುದ್ಧವಾಗಿ

''ಕಮಲು ನನ್ನ ಪಾಲಿಗೆ ತಾಯಿನೂ ಹೌದು ಚಂದ್ರು. ನಮ್ಮಿಬ್ಬರ ನಡುವೆ ಸುಖ ಎಂಬ ಪದಕ್ಕೆ ಬಂದಿರೋ ಅರ್ಥವೇ ಬೇರೆ, ಸಾಮಾನ್ಯವಾಗಿ ತುಂಬಿದ ಹೊಟ್ಟೆ, ಒಳ್ಳೆಯ ಬಟ್ಟೆ, ಅಚ್ಚುಕಟ್ಟಾದ ಮನೆ, ಉಳಿತಾಯದ ಹಣ - ಇದೆಲ್ಲ ಇದ್ದರೆ 'ಸುಖ' ಅನ್ತಾರೆ. ನಮಗೆ ಹೃದಯ ತುಂಬಿದ್ದರಾಯ್ತು. ಅದೇ ಸುಖ ಎನ್ನುತ್ತಾನೆ, ಕಾರಖಾನೆಯ ಕೂಲಿಯಾದ ನಾರಾಯಣ.

ಇನ್ನೊಂದು ದೃಶ್ಯ ಅಜ್ಜಿಯದು. ಅಜ್ಜಿ ಬ್ರಾಹ್ಮಣ ವಿಧವೆ. ಮಡಿ-ಮಡಿ. ಈ ಶೇಖರ ಶೂದ್ರ ಹುಡುಗನನ್ನು ಮುಟ್ಟಿದರೆ ಅವಳು ಮಿಂದೇ ಅನ್ನ ಮಾಡಬೇಕು. ಆದರೆ ಅವರಿಬ್ಬರಲ್ಲಿ ಜಾತಿಯ ಲಕ್ಷ್ಮಣ ರೇಖೆಯನ್ನು ಮೀರಿ ಆತ್ಮೀಯತೆ ಬೆಳೆಯುತ್ತದೆ. ಅಜ್ಜಿ ಆತನನ್ನು ''ಮರಿ ಮರಿ'' ಎಂದು ಕರೆಯುತ್ತಿರುತ್ತಾಳೆ. ಮುದ್ದಿನಿಂದ ಒಮ್ಮೊಮ್ಮೆ ಅವನನ್ನು ಮುಟ್ಟಿ ತಲೆಗೂದಲು ನೇವರಿಸಿದ್ದೂ ಉಂಟು. ಅಜ್ಜಿಯ ತಂತಿ

ಹೋಯಿತೆಂದು ಶೇಖರ ಮುಂಬೈ ಬಿಟ್ಟು ಬರುತ್ತಾನೆ. ದೊಡ್ಡ ಡಾಕ್ಟರನ್ನು ಕರೆತಂದು ಉಪಚರಿಸುತ್ತಾನೆ. ಅಜ್ಜಿ ಬದುಕುವುದಿಲ್ಲ. ತನ್ನ ಆಸ್ತಿಯಾದ ಮನೆಯನ್ನು ಶೇಖರನಿಗೆ ವಿಲ್ ಬರೆಯುತ್ತಾಳೆ. ಅವಳು ಅಂತಿಮ ಕ್ಷಣದಲ್ಲಿದ್ದಾಳೆಂದು ತಿಳಿದ ಅವಳ ಮೈದುನಂದಿರು ಅವಳ ಆಸ್ತಿ - ಹಣ ಲಪಟಾಯಿಸಲು ಸಂಬಂಧಿಕರ ಹಕ್ಕು ಚಲಾಯಿಸಬರುತ್ತಾರೆ. ಅವರಿಗೆ ಅಜ್ಜಿ ತನ್ನ ಗಂಡ ಇದ್ದಾಗ ನನ್ನನ್ನು ನೀವೆಲ್ಲ ಗೋಳು ಹೊಯ್ಸಿಕೊಂಡ ಮುಂಡೆ ಮಕ್ಕಳು ಎಂದು ಬಯ್ದು ತೌರುತ್ತಾಳೆ. ಜಾತಿಗೆ ಮೀರಿದ ಪ್ರೀತಿ ಮಾತ್ರ ಸತ್ಯ - ಸಾಧು. ಸಂಬಂಧದ ಹಿಂದೆ ಇರುವ ಆಸ್ತಿ ಪ್ರಕ್ರಿಯ ಸೂಕ್ಷ್ಮನೋಟ ಇಲ್ಲಿದೆ.

ಶೇಖರನ ತಂದೆಯಿಂದ ಶಾಲೆಯ ಮಾಸ್ತರು ಕಟ್ಟಿಗೆ ಒಡೆಸಿಕೊಳ್ಳುವ ಘಟನೆ ಇನ್ನೊಂದು ಉಲ್ಲೇಖನೀಯ. ಶಾಲೆಯಲ್ಲಿ ಶ್ರೀಮಂತ ಹುಡುಗನೊಬ್ಬನನ್ನು ಹೊಡೆದಿದ್ದಾನೆ ಎಂದು ಶೇಖರನನ್ನು ಶಾಲೆಯಿಂದ ಹೊರಹಾಕಲಾಗಿದೆ ಅಂತ ತಿಳಿದ ಆಪ್ಪ ಮಾಸ್ತರ ಹತ್ತಿರ ಹೋಗಿದ್ದಾನೆ. ಆ ಮಾಸ್ತರ ಈತನನ್ನು ಮನೆಗೆ ಕರೆದೊಯ್ದು ಕಟ್ಟಿಗೆ ಒಡೆಸಿಕೊಳ್ಳುತ್ತಾನೆ. ಇದನ್ನು ತಿಳಿದ ಅಜ್ಜಿ ''ಅಹಾ ಮುಂಡೇಗಂಡ, ಅಂತೂ ಬಿಟ್ಟೀ ಸೌದೆ ಒಡೆಸ್ಕೊಂಡು ಬಿಟ್ಟ'' ಎನ್ನುತ್ತಾಳೆ. ಇದೊಂದು ಸುಲಿಗೆಯೊಳಗಿನ ಸುಲಿಗೆ; ಬಡವರಿಂದ ಬಡವರ ಸುಲಿಗೆ. ಆದರೆ ಮಾಸ್ತರು ಏನು ಮಾಡಬಲ್ಲವರಾಗಿದ್ದರು? ''ಅವರ ಕೈಯಲ್ಲಿ ಛತ್ರಿಯಿತ್ತು. ಹರಿದು ಹೋಗಿದ್ದ ಅವರ ಕರಿಯ ಬಟ್ಟೆಗೆ ಬಿಳಿಯ ಹೊದಿಕೆ ಹೊದಿಸಿದ್ದರು. ಆ ಪಂಚೆ ಮತ್ತು ಕೋಟು ಅದರೊಳಗೆ ಷರಟು ಇತ್ತೋ ಇಲ್ಲವೋ ನನಗೆ ತಿಳಿಯದು'' ಎಂಬ ವರ್ಣನೆ ಬರುತ್ತದೆ. ಜೀವನದ ಸೂಕ್ಷ್ಮ ಚಿತ್ರಣವಿದು. ಮಾಸ್ತರರೂ ಸಮಾಜದ ಸುಲಿಗೆಗೆ ಒಳಗಾದವರೇ, ಅಸಹಾಯಕರು, ಹೀಗಿದ್ದರೂ ಬಡವರು ಬಡವರು ಒಂದಾಗುವುದಿಲ್ಲ. ಅದರಿಂದ ವರ್ಗ ಸಂಘರ್ಷಕ್ಕೆ ನೆಲೆ ಸಿಕ್ಕುವುದಿಲ್ಲ. ಅವರೆಲ್ಲ ಚದುರಿಸಲ್ಪಟ್ಟ ಬಡವರು. ವರ್ಗ ಸಂಘರ್ಷ ಉಂಟಾಗುವುದು ಎರಡು ವೈರಿ ವರ್ಗಗಳ ನಿರ್ಮಾಣವಾದಾಗ ಮಾತ್ರ. ಅಂಥ ವರ್ಗವೂ ಒಂದನ್ನೊಂದು ಬಿಡಲಾರದವು. ಉದಾಹರಣೆಗೆ ಕಾರ್ಮಿಕ ಮತ್ತು ಮಾಲಿಕ. ಇವರಿಬ್ಬರ ಹಿತಾಸಕ್ತಿ ಬೇರೆ ಬೇರೆ. ಅವರವರ ಲಾಭಕ್ಕಾಗಿ ಸಂಘರ್ಷವೇರ್ಪಡಿಸುತ್ತದೆ. ಆ ಕಾರಣಕ್ಕಾಗಿ ಇವು ವೈರಿ ವರ್ಗಗಳು. ಆದರೆ ಇವು ಒಟ್ಟಿಗೆ ಇರುವ ವರ್ಗಗಳು. ಇದು ಶ್ರೀಕಂಠ ಮತ್ತು ನಾಣಿಗಳಲ್ಲಿ ಮೂರ್ತರೂಪ ಪಡೆಯುತ್ತದೆ. ಈ ಮಧ್ಯೆ ನೂರಾರು ವರ್ಗಗಳಿದ್ದರೂ ಅವಕ್ಕೆ ಸ್ವಾರ್ಥವಿದೆ. ಬಳಲಿಕೆಗಳಿವೆ. ಆದರೆ ವರ್ಗ ಸಂಘರ್ಷ ಸಾಧ್ಯವಾಗುವುದಿಲ್ಲ. ಹಾಗಾಗಲು ಎಲ್ಲ ವರ್ಗಗಳು ಒಂದನ್ನೊಂದು ಕೂಡಿ ಮುಖ್ಯವಾದ ಎರಡು ವರ್ಗವೇರ್ಪಡಬೇಕು. ''ಆ ನನ್ಮಕ್ಳು ಬಂದು ನೋಡಿದರೆ ಕೂಲಿಕಾರನಲ್ಲ. ಈಚೆಗೆ ನಮ್ಮವರೂ ಅಲ್ಲ. ನಾನೇಳ್ತೀನಿ ಚಂದ್ರು ಈ ಲೋಕ್ದಲ್ಲಿ

ಇರ್ಬೇಕಾದ್ದು ಎರಡೇ ವರ್ಗ. ನಮ್ಮದು, ಅವರದು. ನಡುವೆ ಮಧ್ಯಮ ವರ್ಗಾಂತಿರೋದರಲ್ಲಿ ಅರ್ಥವಿಲ್ಲ'' ಎಂದು ಒಮ್ಮೆ ಮಾಲಿಕ ವರ್ಗದ ಪ್ರತಿನಿಧಿಯಂತಿದ್ದ ಶ್ರೀಕಂಠಯ್ಯ ಹೇಳುತ್ತಾನೆ.

ಇನ್ನೊಂದು ಸಂದರ್ಭ ಜೈಲಿನಲ್ಲಿರುವ ಮಗನಿಗಾಗಿ ಶೇಖರನ ತಂದೆ ಕ್ಷಯರೋಗ ಪೀಡಿತ ಚಳಿಯಲ್ಲಿ ರಾತ್ರಿಯಿಡೀ ಪೋಲೀಸ್ ಕಚೇರಿಯ ಹೊರಗಿನ ಮರದಡಿಯಲ್ಲಿ ಬೆಳಗಿನವರೆಗೂ ಕುಳಿತಿರುವುದು ಕರುಳು ಹಿಚುಕುವಂತಹದು.

ಇನ್ನೊಂದು ಶೇಖರನ ಮತ್ತು ವನಜ ಮಧ್ಯದ ಪ್ರೀತಿ. ಆದರೆ ಈ ಸನ್ನಿವೇಶದ ಹಿಂದೆ ಶ್ರೀಮಂತರ ಪ್ರೀತಿಯ ಹಿಂದೆ ಇರುವ ಅಂತಸ್ತು ಮನುಷ್ಯತ್ವವನ್ನು ಮರೆಸುತ್ತದೆ ಪ್ರೀತಿ ಇತ್ಯಾದಿಗಳು ವರ್ಗ ಸಂಬಂಧ - ಆಸ್ತಿ ಸಂಬಂಧವನ್ನೇ ಹೊಂದಿರುತ್ತವೆ. ಎನ್ನುವ ವೈಚಾರಿಕತೆಯಿದೆ. ಆದರೆ ಶೇಖರ-ವನಜರ ಮಧ್ಯೆಯ ಘಟನೆ ಕೃತ್ರಿಮ. ಉದ್ದೇಶಪೂರಿತ ಎಂಬಂತೆ ತೋರುತ್ತದೆ. ಈ ಕಿರಿಕಿರಿಯೊಂದನ್ನು ತುಸು ಬದಿಗಿರಿಸಿದರೆ ಇದೊಂದು ಆತ್ಮೀಯವಾದ ಘಟನೆಯಾಗಿದೆ. ಶಾರದೆ ತನ್ನ ಗಂಡನ ಮನೆಯಲ್ಲಿಲ್ಲದಾಗ ಶೇಖರನನ್ನು ತನ್ನ ಲೈಂಗಿಕ ಆಸೆಯ ಬಲೆಯಲ್ಲಿ ಕೆಡುಹಿಕೊಳ್ಳಲು ಯೋಜನೆ ಹೂಡಿದಾಗಿನ ಇನ್ನೊಂದು ಚಿತ್ರ ಅತ್ಯಂತ ಸಂಯಮದಿಂದ ಮತ್ತು ಕೌಶಲದಿಂದ ಮೂಡಿಬಂದಿದೆ.

ಹೀಗೆ ಇಂತೆಲ್ಲ ನೂರಾರು ಕಡೆ ದೃಷ್ಟಿ ಚಲ್ಲುತ್ತಾ ಇದೇನು ಸೂತ್ರವಿಲ್ಲದ ಘಟನೆಗಳ ಮಾಲೆಯೇ ಎಂದೆನ್ನಿಸುತ್ತಿರುವಂತೆಯೇ ಆ ಎಲ್ಲ ಘಟನೆಗಳ ಉದ್ದೇಶ ಸಾರ್ಥಕಗೊಳ್ಳುತ್ತ ವರ್ಗ ಸಂಘರ್ಷವೊಂದು ಮೂಡಿಬರುತ್ತದೆ.

ಪರಸ್ಪರ ಎದುರು ಬದುರಾಗಿ ನಿಂತಿದ್ದ ಈ ಎರಡು ಶಕ್ತಿಗಳು ''ಈವರೆಗೆ ಹಣವಂತರ ಪಕ್ಷವೊಂದೇ ದೊಡ್ಡ ಶಕ್ತಿಯೆಂದು ನಾನು ಬಗೆದಿದ್ದೆ. ಅದು ನಿಜವಾಗಿರಲಿಲ್ಲ. ಇಲ್ಲಿ ಇನ್ನೊಂದು ಶಕ್ತಿಯಿತ್ತು. ಹಣವಿಲ್ಲದವರ ಶಕ್ತಿ'' ಎಂದು ಶೇಖರ ಅಂದುಕೊಳ್ಳುತ್ತಾನೆ. ಕಾರ್ಮಿಕ ಮುಷ್ಕರದಲ್ಲಿ ಮಾಲಿಕರು ಉಪಯೋಗಿಸುವ ಆಯುಧಗಳ ಮಾರ್ಮಿಕತೆಯನ್ನು ಮನಮುಟ್ಟುವಂತೆ ಚಿತ್ರಿಸಲಾಗಿದೆ. ಕಾರ್ಮಿಕರ ಮುಷ್ಕರ ಸೋಲುತ್ತದೆ. ಆದರೆ;

''ಇಂಗೇ ಇರೋಕಾತದ? ಇಂಥ ನಾಯಿಬಾಳು ಬಾಳೋಕಾತದ? ಒಂದಿವ್ಸ - ಎರಡ್ದಿವ್ಸ ಇಂಗಿರ್ಬೋದು. ಆದರೆ ಯಾವಾಗ್ಲೂ ಇಂಗೇ ಇರೋಕಾತದಾ? ಗಿಡ ಕಡದ್ರೆ ತಿರಗಾ ಚಿಗರ್ತೆತೆ. ಮರ ಕಡಿದ್ರೆ ಬುಡ ಚಿಗರ್ಕೋತದೆ. ಹೆಂಡ್ತಿ ಬಸಿರು ಕಳ್ಕೋದ್ರೆ, ಮತ್ತೆ ಮಗಾ ಆಗಾಕಿಲ್ವ? ಅಂಗೇ ಕಣ್ರಪೋ, ತಿರ್‌ಗ ಚಿಗರ್ಕೋತದೆ ಸಂಘ, ಬ್ಯಾಸ್ಗೇನೇ ಯಾವಾಗ್ಲೂ ಇದ್ದಾತಾ? ಮಳೆ ಬತ್ತದೆ. ಕಣ್ರಪೋ ಮಳೆ ಬತ್ತದೆ... ಬರಾಕಿಲ್ಲ ಅನ್ನೋಕಾತದಾ? ಬತ್ತದೆ ಕಣ್ರಪೋ ಬಂದೇ ಬತ್ತದೆ'' ಎಂಬ ಆಶಾವಾದ- ಚರಿತ್ರೆಯ ಚಲನೆ - ಭರತವಾಕ್ಯದಂತಿದೆ.

''ಹಾಗಾದರೆ ಸುಖವೆನ್ನುವುದು ಎಲ್ಲಿತ್ತು? ಏಣಿಯ ಯಾವ ಹಂತದಲ್ಲಿತ್ತು? ಸಮಾಜದಲ್ಲಿ ಯಾವನು ಸುಖಿಯಾಗಿದ್ದ? ಹಾಗಾದರೆ ಆ ಸುಖವೆನ್ನುವ ವಸ್ತು ಸಿಗುವುದು ಸಾಧ್ಯವೇ ಇಲ್ಲವೇ? ಪ್ರಶ್ನೆಗೆ ಉತ್ತರ ಹುಡುಕುತ್ತ ನಡೆದ ರೀತಿ ನಿರಂಜನರದು ಅದು ''ವಿಮೋಚನೆ''ಯ ಒಡಲೂ ಹೌದು.''

## ನಂದಗೋಕುಲ ಮತ್ತು ರಂಗಮ್ಮನ ವಠಾರ

'ನಂದಗೋಕುಲ' ಮತ್ತು 'ರಂಗಮ್ಮನ ವಠಾರ' ಈ ಎರಡೂ ಕಾದಂಬರಿಗಳು ನಗರ ಜೀವನದ ಎರಡು ಮಾದರಿಗಳನ್ನು ತೆರೆದು ತೋರುತ್ತದೆ. 'ನಂದಗೋಕುಲ' ದಲ್ಲಿ ಇರುವವರು ನಿವೃತ್ತ ಅಧಿಕಾರಿಗಳು, ವ್ಯಾಪಾರಿಗಳು, ಹಳ್ಳಿಯಿಂದ ಪಟ್ಟಣಕ್ಕೆ ಬಂದ ಭೂಮಾಲಿಕರು, ಬಾಡಿಗೆದಾರರು, ಡಾಕ್ಟರರು, ವಕೀಲರು ಇತ್ಯಾದಿ, ಒಟ್ಟಾರೆ ಯಾಗಿ ಆರ್ಥಿಕವಾಗಿ ಅನುಕೂಲ ಉಳ್ಳವರು. ಉದ್ಯಾನ, ಕ್ಲಬ್ಬು, ಭಜನೆಮಂದಿರ, ತತ್ವಜ್ಞಾನ, ವಾಚನಾಲಯ ಇತ್ಯಾದಿಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡವರು.

ಇವರ ಜೀವನದಲ್ಲಿ ಶಿಸ್ತು, ನೀತಿ ನಿಯಮ ಎದ್ದು ಕಾಣುವಂತಹದು. ಹಾಗಂತ ಅಂತರಂಗದಲ್ಲಿ ಅದು ನೆಲೆಗೊಂಡಿದೆ ಎನ್ನುವಂತಿಲ್ಲ. ಉದಾಹರಣೆಗೆ ಭಾವನಗರಕ್ಕೆ (ನಂದಗೋಕುಲಕ್ಕೆ) ಓರ್ವ ವೇಶ್ಯೆ ವಾಸ ಮಾಡಲು ಬರುತ್ತಾಳೆ. ಆಗ ಭಾವನಗರದ ಹೆಂಗಸರು, ಗಂಡಸರ ಮಧ್ಯದಲ್ಲೆಲ್ಲ ದೊಡ್ಡ ಹುಯಿಲೇಳುತ್ತದೆ. ಅಲ್ಲಿಯ ಸಾರ್ವಜನಿಕ ಕಾರ್ಯಕರ್ತನೊಬ್ಬ ಎಲ್ಲ ಕೆಲಸಕ್ಕೂ ಮುಂದೆ. ಚುನಾವಣೆಗೆ ನಿಲ್ಲುವ ಮನಸ್ಸು. ಈತನೇ ಮುಂದಾಗಿ ತಲೆ ಹಿಡುಕನನ್ನು ಹಿಂದೆ ಮುಂದೆ ಮಾಡಿ ಅಲ್ಲಿ ಬರುವವರನ್ನು ಹೆದರಿಸಿ ವೇಶ್ಯೆ ಓಡಿಹೋಗುವಂತೆ ಮಾಡುತ್ತಾನೆ. ಸ್ತ್ರೀಯರ ಮಾನ ರಕ್ಷಣೆ ಮಾಡುವ ಹೊಣೆ ತಮ್ಮ ಮೇಲಿದೆ ಎನ್ನುತ್ತಾನೆ. ಆಮೇಲೆಯೇ ನೆಮ್ಮದಿಯ ಉಸಿರು ಅವರಿಗೆ. ಆದರೆ ಅದೇ ಊರಿನಲ್ಲಿ ವಾಸ ಮಾಡುವ ನಿವೃತ್ತ ನ್ಯಾಯಾಧೀಶರ ಹೆಂಡತಿಯ ವ್ಯವಹಾರದ ಕುರಿತು ವಿಶ್ವೇಶ್ವರನೊಡನೆ ಫಾಸ್ಕಲೆ ಹೇಳುವ ಮಾತು ''ನೆರಮನೇಲಿ ಯಾರಿದ್ದಾರೆ ಎಂದು ನೀವು ಕೇಳಿದಾಗ ಹೇಳಬೇಕಿತ್ತು. ಸರ್, ಒಬ್ಬ ಆಳು ಇದ್ದ. ಅವನ ಜೊತೆ ಏನೋ ಆಯ್ತು ಸರ್'' ಹೀಗೆ ನ್ಯಾಯಾಧೀಶರ ಹೆಂಡತಿಯ ಹಾದರದ ಬಗ್ಗೆ ಹೇಳುತ್ತಾನೆ. ಅದು ಊರಿಗೇ ಗೊತ್ತು. ನ್ಯಾಯಾಧೀಶರಿಗೂ ಗೊತ್ತಾಗಿರುತ್ತದೆ. ಆದ್ದರಿಂದಲೇ ಅವರು ಕ್ಲಬ್ಬಿನಿಂದ ಬರುವಾಗ ತಡಮಾಡೇ ಬರುತ್ತಾರೆ. ಆದರೆ ಬಹಿರಂಗದಲ್ಲಿ ಯಾರದೂ ಗುಲ್ಲು ಇಲ್ಲ. ಹೀಗೆ ಅವರ ನೈತಿಕ ಪ್ರಜ್ಞೆ ಆಳವಿಲ್ಲದ್ದು; ಆದರೂ ಮಡಿವಂತರು.

ರಂಗಮ್ಮನ ವಠಾರದ ಜನರು ಇನ್ನೊಂದು ಬಗೆಯವರು. ಕಾರಖಾನೆಯ ಗುಮಾಸ್ತರು, ಪೋಲಿಸರು, ಇನ್ಸೂರೆನ್ಸ್ ಏಜಂಟರು, ಪುಸ್ತಕ ವ್ಯಾಪಾರಿಗಳು, ಕಲಾವಿದರು ಇತ್ಯಾದಿ. 'ನಂದಗೋಕುಲ' ಮೇಲು ಮಧ್ಯಮ ವರ್ಗದ ಚಿತ್ರಣವಾಗಿದ್ದರೆ 'ರಂಗಮ್ಮನ ವಠಾರ' ಕೆಳ ಮಧ್ಯಮ ವರ್ಗದ ಚಿತ್ರವಾಗಿದೆ.

'ನಂದಗೋಕುಲ'ಕ್ಕಿಂತ ಈ ಕಾದಂಬರಿ ಹೆಚ್ಚು ಮನ ಸೆಳೆಯುತ್ತದೆ. ಸಾವಿನಿಂದ ಪ್ರಾರಂಭವಾಗುವ ಕಾದಂಬರಿ ಹುಟ್ಟಿನೊಂದಿಗೆ ಮುಕ್ತಾಯವಾಗುತ್ತದೆ. ಒಂದು ವರ್ಷದ ಜೀವದರ್ಶನ ಮೂಡಿಸುತ್ತದೆ.

ರಂಗಮ್ಮನ ಪಾತ್ರ ವಿಶೇಷವಾಗಿ ಸಂಕೀರ್ಣವಾಗಿದೆ. ಕಠೋರಳಂತೆ, ಲೋಭಿಯಂತೆ ಕಾಣುವ ಅವಳಲ್ಲಿ ಮಾನವೀಯತೆಯಿದೆ. ಅವಳ ಮಗ ಹತ್ತಿರದಲ್ಲಿಲ್ಲ. ಮುದುಕಿಗೆ ಮೊಮ್ಮಕ್ಕಳ ನೆನಪಾಗುತ್ತದೆ. ನಲ್ವತ್ತಕ್ಕೇ ವಿಧವೆಯಾದಳು. ಆವರೆಗೂ ಗಂಡನ ನೆರಳಾಗಿದ್ದ ಆಕೆ ಅನಂತರ ಧೈರ್ಯದಿಂದ ಜೀವನ ನಡೆಸಿದಳು. ಜೀವನಾನುಭವವೇ ಅವಳನ್ನು ಕಠೋರಳಂತೆ ಮಾಡಿದೆ.

ವಠಾರದಲ್ಲಿರುವ ಹದಿನಾಲ್ಕು ಕುಟುಂಬಗಳು ಹದಿನಾಲ್ಕು ಬಗೆಯವವು. ಚೆನ್ನಾಗಿ ಹಾಡಬಲ್ಲ ಹೆಂಡತಿಗೆ ಹೊಡೆವ ಅರಸಿಕ - ಕ್ರೂರಿ ಗಂಡ, ದಿನಕ್ಕೆ ಒಂದೇ ಪಾವು ಹಾಲು ಕೊಳ್ಳುವ ಕುಟುಂಬ, ಜೀವನದಲ್ಲಿ ಒಂದೇ ಒಂದು ಫೋಟೋ ತೆಗೆಸಿಕೊಳ್ಳಲಾಗದ ಲಕ್ಷ್ಮೀನಾರಾಯಣಯ್ಯನ ಹೆಂಡತಿ, ಅಸಹಾಯಕಳಾದ ನಾರಾಯಣಿ ಸಾವು. ಮಗಳಿಗೆ ಗಂಡು ಹುಡುಕುವ ತಂದೆಯರು. ಹೆಂಡತಿಯನ್ನು ಸಂತೈಸುವ ಗಂಡಂದಿರು. ಪೇಂಟರ ಶಂಕರ ನಾರಾಯಣಯ್ಯ, ಕತೆಗಾರ ಜಯರಾಮ ಅಲ್ಲಿಯೇ ಮೂಡಿಬರುವ ಪ್ರೇಮ ವ್ಯವಹಾರ, ಇವೆಲ್ಲವುಗಳು ಒಂದರ ಮೇಲೆ ಒಂದು ಓದುಗರನ್ನು ಕೊನೆಯ ತನಕ ಲವಲವಿಕೆಯೊಂದಿಗೆ ಸೆಳೆದುಕೊಳ್ಳುತ್ತದೆ. ಸಂಸಾರದ ಬಡತನ ತೊಂದರೆಗಳ ಮಧ್ಯದಲ್ಲೇ ಒಂದು ಮಿತಿಯಲ್ಲಿ ಬದುಕನ್ನು ಸಹ್ಯಗೊಳಿಸಿಕೊಳ್ಳುವುದಕ್ಕೆ ಉದಾಹರಣೆಯಾಗಿ ಶಂಕರ ನಾರಾಯಣಯ್ಯ ಮತ್ತು ಚಂಪಾರ ಸರಸ ಸಂಸಾರವನ್ನು ಚಿತ್ರಿಸುತ್ತಾರೆ.

ಈ ಎರಡೂ ಪ್ರಕಾರದ ಬದುಕು ನಗರ ಜೀವನಕ್ಕೆ ಜೀವಶಕ್ತಿಯನ್ನು ತುಂಬುವ ಬಂಡವಾಳಶಾಹಿಯ ಅವಳಿ ಕೂಸುಗಳಾಗಿವೆ. ಈ ಎರಡೂ ಬಗೆಯನ್ನು ವೈಶಿಷ್ಟ್ಯಪೂರ್ಣವಾಗಿ ಚಿತ್ರಿಸಿದ್ದಾರೆ. ಈ ಎರಡು ಕಾದಂಬರಿಗಳಲ್ಲಿ 'ರಂಗಮ್ಮನ ವಠಾರ' ಹೆಚ್ಚು ಕಲಾತ್ಮಕತೆಯಿಂದ ಚೊಕ್ಕಾಗಿ ಮೂಡಿ ಬಂದಿದೆ.

'ರಂಗಮ್ಮನ ವಠಾರ' ದಲ್ಲಿ ಒಂದು ವಠಾರದಲ್ಲಿ ವಾಸಿಸುವ ಅನೇಕ ಕುಟುಂಬಗಳ ಜೀವನ ವೈವಿಧ್ಯವೇ ವಸ್ತುವಾಗಿದೆ. ವಠಾರವೇ ಎಲ್ಲಾ ಕ್ರಿಯೆಗಳ ರಂಗಭೂಮಿಯಾಗಿರುವುದರಿಂದ ಕೃತಿಯ ಏಕಮುಖತೆಯನ್ನೂ ನಿರಂಜನರು ಕಾಪಾಡಿಕೊಂಡಿದ್ದಾರೆ. ಅಲ್ಲದೆ ವಠಾರ ಒಂದು ಸಣ್ಣ ಜಗತ್ತಾಗಿ ಜೀವನದ ಆಗುಹೋಗುಗಳನ್ನೆಲ್ಲ ಸಾಂಕೇತಿಕವಾಗಿ ಪ್ರತಿಬಿಂಬಿಸುತ್ತದೆ ಎಂದು ಕೀರ್ತಿನಾಥ ಕುರ್ತಕೋಟಿಯವರು ಹೇಳುವ ಮಾತು ಯಥಾರ್ಥವಾಗಿದೆ. (ಯುಗಧರ್ಮ ಹಾಗೂ ಸಾಹಿತ್ಯ ದರ್ಶನ - ಕಾದಂಬರಿ ಇತಿಹಾಸ ಪ್ರಬಂಧ ವರ್ಷ: ೧೯೬೨; ಪುಟ - ೨೦೦.)

## ಬನಶಂಕರಿ, ಸೌಭಾಗ್ಯ ಮತ್ತು ಅಭಯಾಶ್ರಮ

'ಬನಶಂಕರಿ' ಒಂದು ವಿಶಿಷ್ಟ ಕಾದಂಬರಿ. ಬನಶಂಕರಿಯ ಮೊದಲ ಹೆಸರು ಅಮ್ಮಿ ಎಂದು. ಈ ಪಾತ್ರದ ಮೂಲಮಾತ್ರಿಕೆ ನಿರಂಜನರ ತಾಯಿಯೇ ಆಗಿದ್ದಾಳೆ. ಇಲ್ಲಿಯ ಅನುಭವ ಅವರ ಸ್ವಂತ ಜೀವನದಿಂದ ಎದ್ದು ಬಂದುದು. ಇದು ಅವರ ಕತೆಗಳಲ್ಲಿ ಪುನರಾವರ್ತವಾಗುತ್ತಲೇ ಬಂದಿದೆ. ಬಾಲ ವಿಧವೆಯಾದ ಅಮ್ಮಿ ತೌರ್ಮನೆ ಸೇರಿ ಅಲ್ಲಿಂದ ಹೊರಬಿದ್ದು ಅಜ್ಜಿಯ ಸಂಗಡ ಇದ್ದು ದುಡಿದಳು. ಜೀವನ ಭದ್ರತೆಗಾಗಿ ಎರಡನೇ ಸಂಬಂಧ ಹೊಂದಿ, ಮಗುವನ್ನು ಪಡೆದು, ಅಲ್ಲಿ ಬಹಿಷ್ಕೃತೆಯಾಗಿ ನಗರ ಸೇರಿ ಕೊಳೆ ಕಸ ತೆಗೆವ ದುಡಿಮೆಯಿಂದ ಮಗುವನ್ನು ಕಾಲೇಜು ಓದಿಸಿ, ತಿರುಗಿ ತನ್ನ ಮೊದಲ ಗಂಡನ ಮನೆಗೆ ಬಂದು ತನ್ನ ಅಸ್ತಿತ್ವವನ್ನು ಸ್ಥಾಪಿಸಿ, ಜಾತಿಯಿಲ್ಲದವರೊಡನೆ ಮಗನ ಮದುವೆಗೆ ಅನುವು ಮಾಡಿಕೊಟ್ಟು ಬದುಕನ್ನು ಸಾರ್ಥಕಪಡಿಸಿಕೊಂಡ ಅಮ್ಮಿಯ ಪಾತ್ರ ಒಂದು ಅವಿಸ್ಮರಣೀಯ ಪಾತ್ರ. ಸ್ತ್ರೀವಾದಿ ಸಾಹಿತ್ಯಕ್ಕೆ ಇದು ಬದುಕನ್ನು ಬೆಳೆಸುತ್ತಲೇ ಇಡೀ ಬದುಕನ್ನು ಪ್ರತಿಭಟನೆಯನ್ನಾಗಿ ಮಾಡಿದ ವಿಶಿಷ್ಟ ಮುಖವನ್ನು ಪರಿಚಯಿಸುತ್ತದೆ.

ಅಮ್ಮಿ - ಬನಶಂಕರಿ - ಕಾಣಿಸಿಕೊಳ್ಳುವುದು ತನ್ನ ಗಂಡನ ಮನೆಯಲ್ಲಿ. ಬನಶಂಕರಿಯ ಅತ್ತೆ ಮಾವ ಬಲು ಪ್ರೀತಿಯಿಂದಲೇ ನೋಡಿಕೊಳ್ಳುತ್ತಾರೆ. ಆ ಹದಿಮೂರರ ಹುಡುಗಿಗೆ ದೀಪಾವಳಿಯಲ್ಲಿ ಅವಳದೇ ವಯಸ್ಸಿನ ಮೈದುನರೆಲ್ಲ ಅಂಗಳದಲ್ಲಿ ಸುರಬಾಣ, ನಕ್ಷತ್ರ ಕಡ್ಡಿಗಳನ್ನು ಹಚ್ಚಿ ಕೇಕೇ ಹಾಕುವಾಗ ಅವಳ ಮನಸ್ಸಿನ ಬಗೆಯನ್ನು ಹೀಗೆ ಕೊಡುತ್ತಾರೆ. ''ಆ ಬೆಳಕು ತಾರೆಗಳನ್ನೆಲ್ಲ ಅಂಗೈಯಲ್ಲಿ, ಸೆರಗಿನಲ್ಲಿ ಹಿಡಿಯಬೇಕೆಂಬ ಬಯಕೆ ಅಮ್ಮಿಗೆ. ಆದರೆ ಗೃಹಿಣಿಯಾದ ಆಕೆ ಹಾಗೆ ಮಾಡಲು ಸ್ವತಂತ್ರಳಲ್ಲ.''

ಅದೇ ವಯಸ್ಸಿನಲ್ಲಿ ಆಕೆ ವಿಧವೆಯಾಗುತ್ತಾಳೆ. ವಿಧವೆಯ ಮಂಡೆ ಬೋಳಿಸಬೇಕೆಂದು ಸಂಪ್ರದಾಯಸ್ಥರ ಒತ್ತಾಯ ಬರುತ್ತದೆ. ಆದರೆ ದಯಾವಂತರಾದ ಮಾವ, ಅತ್ತೆ ಅದಕ್ಕೆ ಅವಕಾಶ ಕೊಡುವುದಿಲ್ಲ ನಿರೂಪಕ ಹೇಳುತ್ತಾರೆ ''ಧರ್ಮ ಕ್ಷೌರಿಕನ ಕತ್ತಿಗೆ ಆ ಕೂದಲು ಆಹುತಿಯಾಗಲಿಲ್ಲ.''

ಮುಂದೆ ಅಮ್ಮಿ ತೌರಿಗೆ ಹೋಗುತ್ತಾಳೆ. ಅಲ್ಲಿಂದ ಅಜ್ಜಿಯ ಸಂಗಡ ಬೇರೆ ಕಡೆ ಹೋಗುತ್ತಾಳೆ. ಅಜ್ಜಿ ಸಾಯುತ್ತಾಳೆ. ಅಮ್ಮಿ ಆ ಊರಿನ ಮಠದ ಪಾರುಪತ್ಯಗಾರ ನಾರಾಯಣರಾಯನ ಜೊತೆ 'ಉಳಿಕಿ' ಸಂಬಂಧ ಮಾಡಿಕೊಳ್ಳುತ್ತಾಳೆ. ಅದರಿಂದ ಒಬ್ಬ ಮಗ, ಮಗಳು ಹುಟ್ಟುತ್ತಾರೆ. ನಾರಾಯಣರಾಯರ ಮೇಲೆ ಸಮಾಜದ ಒತ್ತಡ ಬರುತ್ತದೆ. ಅವರು ಅವಳನ್ನು ಬಿಡುತ್ತಾರೆ. ಅಮ್ಮಿ ನಗರವನ್ನು ಸೇರಿ ಒಂಟಿ ಜೀವನ

ಸಾಗಿಸುತ್ತಾಳೆ. ಛಲದಿಂದ ಮಕ್ಕಳನ್ನು ಬೆಳೆಸುತ್ತಾಳೆ. ಅಮ್ಮಿ ತನ್ನ ಹಳ್ಳಿಯ ತನ್ನ ಗಂಡನ ಮನೆಗೆ ಬರುತ್ತಾಳೆ.

ಗಂಡನ ತಮ್ಮ ''ಈಗ ಎಲ್ಲಿಂದ ಬಂದೆ ಅಮ್ಮಿ?' ಎಂದು ಕೇಳಿದಾಗ 'ಬೆಂಗಳೂರಿನಿಂದ ಬಂದೆ ಕಣಪ್ಪ. ನನ್ನ ಮಗ ಅಲ್ಲೇ ಇದ್ದಾನೆ. ಕಾಲೇಜು ಓದಿದ್ದಾನೆ. ಮಗಳನ್ನು ಬೊಂಬಾಯಿಗೆ ಕೊಟ್ಟಿದ್ದೀನಿ' ಅನ್ನುತ್ತಾಳೆ.

'ಜೀವನಹಳ್ಳಿ' ಹೆಸರು ಧ್ವನಿಪೂರ್ಣವಾಗಿದೆ. ಜೀವನಹಳ್ಳಿಯಲ್ಲಿ ಹೊಸ ಜೀವನವನ್ನು ಪರಿಚಯಿಸುತ್ತಾಳೆ.

ನಿರಂಜನರ ಕಥನದ ಹಿಂದೆ ಚರಿತ್ರೆ ಸದಾ ಹಾಜರಿರುತ್ತದೆ. ಅಮ್ಮಿ ನಗರಕ್ಕೆ ಹೋಗುವಾಗಿನ ಸಂದರ್ಭದ ವರ್ಣನೆ ಅದಕ್ಕೆ ಸಾಕ್ಷಿಯಾಗಿದೆ.

''ಅಮ್ಮಿ ಊರಿಗೆ ಬಂದ ಐದನೆಯ ವರ್ಷ. ಊರನ್ನು ತಗಲಿಕೊಂಡು ಹರಿಯುತ್ತಿದ್ದ ಭದ್ರಾನದಿಗೆ ಸೇತುವೆ ಕಟ್ಟುವ ಕೆಲಸ ಆರಂಭವಾಯಿತು. ಅದು ಬಾಳೆಹೊನ್ನೂರಿನ ಜನರಿಗೊಂದು ಮಹತ್ವದ ಸಂಭವ. ಆ ಊರಿನ ಬೀದಿಗಳು ಹೊಸಬರಿಂದ ತುಂಬಿದವು. ಹಳ್ಳಿಗಳಿಂದ ಬಡ ರೈತರು ಸಹಸ್ರಾರು ಜನ ಬಂದು ಕೂಲಿಗಾಗಿ ದುಡಿದರು. ನದಿಯ ಪ್ರವಾಹವನ್ನು ತಡೆದು, ಅಡಿಪಾಯ ಹಾಕಿದರು. ಸೇತುವೆ ಮೆಲ್ಲ ಮೆಲ್ಲನೆ ಮೇಲಕ್ಕೇಳುತ್ತಿತ್ತು. ಊರಿನ ಜನ ಅಲ್ಲಿ ಹೋಗಿ ನಿಂತು ಮಂತ್ರಮುಗ್ಧರಾಗಿ ಮಹಾಸಾಹಸವೆಂದು ತೋರಿದ ಆ ಕೆಲಸವನ್ನು ದಿಟ್ಟಿಸುತ್ತಿದ್ದರು.

''ಸೇತುವೆ ನಿರ್ಮಾಣಕ್ಕೂ ಅಮ್ಮಿ ಜೀವನಕ್ಕೂ ಸಂಬಂಧವಿತ್ತೆಂದು ವಿವರಿಸುವುದು ಕಷ್ಟ. ಅಮ್ಮಿಯೂ ಬಾಗಿಲು ಸರಿಸಿ ಹೊರನೋಡುತ್ತಿದ್ದಳು.''

ಸಮಾಜ ಚರಿತ್ರೆಯ ಹೊಸ ಮಜಲಿಗೆ ಸಾಗುತ್ತಿರುವ ಈ ಕಾಲದಲ್ಲಿ ಸಮಾಜ ಸುಧಾರಣೆ ಇತ್ಯಾದಿ ನಡೆಯುತ್ತಿದ್ದವು. ಇಂಥ ಕಾಲದಲ್ಲಿ ಅಮ್ಮಿಯ ನೆರವಿಗೆ ಬಂದವರು ಸುಂದರಮ್ಮ ಮತ್ತು ರಾಮಶಾಸ್ತ್ರಿ.

ಬದುಕಿನಲ್ಲಿ ಅನುಭೋಗಿಸದೇ ಇರುವ ಸೌಂದರ್ಯ, ಪ್ರೀತಿ, ಕಾಮದ ಬೆಚ್ಚನೆಯ ಅನ್ನಿಸಿಕೆ ಆಗಲೇ ತಾರುಣ್ಯಕ್ಕೆ ಕಾಲಿಡುತ್ತಿರುವ ಬನಶಂಕರಿಯಲ್ಲಿ ಉಂಟಾದದ್ದೇ ಸುಂದರಮ್ಮ ಮತ್ತು ರಾಮಶಾಸ್ತ್ರಿಗಳ ಅನ್ಯೋನ್ಯ ಕುಟುಂಬವನ್ನು ನೋಡಿ.

ಒಮ್ಮೆ ಸುಂದರಮ್ಮ ಹೇಳುತ್ತಾಳೆ. ''ಇನ್ನೊಂದು ಮದುವೆ ಪಾಪವಲ್ಲ ಬನೂ... ಖಂಡಿತ ಪಾಪವಲ್ಲ, ಧರ್ಮಶಾಸ್ತ್ರದ ಹೆಸರಿನಲ್ಲಿ ನಿನಗೆ ಹಿಂಸೆ ಕೊಡೋದಿದೆಯಲ್ಲ ಅದು ಪಾಪ. ನಾವೆಲ್ಲ ದೇವರ ಮಕ್ಕಳೇ ಅಲ್ವಾ? ನಿನಗೆ ತಿಳೀದು, ನಮ್ಮವ್ರು ಎಷ್ಟೋ

ಪುಸ್ತಕ ಓದಿದ್ದಾರೆ. ಬೆಂಗಳೂರು ಮೈಸೂರು ಸಂಚಾರ ಮಾಡಿದ್ದಾರೆ, ಒಳ್ಳೊಳ್ಳೆ ವಿದ್ವಾಂಸರ ಜೊತೇಲಿ ಮಾತ್ನಾಡಿದ್ದಾರೆ, ಅವರೇನಂತಾರೆ ಗೊತ್ತಾ? ಇನ್ನೊಂದು ಮದುವೆ ಪಾಪ ಅಲ್ಲಾಂತ, ಗಂಡಸರು ಎರಡನೇ, ಮೂರನೇ ಮದುವೆ ಮಾಡಿಕೊಳ್ಳುವಾಗ ವಿಧವೆಯರು ಮದುವೆಯಾಗುವುದು ಪಾಪವಲ್ಲ.''

ಅಮ್ಮಿ ವಿವಿಧ ಪ್ರಕಾರದಲ್ಲಿ ದುಃಖವನ್ನು ಅನುಭೋಗಿಸುತ್ತಾಳೆ. ಅದೊಂದು ಕರುಣಾಜನಕ ಬದುಕು. ವಿಧವೆಯಾದ ಅವಳೊಮ್ಮೆ ಮನೆಗೆ ಬಂದ ಮುತ್ತೈದೆಯರನ್ನು ಮಾತಾಡಿಸಿದಳೆಂದು ಅನರು ಮುನಿದು ಮನೆಹೊಕ್ಕದೇ ಹೋಗುತ್ತಾರೆ. ಇನ್ನೊಮ್ಮೆ ನಾರಾಯಣರಾಯರ ಹೆಂಡತಿ ಸಾರ್ವಜನಿಕ ಬೀದಿಯಲ್ಲೇ ಬಯ್ದು ಅವಳ ಮಾನ ತೆಗೆಯುತ್ತಾಳೆ. ಇದರಿಂದ ರಾಯರು ಅವಳನ್ನು ತ್ಯಜಿಸುತ್ತಾರೆ. ಇನ್ನೊಂದು ಸಲ ಕೆಲಸದ ಮನೆಯ ಯಜಮಾನ ತನ್ನ ಹೆಂಡತಿ ಇಲ್ಲದ ಸಮಯದಲ್ಲಿ ಅಮ್ಮಿಯ ಮೇಲೆ ಬಲತ್ಕಾರ ಮಾಡಲು ಹೋಗುತ್ತಾನೆ. ಅಮ್ಮಿ ಕತ್ತಿಮಣೆಯನ್ನು ತೋರಿ ಪಾರಾಗುತ್ತಾಳೆ. ಅದೇ ಅಮ್ಮಿಗೆ ಸುಂದರಬಾಯಿ ಕಾವೇರಿಯಂಥ ಗೆಳತಿಯರು ಸಿಕ್ಕುತ್ತಾರೆ. ಸುಂದರಮ್ಮ ಒಮ್ಮೆ ಹೇಳುತ್ತಾಳೆ. ''ನಮ್ಗೂ ವಿದ್ಯಾಭ್ಯಾಸ ಇದ್ದಿದ್ರೆ ನಾವೂ ಸಂಪಾದ್ನೆ ಮಾಡಿ ಯಾರ ಹಂಗೂ ಇಲ್ದೆ ಇರೋ ಸ್ಥಿತಿ ಇದ್ದಿದ್ರೆ?''

ಈ ಮಾತಿನ ಹಿಂದೆ ಹೆಣ್ಣಿಗೆ ಆರ್ಥಿಕ ಭದ್ರತೆ ಇಲ್ಲದ್ದೇ ಅವಳ ಮೇಲೆ ನಡೆಯುವ ದೌರ್ಜನ್ಯಕ್ಕೆ ಕಾರಣವಾಗುತ್ತವೆ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಭಾರತದಲ್ಲಿ ನಡೆದ ಸುಧಾರಣಾವಾದಿ ಚಳವಳಿ ಹಾಗೂ ಸಾಮಾಜಿಕವಾಗಿ ಪರಿವರ್ತನೆಗೊಳ್ಳುತ್ತಿರುವ ಕಾಲದಲ್ಲಿ ದೌರ್ಜನ್ಯಕ್ಕೆ ಗುರಿಯಾದ ಹೆಣ್ಣೊರ್ವಳು ಛಲ ಹಿಡಿದು ನಡೆಸಿದ ಜೀವನವೊಂದರ ಸಮರ್ಥವಾದ ದಾಖಲೆಯನ್ನೊದಗಿಸುವುದಲ್ಲದೇ ಸಮಾಜದ ಪರಿವರ್ತನೆಯ ಸೆರೆ ಹಿಡಿಯುತ್ತಲೇ ಅಂಥ ಪ್ರಗತಿಪರ ಶಕ್ತಿಗಳಿಗೆ ಒತ್ತಾಸೆಯನ್ನು ಒದಗಿಸುವ ಕಾದಂಬರಿ 'ಬನಶಂಕರಿ' ವಾಸ್ತವವನ್ನೂ, ಆಶ್ರಯವನ್ನೂ, ಚರಿತ್ರೆಯ ಚಲನೆಯನ್ನೂ ಏಕಕಾಲದಲ್ಲಿ ಸೆರೆಹಿಡಿಯಲು ಬನಶಂಕರಿ ಬಯಸುತ್ತದೆ. ಮತ್ತು ಯಶಸ್ವಿಯಾಗಿ ಆ ಕೆಲಸ ಮಾಡುತ್ತದೆ.

## ಸೌಭಾಗ್ಯ

'ಸೌಭಾಗ್ಯ' ಬನಶಂಕರಿಯ ಮುಂದಿನ ಭಾಗ. ಅಮ್ಮಿಯ ಮಕ್ಕಳಾದ ರಾಜನ ದಂಪತಿಗಳ ಮತ್ತು ಮಗಳ ಜೀವನ ಮುಂದುವರಿಯುತ್ತದೆ. ಬೆಂಗಳೂರು ಮತ್ತು ಮುಂಬೈಯಲ್ಲಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಧ್ಯಮ ವರ್ಗದ ಪಾಡು ಇಲ್ಲಿ ಹೆಚ್ಚು ಭಾಗ ತೆಗೆದುಕೊಳ್ಳುತ್ತದೆ.

ರಾಜಣ್ಣನ ಹೆಂಡತಿ ರಮಾ. ರಾಜಣ್ಣ ಬ್ಯಾಂಕ್ ನೌಕರನಾದರೆ ರಮಾ ಶಿಕ್ಷಕಿಯಾಗುತ್ತಾಳೆ. ಏಕಾಂತದಲ್ಲಿ ಅವರು ಕರೆದುಕೊಳ್ಳುವುದು ಏಕವಚನದಲ್ಲಿ. ಒಬ್ಬರಿಗೊಬ್ಬರು ಅರಿತು ಸಹಕಾರದಿಂದ ಸರಸವಾದ ಸಂಸಾರ ನಡೆಸುತ್ತಾರೆ.

ರಮೆಯ ಸ್ವಾಭಾವಿಕ ನಡವಳಿಕೆಯಿಂದ ಶಾಲಾ ಮೇನೇಜರ ತನ್ನ ಬಲೆಗೆ ಬೀಳುತ್ತಾಳೆಂದು ಗ್ರಹಿಸುತ್ತಾನೆ. ಹೆಣ್ಣು ಮಕ್ಕಳು ಸ್ವಚ್ಛವಾಗಿ ಹೊಸದಾಗಿ ಮಾತಾಡಿದಾಗ ಆಗುವ ಅಪಾಯವಿದೆಂದು ತೋರುತ್ತದೆ. ಆಕೆ ಶಿಕ್ಷಕಿ ತರಬೇತಿ (ಬಿ.ಟಿ) ಮುಗಿಸಬೇಕಾಗಿರುವುದರಿಂದ ಆ ದಂಪತಿಗಳು ಪರಸ್ಪರ ಬೇರೆ ಬೇರೆಯೇ ಹಾಸಿಗೆಗೆ ಬದ್ಧರಾಗುತ್ತಾರೆ.

ಈ ಮಧ್ಯೆ ಬ್ಯಾಂಕಿನ ನೌಕರರು ಯುದ್ಧಕಾಲೀನ ಭತ್ಯೆ ತೆಗೆಯಬಾರದೆಂದು ಅರ್ಜಿ ಸಲ್ಲಿಸಿರುತ್ತಾರೆ. ಮುಂಬೈಯಿಂದ ಜೋಶಿ ಎಂಬಾತನನ್ನು ಬೆಂಗಳೂರಿಗೆ ವರ್ಗ ಮಾಡುತ್ತಾರೆ. ಇದರಿಂದ ರಾಜಣ್ಣನಿಗೆ ತಕ್ಕ ಜೋಡಿಯೊದಗುತ್ತದೆ. ಬ್ಯಾಂಕಿನ ನೌಕರರ ಸಂಘ ಕಟ್ಟುತ್ತಾರೆ. ಪುಟ್ಟಸ್ವಾಮಿ ಎಂಬಾತ ಇನ್ನೊಬ್ಬ ಗುಮಾಸ್ತ. ಅವನಿಗೆ ನಾಲ್ಕು ಮಕ್ಕಳು. ಈ ಪಾತ್ರದ ಮೂಲಕ ದೊಡ್ಡ ಸಂಸಾರದ ದಾರುಣತೆಯನ್ನು ಚಿತ್ರಿಸುತ್ತಾರೆ.

ಸಂಘ ಕಟ್ಟುವಿಕೆಯ ಫಲವಾಗಿ ರಾಜಣ್ಣನನ್ನು ನೌಕರಿಯಿಂದ ತೆಗೆದು ಹಾಕುತ್ತಾರೆ. ಪುಟ್ಟಸ್ವಾಮಿಯ ಕೆಲಸ ಹೋಗಿ ವಿಮಾನ ಕಾರಖಾನೆಯಲ್ಲಿ ಕೆಲಸಕ್ಕೆ ಸೇರಿ ಸಂಘದ ಕಾರ್ಯದರ್ಶಿಯಾಗುತ್ತಾನೆ. ಆತನ ಕೆಲಸ ಹೋಗುತ್ತದೆ. ಈಗಿನ ಹಾಗೆ ಆ ಕಾಲದಲ್ಲಿ ಸಂಘಟನೆ ವ್ಯಾಪಕವೂ, ಬಲಶಾಲಿಯೂ ಆಗಿರಲಿಲ್ಲ. ಕಾನೂನು ಮಾನ್ಯತೆಯನ್ನು ಪಡೆದಿರಲಿಲ್ಲ.

ಜೋಶಿ ಸಂಘಟನಾ ಚತುರನೂ, ಸಾಹಸಿಯೂ ಆಗಿದ್ದು ಸಂಘಟನೆಯನ್ನು ಬಲಪಡಿಸುತ್ತಾನೆ. ಇದರಿಂದ ಕಾರ್ಮಿಕರೆಲ್ಲರ ನೇತಾರನಾಗುತ್ತಾನೆ. ಅವರ ಪ್ರೀತಿಗೆ ಪಾತ್ರನಾಗುತ್ತಾನೆ. ಅಕಸ್ಮಾತ್ ಅಪಘಾತಕ್ಕೆ ಸಿಕ್ಕಿ ಸಾಯುತ್ತಾನೆ. ಆತ ಬಿದ್ದ ಜಾಗದಲ್ಲಿ ಸ್ಮಾರಕ ಕಟ್ಟುತ್ತಾರೆ. ಕಾರ್ಮಿಕರು ಗೌರವಾರ್ಥ ನಿಂತು ಮುಂದೆ ಹೋಗುತ್ತಾರೆ. ಬಸ್ಸುಗಳೂ ಹಾಗೇ.

ಸಂಘಟನೆ ಕುರಿತು ಕೆಲಸಗಾರರ ಕುರಿತು ಅನೇಕ ವಿಚಾರಗಳು ಚರ್ಚಿತವಾಗುತ್ತವೆ. ''ಇಲ್ಲಿರುವ ದುಡಿಯೋ ಬಡವನಿಂದ ಸೌಂದರ್ಯೋಪಾಸನೆ ಸಾಧ್ಯವಾಗಬೇಕಾದರೆ ಅವನ ಹೊಟ್ಟೆಯ ಪ್ರಶ್ನೆ ಮೊದಲು ಬಗೆಹರಿಯಬೇಕೂಂತ, ಜೋಶಿ ಚೆನ್ನಾಗಿ ಹೇಳುತ್ತಿದ್ದ'' ಎಂದು ರಾಜಣ್ಣ ರಮೆಗೆ ಹೇಳುತ್ತಾನೆ.

ಈ ವ್ಯವಸ್ಥೆ ಬದಲಾಗುತ್ತದೆ. ಆದರೆ ಅದಕ್ಕೆ ಒಗ್ಗಟ್ಟಾಗಿ ಶ್ರಮಿಸಬೇಕು ಎಂಬ ಆಶಾವಾದದ ಕಡೆ ಕಾದಂಬರಿಯಲ್ಲಿ ಒತ್ತು ಬೀಳುತ್ತದೆ.

## ಅಭಯ

ಸಮಾಜ ಪರಿವರ್ತನೆಗೆ ಅಣಿಯಾಗುತ್ತಲೇ ಇರುತ್ತದೆ. ಆದರೆ ಅದು ತರುವ ಬದಲಾವಣೆಯೆಲ್ಲ ಒಳ್ಳೆಯದೇ ಆಗಿರುತ್ತದೆಂದೇನೂ ಇಲ್ಲ. ಅದು ಹೊಸ ಹೊಸ ಸಮಸ್ಯೆಯನ್ನೇ ತಂದಿಡುತ್ತದೆ. ನಗರದ ಅಂತಹ ಸಮಸ್ಯೆಗಳಲ್ಲಿ ದಾರಿತಪ್ಪಿದ ಹೆಣ್ಣು ಮಕ್ಕಳದು ಒಂದು. ಈ ಬಗ್ಗೆ ಒಂದು ಮಾನವೀಯ ದೃಷ್ಟಿಯ ಪರಿಹಾರ 'ಅಭಯಧಾಮ'. 'ಅಭಯಧಾಮದ' ತಾಯಿ ಸರಸಮ್ಮನೊಡನೆ ಒಂದು ಸಂಭಾಷಣೆ ಬರುತ್ತದೆ. ಅದು ಚಿಂತನೀಯವಾಗಿದೆ.

''ಸೂಳೆಯರ ಮನೆಗಳು ಇಲ್ಲದಂತೆ ಮಾಡುವುದು ನಮ್ಮ ಕೈಲಿಲ್ಲ ತಾನೆ? ವ್ಯಭಿಚಾರಕ್ಕೆ ಕಾರಣವಾಗೋ ವಿಷಮ ದಾಂಪತ್ಯಗಳನ್ನು ಬಗೆಹರಿಸೋದು ನಮ್ಮ ಕೈಲಿಲ್ಲ. ನಮ್ಮ ಹುಡುಗೀರು ದಾರಿ ತಪ್ಪೋದಕ್ಕೆ ಆರ್ಥಿಕ, ಸಾಮಾಜಿಕ ಕಾರಣಗಳಿವೆ. ಜೀವನದ ಸರಿಯಾದ ಮೌಲ್ಯಗಳನ್ನು ಪ್ರತಿಪಾದಿಸಲಾರದ ವಿದ್ಯಾಭ್ಯಾಸ ಪದ್ಧತಿಯಿದೆ. ನಮ್ಮ ನೈತಿಕ ಮಟ್ಟ ಮತ್ತಷ್ಟು ಕೆಳಗೆ ಇಳಿಯೋಕೆ ಕಾರಣವಾಗೋ ಕೆಟ್ಟ ಚಲನಚಿತ್ರ, ಕೆಟ್ಟ ಪುಸ್ತಕಗಳಿವೆ. ಗೊತ್ತು ಗುರಿಗಳಿಲ್ಲದ ನಂಬುಗೆ, ಶ್ರದ್ಧೆ ಇಲ್ಲದ ಬದುಕು ಯಾವಾಗಲೂ ಛಿದ್ರವಾಗುತ್ತೆ.''

''ಹಾಗಾದರೆ ಅದರ ಮೂಲ ಕಾರಣವನ್ನು ಮೊದಲು ಹೊಡೆದೋಡಿಸಿ ಎಂತಾನೆ ಆತ''

''ಅದು ನಮ್ಮ ಕೈಯಲ್ಲಿದೆಯೇ? ಆ ಕೆಲಸ ಸರಕಾರ ಮಾಡಬೇಕು. ಸಮಾಜದ ಪುನರ್ಘಟನೆ ದೊಡ್ಡ ವಿಷಯವಾಯ್ತು. ನಮ್ಮ ಕೈಯಲ್ಲಿ ಎಷ್ಟು ಆಗುತ್ತೋ ಅಷ್ಟನ್ನು ಮಾಡ್ತೀವಿ''

ಆಶ್ರಮದಲ್ಲಿ ಅನೇಕ ಹುಡುಗಿಯರಿದ್ದಾರೆ. ಒಬ್ಬೊಬ್ಬರದು ಒಂದೊಂದು ಕತೆ. ಎಲ್ಲರೂ ಸಂಭಾವಿತರೆಂದೇನು ಅಲ್ಲ. ಅಭಯಾಶ್ರಮದಲ್ಲಿ ಉಪಚಾರ ಪಡೆದ ಮೇಲೂ ದಾರಿ ತಪ್ಪುವವರಿದ್ದಾರೆ. ಆದರೆ ಮುಖ್ಯಸ್ಥ ಸರಸಮ್ಮನ ದೃಷ್ಟಿಯಲ್ಲಿ ಕೆಲವರಾದರೂ ಸುಧಾರಿಸುತ್ತಾರೆ ಎಂಬ ಕ್ಷಮಾದೃಷ್ಟಿ.

ಅಲ್ಲಿರುವವರಲ್ಲಿ ತುಂಗಮ್ಮ ಮುಖ್ಯಪಾತ್ರ. ಅವಳ ಮನೆಯಲ್ಲಿ ಬಡತನವಿದೆ. ನಾಲ್ಕನೇ ತರಗತಿ ಓದಿದವಳು. ಅವಳಿಗೆ ನಾರಾಯಣಮೂರ್ತಿಯೊಡನೆ ಗೆಳೆತನ ವಾಗುತ್ತದೆ. ಆತ ಮದುವೆಯಾಗುತ್ತೇನೆಂದು ನಂಬಿಸಿ ಕೈಬಿಟ್ಟ. ಅವಳು

ಬಸಿರಾಗುತ್ತಾಳೆ. ಅವರ ತಂದೆ ಅಪಾರ ಕರುಣೆಗಳು. ಸಂಗತಿ ತಿಳಿದ ಮೇಲೆ ನಾರಾಯಣಮೂರ್ತಿಯನ್ನು ಮಾತಾಡಿಸಿದರು. ಆತ ಒಪ್ಪಲಿಲ್ಲ.

ತುಂಗಮ್ಮನನ್ನು ಅಭಯಕ್ಕೆ ತಂದು ಸೇರಿಸಿದರು. ಅಲ್ಲಿ ಅವಳು ತನ್ನ ಸದ್ಗುಣಗಳಿಂದ ಸರಸಮ್ಮನ ಮನ ಗೆಲ್ಲುತ್ತಾಳೆ. ಮಗು ಹುಟ್ಟಿ ಸಾಯುತ್ತದೆ. ತುಂಗಮ್ಮ ತನ್ನ ಜೀವಿತಾವಧಿಯ ಸೇವೆಯನ್ನು ಅಭಯಾಶ್ರಮಕ್ಕೆ ಮುಡಿಪಿಡಲು ನಿಶ್ಚಯಿಸುತ್ತಾಳೆ. ಅವಳ ಮದುವೆಯೂ ಆಗುತ್ತದೆ. ಮದುವೆಯಾಗುವ ಸೋಮಶೇಖರ ಸುಸಂಸ್ಕೃತ, ಅದೊಂದು ಮಾರ್ಗದರ್ಶಕ ಪಾತ್ರ. ಆದರೆ ಅದಕ್ಕೆ ಸಾಕಷ್ಟು ಬೆಳವಣಿಗೆಯ ಅವಕಾಶ ಸಿಕ್ಕಲಿಲ್ಲ.

ನಿರಂಜನ ಎಲ್ಲದಕ್ಕೆ ಅಭಯಾಶ್ರಮ ಪರಿಹಾರ ಎಂದು ಗ್ರಹಿಸುವುದಿಲ್ಲ. ಆದರೆ ಅದೊಂದು ಪರಿಹಾರ ಆಗಬಲ್ಲದೆಂದು ಸೂಚಿಸುತ್ತಾರೆ.

ಕಾದಂಬರಿಯ ವಸ್ತುವನ್ನು ವಾಸ್ತವದ ಅಭ್ಯಾಸ ಮತ್ತು ನಿರೀಕ್ಷಣೆಯಿಂದ ಸಿದ್ಧಪಡಿಸಿಕೊಂಡಿದ್ದಾರೆ. ಹಾಗೆಯೇ ಇಲ್ಲಿಯ ಕಲ್ಪನೆಗೆ ಮಾನವೀಯ ದೃಷ್ಟಿಯ ಸಹಯೋಗವಿದೆ.

## ನೋವು

ಕಣಿವೆಹಳ್ಳಿ ಒಂದು ಗ್ರಾಮ. ಅಲ್ಲಿ ಆಸ್ಪತ್ರೆ, ಶಾಲೆ, ಅಂಚೆ ಕಛೇರಿ, ರಸ್ತೆಗೆ ದೀಪ, ಗ್ರಾಮಪಂಚಾಯತಿ ಇತ್ಯಾದಿ ಏನೂ ಇಲ್ಲ. ಅಂದರೆ ನಾಗರಿಕತೆಯ ಸೋಂಕು ಇಲ್ಲದ; ನಗರದ ದೃಷ್ಟಿಯಿಂದ ಅತಿ ಹಿಂದುಳಿದ ಊರು.

ಈ ಊರಿನಲ್ಲಿ ಮುಖ್ಯವಾಗಿ ಎರಡು ಕುಳಗಳಿವೆ. ಒಬ್ಬರು ಜಮೀನುದಾರರಾದ ಶ್ಯಾಮೇಗೌಡರು. ಊರ ಪಟೇಲ ಕೂಡ. ಇನ್ನೊಬ್ಬ ಶ್ರೀನಿವಾಸಯ್ಯ, ಬ್ರಾಹ್ಮಣ, ಇವರಿಬ್ಬರೇ ಹಳ್ಳಿಗೆ ವಿಧಿಗಳಿದ್ದಂತೆ. ಗೌಡರ ಮಾತೆಂದರೆ ನ್ಯಾಯಾಧೀಶರ ಮಾತಿದ್ದಂತೆ. ಊರಿನಲ್ಲಿ ಮುನಿಯ ಎಂಬುವನ ಕೊಲೆಯಾಗುತ್ತದೆ. ಭೂಮಿ ಸಂಬಂಧದ ಸಿಟ್ಟಿನಲ್ಲಿ ಅಬ್ದುಲ್ ಅವನ ಕೊಲೆ ಮಾಡಿಬಿಡುತ್ತಾನೆ. ಆದರೆ ಗೌಡರ ಎದುರು ತಪ್ಪು ಒಪ್ಪಿಕೊಂಡು ಅವರ ಕಾಲು ಹಿಡಿದುಕೊಳ್ಳುತ್ತಾನೆ.

ಗೌಡರು ಬರುವುದನ್ನೇ ಜನ ಕಾಯುತ್ತಿದ್ದಾರೆ. ಬಂದ ಗೌಡರು ಮುನಿಯನ ಶವ ನೋಡುತ್ತಾರೆ. ಅದು ಮನುಷ್ಯರಿಂದ ಆದ ಕೆಲಸ ಅಲ್ಲ ಎಂದು ನಿಟ್ಟುಸಿರು ಬಿಡುತ್ತಾರೆ. ಎಲ್ಲರೂ ಅದನ್ನು ಒಪ್ಪುತ್ತಾರೆ. ಹೀಗಿದೆ ಅವರ ಪ್ರಭಾವ.

ಇಂಥ ಹಳ್ಳಿ ಸಾವಕಾಶವಾಗಿ ನಗರೀಕರಣಕ್ಕೆ ಒಳಗಾಗತೊಡಗುತ್ತದೆ. ಇಂಥ ಪರಿವರ್ತನೆಗೆ ಹಳ್ಳಿ ಸಹಜವಾಗೇ ಸಿದ್ಧವಾಗಿರುವುದಿಲ್ಲ. ಆಗಾಗ ಅಲ್ಲಿ ಸಂಘರ್ಷ

ಅಡೆತಡೆ ಉಂಟಾಗುತ್ತದೆ. ಆದರೂ ಅದು ನಗರೀಕರಣಕ್ಕೆ ಒಳಗಾಗುವುದು ನಿಯಮದಂತೆ ನಡೆದು ಹೋಗುತ್ತದೆ. ಅಲ್ಲಿ ಅಂಥ ಪರಿವರ್ತನೆಗೆ ಪಕ್ವವಾಗದ ಮನಸ್ಸಿನ 'ನೋವು' ಅಷ್ಟೇ ಮನೋವೇದಕವಾಗಿರುತ್ತದೆ. ನಿರಂಜನ ''ನೋವು'' ಮೂಲಕ ಈ ಎರಡು ಕೆಲಸ ಮಾಡುತ್ತಾರೆ. ಆದ್ದರಿಂದಲೇ ಈ ಕಾದಂಬರಿಗೆ ಚಾರಿತ್ರಿಕವಾದ ಮಹತ್ವವಿದೆ. ಹಾಗೆಯೇ ನಿರಂಜನರ ವೈಚಾರಿಕತೆಗೆ ಒಂದು ಸಾಕ್ಷಿ ಕೂಡ ಆಗಿದೆ.

ನಗರದಿಂದ ವಿಷ್ಣುಮೂರ್ತಿ ಹಳ್ಳಿಯಲ್ಲಿ ಒಂದು ಹೋಟೆಲ್ ತೆರೆಯಬೇಕೆಂದು ಬರುತ್ತಾನೆ. ಆದರೆ ಅದಕ್ಕೆ ಗೌಡರ ಅಪ್ಪಣೆ ಬೇಕು ತಾನೆ?

ಗೌಡರು ಗಂಭೀರವಾಗೇ ಇದ್ದರು. ವಿಷ್ಣುಮೂರ್ತಿ ಚೀಲದಿಂದ ಮೋಸಂಬಿ ಹಣ್ಣುಗಳನ್ನು ತೆಗೆದು ಸಾಲಾಗಿ ಇಟ್ಟು ಇದು ಒಂದು ಚಿಕ್ಕ ಕಾಣಿಕೆ. ತೆಗೆದುಕೊಳ್ಳಬೇಕು ಎಂದರು. ಗೌಡರು ಮೊದಲು ಹೋಟೆಲ್ ಉದ್ಯಮಕ್ಕೆ ವಿರೋಧಿಸಿದವರು ಈಗ ಮಿದುವಾದರು. ಮೂರ್ತಿ ಸಾವಕಾಶವಾಗಿ ಗೌಡರ ಅಪ್ಪಣೆ ತೆಗೆದುಕೊಳ್ಳುತ್ತಾನೆ.

ಈ ದೃಶ್ಯ ನೋಡಿದಾಗ ನಾವು ಇತಿಹಾಸದಲ್ಲಿ ಓದಿದ ಮೊಘಲ್ ದೊರೆಗಳ ದರ್ಬಾರಿಗೆ ಇಂಗ್ಲೀಷ್ ರಾಯಭಾರಿ ಸರ್ ಥಾಮಸ್‌ರೋ ಭೆಟ್ಟಿ ಮಾಡಿ ವ್ಯಾಪಾರದ ಅನುಮತಿಯನ್ನು ಪಡೆದುಕೊಂಡ ಘಟನೆ ನೆನಪಾಗುತ್ತದೆ. ಸರ್ ಥಾಮಸ್‌ರೋ ಪಡೆದುಕೊಂಡ ವ್ಯಾಪಾರಿ ಅನುಮತಿ ಅತ್ಯಂತ ಚಾರಿತ್ರಿಕವಾದ ಸಂಗತಿಯಾಗಿದೆ. ಆ ಘಟನೆ ಪುನರ್ನಿರ್ಮಾಣವೆಂಬಂತೆ ವಿಷ್ಣುಮೂರ್ತಿ ಮತ್ತು ಶ್ಯಾಮೇಗೌಡರ ಭೆಟ್ಟಿಯಲ್ಲಿ ನಾಟಕೀಯವಾಗಿ ಮೈ ತಳೆದಿದೆ.

ಕಣಿವೆ ಹಳ್ಳಿಯಲ್ಲಿ ಹೋಟ್ಲು ಶುರುವಾಯಿತು. ಜನಕ್ಕೆ ಹೊಸ ಹೊಸ ತಿಂಡಿಯ, ಬೀಡಿ ಸಿಗರೇಟಿನ ಪರಿಚಯವಾಯಿತು. ಜನರಿಗೆ ಹೋಟ್ಲ ಚಹ ಕುಡಿಯುವ ಅಭ್ಯಾಸವಾಯಿತು.

ಶ್ರೀನಿವಾಸಯ್ಯನವರ ಮಗ ಗೋವಿಂದನಿಗೆ ಮೂರ್ತಿಯ ಮಗಳ ಜೊತೆ ಮದುವೆಯಾಗುತ್ತದೆ. ನಗರ ಮತ್ತು ಹಳ್ಳಿಯ ಬೆಸುಗೆ.

ಗೋವಿಂದನ ಪಾತ್ರ ವಿಶಿಷ್ಟವಾದುದು. ಹಳ್ಳಿಯಲ್ಲಿನ ಸುಧಾರಣೆಗೆ ಆತ ಬಹಳ ಮಟ್ಟಿಗೆ ಕಾರಣ. ಒಂದು ಸಲ ಆತ ಹೇಳುತ್ತಾನೆ. 'ನಾವು ಯಾವಾಗ್ಲೂ ನಿನ್ನೆದನ್ನು ಬಿಟ್ಟು ನಾಳೆದನ್ನು ಯೋಚ್ನೆ ಮಾಡ್ಬೇಕು. ಇನ್ನು ಒಂದು ವರ್ಷ ಕೂಡಾ ಬೇಡ. ಸಕ್ಕರೆ ಕಾರ್ಖಾನೆ ಇಲ್ಲಿ ಶುರುವಾಗುತ್ತೆ. ಫ್ಯಾಕ್ಟರಿಯಿಂದ ನಗರದವರೆಗೆ ಮೂವತ್ತು ಮೈಲು ರೈಲು ಹಾಕ್ತಾರೆ, ಸಿನೇಮಾ ಬರುತ್ತೆ, ಹೈಸ್ಕೂಲ್ ಆಸ್ಪತ್ರೆ... ಇದಕ್ಕೆಲ್ಲ ಮೂಲ ಕಾರಣ ನಾನು ಮರೀಬ್ಯಾಡ.'

ಗೋವಿಂದ ಅಂಥ ಒಂದು ಕಿಲಾಡಿ ಮಾತ್ರವೆ. ಅವನು ಮುನಿಯೊಡನೆ ಕೆಲಸ ಮಾಡಿದ್ದಕ್ಕೆ ಹಣ ಕೇಳು ಎಂದು ತನ್ನ ತಂದೆಯ ವಿರುದ್ಧವೇ ಹೇಳುತ್ತಾನೆ.

ಹಣದ ಕುರಿತು ಆತನಿಗೆ ಅಂಥದ್ದೇನೂ ತಿಳಿವಳಿಕೆಯಿಲ್ಲ. ಆದರೆ ಈ ಕೂಲಿಗಳೆಲ್ಲ ಹಣ ಪಡೆಯದಿದ್ದರೆ ಮೂರ್ತಿ ಹೋಟ್ಲಲ್ಲಿ ವ್ಯಾಪಾರವಾಗುವುದು ಹೇಗೆ ಎಂಬುದು ಅವನ ವಿಚಾರ. ಆದರೆ ಅದರ ಪರಿಣಾಮವೆಂದರೆ ಹಳ್ಳಿಯಲ್ಲಿ ವಸ್ತು ವಿನಿಮಯ (ಬಾರ್ಟರ) ಪದ್ಧತಿ ಹೋಗಿ ಹಣ ಚಲಾವಣೆಗೆ ಬರುತ್ತದೆ. ಈ ಹಣ ಎಂಥ ಅಪಾಯವನ್ನು ತಂದೀತು ಎಂದೇನೂ ಆತ ಗ್ರಹಿಸುವುದಿಲ್ಲ.

ಶ್ರೀನಿವಾಸಯ್ಯನ ಹಿರಿ ಸೊಸೆ ಭಾಗೀರಥಿಗೆ ಹಿಸ್ಟಿರಿಯಾ ಆಗುವುದೇ ಈ ಹಣದ ಪ್ರಭಾವದಿಂದ. ಅವಳಿಗೆ ಹಿಸ್ಟೀರಿಯಾ ಆಗಿ ಬಡಬಡಿಸುತ್ತಿದ್ದಾಗ ನೋಡಲು ಬಂದ ಮೂರ್ತಿ, ಇದು ನಗರದಲ್ಲೆಲ್ಲ ಸಾಮಾನ್ಯವಾಗಿದೆ ಎನ್ನುತ್ತಾನೆ. ಇದು ನಗರದ ಅಸಹಜ ಜೀವನದ ಪರಿಣಾಮವನ್ನು ತೋರಿಸುತ್ತದೆ.

''ಪಂಚಾಯತ ರಾಜ್ಯ ಬಂದ ಮೇಲೆ ವಂಶಪಾರಂಪರೆಯ ಹುದ್ದೆಗಳಿರೋದಿಲ್ಲ. ಎಲ್ಲಾ ಪ್ರಜಾಪ್ರಭುತ್ವ. ಪ್ರತಿಯೊಂದು ಡಿಸ್ಟ್ರಿಕ್ಟ್ ಬೋರ್ಡು, ತಾಲ್ಲೂಕು ಬೋರ್ಡುಗಳ ಅಧೀನಕ್ಕೆ, ಅಧಿಕಾರ ವಿಕೇಂದ್ರೀಕರಣ. ಹಳೆಯ ಪಾಳೆಗಾರಿಕೆ ವ್ಯವಸ್ಥೆ ನಿರ್ನಾಮವಾಗುತ್ತದೆ'' ಎಂದು ಗೋವಿಂದ ಹೇಳುತ್ತಾನೆ.

ಗೋವಿಂದನ ಮಾವ, ವಿಷ್ಣುಮೂರ್ತಿ ದೊಡ್ಡ ಸಾವುಕಾರನನ್ನು ಹಳ್ಳಿಗೆ ಕರೆಸಿರುತ್ತಾನೆ. ಹಳ್ಳಿಯಲ್ಲಿ ಸ್ವತಃ ಶ್ಯಾಮೇಗೌಡರ ಮತ್ತು ಶ್ರೀನಿವಾಸಯ್ಯನವರ ಕಬ್ಬಿನಗದ್ದೆ ಜಮೀನನ್ನು ಖರೀದಿ ಮಾಡುತ್ತಾರೆ. ಸಕ್ಕರೆ ಕಾರಖಾನೆ ಶುರುವಾಗುತ್ತದೆ.

ಊರಿನಲ್ಲಿ ಅವಿಭಕ್ತ ಕುಟುಂಬ ಒಡೆಯುತ್ತದೆ. ಸ್ನೇಹ-ವೈಮನಸ್ಸು ಉಂಟಾಗುತ್ತದೆ. ಶ್ರೀನಿವಾಸಯ್ಯನವರ ತಾಯಿ ಕೊಡುವ ಹಳೆಯ ಮನೆ ಮದ್ದು ಈಗ ಇಲ್ಲವಾಗಿ ಇಂಗ್ಲೀಷ್ ಔಷಧ ಶುರುವಾಗುತ್ತದೆ. ಶ್ರೀನಿವಾಸಯ್ಯ, ಅವರ ಅಬ್ಬೆ ಯಾತ್ರೆಗೆ ತೆರಳುತ್ತಾರೆ.

ಮುನಿಯ ದಲಿತ. ಅಂಥವನಿಗೆ ಹೊಲ ಸಿಕ್ಕಲಾಗದು. ಆದರೆ ಗೋವಿಂದ ಹೇಳುತ್ತಾನೆ 'ಕೊಯ್ಕೊ ಮುನಿಯ, ಭೂಮಿ ತಾಯೀನ ಬ್ರಾಹ್ಮಣರಾಗಲಿ, ಗೌಡರಾಗಲಿ ಗುತ್ತಿಗೆ ಹಿಡಿದಿದ್ದಾರಾ? ಕೊಯ್ಕೊ''

''ಅಸ್ಪೃಶ್ಯರ ಉದ್ಧಾರ ಮಾಡಿ ಅಂತ ಗಾಂಧಿ ಹೇಳಿದಾಗ ನಾನು ಹುಟ್ಟಲಿಲ್ಲ, ನಿಜ. ಅದರೇನಾಯಿತು? ಅದರ ಮಹತ್ವ ನನಗೆ ತಿಳಿಯದೆ? ಈಗ ಗಾಂಧಿ ಇಲ್ಲ. ಸತ್ತು ಅನೇಕ ವರ್ಷಗಳಾದವು. ಅವನ ಜತೆ ಅವನ ಉಪದೇಶಗಳೂ ಸತ್ತವೇ?

ಗೋವಿಂದನಿಗೆ ನಗು ಬಂತು. ಆತ ಗಾಂಧಿ ಅನುಯಾಯಿ ಎಂದಲ್ಲ. ಆದರೂ ಹಳ್ಳಿಯ ರಾಜಕಾರಣದಲ್ಲಿ ಗಾಂಧಿ ತತ್ವದ ಪ್ರತಿಪಾದನೆಯಿಂದ ಲಾಭವಾಗುವಂತಿದ್ದರೆ ಆ ಕೆಲಸ ನಾನು ಯಾಕೆ ಮಾಡಬಾರದು? ವಾಸ್ತವದ ವಿಡಂಬನೆ ಕೂಡ ಇಲ್ಲಿ ಇದೆ.

ಹೀಗೆ ಕಣಿವೆಹಳ್ಳಿ ಪರಿವರ್ತನೆಯ ಹಾದಿಯಲ್ಲಿ ಮುನ್ನಡೆಯುತ್ತದೆ. ಇದು ಕೇವಲ ಕಣಿವೆಹಳ್ಳಿಯ ಕತೆ ಮಾತ್ರವಾಗಿರದೆ ಅದೊಂದು ಇಡೀ ದೇಶದ ಪರಿವರ್ತನೆಗೆ ಸಂಕೇತವಾಗಿದೆ.

ಇಲ್ಲಿಯವರೆಗೆ ಚರ್ಚಿಸಿದ ಕಾದಂಬರಿಗಳು ನಿರಂಜನರ ತಾತ್ವಿಕತೆಗೆ ಕೌಲಸ್ಪರ್ಶಿಯಾದ ಅಭಿವ್ಯಕ್ತಿಯನ್ನು ನೀಡಿವೆ. ಹಾಗೆಯೇ ರಚನೆಯ ಕುಶಲತೆಯಲ್ಲೂ ಮೇಲ್ಮೈಯನ್ನು ಮೆರೆದಿವೆ. ಇವುಗಳನ್ನು ಹೊರತುಪಡಿಸಿ ಇನ್ನೂ ಹದಿನಾಲ್ಕು ಕಾದಂಬರಿಗಳಿವೆ. ಮಲೆನಾಡಿನಲ್ಲಿ ಜಡಿ ಮಳೆ ಸುರಿಸಿ ತೆಳ್ಳಗಾದ ಮೋಡ ಪರ್ವತವನ್ನು ದಾಟಿ ಹನಿಮಳೆಗರೆದಂತೆ ಉಳಿದ ಕಾದಂಬರಿಗಳು.

ಅಷ್ಟಾಗಿಯೂ ಅವರ ಕಾದಂಬರಿಯಲ್ಲಿ ಆಕರ್ಷಣೆಗೇನೂ ಕೊರತೆಯಿಲ್ಲ. ಹೃದ್ಯವಾದ ಶೈಲಿಯಿಂದ ಪಳಗಿದ ಕಥನ ಕೌಶಲವಿದೆ. ಅವೆಲ್ಲದಕ್ಕಿಂತಲೂ ಮಹತ್ವದ ಸಂಗತಿಯೆಂದರೆ ಎಂದೂ ಪ್ರತಿಗಾಮಿ, ಯಥಾಸ್ಥಿತಿವಾದಿ ನಿಲುವಿಲ್ಲ. ಸಮಾಜದ ಪರಿವರ್ತನೆ - ಪುನರ್ಘಟನೆ ನಡೆಯಬೇಕು. ಅದು ದೂರದ ಸಂಗತಿ. ಆದರೆ ಅದರ ಒಳಗಡೆ ಬದುಕನ್ನು ಸಹ್ಯಗೊಳಿಸುವ ಕಡೆ ಅವರ ಗಮನ ಇದ್ದೇ ಇದೆ. ಅದರಲ್ಲೂ ಅವರ ಸ್ತ್ರೀ ಪರವಾದ ಚಿಂತನೆ ಅಷ್ಟೇ ಜೀವಂತವಾಗಿದೆ ಎಂಬುದು ಬಹಳ ಮುಖ್ಯವಾಗಿದೆ. ''ಅವರ ಕೃತಿಗಳ ವಸ್ತು ಏನೇ ಇರಲಿ ಅವುಗಳ ಗುಣಮಟ್ಟದಲ್ಲಿ ಹೆಚ್ಚು ಕಡಿಮೆ ಒಂದು ಸುಸಂಗತವಾದ ಸತತವಾದ ಮಾನವತಾವಾದ ಹರಿಯುತ್ತದೆ'' ಎಂಬ ವಿಜಯದಬ್ಬೆಯವರ ಮಾತು ಒಪ್ಪಬೇಕಾದುದು. (ನಿರಂಜನ ಅಭಿನಂದನ ೩೬೭.)

## ದೂರದ ನಕ್ಷತ್ರ ಮತ್ತು ನವೋದಯ

ಈ ಎರಡೂ ಕಾದಂಬರಿಗಳು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿವೆ. ಜಯದೇವ ಆದರ್ಶ ಶಿಕ್ಷಕನಾಗಿ ಜೀವನ ಸಾಗಿಸಬೇಕೆಂದು ಹೊರಡುತ್ತಾನೆ. ಆತ ಸೇರಿದ ಶಾಲೆಯಲ್ಲಿ ಮೂರು ಜನ ಶಿಕ್ಷಕರು. ಆದರೂ ಸಹ ರಾಜಕಾರಣ ತಲೆಹಾಕಿ ಶಾಲೆಯ ವಾತಾವರಣ ಕೆಡಿಸಿದ್ದರು. ಶಿಕ್ಷಕರ ಮಧ್ಯೆ ತಮ್ಮ ಸ್ವಾರ್ಥದ ಕುರಿತು ಸ್ಪರ್ಧೆ ನಡೆದಿತ್ತು; ಶಾಲೆಯ ಅಭಿವೃದ್ಧಿಯ ಕುರಿತು ಅಲ್ಲ.

ರಂಗರಾಯರು ಮುಖ್ಯಾಧ್ಯಾಪಕರು. ಮಾನವೀಯ ಗುಣ ಉಳ್ಳವರು. ಆದರೆ

ಸದಾ ಬಡತನ. ನಂಜುಂಡಯ್ಯ ಇನ್ನೊಬ್ಬ ಶಿಕ್ಷಕ. ತುಂಬ ಶ್ರೀಮಂತ. ಅವರಿಗೆ ಶಂಕರಯ್ಯ ಎನ್ನುವ ಜಾತಿ ಪುಡಾರಿಯ ಬೆಂಬಲವಿದೆ. ಹಾಗಿರುವುದರಿಂದ ನಂಜುಂಡಯ್ಯನವರಿಗೆ ಆಗದಿದ್ದ ಶಿಕ್ಷಕರನ್ನು ಬೇರೆಡೆ ಎತ್ತಂಗಡಿ ಮಾಡಿಸುತ್ತಾನೆ. ಸರಳವಾದ ಮುಖ್ಯಾಧ್ಯಾಪಕ ರಂಗರಾಯರು ತಮ್ಮ ಕೆಲಸವನ್ನಷ್ಟೇ ಮಾಡಿಕೊಂಡು ಹೋಗುವವರು. ಚುನಾವಣೆಯಲ್ಲಿ ತನಗೆ ಸಹಾಯ ಮಾಡಲಿಲ್ಲ ಎನ್ನುವ ಕಾರಣಕ್ಕೆ ಶಂಕರ ಅವರನ್ನು ವರ್ಗ ಮಾಡಿಸುತ್ತಾನೆ.

ಜಯದೇವ ಈ ಯಾವುದರ ಕಡೆ ತಲೆ ಹಾಕದೆ ತನ್ನ ಕರ್ತವ್ಯವನ್ನು ಮಾಡಿಕೊಂಡಿರುತ್ತಾನೆ.

''ಶಾಲೆಗೆ ತಕ್ಕ ಆಟದ ಬೈಲು ಬೇಕು, ಶಿಕ್ಷಣವೆಂದರೆ ಪಠ್ಯೇತರ ಚಟುವಟಿಕೆ; ಬೇರೆ ಪುಸ್ತಕದ ಓದು, ಕ್ರೀಡಾ ಚಟುವಟಿಕೆ, ಸಾಂಸ್ಕೃತಿಕ ಚಟುವಟಿಕೆ ಇವು ಸಮಾವೇಶವಾಗುವದೊಂದು.''

''ಪಾಠ ಹೇಳುವುದೂ ಒಂದು ಕಲೆ. ಉಪಾಧ್ಯಾಯ ಮನಃಶಾಸ್ತ್ರವನ್ನು ಚೆನ್ನಾಗಿ ಬಲ್ಲವನಿರಬೇಕು. ಅಪಾರ ಸೃಜನಶೀಲತೆ ಆತನಿಗೆ ಇರಬೇಕು. ಇಷ್ಟೇ ಅಲ್ಲ, ಮಕ್ಕಳನ್ನು ಪ್ರೀತಿಸಬೇಕು. ಅಷ್ಟೇ ಚೆನ್ನಾಗಿ ತನ್ನ ವೃತ್ತಿಯನ್ನು ಪ್ರೀತಿಸಬೇಕು'' ಇದು ಜಯದೇವನ ಖಚಿತವಾದ ನಿಲುವು.

ನಿರಂಜನರು ಸೃಷ್ಟಿಸಿದ ಇನ್ನೊಂದು ಪಾತ್ರ ತಿಮ್ಮಯ್ಯನವರದು. ತಿಮ್ಮಯ್ಯ ಒಳ್ಳೆ ನಾಟಕಕಾರ. ಪ್ರಾಥಮಿಕ ಶಾಲಾ ಶಿಕ್ಷಕ. ಅವರನ್ನು ನೋಡಿದರೆ 'ಮುದ್ದಣ'ನ ನೆನಪಾಗುತ್ತದೆ. ಆದರೆ ಅವರ ಪ್ರತಿಭೆಯೆಲ್ಲ ಬಡತನದಿಂದ ಕಮರಿಹೋಗಿದೆ. ಜಯದೇವ ಅವರ ಪ್ರತಿಭೆಯನ್ನು ಪುನಃ ಕುದುರಿಸಿ ನಾಟಕ ಬರೆಯಲು ಹಚ್ಚುತ್ತಾನೆ.

ಇದರದೇ ಮುಂದಿನ ಭಾಗ ಎಂಬಂತೆ ಇದ್ದದು 'ನವೋದಯ'

ಜಯದೇವ ತನ್ನ ಸ್ನಾತಕ ಪದವಿ ಮುಗಿಸಿ ಬರಲು ಬೆಂಗಳೂರಿಗೆ ಹೋಗುತ್ತಾನೆ. ಅದೇ ಹೊತ್ತಿಗೆ ಕರ್ನಾಟಕ ಏಕೀಕರಣ ಕೂಡ ಆಗಿರುತ್ತದೆ. ತಿರುಗಿ ಅದೇ ಪದವಿ ಮುಗಿಸಿ ಅದೇ ಶಾಲೆಗೆ ಬಂದು ಹಾಜರಾಗುತ್ತಾನೆ. ಶಿಕ್ಷಣ ಕ್ಷೇತ್ರದಲ್ಲಿಯ ಸುಧಾರಣೆಯೆಲ್ಲ 'ದೂರದ ನಕ್ಷತ್ರ'ವಾಗಿ ತೋರಿದರೂ ನಿರಾಶನಾಗದೆ ತನ್ನ ಸೋಲಿನ ಎಲ್ಲಾ ಭಾಗವನ್ನು ತುಂಬಿಕೊಳ್ಳುವ ಆತ್ಮವಿಶ್ವಾಸದಿಂದ 'ನವೋದಯ'ನಾಗುತ್ತಾನೆ.

ಶಿಕ್ಷಣ ಸುಧಾರಣೆಯಲ್ಲಿ ಶಿಕ್ಷಕನ ಆರ್ಥಿಕ ಸಂಬಂಧದಲ್ಲಿ ಸುಧಾರಣೆ ಆಗುವುದು ಅಗತ್ಯ ಎಂಬ ಕಡೆ ಬಲವಾಗಿ ಒತ್ತು ಇದೆ. ಆಗಿನ ಸಂದರ್ಭದಲ್ಲಿ ಇದು ಬಹು

ಮುಖ್ಯವಾದ ಸಮಸ್ಯೆಯಾಗಿತ್ತು. ಪ್ರಾಥಮಿಕ ಶಿಕ್ಷಣ ಮುಂದೆಲ್ಲದರ ಅಡಿಪಾಯ. ಅದನ್ನು ಗಟ್ಟಿಗೊಳಿಸಬೇಕೆಂಬುದು ಇಲ್ಲಿಯ ಅಭಿಪ್ರಾಯ. ಹಾಗೆಯೇ ಮತ್ತೊಂದು ವಿಚಾರವೆಂದರೆ ಎಲ್ಲಾ ಶಾಲೆಗಳನ್ನು ರಾಷ್ಟ್ರೀಕರಿಸಬೇಕೆಂಬುದು.

''ನಾನು ಒಂದು ಹೇಳ್ಲೆ ಲಕ್ಕಪ್ಪ ಗೌಡರೆ? ಉದ್ಯಮವಾಗಿ ವಿದ್ಯಾಭ್ಯಾಸದ ಕ್ರಮ ನಡೆಯಲೇಬಾರದು. ಪ್ರಜೆಯ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡೋದು ಸರಕಾರದ ಜವಾಬ್ದಾರಿ'' ಎನ್ನುವುದು ಜಯದೇವನ ಮಾತಾಗಿರುವಂತೆ ಲೇಖಕರ ಅಭಿಪ್ರಾಯವೂ ಆಗಿದೆ. ಈ ಮಾತು ಈಗ ಇನ್ನೂ ಹೆಚ್ಚು ಅಗತ್ಯದ್ದಾಗಿ ತೋರುತ್ತದೆ.

ಕಾದಂಬರಿ ಕೇವಲ ಅಭಿಪ್ರಾಯ ಮಂಡನೆ ಎಂದು ತಿಳಿಯಬಾರದು. ಸಮಾಜದ ಜೀವಂತ ಚಿತ್ರಣ, ಮಕ್ಕಳೊಡನೆಯ ವ್ಯವಹಾರ ಸರಸವಾದ ದೃಶ್ಯ ಮನ ಸೆಳೆಯುತ್ತದೆ.

## ಕೊನೆಯ ನಮಸ್ಕಾರ

ಇದು ಕೂಡ 'ಅಭಯಾಶ್ರಮ'ದ ಚಿತ್ರಣವೆ. ಆದರೆ 'ಅಭಯ' ಕಾದಂಬರಿಯ ವಿರುದ್ಧ ದಿಸೆಯಲ್ಲಿದೆ. 'ಅಭಯ'ದ ಸರಸಮ್ಮ ಅಭಯದ ತಾಯಿಯಾಗಿದ್ದರೆ 'ಕೊನೆ ನಮಸ್ಕಾರ'ದ ಪುಟ್ಟಮ್ಮ ಮಾರಿಯಾಗಿದ್ದಾಳೆ. ಅಭಯದಲ್ಲಿನ ಹುಡುಗಿಯೋರ್ವಳ ತಾಯಿ ಮಗಳನ್ನು ಕರೆದುಕೊಂಡು ಹೋಗಲು ಬಂದರೆ 'ದೊಡ್ಡಮ್ಮ ನನ್ನ ಕಳಸ್ಬೇಡಿ' ಎಂದು ಅಂಗಲಾಚುತ್ತಿದ್ದರೆ 'ಕೊನೆಯ ನಮಸ್ಕಾರ'ದ ಪುಟ್ಟಮ್ಮನನ್ನು ಕೆಲಸದಿಂದ ತೆಗೆದುಹಾಕಿದಾಗ ಅವಳು ಹೊರಡುತ್ತಿರುವಾಗ ಮಕ್ಕಳು 'ಕೊನೆ ನಮಸ್ಕಾರ' ಎಂದು ಸಂತೋಷದಿಂದ ಅರಚುತ್ತಾರೆ.

ಪುಟ್ಟಮ್ಮನಿಗೆ ಮುಂಬೈಯಲ್ಲಿ ರಾಮಸ್ವಾಮಿ ಎಂಬವನ ಗುರುತಾಗಿ ಗಂಡನನ್ನು ಬಿಟ್ಟು ಬೆಂಗಳೂರಿಗೆ ಬರುತ್ತಾಳೆ. ಇಲ್ಲಿ 'ಅಭಯಾಶ್ರಯ' ತೆಗೆಯುತ್ತಾಳೆ. ಅಭಯಾಶ್ರಮದಲ್ಲಿ ಆಕೆ ಅನಾಥ ಹೆಣ್ಣು ಮಕ್ಕಳನ್ನು ರಾಜಕಾರಣಿಗಳಿಗೆ ಹೋಟೇಲ್‌ಗಳಿಗೆ ಒದಗಿಸುವ ಕೆಲಸ ಮಾಡುತ್ತಾಳೆ. ಮಕ್ಕಳಿಗೆ ಸರಿಯಾಗಿ ಆಹಾರವನ್ನು ಕೊಡುವುದಿಲ್ಲ.

ನರಸಿಂಹಯ್ಯ ನಿವೃತ್ತ ನ್ಯಾಯಾಧೀಶ. ಕಮಲಮ್ಮ ಅವರ ಹೆಂಡತಿ, ಅವರು ಅಭಯಾಶ್ರಮದ ಸದಸ್ಯರೂ ಆಗಿರುತ್ತಾರೆ. ಅವರಿಗೆ ಈ ವ್ಯವಹಾರ ಸೇರುವುದಿಲ್ಲ. ಕ್ರಾಂತಿಪತ್ರಿಕೆ ಪುಟ್ಟಮ್ಮನ ವ್ಯವಹಾರವನ್ನೆಲ್ಲಾ ವರದಿ ಮಾಡುತ್ತದೆ. ಕಮಿಟಿಯವರೆಲ್ಲ ಸೇರಿ ಪುಟ್ಟಮ್ಮನನ್ನು ಹೊರಹಾಕುತ್ತಾರೆ.

## ಹೆಣ್ಣಾಗಿ ಕಾಡಿತ್ತು ಮಾಯೆ

ಸದಾನಂದ ವೈದ್ಯ, ತಾರಾ ಅವನ ಹೆಂಡತಿ. ವಿಶ್ವನಾಥ ತನ್ನ ಮಗನನ್ನು ಬಹಳ ಕಷ್ಟದಿಂದ ಸಾಕಿದ್ದಾನೆ. ಈಗ ನಿವೃತ್ತ. ಅಸ್ತಮಾ ರೋಗಿ, ಸದಾನಂದನ ಸಂಪತ್ತು ಕುದುರುತ್ತದೆ. ತಾರಾಗೆ ಹಣ-ಅಂತಸ್ತುಗಳ ಆಸೆ ಮಿತಿ ಮೀರಿದೆ. ಚಂದ್ರಶೇಖರನೆಂಬ ಶ್ರೀಮಂತರ ಮನೆಯಂತೆ ತಾನೂ ಇರಲು ಬಯಸುತ್ತಾಳೆ. ವಿಶ್ವನಾಥ ಕಾಶಿಗೆ ಹೋಗುತ್ತಾರೆ. ದಾರಿಯಲ್ಲೇ ಸಾಯುತ್ತಾರೆ. ತಾರಾಗೆ ಅದು ಒಂದು ಕಂಟಕ ಹೋದ ಹಾಗೆ. ತಾರಾ ಕ್ಲಬ್ಬು ಹಾಗೆ ಹೀಗೆ ಎಂದಿರುತ್ತಾಳೆ. ಇವಳ ದರ್ಬಾರಿನ ಮಧ್ಯೆ ಸದಾನಂದ ನಿರ್ಲಕ್ಷಕ್ಕೆ ಒಳಗಾಗುತ್ತಾನೆ. ಅವನ ಆರೋಗ್ಯ ಕೆಡುತ್ತದೆ. ಹೃದಯಾಘಾತವಾಗುತ್ತದೆ. ಡಾ|| ಲಲಿತಮ್ಮ ಅವಳಿಗೆ ಬುದ್ಧಿ ಹೇಳುತ್ತಾಳೆ ''ತನ್ನ ಪತಿಗೆ ತಕ್ಕ ಸತಿಯಾಗದ, ಮಗನಿಗೆ ತಕ್ಕ ತಾಯಿಯಾಗದ, ಒಂದು ಮನೆಯನ್ನು ಸರಿಯಾಗಿ ನೋಡಿಕೊಳ್ಳಲಾಗದ ನಾನು ಸಮಾಜ ಉದ್ಧಾರ ಮಾಡುವುದು ನಿಜವೇ?'' ಎಂದು ವಾಕ್ಯದೊಂದಿಗೆ ಕಾದಂಬರಿ ಮುಗಿಯುತ್ತದೆ.

## ವಿಲಾಸಿನಿ

ನರಸಿಂಗರಾಯರು ನರ್ಮದೆಯ ಅಪ್ಪ. ರುಕ್ಮಿಣಿ ತಾಯಿ. ನರ್ಮದೆಯದು ವಿಲಾಸಿ ಮನಸ್ಸು, ಅಲಂಕಾರ ಪ್ರಿಯೆ. ಪ್ರಾಯ ಸಹಜವಾದ ಮಿತ್ರರ ಆಶೆ. ಆದರೆ ಕೆಡಕು ಹೆಣ್ಣಲ್ಲ. ಇದೊಂದು ವಿಲಾಸಪ್ರಿಯತೆಯ ಚಿತ್ರಣ.

ನರ್ಮದೆಗೆ ಎಸ್.ಎಸ್.ಎಲ್.ಸಿ. ಮುಗಿದಿದೆ. ಕಾಲೇಜಿಗೆ ಕಳಿಸಲು ತಾಯಿಗೆ ಮನಸ್ಸಿಲ್ಲ. ಅವಳು ಹೇಳುವುದು ''ಯಾವ ಸುಡುಗಾಡ್ಗೆ ಅಂತ ಹುಡುಗಿಯರ್ಗೆ ವಿದ್ಯೆ'' ನರಸಿಂಹರಾಯ ''ಹಾಗಲ್ಲ ಕಣೇ ನಮ್ಮ ಕಾಲ ಮುಗ್ದೋಯ್ತು''. ಕಾಲೇಜಿಗೆ ಹೋಗುತ್ತಾಳೆ. ಅವಳ ಗೆಳತಿ ವಿಶಾಲಾಕ್ಷಿ ಬಡವಳು. ಚೆನ್ನಾಗಿ ಓದಿ ಮೊದಲ ತರಗತಿಯಲ್ಲಿ ಪಾಸಾಗುತ್ತಾಳೆ. ನರ್ಮದೆಗೆ ಅವಳ ಕುರಿತು ತಿರಸ್ಕಾರ. ವರ್ಗದಲ್ಲಿ ಪಾಠ ಹೇಳುವ ಮಾಸ್ತರರ ಮೇಲೆ ಆತ್ಮೀಯತೆ, ನರಸಿಂಹರಾಯರಿಗೆ ತಿಳಿಯುತ್ತದೆ. ಅವರು ಮಗಳಿಗೆ ಹೊಡೆದು ಬಿಡುತ್ತಾರೆ. ವರನ ಶೋಧ. ನೋಡಲು ಬಂದ ವರನ ಬದಲು ಅವನ ಮಿತ್ರನನ್ನು ಮೆಚ್ಚುತ್ತಾಳೆ. ಆದರೂ ವರನನ್ನು ಒಪ್ಪುತ್ತಾಳೆ. ಆದರೆ ವರನ ಮನೆಯಿಂದ ಪತ್ರ. ವರನಿಗೆ ಇಷ್ಟವಿಲ್ಲ. ಅವನ ಮಿತ್ರ ಒಪ್ಪಿದ್ದಾನೆಂದು ನರ್ಮದೆ ಒಪ್ಪಿಕೊಳ್ಳುತ್ತಾಳೆ.

ನಿಶ್ಚಿತ ಗುರಿ ಇಲ್ಲದ, ತನ್ನತನ ಇಲ್ಲದ ವಿಲಾಸಪರ ಮನಸ್ಸಿನ ಒಂದು ಜೀವನ ಚಿತ್ರಣ.

## ಮಿಣುಕು ಹುಳ

'ಮಿಣುಕು ಹುಳ' ತತ್ವರಹಿತರಾದ ರಾಜಕಾರಣಿಯನ್ನು ವಿಡಂಬಿಸುವ ಕಾದಂಬರಿ.

ನಾಗರಾಜ ರಾಜಕಾರಣಿ. ಭಾಷಣವೇ ಬಂಡವಾಳ. ವಿಲಾಸಿ ಹೆಂಡತಿ ಒಬ್ಬಳಿದ್ದಾಳೆ. ಕಮಲಾಬಾಯಿ ಈತನ ಸೂಳೆ.

ರಾಷ್ಟ್ರೀಯ ಪಕ್ಷದಲ್ಲಿ ಮುಂದಾಳಾಗಿದ್ದ ವೈಯಕ್ತಿಕ ಸತ್ಯಾಗ್ರಹದ ಮೂಲಕ ಸೆರೆಮನೆ ಸೇರಿದ. ಮುಂದೆ ಯುದ್ಧ ವಿರೋಧಿ ಅಲ್ಲವೆಂದು ಮುಚ್ಚಳಿಕೆ ಬರಕೊಟ್ಟು ಹೊರಬಂದವನು ಜನವಾದಿ ಪಕ್ಷ ಸೇರುತ್ತಾನೆ. ಆದರೆ ಆತ ತಾನು ಮುಖಂಡ ಎಂದು ತಿಳಿದವ. ನಾಗರಾಜ ತನ್ನ ಪಿಂಪ್ ಆದ ವೆಂಕಪ್ಪನನ್ನು ಪಕ್ಷದ ಸದಸ್ಯನನ್ನಾಗಿ ಮಾಡಲು ಪ್ರಯತ್ನಿಸುತ್ತಾನೆ. ಆದರೆ ಅದು ಕ್ರಮಬದ್ಧವಲ್ಲವೆಂದಾಗ ವ್ಯಗ್ರನಾಗುತ್ತಾನೆ. ಶಿಸ್ತು ಇಲ್ಲದವ. ಹೆಂಡತಿಗೆ ಹೊಡೆಯುತ್ತಾನೆ. ಸೋಮನಾಥ ಬುದ್ಧಿ ಹೇಳಿದರೂ ತಿದ್ದಿಕೊಳ್ಳುವುದಿಲ್ಲ.

ಎರಡನೇ ಮಹಾಯುದ್ಧ ಶುರು. ಜನವಾದಿ ಪಕ್ಷದವರೆಲ್ಲ ಭೂಗತರಾಗುತ್ತಾರೆ. ಈತನೂ ಭೂಗತನಾಗುತ್ತಾನೆ. ಆದರೆ ವಿಲಾಸ ಬಿಡುವುದಿಲ್ಲ. ಭೂಗತನಾಗಿದ್ದು ಒಂದು, ಕಡೆಗಂತೂ ಈತನ ಚಪಲತೆ ನೋಡಿ ''ಹೆಣ್ಣು ಅಂದ್ರೆ ಕಾಯಿಪಲ್ಲೆ ಅಂತ ತಿಳ್ಕೊಂಡಿರೇನ್ರಿ ನೀವು?'' ಎಂದು ಕೇಳುತ್ತಾರೆ. ಈತನ ಚಪಲತೆಯಿಂದಾಗಿ ಪೋಲೀಸರಿಗೆ ಸಿಕ್ಕುತ್ತಾನೆ. ಈತನನ್ನು ಅಡಗಿಸಿಟ್ಟುಕೊಂಡ ಮನೆಯವರನ್ನೂ ಹಿಡಿಯುತ್ತಾರೆ. ಕೊನೆಗೆ ಈತನನ್ನು ಪಕ್ಷ ಹೊರಹಾಕುತ್ತದೆ.

## ದೀಕ್ಷೆ

'ದೀಕ್ಷೆ' ಪತ್ರಿಕಾ ವ್ಯವಸಾಯದ ಕುರಿತು ಒಂದು ಕಿರು ಪರಿಚಯವನ್ನು ಕೊಡುತ್ತದೆ. ಸ್ವತಃ ಲೇಖಕರೇ ಪತ್ರಿಕಾಕರ್ತರಾಗಿರುವುದರಿಂದ ಬರವಣಿಗೆಯ ಹಿಂದೆ ಆ ಅನುಭವವಿದೆ.

ಮುರಲೀಧರನ ಮನೆತನದ ಸ್ಥಿತಿ, ವಿದ್ಯಾಭ್ಯಾಸದ ಅಡಚಣೆಗಳ ವರ್ಣನೆ ಹೆಚ್ಚಾಗಿದೆ. ಪತ್ರಿಕಾ ವ್ಯವಸಾಯಕ್ಕೆ ಬೇಕಾಗುವ ಕೌಶಲ ಮತ್ತು ಮುರಲೀಧರನಲ್ಲಿ ಆ ಕಡೆಯ ಒಲವಿನ ಬಗ್ಗೆ ವಿವರ ಇದೆ.

ಮುರಲೀಧರನ ಸ್ನೇಹಿತ ನಾರಾಯಣ ಅವನ ಅಣ್ಣ ಕ್ರಾಂತಿಕಾರಿಗಳು. ಸರಕಾರಕ್ಕೆ ಅಪಾಯದ ವ್ಯಕ್ತಿಗಳು. ಆತನನ್ನು ಸೆರೆಹಿಡಿದಾಗ ಪತ್ರಿಕೆಯಲ್ಲಿ ಅವನ ಹೆಸರು

ಹಾಕಿರಲಿಲ್ಲ. ಮುರಲೀಧರನೇ ಫೋನ್ ಮಾಡಿ ಹಾಕಿಸುತ್ತಾನೆ. ಅದೂ ಒಂದು ಮೂಲೆಯಲ್ಲಿ ಹಾಕಿದ್ದರು. ಕ್ರಾಂತಿಕಾರರನ್ನು ಹಾಗೆ ನಿರ್ಲಕ್ಷಿಸುವುದು ಪತ್ರಿಕಾವೃತ್ತಿಯ ಧರ್ಮವಾಗುವುದಿಲ್ಲ ಎಂದು ಅವನ ಅಭಿಪ್ರಾಯ.

ಪತ್ರಿಕೆಯ ಮುಖಪುಟದಲ್ಲಿ ಚಲನಚಿತ್ರ ನಟಿಯರ ಫೋಟೋ ಹಾಕುವ ಬದಲು ನಿಸರ್ಗಚಿತ್ರ ಹಾಕಬೇಕೆನ್ನುತ್ತಾನೆ. ವಾರದ ಭವಿಷ್ಯ ಸುಮ್ಮನೆ ಸ್ಥಳ ದಂಡ ಎನ್ನುತ್ತಾನೆ. ಜಾಹೀರಾತು ಕಡಿಮೆ ಮಾಡಿ ಲೇಖನ ಹೆಚ್ಚಿಗೆ ಹಾಕಬೇಕು ಎನ್ನುತ್ತಾನೆ. ಒಟ್ಟಾರೆಯಾಗಿ ಕೆಲವು ಪ್ರಗತಿಪರ ವಿಚಾರ ಮಂಡಿಸುತ್ತಾನೆ. ಅದರ ಜೊತೆ ೧೯೫೬ರ ಹೊತ್ತಿನ ಪತ್ರಿಕಾ ವ್ಯವಸಾಯದ ಚಿತ್ರ ಸಿಕ್ಕುತ್ತದೆ.

## ಅಂಜನ

ಅಂಜನದ ಕಥಾನಾಯಕಿಯ ಗಂಡ ವೈದ್ಯ. ಈಕೆ ಕಲಿತವಳು. ಮಕ್ಕಳಾದರೆ ತನ್ನ ಸೌಂದರ್ಯ ಹಾಳಾಗುತ್ತದೆಂದು ಮಕ್ಕಳಾಗುವುದನ್ನು ತಡೆಯಲೋಸುಗ ಗಂಡನನ್ನು ದೂರ ಇಡುತ್ತಾಳೆ. ಇದರಿಂದ ಗಂಡನ ಮಾನಸಿಕ ವೇದನೆ ಹೆಚ್ಚಾಗುತ್ತದೆ. ಆಕೆ ಇದನ್ನು ಗಮನಿಸುವುದಿಲ್ಲ. ಆದರೆ ಒಮ್ಮೆ ನಿಸರ್ಗದ ಒತ್ತಡಕ್ಕೆ ಒಳಗಾಗಿ ಸಂಪರ್ಕವಾಗುತ್ತದೆ. ನಂತರವೂ ಬಸಿರನ್ನು ತೆಗೆಯಬೇಕೆಂದು ವೈದ್ಯನಾದ ಗಂಡನನ್ನು ಒತ್ತಾಯಿಸುತ್ತಾಳೆ. ಆತ ಏನಾದರೊಂದು ನೆಪ ಹೇಳಿ ಮುಂದೆ ಹಾಕುತ್ತಾನೆ. ನಂತರ ತಿಂಗಳು ಹೆಚ್ಚಾಗಿದ್ದು ಅಪಾಯಕಾರಿ ಎನ್ನುತ್ತಾನೆ. ಈಕೆ ಸಿಟ್ಟು ಸಿಡುಕಿನಿಂದ ಬೆಳೆಯುತ್ತಾಳೆ. ಅವಳಿಗೆ ಸುಖ ಪ್ರಸವವಾಗುತ್ತದೆ. ತನ್ನ ಮುದ್ದು ಮುದ್ದಿನ ಶಿಶುವನ್ನು ನೋಡಿ ಒಮ್ಮೆಲೇ ಪ್ರೀತಿ ಮುತ್ತಿಕೊಳ್ಳುತ್ತದೆ. ಹೆಣ್ಣಿನ ಪೂರ್ಣತ್ವ ಕೈಗೊಡುತ್ತದೆ.

ನಿಸರ್ಗದ ಪರವಾದ ನಿಲುವು ಇಲ್ಲಿಯದು.

## ಮಿಂಚು

'ಮಿಂಚು'ವಿನಲ್ಲಿಯ ಸೌದಾಮಿನಿ 'ಕೊನೆಯ ನಮಸ್ಕಾರ'ದ ಪುಟ್ಟಮ್ಮನ ಪುನರವತಾರ. ೧೯೬೦ ರಲ್ಲಿ ಪ್ರಜಾಮತದಲ್ಲಿ ಪ್ರಕಟವಾದ 'ತೊಟ್ಟಿಲು ತೂಗದ ಕೈ' ೧೯೮೭ ರಲ್ಲಿ 'ಮಿಂಚು' ಎಂದು ಪುಸ್ತಕವಾಗಿದೆ.

ಸೌದಾಮಿನಿ ಕಿಷ್ಕಿಂಧಾ ಪಟ್ಟಣದಿಂದ ಮುಂಬೈಗೆ ಹೋಗುತ್ತಾಳೆ. ಅಲ್ಲಿ ಅವಳ ಮೊದಲಿನ ಗೆಳತಿ ಮೃದಲಾಬೆನ್‌ಳಲ್ಲಿಗೆ ಹೋಗುತ್ತಾಳೆ. ಅಲ್ಲಿ ಅವರೆಲ್ಲ ಸೇರಿ ಸಮಾಜ ಸೇವಾ ಆಶ್ರಮ ತೆರೆಯಲು ಲಕ್ಷಗಟ್ಟಲೆ ಹಣ ಕೂಡಿಸುತ್ತಾರೆ.

ಅನಂತರ ಅವಳು ಇಂದ್ರಾವತಿ ನದಿ ದಡದಲ್ಲಿರುವ ಧರ್ಮೇಂದರ್ ಬಾಬಾ ಅವರ ಆಶ್ರಮಕ್ಕೆ ಹೋಗುತ್ತಾರೆ. ಅಲ್ಲೂ ಅವಳು ಬಾಬಾರ ಉಪದೇಶ ಪಡೆದು ಯೋಗ ಇತ್ಯಾದಿ ಮಾಡಿ ಹೊಸ ಯೌವ್ವನ ಪಡೆಯುತ್ತಾಳೆ. ಅವರೊಡನೆ ಅನೇಕ ಸಂಭಾಷಣೆ ನಡೆಯುತ್ತದೆ. ಒಂದು ದಿನ ಅತಿಥಿ ಗೃಹದಾಚೆಗೆ ಒಂದು ಸುಸಜ್ಜಿತ ಕೊಠಡಿಯಲ್ಲಿ ದೀಪಗಳು ಆರಿದ್ದವು. ಆ ದಿಕ್ಕಿಗೆ ಬಾಬಾ ನಡೆದರು. ಅದಮ್ಯ ಸೆಳೆತಕ್ಕೆ ಒಳಗಾದವಳಂತೆ ಸೌದಾಮಿನಿ ಅವರನ್ನು ಹಿಂಬಾಲಿಸಿದಳು.

''ವಿಗ್ರಹಕ್ಕೂ ಉಕ್ಕಿನ ಬಲ ಪಡೆದಿದ್ದವಳಿಗೂ ಸೆಣಸಾಟ, ಮುಂಗೋಳಿ ಕೂಗುವವರೆಗೂ. ಸೌದಾಮಿನಿ ಕುತೂಹಲದಿಂದ ಸೀರೆಯನ್ನು ನೋಡಿದಳು. 'ರಕ್ತರಾತ್ರಿ' ಎಂದರೇನೆಂಬುದು ಸ್ಪಷ್ಟವಾಯಿತು.

ಬಾಬಾರಲ್ಲಿ ಅನೇಕ ರಾಜಕಾರಣಿಗಳೂ ಬರುತ್ತಿದ್ದರು. ಬಾಬಾರ ಆಶೀರ್ವಾದದಿಂದ ಸೌದಾಮಿನಿ ರಾಜಕಾರಣಿಯಾಗುತ್ತಾಳೆ. ದಿಲ್ಲಿಯಲ್ಲಿ ಅವಳ ಹೆಸರು ಮೆರೆಯುತ್ತದೆ. ಕಿಷ್ಕಿಂಧೆಯ ಚುನಾವಣೆ ಜವಾಬ್ದಾರಿ ಹೊರುತ್ತಾಳೆ. ನಂತರ ಮುಖ್ಯಮಂತ್ರಿಯೇ ಆಗುತ್ತಾಳೆ. ತಂತ್ರ ಕುತಂತ್ರ ಮೊದಲಿನಂತೆ, ಕೆಲಕಾಲವಾದರೂ ಚಾಕಚಕ್ಯತೆಯಿಂದ ಅಧಿಕಾರ ನಡೆಸುತ್ತಾಳೆ. ಅವಳ ವಿರುದ್ಧ ಪಿತೂರಿ ನಡೆಯುತ್ತದೆ. ಇವಳು ಮೊದಲಿನ ಪುಟ್ಟವ್ವ ಎಂದು ಕೆಲವರಿಗೆ, ಮೊದಲ ಸಂಬಂಧ ಇದ್ದವರಿಗೆ ಗೊತ್ತಾಗುತ್ತದೆ. ಅವಳ ವಿರುದ್ಧ ಅವಿಶ್ವಾಸ ಮಂಡನೆಯಾಗುತ್ತದೆ. ಮುಖ್ಯಮಂತ್ರಿ ಪದವಿ ಕಳೆದುಕೊಳ್ಳುತ್ತಾಳೆ.

ಆಮೇಲೆ ಬಾಬಾ ಆಶ್ರಮಕ್ಕೆ ಬರುತ್ತಾಳೆ. ಅಲ್ಲಿ ವಿಷ ಸಂಯೋಗದಿಂದ ಔಷಧಿ ತಯಾರಿಸುತ್ತಾರೆ. ಅಲ್ಲಿಂದ ತುಸು ವಿಷವನ್ನು ರಹಸ್ಯದಲ್ಲಿ ಸಂಗ್ರಹಿಸಿಕೊಂಡು ಕಿಷ್ಕಂಧೆಯ ತನ್ನ ಮನೆಗೆ ಹೋಗಿ ವಿಷ ಸೇವಿಸಿ ಮಲಗುತ್ತಾಳೆ. ಮುಂಜಾನೆಯಲ್ಲಿ ಆಕೆ ಸತ್ತಿರುತ್ತಾಳೆ. ಸಕಲ ಸರಕಾರಿ ಮರ್ಯಾದೆಯೊಂದಿಗೆ ಸಂಸ್ಕಾರ ನಡೆಯುತ್ತದೆ. ''ಸೌದಾಮಿನಿ ಚಿರಾಯುವಾಗಲಿ'' ಎಂದು ಘೋಷಣೆ ಮೊಳಗುತ್ತದೆ.

ರಾಜಕೀಯದ ಕುತಂತ್ರ, ಭ್ರಷ್ಟತೆಯ ಚಿತ್ರಣವಿದೆ. ಇಲ್ಲಿ ಬರುವ ಎಲ್ಲ ರಾಜಕಾರಣಿಗಳೂ ಭ್ರಷ್ಟರೇ ಇರುವುದಿಲ್ಲ. ಅಂತ್ಯದಲ್ಲಿ ಸೌದಾಮಿನಿಯ ಕಡೆ ಓದುಗರ ಸಹಾನುಭೂತಿ ನಿಲ್ಲುವಂತಾಗುತ್ತದೆ. ಇದು ಕಾದಂಬರಿಯ ದುರ್ಬಲಾಂಶ. ಇಲ್ಲಿಯ ಚಿತ್ರಣ ಕೂಡ ಆಳಕ್ಕೆ ಇಳಿಯುವುದಿಲ್ಲ. ಅಲ್ಲದೇ ಪುರುಷರೇ ಅಧಿಕ ಸಂಖ್ಯಾತ (ಭ್ರಷ್ಟ) ರಾಜಕಾರಣಿಗಳಾಗಿರುವಾಗ ಒಬ್ಬ ಮಹಿಳೆಯನ್ನು ಯಾಕೆ ಎತ್ತಿಕೊಂಡರೊ?

## ಬಂಗಾರದ ಜಿಂಕೆ

'ಬಂಗಾರದ ಜಿಂಕೆ' ಒಂದು ಗಮನೀಯವಾದ ಕೃತಿ. ಹೆಸರೇ ಸೂಚಿಸುವಂತೆ (ಕಾದಂಬರಿಗೆ ಹೆಸರಿಡುವಲ್ಲಿ ನಿರಂಜನ ಬಹಳ ಚಾಣಾಕ್ಷ.) ಹಣದ ಹಿಂದೆ ಬಿದ್ದ ಜೀವನದ ಕತೆ.

''ಸುಖ ಎಲ್ಲಿದೆ? ಯಾವ ಹಂತದಲ್ಲಿದೆ? ಒಬ್ಬನಿಗೆ ಬದುಕಲು ಎಷ್ಟು ಹಣ ಬೇಕು? ಎಂಬ ಪ್ರಶ್ನೆಯನ್ನು ಅವರು ಮತ್ತೆ ಇಲ್ಲಿಯೂ ಕೇಳಿಕೊಳ್ಳುತ್ತಾರೆ. ಅವರ ಮೊದಲ ಕಾದಂಬರಿ 'ವಿಮೋಚನೆ'ಯಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದಾರೆ. ವಿಮೋಚನೆಯಷ್ಟೇ ಅಲ್ಲ. ಅವರ ಎಲ್ಲ ಮುಖ್ಯ ಕೃತಿಗಳ ಹಿಂದಿರುವ ಮೂಲಭೂತ ಹುಡುಕಾಟಗಳಲ್ಲಿ 'ಸುಖ' ಎಲ್ಲಿದೆ, ಯಾವ ಹಂತದಲ್ಲಿದೆ; ಬದುಕಲು ಎಷ್ಟು ಹಣ ಬೇಕು? ಎನ್ನುವುದು ಬಹು ಮುಖ್ಯ ಸ್ಥಾನ ಪಡೆಯುತ್ತದೆ.

ಶ್ರೀಕಂಠಯ್ಯ ಒಬ್ಬ ವರ್ಚಸ್ವಿ ವ್ಯಕ್ತಿ. ಅವರಲ್ಲಿ ಅಗಾಧವಾದ ಕರ್ತೃ ಶಕ್ತಿಯಿದೆ. ಯುದ್ಧದ ಸಂದರ್ಭದಲ್ಲಿ ಬಹು ದೊಡ್ಡ ಶ್ರೀಮಂತನಾದ. ಅವರೊಡನೆ ಸರಕಾರದ ನೇರ ಸಂಪರ್ಕ. ಆತನ ಭ್ರಷ್ಟಾಚಾರಕ್ಕೆ ಒಂದು ಹೆದ್ದಾರಿ.

ಇದಕ್ಕೆ ವಿರುದ್ಧವಾಗಿ ಅವನ ಮಗನ ಚಿತ್ರವಿದೆ. ''ಈಗ ಅಪ್ಪಯ್ಯನ ರಾಷ್ಟ್ರೀಯತೆ, ಹೊಲಸು. ನೆನೆಸಿಕೊಂಡರೆ ವಾಂತಿ ಬರುತ್ತೆ'' ಎಂದುಕೊಳ್ಳುತ್ತಾನೆ.

ಜಯರಾಮ ವೈದ್ಯಕೀಯ ಅಭ್ಯಾಸ ಮಾಡುತ್ತಾನೆ. ಅವನ ವ್ಯಕ್ತಿತ್ವ ಕೂಡ ಅಪ್ಪನಂತೇ ಶಕ್ತಿಶಾಲಿಯಾದದ್ದು. ಚಪಲತೆ, ಆಡಂಬರ, ಅಪ್ರಾಮಾಣಿಕತೆ ಅಂದರೆ ಅವನಿಗೆ ಆಗದು. ಶ್ರೀಕಂಠಯ್ಯ ಶ್ರೀಮಂತ ಸದಾಶಿವಯ್ಯನ ಮಗಳನ್ನು ಜಯರಾಮನಿಗೆ ಮಾಡಿಸಿಕೊಳ್ಳಬಯಸುತ್ತಾರೆ. ಆದರೆ ಅದನ್ನು ಜಯರಾಮ ಖಡಾ ಖಂಡಿತ ನಿರಾಕರಿಸುತ್ತಾನೆ. ಇದು ಶ್ರೀಕಂಠಯ್ಯನವರ ಮೇಲೆ ಆಗುವ ಮೊದಲ ಆಘಾತ. ಹಾಗೆ ಈ ತಂದೆ ಮಕ್ಕಳ ಸಂಘರ್ಷಣೆಯಲ್ಲಿ ಶ್ರೀಕಂಠಯ್ಯನವರ ಮಾನಸಿಕ ಒಳತೋಟಿ ತುಂಬ ಪರಿಣಾಮ ಬೀರುತ್ತದೆ. ಇದರಿಂದ ಅವರ ಹೆಂಡತಿ ಕಮಲಮ್ಮನಿಗೆ ಮಾನಸಿಕ ಹಿಂಸೆ ಜಾಸ್ತಿಯಾಗುತ್ತದೆ. ಶ್ರೀಕಂಠಯ್ಯ ಮಗನ ಮೇಲಿನ ಸಿಟ್ಟಿನಿಂದಾಗಿ ತನ್ನಲ್ಲೇ ಆಸ್ತಿಯನ್ನು ಮಗಳಿಗೆ ವಿಲ್ ಮಾಡುತ್ತಾರೆ. ಆದರೆ ಇದರಿಂದ ಜಯರಾಮ ವಿಚಲಿತನಾಗುವುದಿಲ್ಲ. ಇದರಿಂದ ಶ್ರೀಕಂಠಯ್ಯನವರ ಮಾನಸಿಕ ಗೊಂದಲ-ಏರುತ್ತಲೇ ಹೋಗುತ್ತದೆ. ಹಾಗೆಯೇ ಮಗನ ಮೇಲಿನ ಹಗೆಯೂ ಕೂಡ. ಈ ಸಂದರ್ಭ ಪ್ರತಿಮಾ ರೂಪದಲ್ಲಿ ಬಹಳ ಅರ್ಥಪೂರ್ಣವಾಗಿ ಚಿತ್ರಿತವಾಗಿದೆ.

''ರಾಯರು 'ಜಗ್ಗಾ' ಎಂದು ಕರೆದರು. ಆ ನಾಯಿಯನ್ನು ತೆಗೆದುಕೊಂಡು

ಹೋಗಿ ಗಿಡಕ್ಕೆ ಕಟ್ಟು. ಹಾಗೇ ಒಂದು ಖರ್ಚೀನ ಉದ್ಯಾನದಲ್ಲಿಡು'' ಶ್ರೀಕಂಠಯ್ಯ ರಿವಾಲ್ವರ್ ಹಿಡಿದು ಹೆಜ್ಜೆ ಇಡುತ್ತ ಹೋದರು.

''ಹುಚ್ಚುನಾಯಿ ಎಂದು ತೀರ್ಮಾನವಾಗುವುದಕ್ಕೆ ಮೊದಲೇ ಮರಣದಂಡನೆಯೇ ಎಂದು ಆತನಿಗೆ ಕಸಿವಿಸಿಯಾಯಿತು.''

''ಶ್ರೀಕಂಠಯ್ಯ ರಿವಾಲ್ವರ್ ಹಿಡಿದು ದೃಢ ಹೆಜ್ಜೆಗಳನ್ನಿಡುತ್ತ ಹೊರಬಂದರು. ಶ್ರೀಕಂಠಯ್ಯ ಶಾಂತವಾಗಿ ಗುರಿ ನೋಡಿದರು. ಹೊಲಸು ಕೆಲಸ ಇದನ್ನು ನಾನು ಯಾಕೆ ಮಾಡಬೇಕೆಂದು ಮನಸ್ಸಾಯಿತೋ ಏನೋ? ಎಂದು ಒಂದು ಕ್ಷಣ ಅವರ ಏಕಾಗ್ರತೆ ಕದಡಿತು. ಮತ್ತೆ ತುಟಿ ಹಿಡಿದು ಅವರು ಸಿದ್ಧರಾದರು.

''ಪ್ರೇಕ್ಷಕರು ಉಸಿರು ಬಿಗಿ ಹಿಡಿದು ನಿಂತಿದ್ದರು.''

''ಢಂ''

''ಶ್ರೀಕಂಠಯ್ಯ ಬೆಚ್ಚಿಬಿದ್ದರು. ಪ್ರಾಣಾಂತಿಕ ಪೆಟ್ಟು ತಿಂದ ನಾಯಿ ಹೊರಳಾಟ ನೋಡಲೆಂದು ಕಣ್ಣು ತೆರೆದರು.

ಸೀಸರ್ ಬೊಗಳುತ್ತಿತ್ತು. ಗುಂಡು ಅದಕ್ಕಿಂತ ಎತ್ತರದಲ್ಲಿ ಸಂಪಿಗೆ ಗಿಡದ ಕಾಂಡದ ತೊಗಟೆಯನ್ನು ಹಾರಿಸಿ ಹಿಂದಿದ್ದ ಬಲಿಷ್ಟವಾದ ಹಿತ್ತಲ ಗೋಡೆಯನ್ನು ಹೊಕ್ಕಿತು....''

ಇಲ್ಲಿ ನಾಯಿಯ ಹಿಂದೆ ಅಡಗಿರುವ ಕ್ರೋಧ, ಛಲದ ಹಿಂದೆ ಮಗ ಇದ್ದಾನೆ ಎಂಬುದು ಧ್ವನಿಪೂರ್ಣವಾಗಿ ವ್ಯಕ್ತವಾಗಿದೆ.

ಶ್ರೀಕಂಠಯ್ಯನವರಿಗೆ ಪಾರ್ಶ್ವವಾಯು ಆಗುತ್ತದೆ. ಆನಂತರ ಅವರ ಮನಸ್ಸು ತಿಳಿಯಾಗುತ್ತದೆ. ಮಗ ಜಯರಾಮ ಸರ್ಜನ್‌ನ್ನಾಗಿ ತೇಜಪುರಕ್ಕೆ ಹೊರಡುತ್ತಾನೆ. ಅಪ್ಪನ ಬಳಿ ಬಂದು ಆಶೀರ್ವಾದ ಬೇಡುತ್ತಾನೆ. ಶಾಂತವಾಗಿ ಮಾತಾಡುತ್ತಾರೆ.

ನಿರೂಪಕರೆನ್ನುತ್ತಾರೆ ''ಜಯರಾಮುವಿನ ಶಸ್ತ್ರಚಿಕಿತ್ಸೆಗೆ ಸ್ಪಷ್ಟ ವಿರೋಧ; ಆದರೆ ಪ್ರೀತಿ - ವಿನಯದ ಚಿಕಿತ್ಸೆ ಇಲ್ಲಿ ಪರಿಣಾಮಕಾರಿಯಾಯಿತು. ರೋಗಿ ಸಾಯಲಿಲ್ಲ. ಅವರು ಮರಳಿ ಮಾನವ್ಯಕ್ಕೆ ಹಿಂದಿರುಗಿದ್ದರು. ಮನುಷ್ಯರಾಗಿದ್ದರು.''

''ಶಸ್ತ್ರಚಿಕಿತ್ಸೆ ಎಲ್ಲ ಕಡೆಗೂ ಯಶಸ್ವಿಯಾಗುತ್ತದೆಂದು ಹೇಳಲು ಸಾಧ್ಯವಿಲ್ಲ. ಆದರೆ ಚಿಕಿತ್ಸೆ ಅಗತ್ಯವೆ.''

ವ್ಯಕ್ತಿಶುದ್ಧತೆ, ಸರಳ ರೀತಿಯ ಮತ್ತು ತತ್ವಬದ್ಧ ಜೀವನ ನಿರಂಜನರ ಒಲವಿನದು. ಇಂಥವರು ಹಳಬರಾಗಲಿ, ಹೊಸಬರಾಗಲಿ ಸಾಮಾಜಿಕ ಜೀವನ ಸ್ವಾಸ್ಥ್ಯಕ್ಕೆ

ಪೂರಕರೂ ಪೋಷಕರೂ ಆಗಿರುತ್ತಾರೆ. ಮಹಿಳೆಯರ ಸ್ವಾತಂತ್ರ್ಯ ಅವರ ಇನ್ನೊಂದು ಮುಖ್ಯ ಒಲವೂ ಹೌದು. ಏಕಾಂಗಿನಿಯಲ್ಲಿ ಕಥಾನಾಯಕಿ ವಿಧವೆಯಾದರೂ ಅಸಹಾಯಕ ಸ್ಥಿತಿಯನ್ನು ಗೆದ್ದು ಸಾವಕಾಶವಾಗಿ ತನ್ನ ಕಾಲ ಮೇಲೆ ತಾನು ನಿಲ್ಲುತ್ತಾಳೆ. ಅಂಥ ಹೋರಾಟದ ಬದುಕು ಕೂಡ ಅವರಿಗೆ ಇಷ್ಟ. ಅಂಥ ನಿಲುವನ್ನು ಅವರ ಕಲಾಕೃತಿಗಳು ಗೌರವಿಸುತ್ತವೆ.

ಬಂಗಾರದ ಜಿಂಕೆ, ದೀಕ್ಷೆ, ಸೌಭಾಗ್ಯ, ದೂರದ ನಕ್ಷತ್ರ, ನವೋದಯ, ಪಾಲಿಗೆ ಬಂದ ಪಂಚಾಮೃತ, ಏಕಾಂಗಿನಿ, ಕೊನೇ ನಮಸ್ಕಾರ, ಮಿಣುಕುಹುಳ, ವಿಲಾಸಿನಿ, ಅಂಜನ, ಮಿಂಚು, ಹೆಣ್ಣಾಗಿ ಕಾಡಿತ್ತು ಮಾಯೆ, ಕಾದಂಬರಿಗಳ ಮುಖ್ಯ ಸಮಸ್ಯೆಯೂ ಇದೇ ಆಗಿದೆ. ಸೌಭಾಗ್ಯ ಪ್ರಗತಿಪರತೆ ಮತ್ತು ಹೋರಾಟದ ಬದುಕನ್ನು ಚಿತ್ರಿಸುತ್ತದೆ. ಮಿಣುಕುಹುಳ ರಾಜಕೀಯ ಸಂಘಟನೆಯಲ್ಲಿ ಶಿಸ್ತು ಮತ್ತು ನೀತಿಯ ಅವಶ್ಯಕತೆಯನ್ನು ಹೇಳಿದರೆ, ಕೊನೆ ನಮಸ್ಕಾರ ಸಾಮಾಜಿಕ ಕಾರ್ಯಕರ್ತರ ಭ್ರಷ್ಟತೆಯನ್ನು ಅದು ಸಮಾಜಕ್ಕೆ ಮಾರಕವಾಗುವ ರೀತಿಯನ್ನು ಚಿತ್ರಿಸುತ್ತದೆ. 'ದೀಕ್ಷೆ' ಕರ್ನಾಟಕದ ಪತ್ರಿಕಾ ವ್ಯವಸಾಯದ ಕುರಿತು ಚಿತ್ರಿಸಿದರೆ 'ದೂರದ ನಕ್ಷತ್ರ' ಮತ್ತು 'ನವೋದಯ' ಶಿಕ್ಷಣದ ಸುಧಾರಣೆಯ ಕುರಿತು ದೃಷ್ಟಿ ಹಾಯಿಸುತ್ತದೆ. 'ವಿಲಾಸಿನಿ' ಮತ್ತು 'ಅಂಜನ' ಮನುಷ್ಯರ ಕಾಮದ ಅನೈಸರ್ಗಿಕವಾಗಿ ಹೋರಾಟದಿಂದ ನೈಸರ್ಗಿಕ ಒತ್ತಡದಲ್ಲಿ ಸೌಖ್ಯವನ್ನು ಕಾಣುವ ಬಗೆಯನ್ನು ಹೇಳಿದರೆ, 'ಹೆಣ್ಣಾಗಿ ಕಾಡಿತ್ತು ಮಾಯೆ' ಡಂಭಾಚಾರ ವಿಲಾಸಕ್ಕೆ ಮಾರುಹೋಗಿ ಹೆಣ್ಣು ತನ್ನ ಹೃದಯವನ್ನು ಕಳಕೊಂಡು ಮನೆಯ ಸೌಖ್ಯವನ್ನು ಹಾಳು ಮಾಡಿಕೊಳ್ಳುವ ಚಿತ್ರವನ್ನು ಕೊಡುತ್ತದೆ. ಇಂತಹದೇ ಜಾಡನ್ನು ಹಿಡಿದು ಹೋದ ಕಾದಂಬರಿ 'ಮಿಂಚು' ಮತ್ತು 'ತೊಟ್ಟಿಲು ತೂಗಿದ ಕೈ' ಪಾಲಿಗೆ ಬಂದ ಪಂಚಾಮೃತ 'ಏಕಾಂಗಿನಿ' ಬದುಕಿನ ಘನತೆಗಾಗಿ ಹೋರಾಟವನ್ನು ಚಿತ್ರಿಸುತ್ತದೆ, ಮತ್ತು ಅನಿವಾರ್ಯ ಸಂದರ್ಭದಲ್ಲಿ ವಿಚ್ಛೇದನವನ್ನು ಎತ್ತಿ ಹಿಡಿಯುತ್ತದೆ.

## ಅಧ್ಯಾಯ - ೪

# ಅಂಕಣ ಬರಹ

ಅಂಕಣ ಅಥವಾ ನುಡಿಚಿತ್ರ (ಫ್ರೀಲೈನ್ಸ್) ಎಂಬುದು ಪತ್ರಿಕಾ ಪ್ರಪಂಚ ಹೆತ್ತು ಬೆಳೆಸಿದ ಸಾಹಿತ್ಯ ಪ್ರಕಾರ. ಅದು ಮೂಲತಃ ಪತ್ರಿಕೆಯ ಬಿಡಿ ಭಾಗವನ್ನು ತುಂಬಲೆಂದು ಇರುವ ಒಂದು ಸಾಧನವಾಗಿರಬಹುದು. ಆದರೆ ಅದು ಉತ್ತಮ ಬರಹಗಾರರಿಂದ ಸಾಹಿತ್ಯಿಕ ಮಾನ್ಯತೆಯನ್ನು ಪಡೆಯುವುದಂತೂ ನಿಜ.

ಹಾಗೆ ಕೇಳಿದರೆ ಅಂಕಣದ ವಿಷಯ ಆಯಾ ಕಾಲದ ಪ್ರಸ್ತುತ ಸಂಗತಿಯೇ. ದಿನನಿತ್ಯದ ಮಹತ್ವ ಸುದ್ದಿಯ ಒಂದು ವಿಸ್ತರಣೆಯೇ. ಆದ್ದರಿಂದ ಅದು ಮುಖ್ಯವಾಗಿ ಮೂರು ಲಕ್ಷಣವನ್ನು ಹೊಂದಿರುವುದು. ಮೊದಲನೆಯದಾಗಿ ಅದು ದೈನಂದಿನ ಅಥವಾ ಪ್ರಾಸಂಗಿಕ ಸಂಗತಿಯೇ ಆಗಿರಬೇಕು. ಎರಡನೆಯದಾಗಿ ಅದು ರಂಜನೀಯವೂ, ಹೃದ್ಯವೂ ಆದ ಶೈಲಿಯನ್ನು ಹೊಂದಿರಬೇಕು. ಮತ್ತು ಮೂರನೆಯದೆಂದರೆ, ಅಲ್ಲಿಯ ವಸ್ತು ಹೆಚ್ಚು ಹೆಚ್ಚು ಸಾಮಾಜಿಕವಾಗಿರಬೇಕು. ಅಂದರೆ ರಾಜಕೀಯ, ನೈತಿಕ ಮತ್ತು ಸಾಂಸ್ಕೃತಿಕವಾದುದಾಗಿರಬೇಕು. ಇಂಥ ನುಡಿಚಿತ್ರ ಬರಹಗಾರನ ಅನುಭವ ಮತ್ತು ಕೌಶಲ್ಯವನ್ನನುಸರಿಸಿ ಸಾಹಿತ್ಯಿಕವಾಗಿಯೂ ಗಣ್ಯಸ್ಥಾನ ಪಡೆಯುತ್ತದೆ.

ಕನ್ನಡದಲ್ಲಿ ಅಂಕಣ ಪ್ರಕಾರಕ್ಕೆ ಅಂಥ ಎತ್ತರದ ಸ್ಥಾನ ದೊರಕಿಸಿಕೊಟ್ಟವರ ಹೆಸರನ್ನು ನೆನೆದಾಗ ಥಟ್ಟನೆ ನೆನಪಾಗುವುದು ಪಾ.ವೆಂ. ಆಚಾರ್ಯ, ಸಿದ್ದವನಹಳ್ಳಿ ಕೃಷ್ಣಶರ್ಮ, ಹಾ.ಮಾ. ನಾಯಕ, ಗೌರೀಶ ಕಾಯ್ಕಿಣಿ ಮೊದಲಾದವರು. ಆ ಸಾಲಿನಲ್ಲಿ ಬರುವ ಹೆಸರು ನಿರಂಜನರದು.

ನಿರಂಜನರು ನಾಡಿನ ಮುಖ್ಯ ಪತ್ರಿಕೆಗಳಾದ ಪ್ರಜಾಮತ, ಉಷಾ, ಜನಶಕ್ತಿ ಚಿತ್ರಗುಪ್ತ, ಪ್ರಜಾವಾಣಿ, ಕರ್ಮವೀರ, ಇನ್ನೂ ಮುಂತಾದವುಗಳಲ್ಲಿ ಅಂಕಣ ಬರೆದಿದ್ದಾರೆ. ಆ ಅಂಕಣಗಳಲ್ಲಿಯ ಮುಖ್ಯ ಬರಹಗಳು 'ಸಾಧನ', 'ಪುಷ್ಪಹಾರ', 'ದಿನಚರಿಯಿಂದ'. 'ಅಂಕಣ' ಮತ್ತು 'ಓದುಗರೊಡನೆ ಐದು ನಿಮಿಷ' ಎಂಬ ನಾಲ್ಕು ಸಂಕಲನ ರೂಪದಲ್ಲಿ ಪ್ರಕಟವಾಗಿವೆ. ಇನ್ನೂ ಸಂಕಲಿಸಬಹುದಾದದ್ದು (ಬಾನುಲಿ

ನಾಟಕ ಸಹಿತ) ಎರಡು ಸಾವಿರ ಪುಟಗಳಷ್ಟು ಉಳಿದಿವೆ ಎಂದು ಅವರೇ (ನಿರಂಜನ ಅಭಿನಂದನದಲ್ಲಿ) ಹೇಳಿದ್ದಾರೆ.

ನಿರಂಜನರ ನುಡಿಚಿತ್ರ ಮುಖ್ಯ ವೈಶಿಷ್ಟ್ಯವೆಂದರೆ ಅವುಗಳ ಕಥನ ರೂಪದ್ದಾಗಿದೆ. ಮುಖ್ಯವಾಗಿ ಕತೆಗಾರರೇ ಆಗಿರುವ ಅವರ ಅಂಕಣ ಬರಹ ಕೂಡ ಕತೆಯ ವಿನ್ಯಾಸವನ್ನು ಹೊಂದಿರುತ್ತವೆ. ಅದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಅವರ ಬರಹದಿಂದ ಎತ್ತಿ ಕೊಡಬಹುದು.

'ಪ್ರಚಂಡ ಆಕಾಶ ಬಾಣ' ಎಂಬ ಬರಹದಲ್ಲಿ ಅಸ್ಕಾರ ವೈಲ್ಡನ ಒಂದು ಕತೆಯ ಸಾರಾಂಶವನ್ನು, ಸಾರಾಂಶ ಸೋರದಂತೆ, ಸ್ವಾರಸ್ಯ ಕೆಡದಂತೆ ಹೇಳಿಬಿಡುತ್ತಾರೆ.

''ಪ್ರಚಂಡ ಆಕಾಶಬಾಣದ ಕಥೆ' ಹೇಳಬೇಕು ನಿನಗೆ. ಇದೇ ಈಗ ಅದನ್ನೋದಿ ಮೈಮನ ಹಿಗ್ಗಿಸಿಕೊಂಡಿದ್ದೇನೆ'' ಎಂದು ಶುರುವಾಗುವ ಪತ್ರರೂಪಿ ಬರಹ ಪೂರ್ತಿ ಕತೆಯನ್ನು ಹೇಳುತ್ತದೆ. ಪ್ರಚಂಡ ವಿಡಂಬನೆ ಅದು. ''ವೈಲ್ಡ ಪ್ರತಿಭಾಶಾಲಿ. ಪ್ರಚಂಡ ಆಕಾಶಬಾಣ ಈ ಕತೆಯ ಮೂಲಕ ಆತ ಬದುಕಿದ್ದ ಸಮಾಜದ ವ್ಯಂಗ್ಯ ಚಿತ್ರಣವನ್ನು ಸೂಚ್ಯವಾಗಿ ಆದರೂ ರಮ್ಯವಾಗಿ ಹೇಗೆ ಸೂಚಿಸಿದ್ದಾನೆ! ಪ್ರಚಂಡ ಆಕಾಶಬಾಣಗಳು! ನಮ್ಮ ಸಮಾಜದಲ್ಲಿ ಇಂತಹ ಪ್ರಚಂಡರು ಎಷ್ಟೊಂದು ಜನರಿಲ್ಲ'' ಎನ್ನುತ್ತಾರೆ.

(ಪುಷ್ಪಹಾರ ಸಂಗ್ರಹ) ಈ ರೀತಿಯ ಬರಹ ಪಿ. ಲಂಕೇಶರಲ್ಲಿ ಮುಂದುವರಿದದ್ದನ್ನು ನಾವು ಕಾಣಬಹುದು.

ಲೇಖಕಿ ತ್ರಿವೇಣಿಯವರ ಮರಣದ ಸಂದರ್ಭದ ಬರಹ ಪ್ರಾರಂಭವಾಗುವುದು ಹೀಗೆ:

''ಪತ್ರಿಕೆ ನೋಡಿದಿರಾ''

''ಏನಿದೆ?''

''ಏನಿಲ್ಲ ಪತ್ರಿಕೆಯಲ್ಲಿ? ಉತ್ತರದ ಗಡಿಯಲ್ಲಿ ಚೀಣೀ ಸೈನ್ಯದ ಜಮಾವಣೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ವಿವರಣೆ; ನಾಪತ್ತೆಯಾದ ವಿಮಾನಕ್ಕಾಗಿ ಶೋಧನೆ...''

''ಅದಲ್ಲ''

''ಮತ್ತೆ?''

''ತ್ರಿವೇಣಿ?''

''ಏನು?''

''ಇನ್ನಿಲ್ಲ''

''ಹಾಂ''

ಇದೇ ಧಾಟಿಯಲ್ಲಿ ತ್ರಿವೇಣಿಯವರ ಸಾವಿನ ಸಂದರ್ಭದಲ್ಲಿ ಅವರ ಬದುಕಿನ ವಿಷಯ, ಬರವಣಿಗೆಯ ವಿಚಾರ ಎಲ್ಲವನ್ನು ಸಂಕ್ಷಿಪ್ತವಾಗಿ ಆದರೆ ಮುಖ್ಯ ಮಾಹಿತಿಯನ್ನು ಒದಗಿಸುತ್ತಾರೆ. (ಅಂಕಣದಿಂದ)

''ಮಹಾನುಭಾವನ ಮರಣದಿಂದ ರಾಷ್ಟ್ರ ಬಡವಾಗಿದೆ; ಕೋಟಿ ಜೀವಿಗಳ ಮನಸ್ಸು ಮಂಕಾಗಿದೆ. ಇಡಿಯ ಭಾರತವೇ ನನ್ನ ಮನೆ; ಅದರ ಜನತೆ ನನ್ನ ಕುಟುಂಬ.''

ಮತಯಾಚನೆಗೆ ಹೊರಟ ಉಮೇದುವಾರನ ಮಾತಲ್ಲ. ತನ್ನ ಅಂತರಂಗವನ್ನು ತೋಡಿಕೊಳ್ಳಲು ಬಯಸಿದ ರಾಷ್ಟ್ರಪತಿಯ ನುಡಿ.

ನುಡಿದಂತೆ ನಡೆ.

ಹಿಂದೊಮ್ಮೆ ಕೇಂದ್ರ ಮಂತ್ರಿಮಂಡಲಕ್ಕೆ ಬನ್ನಿ ಎಂದು ಕರೆಯಲಾಯಿತಂತೆ 'ಕ್ಷಮಿಸಿ' ಎಂದರು ಆತ. ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವುದರಲ್ಲೇ ತೃಪ್ತಿ.

ಆದರೆ ಅದು ದೀರ್ಘಕಾಲ ಪರಿಣಾಮ ಬೀರುವಂಥ ದುಡಿಮೆ. ಅವರು ಬಾಳಿದ್ದೇ ಒಂದು ಸಂಕೇತವಾಗಿದೆ.

ಸಮಾಜ ಹೇಗೇ ಇರಲಿ. ಸಂಕೇತಗಳಿಗೆ ಬೆಲೆಯುಂಟು. ಕಾವ್ಯ ಬರೆಯಬಹುದು. ಆದರೆ ಕಾವ್ಯದಂತೆ ಬದುಕಬಹುದೆ? ಅದು ಸಾಧ್ಯ ಎಂದು ತೋರಿಸಿಕೊಟ್ಟವರು ಡಾ|| ಜಾಕೀರ್ ಹುಸೇನ್ (ದಿನಚರಿಯಿಂದ).

ಹೀಗೆ ಪ್ರಾರಂಭವಾದ ಬರಹ ನಂತರ ರಾಷ್ಟ್ರಪತಿ ಜಾಕಿರ್ ಹುಸೇನ್‌ರ ಜೀವನವನ್ನು ಇದೇ ರೀತಿಯಲ್ಲಿ ಪರಿಚಯಿಸುತ್ತದೆ. ಇಲ್ಲಿಯ ಒಂದೊಂದು ವಾಕ್ಯವೂ ಒಂದೊಂದು ಘಟನೆಯಂತೆ ವಿಚಾರವನ್ನು ಬೆಳೆಸುತ್ತ ಹೋಗುವ ರೀತಿ ಸಣ್ಣ ಕತೆಯ ವಿನ್ಯಾಸ.

ಎಂದೋ ಆಯಾ ಸಂದರ್ಭದಲ್ಲಿ ಬರೆದ ನುಡಿ ಚಿತ್ರಗಳು ಸಂಗ್ರಹವಾಗಿ ಪ್ರಯೋಜನವೇನು? ಅದರ ತಾಳಿಕೆ ಎಷ್ಟು ಎಂದು ಕೇಳುವುದಾದರೆ ಅದಕ್ಕೆ ಹಲವು ಉತ್ತರಗಳುಂಟು. ಮುಖ್ಯವಾಗಿ ಅದರ ತಾಳಿಕೆಯ ಗುಣ ಅಂಕಣಕಾರ ಆರಿಸಿಕೊಳ್ಳುವ ವಸ್ತುವನ್ನವಲಂಬಿಸಿರುತ್ತದೆ. ತಾತ್ಕಾಲಿಕವಾದ ವಸ್ತುವಾಗಿದ್ದರೂ ಸಾಂಸ್ಕೃತಿಕ, ವೈಚಾರಿಕ ಮತ್ತು ರಾಜಕೀಯವಾಗಿ ಮಹತ್ವದ್ದಾಗಿದ್ದಾಗ ಅದರ ತಾಳಿಕೆಯ ಕಾರಣದಿಂದ ಸಂಗ್ರಾಹ್ಯವಾಗಿರುತ್ತದೆ. ನಿರಂಜನರ ಅಂಕಣದ ಮುಖ್ಯ ಲಕ್ಷಣ ಇದು.

ಕವಿ ವಿ.ಜಿ. ಭಟ್ಟರ ಬಗ್ಗೆ ೧೯೫೪ರಲ್ಲಿ ಬರೆದ ಅಂಕಣ ಈಗಲೂ ಒಂದು

ಸಾಂದರ್ಭಿಕ ಲೇಖನವಾಗೇ ಇದೆ ಎನ್ನುವುದನ್ನು ಈ ಕೆಳಗಿನ ವಿವರದಿಂದ ತಿಳಿಯಬಹುದು.

ವಿ.ಜಿ. ಭಟ್ಟರ ಕಾವ್ಯವೇದನೆ ಕವನ ಸಂಗ್ರಹವನ್ನು ಒಮ್ಮೆ ವಿಮರ್ಶೆಗಾಗಿ ಧಾರವಾಡದ ಆಕಾಶವಾಣಿಗೆ ಕಳಿಸುತ್ತಾರೆ. ಆದರೆ ಅದು ವಾಪಸ್ ಬರುತ್ತದೆ. ಅದಕ್ಕೆ ಕಾರಣವೆಂದರೆ ಇದರ ತುಂಬೆಲ್ಲ ಪ್ರೇಮಗೀತೆಗಳೇ ಇವೆ. ಕಾವ್ಯವೇದನೆಯ ಕುರಿತು ಆಗ ಪರ ಮತ್ತು ವಿರೋಧ ಚರ್ಚೆಯೇ ನಡೆದಿತ್ತು. ಅದು ನಮ್ಮ ಸಾಂಸ್ಕೃತಿಕ ಜಗತ್ತಿನ ಒಂದು ದಾಖಲೆ.

''ಹುಡುಕಿದೆ ಹಗಲೆಲ್ಲಾ
ಎಲ್ಲೂ ಸಿಗಲಿಲ್ಲ
ಹಳಬರು ಹೇಳಿದ ಆತ್ಮವು ನನಗೆ
ಎಲ್ಲೂ ಸಿಗಲಿಲ್ಲ''

ಇದು ಪ್ರಸಿದ್ಧ ಕವಿತೆ. ಈ ಕವಿತೆಯಲ್ಲಿ ಆತ್ಮ ಕಿಟಲ್ ಡಿಕ್ಷ್ನರಿಯಲ್ಲಿ ಸಿಕ್ಕಿತು ಎಂದು ಕವಿ ಹೇಳುತ್ತಾರೆ.

''ಕವಿಗಳ ಹಿಂದೇ ಕರೆದಿದೆ ನಿನ್ನನು
ಭೂಮಿಗೆ ಓ ಗಂಗೆ
ಇಳಿಯುವ ಹುಲು ಯೋಚನೆಯನು ಬಿಡು
ಮಾಡಿದರೂ ದಂಗೆ''

ಗಂಗೆ ಇಳಿದು ಬಂದರೆ ಈ ಜನ ಸಂಡಾಸ ತೊಳೆಯಲು ಹಚ್ಚುತ್ತಾರೆ ಎಂದು ಕವಿ ಎಚ್ಚರಿಕೆ ಕೊಡುತ್ತಾರೆ.

ಹೀಗೆ ಪರಂಪರೆಯನ್ನು ಕೆದರುವ ವೈಚಾರಿಕ ರಚನೆಗಳಿವು. ಆದ್ದರಿಂದ ಅವಕ್ಕೆ ವಿರೋಧ. ಆದರೆ ಆ ಕಾವ್ಯದ ಕುರಿತು ಕವಿ ಜಿ.ಆರ್. ಪಾಂಡೇಶ್ವರ ಇಂಥ ವಿಡಂಬನೆ ಕವಿಗೆ ನಾಡಿಗೆ ನಾಡೇ ಮಣಿಯಬೇಕು ಎಂದರೆ, ಬೆಟಗೇರಿ ಕೃಷ್ಣಶರ್ಮರು ರತ್ನನ ಪದಗಳ ತರುವಾಯ ಇದೊಂದು ವೈಶಿಷ್ಟ್ಯವನ್ನು ತುಂಬಿಕೊಂಡು ಬಂದಿರುವ ಇನ್ನೊಂದು ಸಂಕಲನ ಎಂದಿದ್ದಾರೆ. ಸಾಂಸ್ಕೃತಿಕ ಚಿಂತಕರಾದ ಶಂಬಾ ಜೋಷಿಯವರು ಈ ಭಟ್ಟರ ವೇದನೆಯ ವ್ಯಕ್ತಿಗತ ನೋವಾಗಿರದೆ ಅನೇಕ ಪ್ರಾತಿನಿಧಿಕ ಮನೋಭಾವನೆಯಾಗಿದೆಯೆಂದು ಸಿದ್ಧಪಡಿಸಬೇಕಾಗಿಲ್ಲ ಎಂದಿದ್ದಾರೆ. (ಸಾಧನ ಸಂಚಯ)

ನಮಗೆ ಈ ಸಂಸ್ಕೃತಿ ದಾಖಲೆ ಬಹಳ ಮಹತ್ವದ್ದು. ಅಂದಿನ ಪತ್ರಿಕೆಯಲ್ಲೆಲ್ಲೋ ಪ್ರಾಸಂಗಿಕ ವಿಮರ್ಶೆ ಹೇಳಿಕೆಗಳಾಗಿ ಕಾಣಿಸಿಕೊಂಡ ಈ ಅಭಿಪ್ರಾಯ ಕಾದಿಡುವಂತಾದುದು (ನಿರಂಜನರ ಅಂಕಣ ಬರಹಗಳ ಸಂಗ್ರಹದಿಂದ)

''ಗರ್ಭಗುಡಿಯಿಂದ ಗೆಸ್ಟ್ ಹೌಸಿಗೆ'' ಬರಹದಲ್ಲಿ ಕನ್ನಡ ಆಡಳಿತ ಭಾಷೆ - ಶಿಕ್ಷಣ ಮಾಧ್ಯಮದ ಚರ್ಚೆ ಇದೆ. ಪೋಲೆಂಡಿನಲ್ಲಿ ಪೋಲಿಷ್ ಭಾಷೆಯೇ ಬೋಧನ ಮಾಧ್ಯಮ. ಆದರೆ ಪೋಲ್ ಜನರು ಇತರ ಪಾಠಗಳ ಜೊತೆಗೆ ಇಂಗ್ಲೀಷನ್ನು ಕಲಿಯುತ್ತಾರೆ. ಆದ್ದರಿಂದ ನಮಗೆ ನಮ್ಮ ನಾಡಿಗೆ ಲಾಭವಾಗಲಿ ಎಂದು ನಮಗಾದರೂ ಆ ದೃಷ್ಟಿಯಿಂದ ಇಂಗ್ಲೀಷ್ ಬೇಕು.

''ಈ ದೇಶದಲ್ಲಿ ಇಂಗ್ಲೀಷ್ ಸದಾಕಾಲವೂ ಬೋಧನ ಮಾಧ್ಯಮವಾಗಿರಲೆಂಬ ವಾದವನ್ನು ವಿವೇಕಮತಿಗಳು ಒಪ್ಪಲಾರರು. ತಾಯಿ ನುಡಿಯ ಮೂಲಕವೇ ಜ್ಞಾನಾರ್ಜನೆ ಸಹಜವಾದ, ನೈಸರ್ಗಿಕವಾದ ಕಾರ್ಯ ವಿಧಾನ'' (ವಾಚಕೆ ಪ್ರತಿಧ್ವನಿ ೧೯೮೨:೩.೯೨) ಎಂದು ಹೇಳಿದ್ದಾರೆ. ಇದು ೧೯೬೨ ರಲ್ಲಿ. ಈಗಲೂ ಇಂಗ್ಲೀಷ್ ಕನ್ನಡ ಮಾಧ್ಯಮದ ಸಮಸ್ಯೆ ಚರ್ಚೆ ನಡೆಯುತ್ತಲೇ ಇದೆ. ಇಲ್ಲಿ ತಾಯ್ನುಡಿ ಅನ್ನುವಲ್ಲಿ ರಾಜ್ಯ ಭಾಷೆ ಎಂದೊಂದು ಚಿಕ್ಕ ತಿದ್ದುಪಡಿಯೊಡನೆ ಈಗಲೂ ಇದೇ ಅಭಿಪ್ರಾಯ ಸಾಹಿತಿಗಳು ಮತ್ತು ಶಿಕ್ಷಣ ತಜ್ಞರಿಗೆ ಸ್ವೀಕಾರಾರ್ಹವಾಗಿದೆ.

'ಆನೆಯ ಮೇಲಿನ ಅಂಬಾರಿ' (ದಿನಚರಿಯಿಂದ ೧೯೭೧:೧೩.೧) ಎಂಬ ಬರಹದಲ್ಲಿ ಮೈಸೂರು ದಸರೆಯ ವರ್ಣನೆಯಿದೆ. ಅದರಲ್ಲಿ ಬರುವ ಒಂದು ವಾಕ್ಯಾವಳಿ ಹೀಗಿದೆ. ''ಪ್ರಜಾಪ್ರಭುತ್ವ ಸಮಾಜ ವ್ಯವಸ್ಥೆಯಲ್ಲಿ ಅವರೂ (ರಾಜರು) ಒಬ್ಬ ಸತ್ಪ್ರಜೆ. ಮತ ಚಲಾಯಿಸುವ ಹಕ್ಕುಳ್ಳವರು. ವಿಜಯದಶಮಿಯ ದಿನ ಬಂಗಾರದ ಪೋಷಾಕು ತೊಟ್ಟ ಮಹಾರಾಜರನ್ನು ಅಲಂಕೃತ ಆನೆಯ ಮೇಲಣ ಅಂಬಾರಿಯಲ್ಲಿ ಮೆರವಣಿಗೆ ಮಾಡಿಸಿ, ಆ ವೆಚ್ಚವನ್ನು ಸರಕಾರ ತನ್ನ ಬೊಕ್ಕಸದಿಂದ ತುಂಬುವ ಅರ್ಥವೇನು? ಇದು ಸ್ವಾತಂತ್ರ್ಯೋತ್ತರ ಭಾರತದಲ್ಲಿನ ವಿರೋಧಾಭಾಸಗಳಲ್ಲಿ ಒಂದು.''

ಈ ಸಂಗತಿಯು ಹೊಂದಿರುವ ವೈಚಾರಿಕತೆ ಬಹಳ ಮುಖ್ಯವಾಗಿದೆ. ಹಾಗೆಯೇ ಮೆರವಣಿಗೆಯಲ್ಲಿ ದೇವಿ ಮೂರ್ತಿಯನ್ನು ಮೆರೆಸಬಹುದೆ? ಎಂಬ ಚರ್ಚೆ ಇಂದಿನದಾಗಿದ್ದು ಇದು ನಿರಂಜನ ದಾಖಲಿಸಿದ ವೈಚಾರಿಕತೆಯ ಮುಂದುವರಿಕೆಯೇ ಆಗಿದೆ.

'ಅಂಧೇರಿ ಶಿಬಿರದ ಬೆಳಕು' (ಅದೇ ಪುಟ ೧೭೦) ಬರಹ ಶಿಕ್ಷಣದ ಕುರಿತು

ಮುಂಬೈಯ ಅಂಧೇರಿ ಎಂಬಲ್ಲಿ ನಡೆದ ಶಿಕ್ಷಣದ ಶಿಬಿರದ ಚರ್ಚೆಗೆ ಸಂಬಂಧಿಸಿದೆ. (ಇದರ ತಲೆಬರಹವೇ ಸಾಕಷ್ಟು ಧ್ವನಿ ಪೂರ್ಣವಾಗಿದೆ) ಅದರಲ್ಲಿ ಬರುವ ಮಾತು. ಒಂದು ನಾಗರಿಕತೆಯನ್ನು ಜನಾಂಗವನ್ನು ನಿರ್ನಾಮ ಪಡಿಸಬೇಕಾದರೆ ಆ ಜನಾಂಗದ ವಿಶ್ವವಿದ್ಯಾಲಯಗಳನ್ನೂ, ಜ್ಞಾನಪೀಠಗಳನ್ನೂ, ಶಿಕ್ಷಣವನ್ನೂ ಧ್ವಂಸ ಮಾಡಿದರಾಯಿತು ಎಂಬುದು. ಈ ಮಾತಿನ ಹಿನ್ನೆಲೆಯಲ್ಲಿರುವ ಶಿಕ್ಷಣದ ಕುರಿತಾದ ವೈಚಾರಿಕ ಜವಾಬ್ದಾರಿ ಎಂತಹದು ಎಂಬುದನ್ನು ಬೊಟ್ಟುಮಾಡಿ ತೋರಿಸುತ್ತದೆ. ಪರಿಸ್ಥಿತಿ ಅಂದಿಗಿಂತ ಇಂದೇ ಪ್ರಸ್ತುತವಾಗಿದೆ.

''ಅವರ ಪುಟ್ಟ ಕೂಸು ದುಂಡು ದುಂಡಗೆ ಬೆಳೆಯುತ್ತಿದ್ದಾಳೆ. ಅವಳನ್ನು ಎತ್ತಿಕೊಂಡಾಗ ಒಂದು ಮಾತು ಬಂತು. 'ನಳಿನಾ ದೊಡ್ಡವಳಾಗುವ ಹೊತ್ತಿಗೆ ಈಗಿನ ಯಾವ ಕಷ್ಟ ಸಂಕಷ್ಟ ಯಾವುದೂ ಇರೋದಿಲ್ಲ.'

ಒಮ್ಮೆ ವಸಾಹತುವಿನ ನೊಗ ಕಳಚಿತೆಂದರೆ ಬಾಗಿದ ಬೆನ್ನು ನೇರವಾಯಿತೆಂದರೆ ಬಾಳು ಬೆಳಗುವುದನ್ನು ನಾವು ಕಂಡಿಲ್ಲವೆ?... ಬಡವನಾಗಿ ಹುಟ್ಟಿದ ಅಪರಾಧಕ್ಕಾಗಿ ವಿದ್ಯಾಭ್ಯಾಸಕ್ಕೆ ಅನರ್ಹನಾಗುವುದು. ಪುರುಷ ದುಡಿಮೆಯ ಯಂತ್ರದ ಕೀಲಿ ಯಾವುದು; ಸ್ತ್ರೀ ಅಡುಗೆ ಮನೆಯ ತೊತ್ತಾಗುವುದು; ಹಣಕಾಸಿನ ಒಂದೇ ಅಭಾವಕ್ಕಾಗಿ ರೋಗ ಗುಣವಾಗದೆ ಸಾವಿಗೆ ಗುರಿಯಾಗುವುದು ಈ ಸರಮಾಲೆ ಕೊನೆಗಾಣದೆ ಇರುವುದುಂಟೇ?

ಬೆಳದಿಂಗಳ ಚಂದ್ರನನ್ನು ಅನ್ಯಾಯವಾಗಿ ಕಾರ್ಮುಗಿಲು ಕವಿದ ರಾತ್ರಿಗಳು, ಈಡೇರದ ಹಂಬಲಗಳು ಒಡೆದ ಕನಸುಗಳು....'' (ಪ್ರತಿಧ್ವನಿ; ೨೪೦)

ಇದು ಈಗಲೂ ವಾಸ್ತವವಲ್ಲವೇ?

ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು.

ರಾಜಕೀಯ ಸರ್ವಾಧಿಕಾರಿಗಳು ಲೇಖಕರ ವಿಷಯವಾಗಿ ತಲ್ಪಬಹುದಾದ ಅಪಾಯಕಾರಿ ಮಟ್ಟವನ್ನು ಲೇಖನ 'ವೊಲೆ ಸೋಯಂಕ್' ಆಸ್ಥಾನ ಕವಿಗೆ ಅರ್ಧಚಂದ್ರ, ಪ್ರೊ. ಪುಂಗರ ಬಂಧ ವಿಮೋಚನೆ ಮತ್ತು ತನ್ನನ್ನು ತಾನೇ ಕಂಡ ಜಿಲಾಸ್ ಬರಹದಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ. ಚಾರ್ಲಿ ಚಾಪ್ಲಿನ್ ಇಂಗ್ಲೆಂಡಿನ ಮೂಲದವನಾಗಿದ್ದರೂ ಅಮೇರಿಕ ವಾಸಿ. ಆತ ತನ್ನ ವೃದ್ಧಾಪ್ಯದಲ್ಲಿ ಒಮ್ಮೆ ಇಂಗ್ಲೆಂಡಿಗೆ ಹೋದ. ಅಮೇರಿಕ ಆತ ಹಿಂದಕ್ಕೆ ಬರುವುದು ಬೇಡವೆಂದು ಪ್ರಯತ್ನಿಸಿತು. ಅದರ ಕಾರಣವೆಂದರೆ ಆತ ತನ್ನ ಕಲೆಯನ್ನು ಯುದ್ಧ ಪ್ರಚೋದನೆಗಾಗಿ ಉಪಯೋಗಿಸಲು ಸಿದ್ಧನಿಲ್ಲದ್ದು.

ಪ್ರಜಾಪ್ರಭುತ್ವದ ಹೆಸರಿನ ಮರೆಯಲ್ಲಿ ಸರ್ವಾಧಿಕಾರ ತಲೆಹಾಕುವುದನ್ನು

'ಚಾರ್ಲಿಚಾಪ್ಲಿನ್ ಮತ್ತು ಅಮೇರಿಕ' (ಓದುಗರೊಡನೆ ಐದು ನಿಮಿಷ ವರ್ಷ ೧೯೫೩; ಪುಟ ೨೭) ಎಂಬ ಬರಹದಲ್ಲಿ ಚಿತ್ರಿಸುತ್ತಾರೆ.

ಇದು ಯಾವುದೇ ಬಗೆಯ ರಾಜಕೀಯ ಪರಿವರ್ತನೆಯಾದರೂ ಅಂತಿಮವಾಗಿ ಜನರ ಎಲ್ಲ ಬಗೆಯ ಬಂಧ ವಿಮೋಚನೆಗೆ ಬದ್ಧವಾಗಿರಬೇಕೆಂಬ ಮತ್ತು ಆ ದಿಸೆಯಲ್ಲಿಯ ನಡೆ ಒಂದು ಸಮತೋಲನದ ಕಾರ್ಯವಿಧಾನ ಆಗಬೇಕೆಂಬ ವೈಚಾರಿಕತೆಯನ್ನು ಎತ್ತಿ ಹೇಳುತ್ತದೆ. ಇದು ರಾಜಕೀಯಕ್ಕೆ ಬಹು ಬೆಲೆಯುಳ್ಳ ಮಾತುಗಳಾಗಿವೆ.

ಹೀಗೆ ನಿರಂಜನರ ಯಾವುದೇ ಬರಹದಲ್ಲಿ ಜನರನ್ನು ಶಿಕ್ಷಿತರನ್ನಾಗಿ ಮಾಡುವ, ವಿಚಾರಿಸುವಂತೆ ಮಾಡುವ, ಪ್ರಗತಿಪರವಾದ ಜನಪರವಾದ ಪ್ರತಿಭಟನೆ ಇದ್ದೇ ಇರುತ್ತದೆ. ಆದರೆ ಅದು ಒರಟಾಗಿ ಅಲ್ಲ; ಮನವೊಲಿಸುವಂತೆ. ಅದರಂತೆ ಬರವಣಿಗೆಯಲ್ಲಿಯ ವಿಷಯ ವೈವಿಧ್ಯ ಬರಹದ ಮೌಲ್ಯವನ್ನು ಹೆಚ್ಚಿಸಿದೆ.

ಇವಿಷ್ಟರಿಂದಲೇ ಒಂದು ಅಂಕಣ ಬರಹ ಅಥವಾ 'ನುಡಿಚಿತ್ರ' ಸಫಲವಾಗುವುದಿಲ್ಲ. ಹಾಗೆಯೇ ತಾಳಿಕೆಯ ಗುಣ ಹೊಂದಿರುವುದಿಲ್ಲ. ಅದಕ್ಕೆ ಅವರ ಭಾಷಾ ಶೈಲಿ ಕೂಡ ಕಾರಣವಾಗುತ್ತದೆ. ವಿಷಯವನ್ನು ಬದಿಗಿಟ್ಟರೂ ನಿರಂಜನರ ಬಹುಪಾಲು ಬರಹ ತನ್ನ ಭಾಷೆ ಮತ್ತು ಸಾಹಿತ್ಯಿಕ ಗುಣದಿಂದ ಓದುಗರಿಗೆ ಆಪ್ತವಾಗುತ್ತದೆ ಅಂದಿನಂತೆ ಇಂದಿಗೂ. ಒಂದೆರಡು ಉದಾಹರಣೆಯನ್ನು ನೋಡಬಹುದು.

''ಸೊಗಸಾದ ದೊಡ್ಡ ವಿಮಾನ, ಕಾನ್ಪುರದಿಂದ ಅದು ಹೊರಟು ಹಾರಿದುದು ನೇರವಾಗಿ ಉತ್ತರಕ್ಕೆ, ೧೮೦೦೦ ಅಡಿ ಎತ್ತರದಲ್ಲಿ ಯಾನ. ಘಂಟೆಗೆ ಮುನ್ನೂರು ಮೈಲು ವೇಗ. ಆತ್ತ ಇತ್ತ ನೋಡುತ್ತಿದ್ದಾಗಲೇ ಸೀತಾಪುರ ತಲ್ಪಿದ್ದೆವು, ಅಲ್ಲಿಂದ ಹಿಮಾಲಯ ಪರ್ವತಾವಳಿಯ ಬುಡಕ್ಕೆ ಕೇವಲ ನೂರು ಮೈಲು. ಎಂದೋ ಒಮ್ಮೆ ಪ್ರಾಚೀನ ಕಾಲದಲ್ಲಿ ಭೂಗರ್ಭದಿಂದ ಉದಿಸಿಬಂದು ಎತ್ತರಕ್ಕೆ ಸೆಟೆದು ಹಿಮಾಚ್ಛಾದಿತವಾಗಿ ನಿಂತ ಗಿರಿಮಾಲೆ. ಅದು ಲೋಕದ ಕೊರಳಿನ ಪದಕ. ಅಥವಾ ಭಾರತಿ ಮುಡಿದ ಹೂವು. ಮೈಚಾಚಿ ನಿಂತ ಆ ದೈವಿಕ ಸೌಂದರ್ಯವನ್ನು ಎವೆ ಮುಚ್ಚದೆ ನೋಡಿದೆವು. ನೇರವಾಗಿ ನಮ್ಮ ಎದುರಿಗಿತ್ತು ನಂದಾದೇವಿ ಪರ್ವತ. ಪಕ್ಕಕ್ಕೆ ಹೊರಳಿ, ಶ್ರೇಣಿಯುದ್ದಕ್ಕೂ ಸ್ವಲ್ಪ ಹೊತ್ತು ಸಾಗಿ ಮತ್ತೆ ವಿಮಾನ ಕಾನ್ಪುರಕ್ಕೆ ಹೊರಟಿತು.

ಕೆಳಗೆ ಹರಿಯುತ್ತಿತ್ತು ಗಂಗಾನದಿ, ಪರ್ವತ ಶ್ರೇಣಿ, ಬಯಲು ಅಲ್ಲಿ ಇಲ್ಲಿ ಮಾನವ, ನೆಲ ನೆಲ... ಆ ರಾತ್ರಿಯೆಲ್ಲ ಹಿಮಾಲಯದ ಕನಸು. (ದಿನಚರಿ ೧೯೭೧; ಪು. ೧೮೭).

'ಓದುಗರೊಡನೆ ಐದು ನಿಮಿಷ' ನಿರಂಜನ ಅಂಕಣ ಬರಹದ ಮತ್ತೊಂದು ಮಾದರಿ. ಇದು ಪತ್ರಿಕೆಯ ತೀರ ಚಿಕ್ಕ ಜಾಗ, ತುಂಬಲು ಅವಶ್ಯವಿದ್ದಿರಲೂಬಹುದು. ಆದರೆ ಚಿಕ್ಕದೇ ಆದ ಕನ್ನಡಿಯಲ್ಲೂ ಸಿಂಹವನ್ನು ಪ್ರದರ್ಶಿಸುವ ಪ್ರಯತ್ನ. ಕೇವಲ ಒಂದೆರಡು ಪುಟದ ಈ ಬರವಣಿಗೆ ಉಪಯುಕ್ತವಾಗುವಿಕೆಯಲ್ಲಿ ಭಾಷೆಗೆ ಒಂದು ಸವಾಲು. ಅಂಥ ಹರಳು ಗಟ್ಟಿದ ಭಾಷೆ ವಿಚಾರದ ತೀವ್ರತೆಯನ್ನು ಒಳಗೊಳ್ಳುವ ಬಗೆಗೆ ಒಂದು ಉದಾಹರಣೆ.

''ನಾವು ಅಮೇರಿಕ, ರಷ್ಯಾ, ಚೀನಗಳಿಂದ ಆಹಾರ ಧಾನ್ಯ ಕೊಳ್ಳುತ್ತೇವೆ. ಕಡಿಮೆ ಬೆಲೆಗೆ ಹೆಚ್ಚು ಕೊಳ್ಳಲು ಪ್ರಯತ್ನಿಸುತ್ತೇವೆ.''

ರಷ್ಯಾ ನಮ್ಮ ದೇಶದ ಟೀ - ಸೆಣಬನ್ನು ಕೊಳ್ಳುತ್ತದೆ. ಚೀನಾ ತನ್ನ ರಾಷ್ಟ್ರದ ಪುನರ್ ನಿರ್ಮಾಣಕ್ಕೆ ಬೇಕಾದ ಸಾಮಗ್ರಿಗಳನ್ನು ಕೊಂಡುಕೊಳ್ಳುತ್ತದೆ. ನಗದು ದುಡ್ಡು ಕೊಟ್ಟು ಅಮೆರಿಕವೂ ಇತರರಿಂದ ಕೊಳ್ಳುತ್ತದೆ ಆ ದೇಶವು ವಸ್ತು... ರಕ್ತ'' (ಪು.೪೫)

ಅಮೆರಿಕದ ಸಾಮ್ರಾಜ್ಯಶಾಹಿ ಜಾಯಮಾನದ ಪರಿಚಯವನ್ನು ನಾಲ್ಕೇ ಪದಗಳಲ್ಲಿ ಮಾಡಿಕೊಡುವ ಬಗೆ ಇದು.

ಇದೇ ಶೈಲಿಯ ಸ್ವರೂಪವನ್ನು ಕಾದಂಬರಿಗಳಲ್ಲೂ ಕಾಣಬಹುದಾಗಿದೆ. ಉದಾಹರಣೆಗೆ ಮೃತ್ಯುಂಜಯದ ಈ ಭಾಗ ನೋಡಿ.

''ಹಿಂದಿನ ರಾತ್ರಿ ನಿರಾಕರಣೆಯ ಉತ್ತರದೊಡನೆ ಮೆನ್ನನನ್ನು ಕಳುಹಿಸಿದ ಮೇಲೆ ಮೆನೆಪ್‌ಟಾ ಒಂದರ್ಧ ರೊಟ್ಟಿಯನ್ನು ನಾಲ್ಕಾರು ಅಂಜೂರ ಹಣ್ಣುಗಳನ್ನು ಸೇವಿಸಿದ. ಮನಸ್ಸಿಗಂತೂ ನೆಮ್ಮದಿ. ನಿದ್ದೆ ಬಂತು. ಕಣ್ಣು ತೆರೆದಾಗ ಹೊರಗೆ ಬೆಳಕು ಹರಿಯುತ್ತಿರಬೇಕು ಎನಿಸಿತು. ಮಂದಪ್ರಭೆ ತನ್ನ ಕೊಠಡಿಯಲ್ಲಿ ಪಸರಲು ಆರಂಭಿಸಿದೊಡನೆ ಮೆನೆಪ್‌ಟಾ ಎದ್ದ. ಯಾವ ತಾಕಲಾಟವೂ ಇಲ್ಲದೆ ಮನಸ್ಸು ಶಾಂತವಾಗಿತ್ತು. ಮರಳಿನ ನೀರಿನ ನೆರವಿನಿಂದ ದೇಹಬಾಧೆ ತೀರಿಸಿಕೊಂಡ. ಇನ್ನೂ ಒಂದಿಷ್ಟು ಕಾಲ ನೆಲಮಾಳಿಗೆಯಲ್ಲಿದ್ದರೆ ತಾನೂ ಬಂಧನದ ರಾತ್ರಿ ಕಂಡ ಜಜ್‌ಮಂಖ್‌ನಂತೆ ಆಗುವುದು ಖಂಡಿತ ಎನಿಸಿತು. ಗಾದೆ ನೆನಪಾಯಿತು - 'ಸಂಜೆ ಕೊಲ್ಲುವ ಹಕ್ಕಿಗೆ ಬೆಳಿಗ್ಗೆ ಯಾರು ನೀರುಣಿಸುತ್ತಾರೆ? ತಾನೂ ಒಂದು ರೀತಿಯ ಹಕ್ಕಿಯೇ ಹಾರಲು ನಿರಾಕರಿಸಿದ ಹಕ್ಕಿ.' ಆ ದಿನ ಅಮಾತ್ಯನನ್ನು ಕಂಡೆ, ಅತಿಥಿಯಾಗಿ. ಈ ದಿನ ನ್ಯಾಯ ಮೂರ್ತಿಯನ್ನು ಕಾಣುತ್ತೇನೆ, ಬಂಧಿಯಾಗಿ. ಆತನದು ದ್ವಿಪಾತ್ರ. ನನ್ನದು ಕೂಡ. ಕಟ್ಟಡಕ್ಕೂ ದ್ವಿಪಾತ್ರವೇ. ಅಂದಿನದು ಅಮಾತ್ಯರ ಸಭಾಭವನ; ಇಂದು ಇದು ನ್ಯಾಯ ಸ್ಥಾನ. ಕರೆದೊಯ್ಯಲು ಎಷ್ಟು ಹೊತ್ತಿಗೆ ಬರುವರೋ? ಆ

ಹಣ್ಣುಗಳನ್ನು ತಿನ್ತೇನೆ. ನೀರಡಿಕೆಯ ತೊಂದರೆ ಇರೋದಿಲ್ಲ; 'ಬಟಾಗೆ ನನ್ನ ಉತ್ತರದಿಂದ ಬೇಸರವಾದೀತು. ಆದರೆ ಮನವರಿಕೆಯಾದಾಗ ಸಮಾಧಾನ ಆಗಿರಬಹುದು. ಅವರು ಯಾರೂ ನ್ಯಾಯಸ್ಥಾನಕ್ಕೆ ಬರಬಾರದು, ಬರಲಾರರು. ಕಾವೇರಿ, ಪುಟ್ಟರಾಮೇರಿ... ಇಲ್ಲ. ಗೊತ್ತಿದ್ದೂ, ಗೊತ್ತಿದ್ದೂ ಗಂಡಾಂತರಕ್ಕೆ ತಲೆ ಒಡ್ಡುವುದು ಸರಿಯಲ್ಲ. ನನ್ನ ಬಂಧುಗಳು ದುಡುಕಿ ಏನನ್ನೂ ಮಾಡಲಾರರು.

ಬಾಗಿಲ ಸದ್ದು, ದಳಪತಿಯ ಸ್ವರ: ''ಅಪರಾಧಿ; ಹೊರಗೆ ಬಾ'' (ಓಹೋ... ನಾನು ಅಪರಾಧಿ ಎನ್ನುವುದು ತೀರ್ಮಾನವಾಗಿಯೇಬಿಟ್ಟಿದೆ) (ಮೃತ್ಯುಂಜಯ ಪುಟ: ೫೨೦).

ವಾಕ್ಯ ಕ್ರಮ ನೇರವಾದುದು. ಚಿಕ್ಕ ಚಿಕ್ಕ ವಾಕ್ಯಗಳು, ಕ್ರಿಯಾ ಪದಗಳು ಅಧ್ಯಾಹರ್ವಾಗಿರುವ ಆದರೂ ಅರ್ಥಸ್ಪಷ್ಟನೆಗೆ ತೊಂದರೆಯಾಗದ ವಿಧಾನ. ಭಾಷೆಯಲ್ಲಿ ನಾಟಕೀಯತೆ, ಹಾಗೆಯೇ ಲವಲವಿಕೆ, ಭಾವಪುಷ್ಟಿಗೆ ಪೂರಕವಾಗುವ ಅಲ್ಲಲ್ಲಿ ವಿನೋದ ಮಾತು ಸೇರಿ ಅವರ ಭಾಷೆ ವೈಶಿಷ್ಟ್ಯಪೂರ್ಣವಾಗಿದೆ.

ಅಧ್ಯಾಯ ೫

# ವಿಚಾರ - ವಿಮರ್ಶೆ

ನಿರಂಜನರ ಸಾಹಿತ್ಯ ವಿಮರ್ಶೆ ವಿಚಾರಗಳಿಗೆ ಸಂಬಂಧಿಸಿದ ಬರಹಗಳು 'ಭಾವ, ಬುದ್ಧಿ ಬದುಕು' ಮತ್ತು 'ಮುಖತಃ' ಎಂಬ ಎರಡು ಪುಸ್ತಕಗಳಲ್ಲಿ ಸಂಕಲನಗೊಂಡಿವೆ.

'ಭಾವ ಬುದ್ಧಿ ಬದುಕು'ವಿನಲ್ಲಿ ಮೂವತ್ತಾರು ಬರಹಗಳಿವೆ. ೧೯೪೫ ರಿಂದ ೮೫ರ ವರೆಗಿನ ಲೇಖನ. ಪ್ರಗತಿಶೀಲ ಸಾಹಿತ್ಯದ ವೈಚಾರಿಕತೆ, ಆಗುಹೋಗು ನಿರಂಜನರ ಸಾಹಿತ್ಯಕ ನಿಲುವು, ವೈಚಾರಿಕತೆ ಹಾಗೆಯೇ ಪ್ರಗತಿಶೀಲದ ಇತಿಹಾಸಕ್ಕೆ ಸಂಬಂಧಿಸಿ ಇವು ಬಹಳ ಮುಖ್ಯವಾಗುತ್ತವೆ. ಇವು ನಿರಂಜನರು ಮಾಡಿದ ಸಾಹಿತ್ಯ ವಿಮರ್ಶೆ ಎನ್ನುವುದಕ್ಕಿಂತಲೂ ಸಾಹಿತ್ಯ ಮೀಮಾಂಸೆ ಮತ್ತು ವಿಚಾರ ಎನ್ನುವುದೇ ಹೆಚ್ಚು ಸೂಕ್ತವಾದುದು.

ಪ್ರಗತಿಶೀಲತೆಯಲ್ಲಿ ನಿರಂಜನರ ನಿಲುವು ಅಚಲ. 'ಪ್ರಗತಿಶೀಲದ' ಅವಧಿ ಬಹಳ ಚಿಕ್ಕದಾಗಿದ್ದರೂ ಅದು ನವೋದಯದ ಎದುರು ತನ್ನನ್ನು ಪ್ರತಿಷ್ಠಾಪಿಸಿಕೊಳ್ಳಬೇಕಿತ್ತು. ಎರಡನೆಯದಾಗಿ ಕಿರು ಅವಧಿಯಲ್ಲೇ ಉಂಟಾದ 'ನವ್ಯ'ದ ಧಾಳಿಯನ್ನು ಎದುರಿಸಬೇಕು. ಮತ್ತು ಮೂರನೆಯದಾಗಿ ಪ್ರಗತಿಶೀಲರಲ್ಲೇ ಎದ್ದ ಭಿನ್ನ ಮತವನ್ನು ವಿಶ್ಲೇಷಿಸಿಕೊಳ್ಳಬೇಕಿತ್ತು. ಈ ಮೂರು ದಿಕ್ಕಿನಲ್ಲಿಯೂ ನಿರಂಜನರು ಸೆಣಸಾಡಿದರು. ಸಾಹಿತ್ಯ ಚರಿತ್ರೆಕಾರರಿಗಂತೂ ಇದು ತೀರ ಮಹತ್ವದ ದಾಖಲೆಯಾಗಿದೆ.

'ಕನ್ನಡ ಸಾಹಿತ್ಯದ ಪ್ರಗತಿಶೀಲರು ಎತ್ತ ಸಾಗಿದ್ದಾರೆ? ಎಂಬ ಲೇಖನ ಪ್ರಗತಿಶೀಲ ಹಿರಿಯ ಲೇಖಕರಾದ ಅ.ನ.ಕೃ. ಮತ್ತು ಅವರ ಬೆಂಬಲಿಗರಿಗೂ ನಿರಂಜನರ ಮತ್ತು ಅವರ ಸಂಗಡಿಗರಿಗೂ ಆದ ಬಿರುಕಿನ ಚಿತ್ರ ನೀಡುತ್ತದೆ. ಪ್ರಗತಿಶೀಲರು ಸಮಾಜವಾದಿ ವಾಸ್ತವತೆಯಿಂದ ಆಧ್ಯಾತ್ಮಿಕ ಆದರ್ಶ ತತ್ವಗಳ ಕಡೆಗೆ ನಡೆದಿದ್ದಾರೆ ಎಂಬುದನ್ನು ಅವರು ಮನಗಾಣಿಸುತ್ತಾರೆ. ಹಾಗೆಯೇ ಸಾಹಿತ್ಯದಲ್ಲಿ ಕಾಮ ಪ್ರಚೋದನೆ ಪ್ರಗತಿಶೀಲತೆಯಲ್ಲ ಎಂದು ಅವರು ಪ್ರತಿಪಾದಿಸುತ್ತಾರೆ.

'ಪ್ರಗತಿಯ ತೀಕ್ಷ್ಣ ದೃಷ್ಟಿ' ಎಂಬ ಬರಹದಲ್ಲಿ ಪ್ರಗತಿಶೀಲತೆಯ ಬಗ್ಗೆ ವ್ಯಾಖ್ಯಾನಿಸುತ್ತ ಸಾಹಿತ್ಯವನ್ನು ಕುರಿತು ಮಹಾತ್ಮಾ ಗಾಂಧೀಜಿ ಅಭಿಪ್ರಾಯವನ್ನು ದಾಖಲಿಸುತ್ತಾರೆ.

"ರಾಜಕೀಯ ಉತ್ಥಾನಕ್ಕೆ ಸಾಧನವೆಂಬ ದೃಷ್ಟಿಯಿಂದ ಸಾಹಿತ್ಯದ ಕಡೆಗೆ ನೋಡುವವರಲ್ಲಿ ನಾನೂ ಒಬ್ಬನಾದುದರಿಂದ ಸಾಹಿತ್ಯವೆಂದ ಕೂಡಲೇ ಗಾಂಧೀಜಿಯವರು ಗುಜರಾತ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದ ಒಂದು ಮಾತು ನೆನಪಾಗುತ್ತದೆ." ನೀರು ಸೇದುವವನಿಗೆ, ಬಂಡಿ ನಡೆಸುವವರಿಗೆ, ಮೈಬೆವರನ್ನು ಸುರಿಸುತ್ತಿರುವವರಿಗೆ, ಉಪಯುಕ್ತವಾಗುವಂತಹ ಹಾಡುಗಳನ್ನು ಯಾವನು ರಚಿಸುವನೋ ಅವನೇ ನಿಜವಾದ ವಿಜಯಶಾಲಿಯಾದ ಲೇಖಕನು "ಕರ್ನಾಟಕದೊಳಗಿನ ಹಿರಿಯ ಸಾಹಿತಿಗಳೆನಿಸಿಕೊಳ್ಳುವವರು ಸಾಹಿತ್ಯದ ಇಂಥ ಒರಟು ವ್ಯಾಖ್ಯೆಯನ್ನು ಕೇಳಿ ಅಪಹಾಸ್ಯಪಡಬಹುದು. ಮಯೂರ ಸಿಂಹಾಸನದಿಂದ ಎಳೆದು ತಂದು ಶಾರದೆಯನ್ನು ಮಣ್ಣಿನಲ್ಲಿ ಕೆಡವಿದ್ದಾನೆ ಗಾಂಧೀಜಿ ಎಂತಲೂ ಮರುಗಬಹುದು" ಎನ್ನುತ್ತಾರೆ. ಅಂತೆಯೇ ಸಾಹಿತ್ಯ ಜನಸಾಮಾನ್ಯರಿಗಾಗಿ ಇರಬೇಕೆಂದು ಅಭಿಪ್ರಾಯ ಪಟ್ಟ ಸಾಹಿತಿ ಮಾಂಜರೇಕರ ಅವರ ಅಭಿಪ್ರಾಯವನ್ನೂ ದಾಖಲಿಸುತ್ತಾರೆ.

ಸಾಹಿತ್ಯಕ್ಕೂ ಸಮಾಜಕ್ಕೂ ಏನು ಸಂಬಂಧ ಎನ್ನುವ ಚರ್ಚೆ ಬಹು ಹಿಂದಿನಿಂದಲೂ ಶುರುವಾಗಿ ಇಂದಿಗೂ ಮುಂದುವರಿಯುತ್ತಲೇ ಇದೆ. ಆ ಕುರಿತು ನಿರಂಜನ ತಮ್ಮ 'ಸಾಹಿತಿ ಮತ್ತು ಸಮಾಜ' ಎಂಬ ಲೇಖನದಲ್ಲಿ ವಿವರಿಸುತ್ತಾರೆ.

"ಕೆಲವರು ತಾವು ಆತ್ಮಾನಂದಕ್ಕಾಗಿ ಬರೆಯುತ್ತಿದ್ದೇವೆ ಎನ್ನುವುದುಂಟು. ಆದರೆ ಹಾಗೆ ಬರೆದವರು ಹಸ್ತಪ್ರತಿಯನ್ನು ಉಪ್ಪಿನಕಾಯಿ ಭರಣಿಯಲ್ಲಿಡುವುದಿಲ್ಲ" ಎಂದು ವ್ಯಂಗ್ಯವಾಡುತ್ತಾ "ಮೇಧಾವಿಯಾದ ಸಾಹಿತಿ ತನ್ನ ಲೇಖನಿಯ ಸಾಮರ್ಥ್ಯದಿಂದ ಸಮಾಜವನ್ನು ನಿರ್ಮಿಸಬಲ್ಲನು. ಇಲ್ಲವೇ ನಿರ್ನಾಮ ಮಾಡಬಲ್ಲನು. ಇದು ಎಲ್ಲಾ ಸಾಹಿತಿಗಳಿಗೂ ಒಂದಲ್ಲಾ ಒಂದು ರೀತಿಯಲ್ಲಿ ಅನ್ವಯಿಸುವ ಮಾತು. ಒಳ್ಳೆಯ ಸಾಹಿತ್ಯ ಕೃತಿಯೊಂದು ಬಂದಾಗ ಸಮಾಜದಲ್ಲಿಯ ಒಳಿತನ ತೂಕ ಹೆಚ್ಚುವುದು. ಕೆಟ್ಟ ಕೃತಿ ಬಂದಾಗ ಕೆಡುಕಿನ ತೂಕ ಹೆಚ್ಚುವುದು" ಎನ್ನುತ್ತಾರೆ. ಈ ಮಾತಿಗೆ ಅಡ್ಡಮಾತು ಇರಬಹುದಾದರೂ ಸಾಹಿತ್ಯ ಕೃತಿಯಿಂದ ಒಳ್ಳೆಯ ಆಶಯವನ್ನು ಬಯಸುವುದು ಮೊದಲಿನಿಂದಲೂ ನಡೆದು ಬಂದ ಪರಂಪರೆ. ಇದಕ್ಕೆ ಪ್ರಗತಿಶೀಲ ಹೊರತಾಗಿರಲಿಲ್ಲ ಎಂಬುದು ಇಲ್ಲಿಯ ಅಂಶ.

'ರೊಮ್ಯಾಂಟಿಕ್ ಕಾವ್ಯ, ನವ್ಯಕಾವ್ಯ, ಜನಕಾವ್ಯ' (೧೯೧೩) ಎಂಬ ಬರಹದಲ್ಲಿ ನಿರಂಜನ ನವ್ಯಕಾವ್ಯದ ಕೇಂದ್ರ ಕವಿಗಳಾದ ಎಂ. ಗೋಪಾಲಕೃಷ್ಣ ಅಡಿಗ, ರಾಮಚಂದ್ರ ಶರ್ಮರಿಗೆ ಮುಖಾಮುಖಿಯಾಗುತ್ತಾರೆ.

''ಆನಂದಕ್ಕಿಂತ ಹೆಚ್ಚಾಗಿ ಸತ್ಯದ ಅನ್ವೇಷಣವೇ, ಅದರ ಅವಿಷ್ಕಾರವೇ ನವ್ಯ ಕವಿತೆಯ ಗುರಿ. ಪಕ್ಷಾತೀತವಾಗದ ಮನಸ್ಸು ಅಂಥ ಸತ್ಯವನ್ನು ಹುಡುಕಲಾರದು. ಇದು ಅಡಿಗರ ಖಂಡಿತ ಅಭಿಪ್ರಾಯ. ಕವಿ ಯಾವುದೇ ರಾಜಕೀಯ ಪಕ್ಷವನ್ನು ಸೇರದೇ ಇರಬಹುದು. ಆದರೆ ಆತ ಅನ್ವೇಷಣೆ ಮಾಡುವ ಸತ್ಯ - ನ್ಯಾಯದ ಪಕ್ಷವೊಂದಿದೆ. ಕವಿ ಅದನ್ನು ಅನಿವಾರ್ಯವಾಗಿ ಕಾಣುತ್ತಾನೆ. ಆಗ ಸತ್ಯದ ನ್ಯಾಯದ ಪರವಾಗಿ ಅಸತ್ಯವನ್ನೂ ಅನ್ಯಾಯವನ್ನೂ ಇದಿರಿಸಿ ಆತನ ಕವಿವಾಣಿ ಹರಿಯಲೇ ಬೇಕಾಗುತ್ತದೆ. ಆಗ ಆತ ಪಕ್ಷಾತೀತವಾಗುವುದಿಲ್ಲ. ಪಕ್ಷಪಾತಿಯಾಗುತ್ತಾನೆ.'' ಎಂದು ನಿರಂಜನರೆನ್ನುತ್ತಾರೆ.

ಈ ವಾದಗಳು ಮೇಲುನೋಟಕ್ಕೆ ಎರಡೂ ಸರಿ ಎನ್ನಿಸುತ್ತದೆ. ಆದರೆ ಆ ಎರಡರ ಹಿಂದೆಯೂ ಆಯಾ ಕಾವ್ಯ ಪಂಥದ ತಾತ್ವಿಕತೆ ಇದ್ದೇ ಇದೆ. ಏನೂ ಹೇಳದ ಕೃತಿಯೊಂದು ಇರುವುದೇ ಇಲ್ಲ. ಆದ್ದರಿಂದ ಅದನ್ನು ಆಯಾ ಕೃತಿಗಳ ಹಿನ್ನೆಲೆಯಲ್ಲಿ ಮತ್ತು ವಿಶಿಷ್ಟವಾದ ಮನೋಭಾವದ ಹಿನ್ನೆಲೆಯಲ್ಲೇ ನೋಡಬೇಕಾಗುತ್ತದೆ. ಅದೇನೇ ಇದ್ದರೂ ನಿರಂಜನ 'ನವ್ಯ'ವನ್ನು ಎದುರಿಸಿದ ಬೀಸು ಬಿರುಸನ್ನು ಇದು ತಿಳಿಸುತ್ತದೆ.

'ಪ್ರಗತಿಶೀಲತೆಯ ಹುಟ್ಟು' ಪ್ರಗತಿಶೀಲದ ಅಭ್ಯಾಸಗಳಿಗೆ ಒಂದು ಮಹತ್ವದ ದಾಖಲೆ. ಪ್ರಗತಿಶೀಲತೆಯ ಹುಟ್ಟು ಯುರೋಪಿನಲ್ಲಿ ೧೯೩೦ರ ದಶಕದ ಆರ್ಥಿಕ ಬಿಕ್ಕಟ್ಟಿನ ಸಮಯದ ಒತ್ತಡದಿಂದಾಯಿತು ಎನ್ನುತ್ತಾರೆ. ಸಜ್ಜದ ಜಹೀರ್, ಮುಲ್ಕಾರಾಜ ಆನಂದ ಇದರ ರೂವಾರಿಗಳಾದರು. ಅನಂತರ ಭಾರತದಲ್ಲಿ ಪ್ರಗತಿಶೀಲರ ಮೊದಲ ಸಮ್ಮೇಳನದ ಅಧ್ಯಕ್ಷರು ಪ್ರೇಮಚಂದ. ಎರಡನೆಯ ಸಮ್ಮೇಳನದ ಅಧ್ಯಕ್ಷರು ರವೀಂದ್ರನಾಥ ಟಾಗೋರ್. ಮುಂದೆ ಇದು ಕರ್ನಾಟಕದಲ್ಲಿ ೧೯೪೩ ರಲ್ಲಿ ಅಸ್ತಿತ್ವದಲ್ಲಿ ಬಂತು.

ಇಲ್ಲಿಯ ಒಂದು ಮಹತ್ವದ ಲೇಖನ ಬ್ಯೆಲಿನ್‌ಸ್ಕಿಯ ಕಾವ್ಯ ಮೀಮಾಂಸೆ. ಬ್ಯೆಲಿನ್‌ಸ್ಕಿ ೧೮೪೮ರಲ್ಲಿ ಸಾಯುತ್ತಾನೆ. ಆತ ಚಿಕ್ಕ ವಯಸ್ಸಿನಲ್ಲೇ ಸಾಯುತ್ತಾನೆ. ಆದರೆ ಆ ಅವಧಿಯಲ್ಲೇ ಆತ ರಷ್ಯನ್ ಸಾಹಿತ್ಯದ ವಿಮರ್ಶೆ ಮತ್ತು ಮೀಮಾಂಸೆ ಕ್ಷೇತ್ರದಲ್ಲಿ ಬಿರುಗಾಳಿ ಬೀಸಿದ. ''ಪ್ರಭಾವಶಾಲಿಯಾದ ಆ ಲೇಖನಿಯ ಎದುರು ಸಾಹಿತ್ಯ ಕ್ಷೇತ್ರದ ಹಾರ ತುರಾಯಿಗಳು ಮಾತ್ರವಲ್ಲ, ಆಳುತ್ತಿದ್ದ ನಿರಂಕುಶಶಾಹಿಯೂ ನಡುಗಿತು'' ಎನ್ನುತ್ತಾರೆ ನಿರಂಜನ. ಸರಕಾರದ ಗೂಢಾಚಾರರು ಆತನ ಬೆನ್ನು ಹತ್ತಿದರು. ಕಿರುಕುಳ ಕೊಟ್ಟರು. ಆತ ಬದುಕಿದ್ದರೆ ದುರ್ಗದಲ್ಲಿ ಕೊಳೆ ಹಾಕುತ್ತಿದ್ದೆವು ಎಂದು ಗುಪ್ತ ಪೋಲೀಸು ದಳದ ಮುಖ್ಯಸ್ಥ ಆಕ್ರೋಶ ಮಾಡಿದನಂತೆ. ಆತನ

ಗೊಗೋಲನಿಗೆ ಪತ್ರ ಎಂಬ ಕೃತಿಯಂತೂ ಆತ ಸತ್ತು ಐವತ್ತು ವರ್ಷಗಳವರೆಗೂ ಪ್ರಕಟಗೊಳ್ಳಲು ಸಾಧ್ಯವಾಗಲಿಲ್ಲ.

ಆತ ಪ್ರತಿಪಾದಿಸಿದ ಕಾವ್ಯದ ಮುಖ್ಯತತ್ವ ಮೂರು. ಒಂದು ವಾಸ್ತವತೆ; ಎರಡು ಕಲಾತ್ಮಕ ಪರಿಪೂರ್ಣತೆ ಮತ್ತು ಮೂರು ಆಂತರಿಕವಾದ ಕ್ರಿಯಾತ್ಮಕ ಅಂಶ.

''ಕಾವ್ಯವೆಂದರೇನು? ಸಾಧ್ಯತೆಯ ರೂಪದಲ್ಲಿ ವಾಸ್ತವತೆಯ ಸೃಷ್ಟಾತ್ಮಕ ಪ್ರತ್ಯುತ್ಪಾದನೆಯೇ ಕಾವ್ಯ. ಕಲಾವಿದ ತನ್ನ ಕೃತಿಯಲ್ಲಿ ವಾಸ್ತವತೆಯನ್ನು ಮೂಡಿಸಿದಾಗ ತಾನು ಕಂಡುಕೊಂಡದ್ದಕ್ಕೊಂದು ಅರ್ಥ ಕೊಡಬೇಕು. ಸಮಾಜದ ಪ್ರಗತಿಕ ಶಕ್ತಿಗಳ ನೆಲೆಯಲ್ಲಿ ನಿಂತು ಆತ, ತಾನು ಚಿತ್ರಿಸುವ ವಾಸ್ತವತೆಯನ್ನು ಕುರಿತು ತೀರ್ಪನ್ನೀಯಬೇಕು. ಆತ ಬದುಕಿಗಾಗಿ ಕಲೆ ಎಂದು ಪ್ರತಿಪಾದಿಸಿದ. ''ಕಲೆಯೂ, ವಿಜ್ಞಾನವೂ ಒಂದೇ ಅಲ್ಲ ಎಂಬುದನ್ನು ಜನರು ಬಲ್ಲರು. ಆದರೆ ತಿರುಳಿಗೆ ಸಂಬಂಧಿಸಿ ವ್ಯತ್ಯಾಸವಲ್ಲ. ವ್ಯತ್ಯಾಸವಿರುವುದು ವಸ್ತುವನ್ನು ವಿವರಿಸುವ ವಿಧಾನದಲ್ಲಿ ಮಾತ್ರ'' ಮುಂತಾಗಿ ಹೇಳುತ್ತಾನೆ. ''ಪ್ರಗತಿಶೀಲ''ರಾದ ನಿರಂಜನರರಿಗೆ ಬ್ಯೆಲಿನ್ಸ್ಕಿ ಪ್ರಿಯವಾಗಿರುವುದು ಸಹಜವೇ ಇದೆ. ಹಾಗೆಯೇ ರಷ್ಯನ್ ಸಾಹಿತ್ಯದ ಮೇಲಷ್ಟೇ ಅಲ್ಲ, ಜಾಗತಿಕವಾಗಿ ಸಾಹಿತ್ಯದ ಮೇಲೆ ಆತನ ಪ್ರಭಾವವಿದೆ. ವಾಸ್ತವತಾವಾದವನ್ನೇ ನೆಚ್ಚಿಕೊಳ್ಳದವರು ಸಹ ಆತನ ಕಲಾತತ್ವವನ್ನು ಕಡೆಗಣಿಸುವಂತಿಲ್ಲ.

'ಪ್ರಗತಿ ಪಂಥದ ಘೋಷಣೆ'' ಮತ್ತು 'ಕರ್ನಾಟಕ ಪ್ರಗತಿಪಥ ಸ್ಥಾಪನಾ ಸಮ್ಮೇಳನದ ಅಧ್ಯಕ್ಷ ಭಾಷಣ' ಎಂಬೆರಡು ಮಹತ್ವದ ಲೇಖನ. ೧೯೭೬ ರಲ್ಲಿ ಪ್ರಗತಿ ಪಂಥದ ಸಮ್ಮೇಳನ ದಾವಣಗೆರೆಯಲ್ಲಿ ನಡೆಯಿತು. ಇದು ಪ್ರಗತಿಶೀಲದ ಪುನರುತ್ಥಾನ ಎಂದು ನಿರಂಜನ ಅನ್ನುತ್ತಾರೆ. ಒಟ್ಟಂದದಲ್ಲಿ ಪ್ರಗತಿಶೀಲ ಸಾಹಿತ್ಯಕ ತತ್ವ ಮತ್ತು ಮೀಮಾಂಸೆಯೇ ಇಲ್ಲಿದೆ.

''ಸಮಾಜವಾದದ ಗುರಿಯನ್ನು ಬರಿಯ ಘೋಷಣೆ ಭಾಷಣಗಳಿಂದ ಸಾಧಿಸುವುದು ಶಕ್ಯವಿದ್ದಿದ್ದರೆ, ಭಾರತ ಈ ಹೊತ್ತಿಗೆ ಭೂಮಿಯ ಮೇಲಿನ ಸ್ವರ್ಗವಾಗುತ್ತಿತ್ತು. ಪಟ್ಟಭದ್ರರು ಸಮಾಜದ ಮೇಲಿನ ತಮ್ಮ ಹಿಡಿತವನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡುವುದುಂಟೆ? ವರ್ಗ ಸಮರ ತೀವ್ರವಾಗದೆ ಈ ಪ್ರಶ್ನೆ ಬಗೆಹರಿಯುವುದಿಲ್ಲ. ನಮ್ಮ ಶಿಬಿರ ದುರ್ಬಲವಾಗುತ್ತಿದೆ ಎನ್ನಿಸಿದಾಗ ಉಳ್ಳವರು ಪ್ರಜಾಪ್ರಭುತ್ವದ ನಾಟಕವನ್ನು ಮುಕ್ತಾಯಗೊಳಿಸಿ, ಸರ್ವಾಧಿಕಾರದ ರುದ್ರ ನೃತ್ಯಕ್ಕೆ ಅಣಿಯಾಗುತ್ತಾರೆ. ಧರ್ಮಾಂಧರು, ಸಮಾಜದ ಯಥಾಸ್ಥಿತಿಯನ್ನು ಬಯಸುವ ಕೆಲ ಬುದ್ಧಿ ಜೀವಿಗಳು ಇವರೆಲ್ಲ ಆ ಶಕ್ತಿಯ ಸುತ್ತ ನೆರೆಯುತ್ತಾರೆ; ಶ್ರಮ ಜೀವಿಗಳ ಮೇಲೆ ಯುದ್ಧ ಸಾರುತ್ತಾರೆ'' ಎನ್ನುತ್ತಾರೆ. ಅಂಥ ಸಂದರ್ಭದಲ್ಲಿ ಸಾಹಿತಿ ಯಾರ ಪಕ್ಷ

ವಹಿಸುತ್ತಾನೆ? ಎಂದವರು ಕೇಳುತ್ತಾರೆ. ಕ್ರಾಂತಿಗೆ ಸಾಹಿತ್ಯ ಸಹಯೋಗ ಹೊಂದಬೇಕೆಂಬ ನಿರಂಜನರ ನಿಲುವಿನಲ್ಲಿ ಬದಲಿಲ್ಲ.

'ಸಾಹಿತ್ಯ ಮತ್ತು ಇತಿಹಾಸ ಪ್ರಜ್ಞೆ' ಎಂಬ ಬರಹದಲ್ಲಿ ''ಇತಿಹಾಸವೆನ್ನುವುದು ರಾಜ, ರಾಣಿಯರ ಕಥೆ ಎಂಬ ಸಾಮಾನ್ಯ ಕಲ್ಪನೆಯೊಂದುಂಟು ಅದು ಸರಿಯಲ್ಲ... ಮಾನವ ಸಮಾಜದ ಬೆಳವಣಿಗೆಯ ಅಧ್ಯಯನವೇ ಚರಿತ್ರೆಯ ಮಹಾ ಸಂಬಂಧಗಳನ್ನು ಅರ್ಥ ಮಾಡಿಕೊಳ್ಳಲು ಬುನಾದಿ. ಒಂದು ಸಾಮಾಜಿಕ ವ್ಯವಸ್ಥೆ ಇನ್ನೊಂದು ಸಾಮಾಜಿಕ ವ್ಯವಸ್ಥೆಗೆ ಹಾದಿ ಮಾಡಿಕೊಟ್ಟ ಸೂತ್ರವೇ ಲೋಕದ ವಿವಿಧ ರಾಷ್ಟ್ರಗಳ ಇತಿಹಾಸಗಳನ್ನು ಕ್ರಮಬದ್ಧವಾಗಿ ಕೋದಿರುವ ದಾರ'' ಎನ್ನುತ್ತಾರೆ. ಇತಿಹಾಸದ ಕುರಿತು ಮಾರ್ಕ್ಸ್‌ವಾದಿ ನಿಲುವನ್ನು ನಿರಂಜನ ಅನುಮೋದಿಸುತ್ತಾರೆ.

ಈ ಪುಸ್ತಕದ ಕೊನೆಯಲ್ಲಿ ಇಂಗ್ಲೀಷ್‌ನಲ್ಲಿ Man, the pivot, Humanism, the creed ಎಂಬ ಲೇಖನವಿದೆ. ಇದು ನಿರಂಜನರು ತಮ್ಮ ಬದುಕಿನ ಕುರಿತು ಹಿನ್ನೋಟದಲ್ಲಿ ಬರೆದುಕೊಂಡ ಬರಹ. ಅವರನ್ನು ಅರಿಯಲು ಈ ಲೇಖನ ತುಂಬ ಸಹಾಯಕವಾಗಿದೆ.

ಪುಸ್ತಕದಲ್ಲಿ ಇನ್ನಿತರ ಬರಹಗಳಿದ್ದರೂ ಅವು ಮತ್ತೆ ಮತ್ತೆ ಪ್ರತಿಪಾದಿಸುವುದು ಈ ಮೇಲಿನ ಒಲವು ನಿಲುವುಗಳನ್ನೇ.

## ಮುಖತಃ

'ಮುಖತಃ' ನಿರಂಜನರ ಸಂದರ್ಶನದಲ್ಲಿಯ ಸಂಗ್ರಹ, ಇವು ೧೯೭೬ ರಿಂದ ೮೧ರ ವರೆಗಿನ ಸಂದರ್ಶನಗಳಾಗಿವೆ. ಅವರ ವೈಚಾರಿಕತೆ, ಬದ್ಧತೆ ಮತ್ತು ಪ್ರಗತಿಶೀಲತೆಯನ್ನರಿಯಲು ಇದು ಸಹಾಯಕವಾಗಿದೆ. ಅಲ್ಲದೆ ಸಂದರ್ಶನ ಕೇವಲ ಪ್ರಶ್ನೋತ್ತರವಾಗಿರದೆ ಸಂದರ್ಶಕರ ವಿಚಾರಲಹರಿ ಕೂಡ ಇಲ್ಲಿ ವ್ಯಕ್ತವಾಗುತ್ತದೆ.

ಮೊದಲ ಸಂದರ್ಶನ ಖ್ಯಾತ ವಿಮರ್ಶಕ ಡಿ.ಆರ್. ನಾಗರಾಜ ೧೯೭೬ ರಲ್ಲಿ ಮಾಡಿದ್ದು. ಅದು ನಿರಂಜನ 'ಪ್ರಗತಿಪಂಥ'ದ ತಯಾರಿಯಲ್ಲಿದ್ದ ಸಮಯ. ಇಲ್ಲಿ 'ಒಕ್ಕೂಟ'ದ ಬಗ್ಗೆ ಮಾರ್ಮಿಕವಾಗಿ ಪ್ರಶ್ನೆ ಕೇಳುತ್ತಾರೆ. ಮಾರ್ಕ್ಸ್‌ವಾದಿ ಬದ್ಧತೆಯಿರುವ ನಿರಂಜನ 'ಒಕ್ಕೂಟ'ದ ಬಗ್ಗೆ ಅದು ಸುಲಿಯುವವರ ಮುಖವಾಣಿ ಎಂದೇ ಗ್ರಹಿಸುತ್ತಾರೆನ್ನುತ್ತಾರೆ. ಡಿ.ಆರ್.ಎನ್. ಒಕ್ಕೂಟದಲ್ಲಿರುವ ತೇಜಸ್ವಿ, ಲಂಕೇಶ ಮತ್ತು ಚಂಪಾ ಅವರ ಬಗ್ಗೆಯೂ ಇದೇ ನಿಲುವೇ? ಎಂದು ಕೇಳುತ್ತಾರೆ. ಅದಕ್ಕೆ ನಿರಂಜನರ ಉತ್ತರ ಖಚಿತ. ಅದರಿಂದ ದೇವನೂರು ಮಹಾದೇವ ಒಂದು ಹೊರತು.

ಇದು ವೈಚಾರಿಕ ತಾಕಲಾಟ. ಮಾರ್ಕ್ಸ್‌ವಾದಿ ನಿಲುವಿನ ವರ್ಗ ಸಂಘರ್ಷದಲ್ಲಿ ಬದ್ಧತೆ ಇರುವ ನಿರಂಜನ ಒಕ್ಕೂಟದ ಗೆಳೆಯರ ಲೋಹಿಯವಾದಿ ನಿಲುವಿನ ವರ್ಣ-ಜಾತಿ ಸಂಘರ್ಷವನ್ನು ಒಪ್ಪುವುದಿಲ್ಲ. ಜಾತಿಯ ಶ್ರೇಣಿಕೃತ ಭಾರತೀಯ ಸಂದರ್ಭದಲ್ಲಿ ಲೋಹಿಯವಾದ ಪ್ರಸ್ತುತ ಎಂಬುದು ಒಕ್ಕೂಟದ ನಿಲುವು. ವರ್ಣ-ಜಾತಿಯೆಲ್ಲ ಮೇಲ್ ರಚನೆಗೆ ಸೇರಿದ್ದು. ಅದರಿಂದ ಸಮಾಜ ಪುನರ್ ಘಟನೆ ಆಗುವುದಿಲ್ಲ ಎಂಬುದು ನಿರಂಜನರ ನಿಲುವು. ಜಾತಿಯೆಂದರೆ ಬಾಗಿಲು ಮುಚ್ಚಿದ ವರ್ಗ, ಎಂಬುದು ಅಂಬೇಡ್ಕರರ ನಿಲುವು. ಈ ಬಾಗಿಲನ್ನು ತೆರೆಸುವುದು ಹೇಗೆ. ಎಂಬುದು ಪ್ರಸ್ತುತ ಸಮಸ್ಯೆ ಎಂದೆನಿಸುತ್ತದೆ.

ಕಮ್ಯುನಿಸ್ಟ ರಾಷ್ಟ್ರಗಳಲ್ಲಿ ಲೇಖಕರಿಗೆ ಮುಕ್ತ ಸ್ವಾತಂತ್ರ್ಯ ಇಲ್ಲ ಎನ್ನುವುದನ್ನು ಪ್ರಸ್ತಾಪಿಸಿದ ನಿರಂಜನರ ಎರಡು ಬರಹಗಳನ್ನು ನೆನಪಿಗೆ ತಂದು ಈಗಲೂ ನಿಮ್ಮ ಕಮ್ಯುನಿಸ್ಟ ನಿಲುವು ಇದೆಯೇ ಎಂದು ಕೇಳುತ್ತಾರೆ. ಆದರೆ ''ಸೃಜನಶೀಲ ಸ್ವಾತಂತ್ರ್ಯದ ಬಗ್ಗೆ ನಿರಂಜನರ ವಿಚಾರಗಳಿಗೆ ನನ್ನ ಸ್ಪಷ್ಟ ವಿರೋಧವಿದೆ'' ಎಂದು ಹೇಳುವ ನಾಗರಾಜ ''ಜಾತಿ ವರ್ಗಗಳಿರುವ ಸಮಾಜದಲ್ಲಿ ಸೃಜನಶೀಲ ಪ್ರಜ್ಞೆಗೆ ಸ್ವಾತಂತ್ರ್ಯ ಕೇವಲ ಕನಸು'' ಎಂದು ಅಭಿಪ್ರಾಯಪಡುತ್ತಾರೆ. ಇದು ಇಂದಿಗೂ ಪ್ರಸ್ತುತವಾಗೇ ನಮ್ಮನ್ನೆಲ್ಲ ಕಾಡುವ ಸಮಸ್ಯೆಯೇ ಆಗಿದೆ.

ಅದೇನೇ ಇದ್ದರೂ ನಿರಂಜನ ಅಂದ ಮಾತ್ರಕ್ಕೆ ''ನಾನು ಕಮ್ಯೂನಿಸ್ಟ ವಿರೋಧಿ ಅಲ್ಲ. ಜಗತ್ತನ್ನು ಅರ್ಥ ಮಾಡಿಕೊಳ್ಳಲು ಮಾರ್ಕ್ಸ್‌ವಾದದ ಕೊಡುಗೆ ಅಪಾರವಾದದ್ದು. ಆದರೆ Thus for no further ಎನ್ನುವ ಧೋರಣೆಯನ್ನು ನಾನು ಒಪ್ಪುವುದಿಲ್ಲ'' ಎನ್ನುತ್ತಾರೆ. ಇದು ಸ್ವಾಗತಾರ್ಹವಾದ ನಿಲುವು ಕೂಡ.

ಬಂಡಾಯ ಸಾಹಿತ್ಯ ಸಂಘಟನೆಯ ಮುಂಚೂಣಿಗಳಲ್ಲಿ ಒಬ್ಬರಾದ ಬರಗೂರು ರಾಮಚಂದ್ರಪ್ಪನವರು ಬಂಡಾಯ ಸಾಹಿತ್ಯ ಸಂಘಟನೆಯ ಹಿನ್ನೆಲೆಯಲ್ಲಿ ಸಂದರ್ಶನ ನಡೆಸುತ್ತಾರೆ. ಸಾಹಿತಿಯಾದವನು ರಾಜಕೀಯ ಪಕ್ಷದ ಸದಸ್ಯನಾದರೂ ಚಿಂತೆಯಿಲ್ಲ. ಆದರೆ ಬಲು ಎಚ್ಚರದಿಂದಿರಬೇಕು ಎಂಬುದು ನಿರಂಜನರ ಅಭಿಪ್ರಾಯ. ಹಾಗೆ ಇಲ್ಲದಿದ್ದರೂ ಜನಪರ ಚಳವಳಿಯಲ್ಲಿರಬೇಕು ಎಂಬುದು ಅವರ ನಿಲುವು.

ಕಮಿಟ್‌ಮೆಂಟ್ (ಸಾಹಿತಿಯ ಬದ್ಧತೆ) ಬಗ್ಗೆ ಬರಗೂರು ಪ್ರಶ್ನಿಸುತ್ತಾರೆ. ''ನಾನು ಹೇಳೋ ಬದುಕಿನಲ್ಲಿ ದೀನದಲಿತರ ಹೋರಾಟ ಇದೆ. ಜಾತಿ ಕಲಹ ಇದೆ. ವರ್ಗ ಹೋರಾಟ ಇದೆ. ಸಮಗ್ರ ಬದುಕಿನ ನೋವು ನಲಿವು ಇದೆ. ಇದೆಲ್ಲವನ್ನು ಒಳಗೊಂಡ ಬದುಕಿಗೆ ನನ್ನ ಕಮಿಟ್‌ಮೆಂಟ್'' ಎನ್ನುತ್ತಾರೆ. ಹಾಗೆ ಸಮಾಜಕ್ಕೆ ಲೇಖಕರಾದವರ ಹೊಣೆಗಾರಿಕೆಯ ಕುರಿತು ಕೇಳಿದಾಗ ಸಮಾಜದಲ್ಲಿ ಯಾರು ಇಲ್ಲದವರೋ, ಯಾರು

ಕಷ್ಟಪಡುತ್ತಾರೋ, ಯಾರು ಹೋರಾಡುತ್ತಾರೋ ಅಂಥವರ ಪರವಾಗಿ ಒಳ್ಳೆಯ ಬದುಕಿಗೆ ಹೋರಾಡುವವರ ಪರವಾಗಿ ನಿಲ್ಲಬೇಕಾಗುತ್ತೆ ಅನ್ನುತ್ತಾರೆ.

ಎನ್. ಗಾಯತ್ರಿಯವರು ನಿರಂಜನರ ಸ್ತ್ರೀವಾದಿ ನಿಲುವನ್ನು ಕೇಂದ್ರೀಕರಿಸಿಕೊಂಡೇ ಸಂದರ್ಶಿಸುತ್ತಾರೆ.

ನಿರಂಜನರ ಸ್ತ್ರೀ ಸಮಾನ ಅಥವಾ ಪ್ರಧಾನ ದೃಷ್ಟಿಯನ್ನು ಮುನ್ನೆಲೆಗೆ ತರುತ್ತಲೇ ಅವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳಿಗೆ ಹೆಚ್ಚಾಗಿ ಗಂಡಸರೇ ಪ್ರೇರಕ ಶಕ್ತಿಯಾಗಿ ಬರುತ್ತಾರೆ; 'ಸ್ತ್ರೀ ವಿಮೋಚನೆ ಗಂಡನಿಂದ ಮಾತ್ರವೇ?' ಎಂದು ಕೇಳುತ್ತಾರೆ.

''ಪುರುಷರಿಂದ ಮಾತ್ರ ನಾನು ತಿಳಿದಿದ್ದಲ್ಲ. ಆದರೆ ಪುರುಷರ ನೆರವೂ ಅಗತ್ಯ ಎನ್ನುತ್ತಾರೆ.''

ಸುಧಾ ಪ್ರಶ್ನಾವಳಿಯೊಂದರ ಪ್ರಶ್ನೆ ಹೀಗಿದೆ. ''ಮಾರ್ಕ್ಸ್‌ವಾದ ಜಾತಿ ವ್ಯವಸ್ಥೆಯಿರುವ ಭಾರತಕ್ಕೆ ಅನ್ವಯಿಸುವುದಿಲ್ಲ ಎಂದು ಕೆಲವರ ಅಭಿಪ್ರಾಯವಿದೆ. ಏನನ್ನುವಿರಿ? ನಿರಂಜನ, ಈ ವಾದ ಸರಿಯಿಲ್ಲ. ಜಾತಿ ವ್ಯವಸ್ಥೆ ಭಾರತಕ್ಕಷ್ಟೇ ಮೀಸಲು ಎಂಬುದು ತಪ್ಪು, ಇದು ಒಂದಲ್ಲ ಒಂದು ರೀತಿಯಿಂದ ಎಲ್ಲ ದೇಶಗಳಲ್ಲೂ ಇದೆ. ಈ ದೇಶದಲ್ಲಿ ಮಾರ್ಪಾಟಾಗುವ ವಿಧಾನವನ್ನು ನಾವು ಗಮನಿಸಬೇಕು. ಜಾತಿಯೂ ವರ್ಗವೂ ಒಂದೇ ಆಗಿರುವ ಉದಾಹರಣೆ ಭಾರತದಲ್ಲಿ ಸಿಗುತ್ತದೆ. ಬಂಡವಾಳ ಬೆಳೆದಂತೆ ಔದ್ಯೋಗೀಕರಣ ಹೆಚ್ಚಿದಂತೆ ಜಾತಿ ಜನರ ಖಾಸಗಿ ವಿಚಾರವಾಗಿ ವರ್ಗವಿಚಾರ ಮೊನೆ ಪಡೀತದೆ.''

ಈ ಪ್ರಶ್ನೋತ್ತರ ನಡೆದದ್ದು ೧೯೮೩ ರಲ್ಲಿ ಇಂದಿಗೂ ಈ ಜಾತಿ ಮತ್ತು ವರ್ಗದ ಕುರಿತಾದ ಜಿಜ್ಞಾಸೆ ನಡೆಯುತ್ತಲೇ ಇದೆ. ಇಲ್ಲಿಯ ಸನ್ನಿವೇಶವೇ ಅಂತಹದಾಗಿದೆಯೆಂದು ತೋರುತ್ತದೆ.

ಕುಳಕುಂದ ಶಿವರಾಯ ಮತ್ತು ನಿರಂಜನ ಒಂದೇ ವ್ಯಕ್ತಿಯ ಎರಡು ಬಿಂಬಗಳ ಮಧ್ಯೆಯ ಒಂದು ಸಂಭಾಷಣೆ ಕೂಡ ಇಲ್ಲಿ ಇದೆ. ಇದಲ್ಲದೆ ಬಾಸಾಮಗ, ಶಿವಪ್ಪನಾಯಕ, ಯು.ಎನ್. ಶ್ರೀನಿವಾಸಭಟ್ಟ, ವಸಂತ ಕುಮಾರ ಪರ್ಲೆ, ಅವರ ಪ್ರಶ್ನೋತ್ತರಗಳಿವೆ. ಅವೆಲ್ಲ ನಿರಂಜನರ ತಾತ್ವಿಕ ಹಿನ್ನೆಲೆ ಮತ್ತು ವರ್ತಮಾನದ ಆಗುಹೋಗುಗಳಿಗೆ ಅವರ ಪ್ರತಿಕ್ರಿಯೆ ದಾಖಲೆಯಾಗಿದೆ.

## ಅಧ್ಯಾಯ ೬

# ನಾಟಕಗಳು

ನಿರಂಜನ ಕತೆಗಾರ ಕಾದಂಬರಿಕಾರರಾಗಿ ಪ್ರಸಿದ್ಧವಾದಂತೆ ನಾಟಕಕಾರರಾಗಿ ಆಗಲಿಲ್ಲವಾದರೂ ಅವರು ನಾಟಕ ಕ್ಷೇತ್ರದಲ್ಲೂ ದುಡಿದಿದ್ದಾರೆ.

ಅವರ ಒಟ್ಟೂ ನಾಟಕಗಳು (ರಂಗನಾಟಕ ಮತ್ತು ಬಾನುಲಿ ನಾಟಕ) ಹದಿನಾರು. ಅವುಗಳಲ್ಲಿ ನಾಲ್ಕು ಮಾತ್ರ ಪುಸ್ತಕವಾಗಿದೆ. ಅದು ರಂಗನಾಟಕ ಕೂಡ. ಉಳಿದ ಹನ್ನೆರಡರಲ್ಲಿ 'ನದಿಯ ಮಕ್ಕಳು', 'ಕಣ್ಣಿದ್ದವರಿಗೂ ನೀನೆ ಶಿವಾ' 'ಮಾತಾಯಿ ಮಡಿಲೋ' 'ಯಾತಾರ ಭಯವೋ' ಮತ್ತು 'ಕರ್ನಾಟಕ ಸ್ವಾತಂತ್ರ್ಯ ಚೇತನ'ವೆಂಬ ಬಾನುಲಿ ನಾಟಕಗಳು ಅವರ 'ಪ್ರತಿಧ್ವನಿ' (ವಾಚಿಕೆ) ಯಲ್ಲಿ ಅಚ್ಚಾಗಿವೆ.

ಪುಸ್ತಕ ರೂಪದಲ್ಲಿ ಬಂದುದು ನಾಲ್ಕು 'ನಾವೂ ಮನುಷ್ಯರು' 'ಸಂಗಮ ಸ್ನಾನ' 'ಆಹ್ವಾನ' ಮತ್ತು 'ಸಾಮ್ರಾಜ್ಞಿ'

ಇವುಗಳ ಹೊರತಾಗಿ 'ಕಲ್ಯಾಣ ಸ್ವಾಮಿ' 'ಪುರುಷೋತ್ತಮ' 'ಮಣ್ಣು ಮುಕ್ಕಾಯಿತು' 'ಕಾಡು ಊರಾಯಿತು' 'ಸೂತ್ರ ಕಿತ್ತ ಪಟ' 'ಕನ್ನಡ ಮಹಿಳೆಯರ ಜೀವನ ಪರಂಪರೆ' 'ಕಂಪಿಸಿತು ಕನ್ನಡ ನೆಲ' ಮತ್ತು 'ಪಾಪಾಸುಕಳ್ಳಿ' ಎಂಬ ಬಾನುಲಿ ನಾಟಕಗಳು ಅಸಂಗ್ರಹಿತವಾಗೇ ಇವೆ.

'ನದಿಯ ಮಕ್ಕಳು' ಗೀತಾತ್ಮಕವಾದುದು -

''ನದಿಯ ಮಕ್ಕಳು ನಾವು, ನದಿಯ ಮಕ್ಕಳು ನಾವು ಇಳೆಯ ಒಕ್ಕಾಲು'' ಎಂದು ಶುರುವಾಗುತ್ತದೆ. ನದಿ ಮನುಷ್ಯ ಸಂಸ್ಕೃತಿ, ಸಂಪತ್ತಿಗೆ ಒದಗಿಸಿದ ಸಹಾಯವನ್ನು ಇದು ಹೇಳುತ್ತದೆ. ಹೀಗೆ ಹೇಳುವಾಗ ಪಂಪ, ಜಯದೇವ, ಪು.ತಿ.ನ., ಬೇಂದ್ರೆ, ಗೋವಿಂದ ವೈದ್ಯ, ಡಿ.ವಿ.ಜಿ. ಮಲ್ಲೇಶಪ್ಪ, ಎಕ್ಕುಂಡಿ, ಕುವೆಂಪು ಅವರುಗಳ ಕಾವ್ಯ ಖಂಡವನ್ನು ಬಳಸಿಕೊಂಡಿದ್ದಾರೆ. ಹಿನ್ನೆಲೆಯಲ್ಲಿ ನಿರ್ವಾಹಕ ವಿವರಣೆ ನೀಡುತ್ತಾರೆ. ಸುಂದರವಾದ ರೂಪಕ.

''ಕಣ್ಣಿದ್ದವರಿಗೂ ನೀನೇ ಶಿವಾ''ದಲ್ಲಿ ಬೇಡಲು ಬಂದ ಓರ್ವ ಕುರುಡನನ್ನು ನೋಡಿ ಡಾಕ್ಟರರೊಬ್ಬರು ಪಶ್ಚಾತ್ತಾಪದಿಂದ ಆತನ ಎರಡೂ ಕಣ್ಣಿಗೆ ಶಸ್ತ್ರ ಚಿಕಿತ್ಸೆ

ಮಾಡುತ್ತಾರೆ. ಚಿಕಿತ್ಸೆ ಯಶಸ್ವಿಯಾಗುತ್ತದೆ. ಸಂತೋಷಗೊಂಡ ಕುರುಡ ಹೋಗುತ್ತಾನೆ. ಮತ್ತೆರಡು ತಿಂಗಳ ನಂತರ ಅದೇ ಕುರುಡ ತಿರುಗಿ ಬಂದು ಅದೇ ಡಾಕ್ಟರರಲ್ಲಿ ಒಮ್ಮೆಲೇ ಕಣ್ಣೀರುಗರೆಯುತ್ತಾನೆ. ಡಾಕ್ಟರು ವಿಷಯವೇನೆಂದು ಕೇಳಲು ಆತ ತಾನು ಕುರುಡ ಆಗಿದ್ದಾಗ ಬೇಡಿದರಾದರೂ ಭಿಕ್ಷೆ ಸಿಕ್ಕುತ್ತಿತ್ತು. ಈಗ ನನಗೆ ಎಲ್ಲೂ ಭಿಕ್ಷೆಯೂ ಸಿಕ್ಕುತ್ತಿಲ್ಲ, ಕೆಲಸವೂ ಸಿಕ್ಕುತ್ತಿಲ್ಲ. ಆದ್ದರಿಂದ ತನ್ನನ್ನು ಮತ್ತೆ ಮೊದಲಿನಂತೆ ಕುರುಡನನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತಾನೆ. ಡಾಕ್ಟರಿಗೆ ವಿಷಾದವಾಗುತ್ತದೆ. ''ನಾನು ಡಾಕ್ಟರ, ಮನುಷ್ಯನಿಗೆ ಕಣ್ಣು ಕೊಟ್ಟೇನು ಆದರೆ ಸಮಾಜದ ಕುರುಡಿಗೆ ಏನು ಚಿಕಿತ್ಸೆ ಮಾಡೇನು?'' ಎಂದು ನಿಟ್ಟುಸಿರು ಬಿಡುವಲ್ಲಿ ನಾಟಕ ಮುಗಿಯುತ್ತದೆ. ಸಂಭಾಷಣೆ ಕ್ರಿಯೆ ಎಲ್ಲದರಿಂದಾಗಿ ಪ್ರಭಾವಪೂರ್ಣವಾಗಿದೆ. 'ಮಾತಾಯಿ ಮಡಿಲೋ, ಯಾತಾರ ಭಯವೋ'ದಲ್ಲೆ ಆಕೆ ಮತ್ತು ಆತ ರಾತ್ರಿ ಜಲವಿಹಾರಕ್ಕೆ ಹೊರಡುತ್ತಾರೆ. ಹಿಂದೂ, ಮುಸ್ಲಿಂ, ಕ್ರಿಶ್ಚನ್, ಶೀಖ ಪಂಥದ ಸೇನಾಳುಗಳಿದ್ದಾರೆ. ದೋಣಿ ಸಾಗುತ್ತಿದ್ದಂತೆ ಬಿರುಗಾಳಿ ಬೀಸುತ್ತದೆ. ದೋಣಿ ಒಡೆದು ದಡ ಸೇರುತ್ತಾರೆ. ಅದೊಂದು ದ್ವೀಪ, ಅಲ್ಲಿ ಭಯಂಕರ ಮೊಸಳೆಗಳಿವೆ. ಅವು ಈ ಮನುಷ್ಯರ ಮೇಲೆ ದಾಳಿ ಮಾಡುತ್ತವೆ. ಆತನ ಕೈಲಿರುವ ಪಿಸ್ತೂಲ್, ಬಚನ್ ಕೈಲಿರುವ ಕೃಪಾಣದಿಂದ ಮೊಸಳೆಯನ್ನು ಕೊಲ್ಲುತ್ತಾರೆ. ನಂತರ ಒಬ್ಬರೊಬ್ಬರ ಸಹಾಯ ಸಹಕಾರದಿಂದ ಗಂಡಾಂತರ ದಾಟಿ ಸುರಕ್ಷಿತ ಸ್ಥಳ ಸೇರುತ್ತಾರೆ. ಮುಕ್ತಾಯದಲ್ಲಿ ಆತ ಹೇಳುತ್ತಾರೆ. ಸ್ವತಂತ್ರ್ಯ ವಾತಾವರಣದಲ್ಲಿ ಉಸಿರಾಡ್ತಾ ಎದೆ ಉಬ್ಬಿಸಿಕೊಂಡು ದಾರಿ ಸಾಗೋಣ.''

ಕರ್ನಾಟಕ ಸ್ವಾತಂತ್ರ್ಯ ಚೇತನ, ಕರ್ನಾಟಕದಲ್ಲಿಯ ದೇಶದ ಸ್ವಾತಂತ್ರ್ಯ ಸಂಗ್ರಾಮ ವಿಶೇಷತೆಯನ್ನು ಹೇಳುವ ಒಂದು ಕಥಾ ನಿರೂಪಣೆ. ಇದರಲ್ಲಿ ಹೈದರ್, ಟಿಪ್ಪೂ, ನಾನಾಫಡನವೀಸ್, ವೆಲ್ಲೆಸ್ಲಿ, ಗಾಯಕ, ಲಾವಣಿಕಾರ, ತಿಲಕ್, ಗಾಂಧೀಜಿ ಮತ್ತಿತರ ಧ್ವನಿಗಳು ಬರುತ್ತವೆ. ಇದು ಹೋರಾಟಕ್ಕೆ ಹುರುಪನ್ನು ತುಂಬುವ ಉದ್ದೇಶ ಹೊಂದಿದೆ.

ಅವರ ಪ್ರಕಟಿತ ನಾಟಕಗಳಲ್ಲಿ ''ನಾವು ಮನುಷ್ಯರು'' ಒಂದು. ರಾಮಣ್ಣ ಒಬ್ಬ ಕಾರ್ಮಿಕ. ಅವನಿಗೆ ದಮ್ಮು. ಕೆಮ್ಮುತ್ತ ಹಾಸಿಗೆಯಲ್ಲಿದ್ದಾನೆ. ಅವನ ಮಡದಿ ರುಕ್ಕು. ಅವಳೂ ಕಾರ್ಮಿಕಳು. ಆ ದಿನ ಕಾರ್ಮಿಕರ ಸಭೆ ನಡೆದು ತಿಂಗಳ ಸಂಬಳದಲ್ಲಿ ಹೆಚ್ಚು ಮಾಡಲು ಮಾಲಿಕರನ್ನು ಕೇಳಿಕೊಳ್ಳಲು ಚರ್ಚಿಸಲಾಗುತ್ತದೆ. ಅದರ ವಿವರವನ್ನು ಗಂಡನಿಗೆ ಆಕೆ ಹೇಳುತ್ತಾಳೆ. ಅಲ್ಲಿಗೆ ನೇಯ್ಗೆ ಕಾರ್ಮಿಕನೊಬ್ಬ ಬರುತ್ತಾನೆ. ಅದೇ ಹೊತ್ತಿಗೆ ಸಂಘದ ಕಾರ್ಯದರ್ಶಿ ಬರುತ್ತಾನೆ. ಒಟ್ಟಾರೆಯ ಅಲ್ಲಿಯ ಮಾತಿನ ಪ್ರಕಾರ

ಎಲ್ಲಾ ಕಾರಖಾನೆಯ ಕಾರ್ಮಿಕರು ಕೂಡಿಯೇ ಹೋರಾಡಿದರೆ ಗೆಲುವು ಸಾಧ್ಯ ಎಂಬ ತಿಳಿವಳಿಕೆಗೆ ಬರಲಾಗುತ್ತದೆ. ರಾಮಣ್ಣ ಹೇಳುತ್ತಾನೆ. ''ನೋಡಿ, ಓಡಿಸ ನಾನು, ಮಗ್ಗದ ನೀವು, ಬೀಡಿಯ ಅದಂ ಸಾಹೇಬ ನಾವೆಲ್ಲ ಒಂದೇ ಅಲ್ವೊ - ಒಂದೇ ಗುರಿ ಅಲ್ವೊ? ನಾವೆಲ್ಲ ಕೇಳೋದೂ ಒಂದೇ, ಹೆಚ್ಚು ಕೂಲಿ, ತುಟ್ಟಿಭತ್ತೆ, ಬೋನಸ್ಸು, ನಮ್ಮ ರಾಜ್ಯ ಅಲ್ವೊ? ಹೌದೊ ಅಲ್ವೊ?

ರಾಮಣ್ಣನ ಬಾಲಕ (ಮಗು) ಬೇರೆ ಸಂದರ್ಭವನ್ನನುಸರಿಸಿ ಇಲ್ಲಿ ಕತ್ತಲೆ. ಆಚೆ ಬೆಳಕಿದೆ. ಮುಂದೆ ಹೋಗುವ ಎನ್ನುತ್ತಾನೆ. ಇದು ಹೋರಾಟದ ಮಹತ್ವ ಮುಂದುವರೆಯುವಿಕೆಯನ್ನು ಕುರಿತಾದ ಸಂಕೇತಿಕತೆ. ಇದೊಂದು ಏಕಾಂಕ.

'ಸಂಗಮಸ್ನಾನ'ದಲ್ಲಿ ಬದಲಾಗುತ್ತಿರುವ ಸಮಾಜದ ಜನಜೀವನದ ಚಿತ್ರವನ್ನು ಕೊಡಲು ಪ್ರಯತ್ನಿಸಲಾಗಿದೆ. ಈ ಬದಲಾವಣೆಯ ಕೇಂದ್ರದಲ್ಲಿ ಅಂತರ್ಜಾತಿ ವಿವಾಹವಿದೆ. ಸಂಗಮಸ್ನಾನ ಎನ್ನುವ ಹೆಸರೇ ಸೂಚಿಸುವಂತೆ ವರ್ತಮಾನ ಹಳೆ ಹೊಸದರ ಸಂಗಮವಾಗಿದೆ. ಆದರೆ ಲೇಖಕರ ಮನಸ್ಸು ಕೆಲಸ ಮಾಡುವುದು ಹೊಸದನ್ನು ಹೊಂದಾಣಿಕೆ ಮಾಡಿಕೊಳ್ಳಬೇಕೆನ್ನುವುದರ ಕಡೆ. ಅಲ್ಲಿ ದುಡಿಯುವ ಅನೇಕ ಪಾತ್ರಗಳು ಆಶಿಸುವುದು ಹೊಸತನವನ್ನು. ಅದರಲ್ಲೂ ಮುಖ್ಯವಾಗಿ ಇಲ್ಲಿಯ ಸ್ತ್ರೀ ಪಾತ್ರಗಳ ತುಡಿತ ಸುಧಾರಣವಾದದ್ದಾಗಿದೆ. ಸಂಘರ್ಷ ಹಳೆಯ ಮತ್ತು ಹೊಸ ತಲೆಮಾರುಗಳ ಮಧ್ಯೆ ನಡೆಯುವ ಈ ಚಿತ್ರಣದಲ್ಲೂ ಗೆಲುವು ಹೊಸತನದ ಕಡೆ. ಅಂದರೆ ಪ್ರಗತಿಪರವಾದುದು ಜೀವನಕ್ಕೆ ಸ್ವಾಗತಾರ್ಹವಾದುದೆಂಬುದು ಮತ್ತು ಅನಿವಾರ್ಯವೆಂಬುದು ಇಲ್ಲಿಯ ಒಲವು.

ಸಾಮ್ರಾಜ್ಞಿ: ಸಾಮ್ರಾಜ್ಞಿ ಒಂದು ಚಾರಿತ್ರಿಕ ನಾಟಕ. ಇದು ತೈಮೂರಲಿಂಗನ ಬದುಕಿಗೆ ಸಂಬಂಧಿಸಿದ್ದು. ತೈಮೂರ ಯುದ್ಧ ಪ್ರಿಯ. ಸಾಹಸಿ. ಜಗತ್ತಿನ ಸಾಮ್ರಾಜ್ಯವನ್ನು ಗಳಿಸಬೇಕೆಂಬುದು ಆತನ ಆಕಾಂಕ್ಷೆ. ಅವನಿಗೊಬ್ಬ ಸುಂದರಿಯೂ ಮಾನವೀಯಳೂ ಆದ ಹೆಂಡತಿ ಇದ್ದಾಳೆ. ಅವಳ ಹೆಸರು ಬೇಬಿ ಹಾನಿಮಾ. ಪ್ರೀತಿಗಾಗಿ ಹಂಬಲಿಸುತ್ತಿರುವ, ಧ್ಯಾನಿಸುತ್ತಿರುವ ತರುಣಿ ಬೇಬಿ ಒಂದು ಕಡೆಯಾದರೆ; ಅಧಿಕಾರಕ್ಕಾಗಿ, ಯುದ್ಧಕ್ಕಾಗಿ ಹಂಬಲಿಸುವ ಮಹತ್ವಾಕಾಂಕ್ಷಿ ತೈಮೂರ ಇನ್ನೊಂದು ಕಡೆ. ಈ ಎರಡರ ಮಧ್ಯೆ ಸಮತೋಲನ ಸಾಧ್ಯವಾಗುವುದಿಲ್ಲ. ತೈಮೂರನ ಕಡೆಯಿಂದ ಆ ದಿಸೆಯಲ್ಲಿ ಪ್ರಯತ್ನವೂ ಇತ್ತು. ಆದರೆ ಹಾನಿಮಾಳ ಹೃದಯ ವೇದನೆಗೆ ಹೆಚ್ಚಿನ ಸ್ಥಾನ ಸಿಕ್ಕಿದೆ. ಶಿಲ್ಪಿ ದಾವುದ್‌ನಿಗೂ ಸಾಮ್ರಾಜ್ಞಿಗೂ ಸ್ನೇಹ ಜೀವನ ಇದೆಯೆಂದು ತೈಮೂರನಿಗೆ ತಿಳಿಯುತ್ತದೆ. ಶಿಲ್ಪಿ ಕಟ್ಟಿದ ಸುಂದರವಾದ

ಮಂದಿರವನ್ನು ಅದು ಹಾನಿಮಾಳ ಪ್ರೀತಿಯ ಸಂಕೇತವಿರಬಹುದೆಂದು ಸಂದೇಹಿಸಿ ಕೆಡಹುತ್ತಾನೆ. ಸಾಮ್ರಾಜ್ನಿಗೆ ಸೆರೆಮನೆ ವಾಸವಾಗುತ್ತದೆ. ಹೀಗೆ ಮಾಡುವ ಮೂಲಕ ಯುದ್ಧದಲ್ಲಿ ದೊರಕಿಸಿದ ಗೆಲುವು ಹೃದಯಹೀನ ಎನ್ನಿಸುತ್ತದೆ.

'ಆಹ್ವಾನ' ಇದು ಬಾನುಲಿ ನಾಟಕ. ಭಾರತ ಸ್ವಾತಂತ್ರ್ಯವಾಗಿ ಹದಿನೈದು ವರ್ಷಗಳ ನಂತರ ಬರೆದುದು. ಭಾರತ ಮುಂದುವರಿಯಬೇಕಾದರೆ ಭಾವೈಕ್ಯ ಮುಖ್ಯವಾದುದು. ಬೇರೆ ಬೇರೆ ಭಾಗಗಳಿಂದ ಕೂಡಿರುವ ಈ ನಾಟಕದಲ್ಲಿ ಭಾರತದ ಇತಿಹಾಸದ ಬೇರೆ ಬೇರೆ ಸಂದರ್ಭವನ್ನು ಎತ್ತಿ ಪೋಣಿಸಿದ್ದಾರೆ.

ನಿರಂಜನರು ತಮಗೂ ನಾಟಕ - ರಂಗಭೂಮಿಗೂ ಇರುವ ಸಂಬಂಧವನ್ನು 'ನಾವು ಮನುಷ್ಯರು, ಮುನ್ನುಡಿಯಲ್ಲಿ ಬರೆದಿದ್ದಾರೆ. ಜನತಾ ರಂಗಭೂಮಿಯ ಮತ್ತು ಇಪ್ಟಾದ ಮಂಗಳೂರಿನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ಹಾಗಿದ್ದರೂ ಅವರು ನಾಟಕ ರಚನೆಯಲ್ಲಿ ಗಂಭೀರವಾಗಿ ತೊಡಗಿಕೊಂಡವರಲ್ಲ. ''ನಿರಂಜನರ ಬರವಣಿಗೆಯ ಶ್ರೇಷ್ಠತೆಯನ್ನು, ಸೃಜನಶೀಲ ಶಕ್ತಿಯನ್ನು ಅವರ ಸಾಧನೆಯನ್ನು ಈ ನಾಟಕಗಳ ಅಧ್ಯಯನದಿಂದಲೇ ನಿರ್ಧರಿಸುವುದು ತಪ್ಪು'' ಎಂಬ ಜಿ. ಶ್ರೀನಿವಾಸರಾಜು ಅವರ ಮಾತು ಸರಿಯಾದುದಾಗಿದೆ.

(ನಿರಂಜನ ಅಭಿನಂದನ ನಿರಂಜನರ ನಾಟಕಗಳು: ಒಂದು ಪರಿಚಯ)

ಅಧ್ಯಾಯ ೭

# ಸಂಪಾದನೆ ಮತ್ತು ಇತರ ಬರಹಗಳು

ಕನ್ನಡದ ಮಕ್ಕಳ ಸಾಹಿತ್ಯದಲ್ಲಿ ಕನ್ನಡ ವಿಶ್ವಕೋಶ ಒಂದು ಅಪೂರ್ವ ಸಿದ್ಧಿ. ಇದು ಪ್ರಾರಂಭವಾದುದು ೧೯೬೯ ಜೂನ್ ೧೦ರಂದು. ಇದು ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರದ ಬೃಹತ್ ಯೋಜನೆ. ಇದರ ಮುಖ್ಯ ಸಂಪಾದಕರು ನಿರಂಜನ. ಈ ಕಿರಿಯರ ವಿಶ್ವಕೋಶಕ್ಕೆ ಇಟ್ಟ ಹೆಸರು ''ಜ್ಞಾನ ಗಂಗೋತ್ರಿ' ಅರ್ಥಪೂರ್ಣ ಹೆಸರು.

ನಿರಂಜನರು ಇದಕ್ಕಾಗಿ ತಮ್ಮ ಆರೋಗ್ಯವನ್ನು ಪಣವಾಗಿಟ್ಟು ದುಡಿದರು. ಸರಕಾರ ೯ ಲಕ್ಷ ರೂಪಾಯಿ ಸಾಲ ಕೊಟ್ಟಿತ್ತು. ನಿರಂಜನರು ಸಾಲ ತೀರಿಕೆಯ ಕುರಿತಾಗಿ ಕಾತುರರಾಗಿದ್ದರು. ಅಷ್ಟು ಮಾತ್ರವಲ್ಲ, ಹಣದ ವಿಷಯವಾಗಿ ಪಾರದರ್ಶಕತೆ ಇರಬೇಕೆಂಬುದು ಅವರ ಮನೀಷೆ.

ನಿರಂಜನ ತನ್ನ ಕೆಲಸದಲ್ಲಿ ಯಾವಾಗಲೂ ಅಚ್ಚುಕಟ್ಟು, ಆ ಶಿಸ್ತನ್ನು ಇತರ ಸಂಪಾದಕರೂ ಅನುಸರಿಸಬೇಕಾಯಿತು. ಈ ಕಾರಣದಿಂದಾಗಿ ಆರು ವರ್ಷಗಳಲ್ಲಿ ಮುಗಿಯಬೇಕೆಂಬ ಈ ಯೋಜನೆ ೪ ವರ್ಷ ೯ ತಿಂಗಳಲ್ಲಿ ಮುಗಿಯಲು ಸಾಧ್ಯವಾಯಿತು.

೨ನೇ ಸಂಪುಟದ ಕೆಲಸ ಆಗಬೇಕಾದರೆ ನಿರಂಜನರಿಗೆ ಲಕ್ವಾ ಹೊಡೆಯಿತು. ವಿಶ್ರಾಂತಿಯಿಲ್ಲದ ಕೆಲಸವೇ ಇದಕ್ಕೆ ಕಾರಣವೆಂದು ಸಂಪಾದಕ ಮಂಡಲಿಯ ಸದಸ್ಯರ ಅಂಬೋಣ. ಆದರೂ ಅವರು ಬೇಗ ಚೇತರಿಸಿಕೊಂಡರು ಮತ್ತು ಜ್ಞಾನ ಗಂಗೋತ್ರಿಯ ಕೆಲಸದಲ್ಲಿ ನಿರತರಾದರು.

ಮೊದಲ ಸಂಪುಟದ ಹೆಸರು 'ಮನುಕುಲದ ಕಥೆ' ಇದರ ವಿಸ್ತೀರ್ಣ ಡೆಮಿ ೧/೪ ದ ೭೪೫ ಪುಟ ೬೦೦ ಲೇಖನದಿಂದೊಡಗೂಡಿದೆ. ೫೦೦ಕ್ಕೂ ಹೆಚ್ಚು ಚಿತ್ರ. ೧೧ ರಿಂದ ೧೮ ವರ್ಷದ ಮಕ್ಕಳ ಮುಂದೆ ಓದಿ ಪರೀಕ್ಷಿಸಲಾಗಿದೆ. ಎರಡನೇ ಸಂಪುಟ 'ಜೀವ ಜಗತ್ತು' ಮೂರನೆಯದು 'ಭೌತಜಗತ್ತು' ನಾಲ್ಕನೆಯದು 'ಯಂತ್ರಜಗತ್ತು', ಐದನೆಯದು 'ಕಲೆ ಮತ್ತು ಸಾಹಿತ್ಯ' ಆರು 'ಕ್ರೀಡೆ ಮನೋಲ್ಲಾಸ' ಮತ್ತು

ಏಳನೆಯದು 'ಭಾರತ ಕಥೆ' ಈ ಕೊನೆಯದರಲ್ಲಿ ೧೩೭೩ ಲೇಖನ, ೧೨೦೦ ಕ್ಕೂ ಹೆಚ್ಚು ರೇಖಾ ಚಿತ್ರ ಮತ್ತು ಭಾವಚಿತ್ರ ೭೧ ವರ್ಣಚಿತ್ರಗಳಿವೆ. ಎಲ್ಲ ಸಂಪುಟಗಳೂ ಸರಿಸಮಾನವಾದ ಗಾತ್ರ ಮತ್ತು ಯೋಗ್ಯತೆಯನ್ನು ಹೊಂದಿವೆ.

ಈ ಕೆಲಸದಲ್ಲಿ ವಹಿಸಿದ ತಾಳ್ಮೆ ಸಹಸಂಪಾದಕರೊಡನೆಯ ಚರ್ಚೆ ಇತ್ಯಾದಿಗಳನ್ನು ಅದರ ಸಂಪಾದಕ ಬಳಗವೇ ಮೆಚ್ಚಿಕೊಂಡಿರುವ ವಿಷಯ. ನಿರಂಜನ ಪ್ರೌಢರ ಸಾಹಿತ್ಯ ಲೋಕಕ್ಕೆ ಹೇಗೆ ಪರಿಚಿತರೋ ಮಕ್ಕಳ ಲೋಕಕ್ಕೂ ಹಾಗೇ.

## ವಿಶ್ವ ಕಥಾಕೋಶ

'ವಿಶ್ವಕಥಾಕೋಶ'ದ ಸಂಪಾದನೆ ಕೂಡ ಜ್ಞಾನ ಗಂಗೋತ್ರಿಯ ಸಂಪಾದನೆಯಂತೆಯೇ ನಿರಂಜನರ ಸಾಹಸೀ ಕೃತಿ. ಅನುವಾದಕ್ಕೆ ಬೇರೆ ಬೇರೆಯವರಿದ್ದರೂ ಸಂಪಾದನೆಯ ಸಕಲ ಜವಾಬ್ದಾರಿ ನಿರಂಜನರದು.

ವಿಶ್ವದ ಮೂಲೆ ಮೂಲೆಯ ದೇಶಗಳ ಮುಖ್ಯ ಕತೆಗಳನ್ನು ೨೫ ಸಂಪುಟಗಳಲ್ಲಿ ಅನುವಾದಿಸಿ ಸಂಗ್ರಹಿಸುವುದು ಇದರ ಉದ್ದೇಶ. ಇದು ನವ ಕರ್ನಾಟಕ ಪ್ರಕಾಶನದ ಯೋಜನೆ. ೧೯೮೦ರಲ್ಲಿ ಇದನ್ನು ಪ್ರಾರಂಭಿಸಲಾಯಿತು. ಯೋಜನೆಯಂತೆ ೨೫ ಸಂಪುಟಗಳೂ ಹೊರಬಂದವು. ಆ ಸಂಕಲನಗಳನ್ನು ನಾಡಿನ ಬಹುಜನ ಮೆಚ್ಚಿಕೊಂಡರು. ವಿಮರ್ಶಕರು ಸ್ವಾಗತಿಸಿದರು. ಈ ಯೋಜನೆಯಲ್ಲಿ ೩೨೦ ಕತೆಗಳು ಸಂಕಲನಗೊಂಡವು.

ಈ ಸಂಪಾದನೆ ಬಹಳ ಜವಾಬ್ದಾರಿಯುತವಾದದ್ದು. ಇದು ನಿರಂಜನರ ವಸ್ತು ನಿಷ್ಠತೆ, ಬದ್ಧತೆ ಮತ್ತು ಕಲಾತ್ಮಕತೆಯ ಕುರಿತಾದ ಸಾಹಿತ್ಯಿಕ ವಿಮರ್ಶೆಯನ್ನು, ಸೂಕ್ಷ್ಮತೆಯನ್ನು, ಒರೆಗಲ್ಲಿಗೆ ಹಚ್ಚುವ ಪ್ರಸಂಗ. ಅದರಲ್ಲಿ ನಿರಂಜನರು ಪಾರಾಗಿ ಬಂದಿದ್ದಾರೆ ಎಂದೇ ಅನ್ನಬಹುದು.

ಈ ಮಾಲೆಯ ಮೊದಲ ಸಂಕಲನ ರಷ್ಯಾದ ಕಥೆ 'ಹೆಜ್ಜೆ'ಯ ಬಗ್ಗೆ ಸಂಕ್ರಮಣ ೧೯೮೧ರ ಸೆಪ್ಟೆಂಬರ್ ಸಂಚಿಕೆಯಲ್ಲಿ ಬರೆಯುತ್ತ ಸಿ.ವಿ. ವೇಣುಗೋಪಾಲ ವಿಶ್ವಕಥಾ ಸಂಕಲನದ ಮೊದಲ ಸಂಪುಟಗಳು ಹೊರ ಬಂದಾಗ ಅನೇಕರಿಗೆ ಇದ್ದ ಭಾವನೆ (ಇಲ್ಲಿಯ ಆಯ್ಕೆ ಎಡ ಪಂಥೀಯ ಧೋರಣೆಗೆ ಅನುಕೂಲಕರವಾಗುವ ಕಥೆಗಳಷ್ಟೇ) ರಷ್ಯದ ಕತೆಗಳು ಅಕ್ಟೋಬರ ಕ್ರಾಂತಿಯ ತದನಂತರದ ಕತೆಗಳಿಗೆ ಸೀಮಿತವಾಗಿರಬಹುದೆಂಬ ನಂಬಿಕೆಯನ್ನು ನಮ್ಮಲ್ಲಿ ತರಿಸಿದ್ದರೆ ಆಶ್ಚರ್ಯವಲ್ಲ. ಆದರೆ ಕ್ರಾಂತಿ ಪೂರ್ವದ ಐದು ಶ್ರೇಷ್ಠ ಕತೆಗಳನ್ನು (ಒಟ್ಟು ಹದಿನೇಳರಲ್ಲಿ) ಒಳಗೊಂಡಿರುವ

ಈ ಸಂಪುಟ ವಿಶ್ವಕಥಾಕೋಶದ ಆಯ್ಕೆಯ ಪ್ರಾಮಾಣಿಕತೆಯನ್ನು ಮೆರೆಯುತ್ತದೆ. ಎನ್ನುವುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಇಲ್ಲಿ ಕತೆಗೆ ಆಯ್ಕೆಯ ಬಗ್ಗೆ ನಿರಂಜನ ಹೇಳುವುದು ಹೀಗೆ, ''ಆಯ್ಕೆಯ ಹೊಣೆಯನ್ನು ನನಗೆ ವಹಿಸಿಕೊಟ್ಟ ಸಹೋದ್ಯೋಗಿಗಳು ನನ್ನಲ್ಲಿ ತಮಗಿರುವ ವಿಶ್ವಾಸ ವ್ಯಕ್ತಪಡಿಸಿದರು. ನಾನು ಹಿಂದು ಮುಂದು ನೋಡದೆ ನನ್ನ ಮೊಳವನ್ನೇ ಅಳತೆಗೋಲು ಮಾಡಿದೆ. ಬಾಗ್ದಾದಿನಿಂದ ಹಿಡಿದು ಬೆಂಗಳೂರು ತನಕ ೧೨೦೦ ವರ್ಷ ಕಾಲವನ್ನು ಕೆದಕಿದೆ. ಸಾಹಿತ್ಯ ಲೋಕದಲ್ಲಿ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಕಥೆಗಾರ ಇಲ್ಲಿ ಕಾಣಿಸಿಕೊಳ್ಳಬೇಕು. ಇತಿಹಾಸದುದ್ದಕ್ಕೂ ಒಳ್ಳೆಯ ಬದುಕಿಗಾಗಿ ಮಾನವ ನಡೆಸಿದ ಸೆಣಸಾಟದ ಅರಿವು ಆ ಕಥೆಗಳಿಂದ ದೊರೆಯುವಂತಿರಬೇಕು; ಪ್ರತಿ ಸಂಪುಟದಲ್ಲೂ ರಸಮಯ ಸಮತೋಲನ ಇರಬೇಕು; ಎಂಬ ಸೂತ್ರ ರೂಪಿಸಿದೆ.

ಇದು ನಿರಂಜನರ ನಿಲುವು. ಈ ನಿಲುವು ಅವರ ಕಲಾಸೂಕ್ಷ್ಮತೆಯನ್ನು ಮುಸುಕುಗೊಳಿಸಲಿಲ್ಲ. ಫ್ರಾನ್ಜ್ ಕಾಫ್ಕಾ 'ನವ್ಯ' ಪಂಥದವರಿಗೆ ತುಂಬ ಮೆಚ್ಚಿಕೆಯಾದ ಲೇಖಕ. ಆದರೆ ನಿರಂಜನರ ಜೀವನ ದೃಷ್ಟಿ ಮತ್ತು ಕಲಾತ್ಮಕತೆಯ ನಿಲುವು ಕಾಫ್ಕಾನನ್ನು ನಿರಾಕರಿಸುವುದಿಲ್ಲ. ಜೆಕೋಸ್ಲೋವಾಕಿಯಾ ಕಥೆಗಳಲ್ಲಿ ಆತನ ಉಪವಾಸ ಕಲಾಕಾರ ಎಂಬ ಪ್ರಸಿದ್ಧ ಕತೆಯೂ ಸೇರಿದೆ. ಇದು ಅಸ್ತಿತ್ವವಾದಿ ನೆಲೆಯಿಂದ ರಚಿತವಾಗಿದೆ. ಆದರೆ ವ್ಯಕ್ತಿವಾದಿ ನಿಲುವಿನ ಅತಿರೇಕ ನಿರರ್ಥಕತೆಯನ್ನು ಬಿಂಬಿಸುತ್ತದೆ.

ಇಲ್ಲಿ ಆಯ್ಕೆಯಾದ ಕತೆಗಳು ಏಕಮುಖತೆ ಹೊಂದಿರುವುದಿಲ್ಲ ಜೀವನದ ವೈವಿಧ್ಯಮಯವಾದ ಅನುಭವವನ್ನು ಸಾದರಪಡಿಸುತ್ತವೆ. ಸಾಮಾಜಿಕ ನೀಚತನ, ವೈಯಕ್ತಿಕ ಅಹಂಭಾವ, ಕಲೆ ಮತ್ತು ಬದುಕು, ಧಾರ್ಮಿಕತೆ, ಬಡತನ, ಹಸಿವೆ, ಪ್ರೀತಿ-ವಿಡಂಬನೆ, ಶೋಷಣೆಯ ಜೊತೆಗೆ ಹೊಸ ಕಾಲದ ಎಚ್ಚರ ಹೀಗೆ ಅನೇಕ ರೀತಿಯವು. ಯುದ್ಧದ ನಿರರ್ಥಕತೆ ಮತ್ತು ವಿನಾಶವನ್ನು ಜುಲಿಯನ್ ಮೊಚಿಕ್ ಅವರ ''ಆರು ಹುಡುಗರ ಕಥೆ'' ವಿಸ್ಮಯಕರವಾಗಿ ಚಿತ್ರಿಸುತ್ತದೆ. ಆರು ಬಾಲಕರು ಗೋಲಿ ಆಡುತ್ತಿದ್ದಾಗ ಅವರ ಮೇಲೆ ಯುದ್ಧ ಬಾಂಬ್ ಒಂದು ಬಿದ್ದು ಗಾಯಾಳುವಾಗುತ್ತಾರೆ. ಈ ಚಿತ್ರವನ್ನು ಆರು ಜನ ಬೇರೆ ಪ್ರದೇಶದ ಬಾಲಕರು ಕಂಡು ನಡುಗುತ್ತಾರೆ. ಅದರ ಪರಿಣಾಮವೇಂದರೆ ಆ ಹುಡುಗರು ಅವರಿಗೆ ಸಹಾಯಕ್ಕಾಗಿ ಹಣ ಕಳಿಸಲು ಮನಸ್ಸು ಮಾಡುತ್ತಾರೆ. ಆದರೆ ಅವರು ಬಾಲಕರು.

ಅವರಲ್ಲಿರುವುದು ಕೇವಲ ಚಿಕ್ಕ ಪುಟ್ಟ ಆಟಿಕೆ ಸಾಮಾನುಗಳು. ಅವು ಅವರಿಗೆ ಪ್ರಿಯವೂ ಹೌದು. ಆದರೆ ಆ ಅಮೂಲ್ಯ ಸಾಮಾನನ್ನು ಮಾರಲು ಬಯಸಿ ಮುದುಕನ ಅಂಗಡಿಯೊಂದಕ್ಕೆ ಹೋಗುತ್ತಾರೆ. ಇದು ಹುಡುಗರ ಮಂಗಚೇಷ್ಟೆಯೆಂದೇ ಬಗೆದ ಮುದುಕ ಅವರನ್ನು ಓಡಿಸಬಯಸುತ್ತಾನೆ. ಆದರೆ ಹುಡುಗರು ಹಿಂದಿರುಗುವುದಿಲ್ಲ. ಅವರು ಎಲ್ಲ ವಿವರಗಳನ್ನು ಹೇಳುತ್ತಾರೆ. ಮಕ್ಕಳ ಉದಾತ್ತತೆಯನ್ನು ಮೆಚ್ಚಿದ ಆತ ಅವರ ಸಾಮಾನುಗಳು ಅಮೂಲ್ಯವೆಂದು ಹೇಳಿ ಹಣ ಕೊಡುತ್ತಾನೆ.

ಹಾಗೆಯೇ ಆಫ್ರಿಕಾ ಖಂಡದ ಪ್ರಸಿದ್ಧ ಕತೆಗಾರ ಚುನುವ ಅಚಬೆಯ 'ಸೇಡಿನ ಸಾಲಗಾರ' ನೋಡಬಹುದು. ಶ್ರೀಮಂತ (ಬಿಳಿಯರ) ಶೋಷಣೆ, ನೀಗ್ರೋ ಎಳೆಯರಲ್ಲಿ ಮೂಡುವ (ಮೂಡಬೇಕಾದ) ಜಾಗೃತಿಯನ್ನು ಪರಿಣಾಮಕಾರಿಯಾಗಿ ಈ ಕತೆ ನಿರೂಪಿಸುತ್ತದೆ. ಬಿಳಿಯ ಶ್ರೀಮಂತರ ಮನೆಯಲ್ಲಿ ಓರ್ವ ನೀಗ್ರೋ ಹುಡುಗಿ ಮನೆ ಕೆಲಸಕ್ಕಿರುತ್ತಾಳೆ. ಆ ಗಂಡ ಹೆಂಡರೀರ್ವರೂ ಹೊರಗೆ ಕೆಲಸಕ್ಕೆ ಹೋಗುವುದರಿಂದ ಅವರ ಪುಟ್ಟ ಬಾಲಕಿಯನ್ನು ನೋಡಿಕೊಳ್ಳುವುದು ಅವಳ ಹೊಣೆ. ನೀಗ್ರೋ ಹುಡುಗಿಗೋ ತಾನು ಶಾಲೆಗೆ ಹೋಗಬೇಕೆಂಬ ಬಯಕೆ. ಆದರೆ ಈ ಪುಟ್ಟ ಮಗು ತನಗೆ ಆತಂಕವಾಗಿದ್ದಾಳೆಂದು ಅವಳ ಗ್ರಹಿಕೆ.

ಒಂದು ದಿನ ತಮಾಶೆಗೆ ತಾನು ತುಟಿಗೆ ಕೆಂಪು ಶಾಯಿ ಬಳಿದುಕೊಂಡಿರುತ್ತಾಳೆ. ಇದು ಅವಳ ಒಡತಿಯ ಅಲಂಕಾರದ ಅನುಕರಣೆ. ಅದನ್ನು ಕಂಡ ಒಡತಿ ನಕ್ಕು ಹಾಗೆ ಶಾಯಿ ಹಚ್ಚಿಕೊಳ್ಳಬಾರದು. ಅದು ವಿಷ. ಹೊಟ್ಟೆಗೆ ಹೋದರೆ ಸಾಯುತ್ತಾರೆ ಎನ್ನುತ್ತಾಳೆ. ಇದು ಆ ನೀಗ್ರೋ ಹುಡುಗಿಯ ಮನಸ್ಸಿಗೆ ನಾಟುತ್ತದೆ. ಒಂದು ದಿನ ಇವರೆಲ್ಲ ಕೆಲಸಕ್ಕೆ ಹೋದಾಗ ಪುಟ್ಟ ಬಾಲಕಿಗೆ ಕೆಂಪು ಶಾಯಿ ಕುಡಿಸುತ್ತಾಳೆ. ಯಾಕೆಂದರೆ ಅವಳು ಸಾಯಲಿ, ಸತ್ತರೆ ತನಗೆ ಶಾಲೆಗೆ ಹೋಗಲು ನಿರುಂಬಳ ಎಂದು. ಇದನ್ನು ತಿಳಿದ ಯಜಮಾನಿ ಅವಳನ್ನು ಅವಳ ಹಳ್ಳಿಗೆ ಒಯ್ದು ತಾಯಿಯ ಮನೆಯಲ್ಲಿ ಬಿಡುತ್ತಾಳೆ. ತಾಯಿ ಅದನ್ನು ತಿಳಿದು ಯಜಮಾನಿಯ ಬಳಿ ಒಯ್ದು ಕ್ಷಮೆ ಕೇಳುತ್ತಾಳೆ. ಆದರೆ ಅವಳು ಅದನ್ನು ತಿರಸ್ಕರಿಸಿ ನಿಂದಿಸುತ್ತಾಳೆ. ಬಡ ವಿಧವೆಗೆ ಅತೀವ ನೋವು ಉಂಟಾಗುತ್ತದೆ. ಅದರಲ್ಲೇ ಒಂದು ಬಂಡಾಯದ ಎಳೆಯೂ ಹುಟ್ಟುತ್ತದೆ.

''ತನ್ನನ್ನು ಮನುಷ್ಯನೆಂದು ಕರೆದುಕೊಳ್ಳುವ ಆ ವಸ್ತು ಶಿಕ್ಷಣದ ಹುಚ್ಚಿನ ಬಗ್ಗೆ ಮಾತಾಡುತ್ತದೆ. (ನೀಗ್ರೋಗಳಲ್ಲಿ ಉಂಟಾದ ಕಲಿಕೆಯ ಅರಿವನ್ನು ಯಜಮಾನ ಒಂದು ಹುಚ್ಚು ಎಂದು ಬಯ್ದಿರುತ್ತಾಳೆ.) ಅವರ ಎಲ್ಲ ಮಕ್ಕಳೂ ಶಾಲೆಗೆ ಹೋಗುತ್ತಾರೆ, ಎರಡು ವರ್ಷದ ಮಗು ಕೂಡ ಅದು ಹುಚ್ಚಲ್ಲ, ನನ್ನಂತಹ ಬಡ

ವಿಧವೆಯ ಮಕ್ಕಳು ಇತರರೊಡನೆ ಹೋಗಲು ಬಯಸಿದಾಗ ಮಾತ್ರ ಅದು ಹುಚ್ಚು, ಇದೇ ಜೀವನ? ದೇವರೇ ಇದೇನು? ಈಗ ನನ್ನ ಮಗು ಅಂದುಕೊಳ್ಳುತ್ತೆ, ತನಗೆ ಅವಕಾಶ ದೊರೆಯಬೇಕಾದರೆ ತನ್ನ ಜೋಪಾನದಲ್ಲಿರುವ ಮಗುವನ್ನು ಕೊಲ್ಲಬೇಕು ಅಂತ. ಈ ಭೀಕರ ಯೋಚನೆಯನ್ನು ಅದರ ಹೊಟ್ಟೆ ಇಟ್ಟವರಾರು? ದೇವರೇ ನಿನಗೆ ಗೊತ್ತು, ನಾನು ಇಡಲಿಲ್ಲ.''

ಅವಳು ಚಾಟಿಯನ್ನು ಎಸೆದು, (ಮಗುವಿಗೆ ಚೆನ್ನಾಗಿ ಥಳಿಸಬೇಕೆಂದು ಚಾಟಿ ಎತ್ತಿಕೊಂಡಿದ್ದಳಾಕೆ) ಬಿಡುವಾದ ಕೈಯಲ್ಲಿ ಕಣ್ಣೊರೆಸಿಕೊಂಡಳು, ಎಂದು ಮುಕ್ತಾಯವಾಗುತ್ತದೆ.

ನಿರಂಜನ ಪ್ರತಿ ಸಂಪಾದಿತ ಕೃತಿಗೆ ಬರೆಯುವ ಪ್ರಸ್ತಾವನೆ ಬಹಳ ಮುಖ್ಯವಾದುದು. ಅದರ ಹಿನ್ನೆಲೆ ಅವರೇ ಹೇಳುವುದು ಹೀಗೆ ''ಶೂನ್ಯದಿಂದ ಸಾಹಿತ್ಯ ಸೃಷ್ಟಿಯಾಗುವುದಿಲ್ಲ. ಬರೆಯುವವನಿಗೆ ಇತಿಹಾಸ ಪ್ರಜ್ಞೆ ಬಹಳ ಮುಖ್ಯ. ಬದಲಾಗಿರುವ, ಬದಲಾಗುತ್ತಿರುವ ಅಥವಾ ನಿಂತ ನೀರಾಗಿರುವ ಜನಪದದ ಬದುಕೇ ಕಥಾ ಸಾಹಿತ್ಯಕ್ಕೆ ಪಾತಿ. ಈ ಹಿನ್ನೆಲೆಯ ಪರಿಚಯ ಓದುಗನಿಗೂ ಆದರೆ ಕಥೆಗಳ ವಾಚನದ ಅರ್ಥಪೂರ್ಣವಾಗ್ತದೆ ಎನಿಸಿತು.''

ಉದಾಹರಣೆಗಾಗಿ 'ಸಂಪುಟ - ೨' 'ಆಫ್ರಿಕಾದ ಹಾಡು'ಕ್ಕೆ ಬರೆದ ಪ್ರಸ್ತಾವನೆ ಯನ್ನು ನೋಡಬಹುದು. ಮೊದಲು ಕಥೆಗಳ ಹುಟ್ಟಿನ ಬಗ್ಗೆ ಹೇಳುತ್ತಾರೆ. ಬುದ್ಧನ ಕಥೆ, ವೇದೋಪನಿಷತ್ತು ಇತ್ಯಾದಿ. ಸಣ್ಣ ಕತೆಯ ರಚನೆಯ ಕಲಾತ್ಮಕ ರಚನೆಯ ಬಗ್ಗೆ ಹೇಳುತ್ತಾರೆ. ಮುಂದೆ ಆಫ್ರಿಕಾದ ಇತಿಹಾಸವನ್ನು ಹೇಳುತ್ತಾರೆ. ಆಫ್ರಿಕಾದ ಜನಾಂಗ ಸಾಹಿತ್ಯ, ಹಾಗೆಯೇ ಸಮಾಜ ಪದ್ಧತಿ. ಶಿಲಾಯುಗ, ಬೆಂಕಿ ಕಂಡಿದ್ದು, ಬಿಲ್ಲು ಬಂದ ನಂತರದ ಬೆಳವಣಿಗೆ, ವಿವಿಧ ಜನಾಂಗದ ಮಧ್ಯೆಯ ಹೋರಾಟ, ಪಾಶ್ಚಾತ್ಯರ ಆಗಮನ, ಗುಲಾಮರ ಮಾರಾಟ, ನೀಗ್ರೋಗಳಲ್ಲೂ ಎಚ್ಚರ, ಸ್ವಾತಂತ್ರ್ಯಕ್ಕಾಗಿ ಸಂಘರ್ಷ ಮುಂತಾದವುಗಳನ್ನು ಹೇಳಿ, ಅಲ್ಲಿಯ ಸಾಹಿತ್ಯ ಮತ್ತು ಮುಖ್ಯ ಲೇಖಕರ ಬಗ್ಗೆ ಹೇಳುತ್ತಾರೆ.

ಪ್ರತಿ ಸಂಪುಟಕ್ಕೆ ಬರೆದ ಮುನ್ನುಡಿಯನ್ನು ಸಂಗ್ರಹದಲ್ಲಿ ಪ್ರಕಟಿಸಿದರೆ ಒಂದು ಉತ್ತಮ ಚರಿತ್ರೆಯ ಪುಸ್ತಕವಾಗಬಲ್ಲದು. ಅದು ನಿರಂಜನರ ಆಳವಾದ ಅಭ್ಯಾಸದ ಫಲ.

ಈ ಎಲ್ಲ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡು ಈ ಎಲ್ಲ ಸಂಪುಟಗಳ ಕತೆಗಳ ಬಗ್ಗೆ ಒಂದು ಅಭ್ಯಾಸ ಪೂರ್ಣ ಲೇಖನವನ್ನು (ನಿರಂಜನರ ಅಭಿನಂದನ) ದಲ್ಲಿ

"ಬರೆದ ಬಿದರಹಳ್ಳಿ ನರಸಿಂಹಮೂರ್ತಿ ಇಲ್ಲಿನ ಕತೆಗಳನ್ನು ವಿಶ್ಲೇಷಿಸಿದಾಗ ವಿಶ್ವಕಥಾಕೋಶದ ಮನುಷ್ಯ ಪ್ರತಿನಿಧಿ ನಮಗೆ ಮತ್ತಷ್ಟು ಸ್ಪಷ್ಟವಾಗುತ್ತಾನೆ. ಬದುಕು ಮತ್ತು ಇತಿಹಾಸ ಕುರಿತು ನಮ್ಮ `ಅರಿವನ್ನು ಹಿಗ್ಗಿಸುತ್ತಾನೆ" ಎಂದಿರುವ ಮಾತು ನಿರಂಜನರ ಸಂಪಾದಕತ್ವಕ್ಕೆ ಗೌರವ ತರುವ ಮಾತು.

ಕತೆಗಳ ಅನುವಾದಕರಾಗಿ ಅನೇಕ ಖ್ಯಾತ ಲೇಖಕರು ಇಲ್ಲಿ ದುಡಿದಿದ್ದಾರೆ.

ಇವುಗಳ ಹೊರತಾಗಿ ಜನತಾ ಸಾಹಿತ್ಯದ ೨೫ ಪುಸ್ತಕ ೧೯೪೬-೪೭ ರಲ್ಲಿ ಮತ್ತು ಪುರೋಗಾಮಿ ಪ್ರಕಾಶನದ ೮ ಪುಸ್ತಕದ ೧೯೭೦-೭೪ರ ಮಧ್ಯೆ ಸಂಪಾದಿಸಿದ್ದು ಕೂಡ ಅವರ ದುಡಿಮೆಯ ಹೆಚ್ಚುಗಾರಿಕೆಯಾಗಿದೆ.

'ಹಿಮಾಲಯದ ದಳ್ಳುರಿ' ಇದು ನಿರಂಜನರ ರಾಜಕೀಯ ಮತ್ತು ಚಾರಿತ್ರ್ಯಾತ್ಮಕತೆಯಿಂದ ಕೂಡಿದ ಕೃತಿ. ಮುಖ್ಯವಾಗಿ ಚೀನಾದ ಕ್ರಾಂತಿ, ಅದರ ಹಿನ್ನೆಲೆ-ಮುನ್ನೆಲೆಯ ಸಂಗತಿಗಳನ್ನೊಳಗೊಂಡಿದೆ. ಅದೇ ಹೊತ್ತಿಗೆ ಭಾರತದಲ್ಲಿ ಕೂಡ ಸ್ವಾತಂತ್ರ್ಯ ಸಮರ ನಡೆಯುತ್ತಿರುತ್ತದೆ. ಆದರೆ ಭಾರತ ಗಾಂಧೀಜಿಯ ಮುಂದಾಳ್ತನದಲ್ಲಿ ಅಹಿಂಸಾತ್ಮಕ ಹೋರಾಟದಲ್ಲಿ ನಡೆದರೆ, ಚೀನಾದಲ್ಲಿ ಮಾವೋತ್ಸೆ ತುಂಗ ಅವರ ನೇತೃತ್ವದಲ್ಲಿ ಸಶಸ್ತ್ರ ಹೋರಾಟ ನಡೆಯಿತು. ಆದರೆ ಇದಕ್ಕೂ ಪೂರ್ವದಲ್ಲಿ ಅದಕ್ಕೆ ಹೋರಾಡಿದ ದೊಡ್ಡ ಇತಿಹಾಸವೇ ಇದೆ. ಚೀನಾದ ರಾಜ ಮನೆತನಗಳ ಇತಿಹಾಸ ಕ್ರೌರ್ಯ, ವಿಲಾಸ ಇತ್ಯಾದಿ. ಜನಗಳ ಬಡತನ ಹಾಗೇ ಸಂಪ್ರದಾಯಶೀಲತೆ. ಆ ಮಧ್ಯೆಯೇ ಉದಯೋನ್ಮುಖಕ್ಕೆ ಬರುವ ಹೊಸ ಶಕ್ತಿ, ಇವೆಲ್ಲವುಗಳೊಟ್ಟಿಗೆ ಆದರೆ ವೇಗದ ನಡಿಗೆಯಿಂದ ಚಿತ್ರಿಸುತ್ತಾರೆ.

ಸೂನ್ (ಸನ್) ಯಾತ್ ಸನ್ ಅವರ ದೀರ್ಘವಾದ ಹೋರಾಟ, ಮರಣದ ಮೊದಲಿನ ಉಯಿಲ್, ಕಮ್ಯುನಿಸ್ಟ ಪಕ್ಷದ ಬೆಳವಣಿಗೆ, ಮಾವೋತ್ಸೆ ತುಂಗರ ನೇತೃತ್ವದ ದೀರ್ಘ ಪ್ರಯಾಣ, ಇದೊಂದು ರೋಮಾಂಚಕ ಸಾಹಸಿ ಘಟನೆ. ಕೊನೆಗೆ ಕೆಂಪು ಸೈನ್ಯದ ಜಯ, ಭಾರತ ಸ್ವತಂತ್ರವಾದುದು ಇಂತೆಲ್ಲ ವಿಚಾರಗಳನ್ನು ಇಲ್ಲಿ ದಾಖಲಾಗಿರುವುದನ್ನು ಕಾಣಬಹುದು. ಹಾಗೆಯೇ ಭಾರತ ಮತ್ತು ಚೀನದ ಮಧ್ಯೆ ನಡೆದ ಯುದ್ಧದ ದಾಖಲೆ ಕೂಡ ಹೌದು.

## ಅನುವಾದ

ನಿರಂಜನ ಸ್ವತಃ ಸೃಜನಶೀಲ ಲೇಖಕ. ಆದರೂ ಅವರು ಅನುವಾದಕ್ಕೆ ಕೈ ಹಾಕುವುದೆಂದರೆ ತನ್ನ ಭಾಷೆಗೆ ಅನ್ಯ ಭಾಷೆಯ ಪ್ರಸಿದ್ಧ ಕೃತಿಗಳನ್ನು ಪರಿಚಯಿಸುವುದೇ ಆಗಿದೆ. ಅಂತೆಯೇ ಅವರು ಅನುವಾದಕ್ಕಾಗಿ ಆರಿಸಿಕೊಂಡ ಕೃತಿ ಕನ್ನಡದ

ಪ್ರಗತಿಶೀಲ ಸಾಹಿತ್ಯ ಸಂದರ್ಭಕ್ಕೆ ಪೋಷಕವಾದಂತಹವೇ. ಅದರಲ್ಲೂ ರಷ್ಯಾ ಮತ್ತು ಚೀನಾದಲ್ಲಿ ಹೊಸಯುಗದ ಇತಿಹಾಸ ತೆರೆಯುತ್ತಿರುವ ಸಮಯ.

ಹಾಗೆ ಕೇಳಿದರೆ ನಿರಂಜನರ ಅನುವಾದ ಕೃತಿಗಳು ರಷ್ಯಾ ಕ್ರಾಂತಿ ನಂತರದ್ದೇನಲ್ಲ. ಕ್ರಾಂತಿ ಪೂರ್ವ ಸಾಹಿತ್ಯವನ್ನು, ಮುಖ್ಯವಾಗಿ ಟಾಲ್‌ಸ್ಟಾಯ್ ಸಾಹಿತ್ಯದ ಕುರಿತು, ಅದು ಕ್ರಾಂತಿ ಪೂರ್ವ ಸಾಹಿತ್ಯವನ್ನು ರಷ್ಯದ ಸಮಾಜದ ಕೈಗನ್ನಡಿ' ಎಂದು ಲೆನಿನ್‌ರೇ ಹೇಳಿದ್ದುಂಟು.

ಅನುವಾದದಲ್ಲಿ ರಷ್ಯಾದ ಮಹಾನ್ ಲೇಖಕರಾದ ಮಾಕ್ಸಿಂ ಗಾರ್ಕಿ ಅವರ 'ಮದರ್' ಕೃತಿಯೂ ಸೇರಿದೆ. ಈ ಕೃತಿ ಕನ್ನಡದಲ್ಲಿ 'ತಾಯಿ' ಆಗಿದೆ. ಬಹಳ ಸಾರ್ಥಕವಾದ ಹೆಸರು.

ಕೂಲಿಕಾರನ ತಾಯಿಯೊಬ್ಬಳು ತನ್ನ ಕತ್ತಲ ಬದುಕಿನಿಂದ ಸಾವಕಾಶವಾಗಿ ಎದ್ದು ನಿಲ್ಲುವ, ಹೊಸ ಬದುಕಿಗೆ ಯುವಕರಿಗೆ ಕರೆ ಕೊಡುವ ಮತ್ತು ಆ ಮೂಲಕ ಮುಂದಿನ ಕಾರ್ಮಿಕ ಕ್ರಾಂತಿಗೆ (ರಷ್ಯಾದ ಕ್ರಾಂತಿಗೆ) ತಾಯಿಯಾಗಿ ಪರಿವರ್ತನೆಯಾಗುವ ಮಹಾಕೃತಿ.

ತಾಯಿಗೆ ಕ್ರಾಂತಿಯೆಂದರೆ ತಿಳಿಯದು. ಗಂಡ ಇದ್ದಷ್ಟು ದಿನವೂ ಹೆದರಿಕೊಂಡೇ ಬದುಕಿನ ಮಧ್ಯ ಭಾಗ ಮೀರಿ ಕಳೆದಳು. ಅವಳು ಕೂಲಿಕಾರನೋರ್ವನ ಹೆಂಡತಿ ಅಷ್ಟೆ. ಅವಳಿಗಾಗುವ ಶೋಷಣೆಯ ಅರಿವು ಅವಳಿಗಿಲ್ಲ. ದೇವರು ಇಟ್ಟಂತೆ ಇರುವ ನಂಬಿಕೆ ಅವಳದ್ದು. ಇಂಥವಳು ರೈತ ಹೆಂಗಸರಿಗೆ 'ಬೈಬಲ್ಲು ಪಠನ ಮಾಡಿ, ಆದರೆ ಬೆಳೆಗೆ ವಿಮೆ ತೆಗೆಸುವುದನ್ನು ಮರೆಯಬೇಡಿ' ಎಂದು ಹೇಳುವ ಮಟ್ಟಕ್ಕೆ ಬೆಳೆಯುತ್ತಾಳೆ.

ಮಗ ಏನೇನೋ ಓದು ಶುರುಮಾಡಿದ್ದಾನೆ. ಯಾರು ಯಾರೋ ಅವನ ಗೆಳೆಯರು ರಾತ್ರಿ ಹೊತ್ತು ಬರುತ್ತಾರೆ. ಕದ್ದು ಕದ್ದು ಓದುತ್ತಾರೆ. ಏನೋ ಅಪಾಯ ಕಾದಿದೆ ಎಂದು ಹೆದರುತ್ತಾಳೆ. ಆದರೆ ಅವಳಿಗೆ ಮಗನ ಬಗ್ಗೆ ಅತೀ ಪ್ರೀತಿ. ಹೀಗಾಗಿ ಮಗನ ಬಗ್ಗೆ ಎಲ್ಲವನ್ನೂ ಸಹಿಸಿಕೊಳ್ಳಬೇಕಾಗಿದೆ.

ಮುಂದೆ ಅವಳು ಶೋಷಣೆಯ ಪಾಠ ಕಲಿಯುತ್ತಾಳೆ. ಕಾರ್ಮಿಕ ಚಳವಳಿಯಲ್ಲಿ ಅವಳು ನಿರ್ಣಾಯಕ ಪಾತ್ರ ವಹಿಸುತ್ತಾಳೆ. ಅಂತ್ಯದಲ್ಲಿ ಅವಳು ಕಾರ್ಮಿಕ ಚಳುವಳಿ ಪರವಾದ ಕರಪತ್ರ ಒಯ್ಯುವಾಗ ಪೋಲೀಸರ ಕೈಗೆ ಸಿಕ್ಕಿ ಬೀಳುತ್ತಾಳೆ.

''ಬಡತನ, ಹಸಿವೆ, ರೋಗ - ಇದೇ ಈಗ ತಮ್ಮ ಕೆಲಸಕ್ಕೆ ಜನರಿಗೆ ಸಿಗೋ ಪ್ರತಿಫಲ. ಪ್ರತಿಯೊಂದೂ ನಮಗೆ ಇದಿರಾಗಿದೆ. ಜೀವಮಾನವೆಲ್ಲ ನಾವು ಪ್ರತಿ ನಿತ್ಯವೂ ನಮ್ಮ ಶಕ್ತಿಯ ಕೊನೇ ಗುಲಗುಂಜಿ ತೂಕವನ್ನು ಉಪಯೋಗಿಸಿ ದುಡೀತೇವೆ.

ಯಾವಾಗಲೂ ಹೊಲಸಾಗಿರ್ತೇವೆ. ಯಾವಾಗಲೂ ಮೋಸ ಹೋಗುತ್ತೇವೆ. ಬೇರೆಯವರು ಸಂಕೋಲೆಯಲ್ಲಿ ಕಟ್ಟಿದ ನಾಯಿಯ ಹಾಗೇ ನಮ್ಮನ್ನು ಅಜ್ಞಾನದಲ್ಲಿ ಇರಿಸಿ ತಾವು ನಮ್ಮ ದುಡಿಮೆಯಿಂದ ಎಲ್ಲ ಸುಖ ಸೌಕರ್ಯವನ್ನೂ ಪಡೀತಾರೆ. ನಮಗೆ ಏನೂ ಗೊತ್ತಿರೋದಿಲ್ಲ. ನಾವು ದಿಗಿಲು ಬೀಳ್ತೇವೆ. ಪ್ರತಿಯೊಂದಕ್ಕೂ ಹೆದರ್ತೇವೆ. ನಮ್ಮ ಬದುಕು ಬೆಳಕೇ ಹರಿಯದಂಥ ಉದ್ದನೆಯ ಕತ್ತಲು ರಾತ್ರಿಯ ಹಾಗೆ'' ಎಂದು ಘೋಷಿಸಿ ತನ್ನ ಪೆಟ್ಟಿಗೆಯಲ್ಲಿದ್ದ ಕರಪತ್ರವನ್ನು ಜನರ ಮಧ್ಯೆ ತೂರಿದಳು.

ಈ ಕಾದಂಬರಿಯ ಅನುವಾದದ ಬಗ್ಗೆ ಬರೆದ ತಾಳ್ತಜೆ ವಸಂತ ಕುಮಾರ, ''ಇದು ಭಾಷಾಂತರ ಮಾತ್ರವಲ್ಲ. ಭಾವಾಂತರವೂ ಹೌದು. ಆದುದರಿಂದಲೇ ಉತ್ತಮ ಅನುವಾದಕ್ಕೆ ನಿದರ್ಶನವಾಗಬಲ್ಲವರು ನಿರಂಜನ. ಇದರ ಓದುಗ ಬಹುಮಟ್ಟಿಗೆ ಇದೊಂದು ಅನುವಾದಿತ ಕೃತಿಯೆಂಬುದನ್ನು ಮರೆತುಬಿಡುತ್ತಾನೆ'' ಎನ್ನುತ್ತಾರೆ. (ನಿರಂಜನ ಅಭಿನಂದನ)

'ಫೋಮಾ ಗಾರ್ದೆಯೆವ್' ಕಾದಂಬರಿಯನ್ನು 'ಅಧಃಪತನ' ಎಂದು ಭಾಷಾಂತರಿಸಿದ್ದಾರೆ. ಫೋಮಾನ್ ತಂದೆ ಶ್ರೀಮಂತ, ದೊಡ್ಡ ವ್ಯಾಪಾರಿ. ಹಣದ ಪಿಶಾಚಿ. ಫೋಮಾ ಮೃದು. ಬಂಡವಾಳಶಾಹಿಯ ಮಧ್ಯೆ ಆತ ನರಳಬೇಕಾಗುತ್ತದೆ. ಅವನ ವ್ಯಕ್ತಿತ್ವದ ಅಂತರಂಗದ ತೊಳಲಾಟ ಅರ್ಥಪೂರ್ಣವಾದುದು. ಆತ ''ಆದರೆ ಅವರು ಬದುಕುತ್ತಲೇ ಇದ್ದಾರೆ. ಈ ಕಾಡು ಜೀವನ ನನಗೆ ಸಾಕಾಗಿದೆ. ಪುನಃ ಪುನಃ ಒಂದೇ ಬಗೆಯ ಬದುಕು. ಇದರಿಂದ ನನ್ನ ರಕ್ತ ಕುದಿಯೋ ಹಾಗಿರ್ತದೆ. ಇವರು ಯಾವುದಕ್ಕೋಸ್ಕರ ಜೀವಿಸ್ತಿದ್ದಾರೆ?'' ಎಂದುಕೊಳ್ಳುತ್ತಾನೆ. ಆತನ ಅಧಃಪತನ ಆತನದೇ ಅಲ್ಲ. ಕ್ರಾಂತಿ ಪೂರ್ವ ರಷ್ಯದ ಸ್ಥಗಿತ ಸಮಾಜದ ಚಿತ್ರಣ ಇದು. ಇನ್ನೊಂದು ರೀತಿಯಿಂದ ಬಂಡವಾಳಶಾಹಿಯ ಮಧ್ಯೆ ಅಧಃಪತನ ಹೊಂದುತ್ತಿರುವ ಸಾಮಾಜಿಕ ಮೌಲ್ಯದ ಚಿತ್ರಣ. ನಿರಂಜನರು ಕೃತಿಗೆ ಹೆಸರಿಡುವುದರಲ್ಲಿ ಸ್ವಂತಿಕೆ ತೋರಿದ್ದಾರೆ.

ಗಾರ್ಕಿಯ ಇನ್ನಿತರ ಭಾಷಾಂತರ ಕಾದಂಬರಿಯೆಂದರೆ ಗಾರ್ಕಿಯವರ ಜೀವನಾಧಾರಿತ ಕಾದಂಬರಿಗಳಂತಿರುವ ಆತ್ಮಚರಿತ್ರೆ, 'ನನ್ನ ಬಾಲ್ಯ' 'ಜನತೆಯ ನಡುವೆ' ಮತ್ತು 'ನನ್ನ ವಿಶ್ವವಿದ್ಯಾಲಯ'

ಹಾಗೆಯೇ ಅದೇ ಕಾಲದ ರಷ್ಯದ ದೊಡ್ಡ ಲೇಖಕನಾದ ಅಂಟನ್ ಚೆಖಾವ್‌ರ 'ಮದುವಣಗಿತ್ತಿ' 'ಕಂದರದ ಬದುಕು' ಮತ್ತು 'ನೀರಸದ ಕಥೆ' ಎಂಬ ಮೂರು

ನೀಳ್ಗತೆಗಳನ್ನು ಅನುವಾದಿಸಿದ್ದಾರೆ. ಮದುವಣಗಿತ್ತಿ ಹೆಚ್ಚು ಕುತೂಹಲಕಾರಿ ಕತೆ. ನಾದಿಯಾಳ ಮದುವೆ ನಿಶ್ಚಯವಾಗುತ್ತದೆ. ಆದರೆ ಅತನನ್ನು ಆಕೆ ಪ್ರೀತಿಸಲಾರದವಳಾಗುತ್ತಾಳೆ. ಅದರ ನಿಶ್ಚಯವಾಗಿದೆ. ಹಾಗೆ ನಿರಾಕರಿಸುವುದನ್ನು ವ್ಯವಸ್ಥೆಯು ಸಹಿಸುವುದಿಲ್ಲ, ಹೀಗೆ ಅವಳ ತೊಳಲಾಟ. ಈ ಮಧ್ಯೆ ನಾರಾ ಅವಳ ಸಂಬಂಧಿ ಅವಳ ಸ್ವಂತಿಕೆಯನ್ನು ಬೆಳೆಸಿಕೊಳ್ಳಲು ಪ್ರೇರೇಪಿಸುತ್ತಾನೆ. ಸ್ವತಃ ಅತ ಸಾವಿನೆಡೆ ನಡೆಯುತ್ತಿರುವ ರೋಗಿಯಾದರೂ ನಾದಿಯಾಳಿಗೆ ಶಕ್ತಿ ನೀಡುತ್ತಾನೆ. ನಾದಿಯ ಬಡವಾಗಿ ಹೋದ ತಪ್ಪ ಆ ಕಾಲದ ಸಮಾಜದ ವಿರುದ್ಧ ಹೋರಾಟದ ಸಂಕೇತವಾಗುತ್ತಾಳೆ. ಅವಳ ಗೆಲುವು ಕತೆಯ ಆಶಯವಾಗಿದೆ. ಉಳಿದ ಕತೆಗಳೂ ಕ್ರಾಂತಿ ಪೂರ್ವ ರಷ್ಯದ ಸ್ಥಗಿತ ಜಗತ್ತನ್ನು ಸೂಕ್ಷ್ಮವಾಗಿ ಹಿಡಿದಿಡುತ್ತದೆ. ಚೆಕಾವ್ ಅವರ ಬರಹ ಮೇಲ್ಬಟ್ಟು, ಪ್ರಗತಿಶೀಲದ ರಚನೆಕ್ಕೊಂದು ಚಿಕಿತ್ಸೆಯೇ ಇದ್ದ ನಿಲುಕಿದೆ.

ಇವುಗಳ ಹೊರತಾಗಿ ಚೆಕೋ ಕತೆಗಳು ಮತ್ತು ಡಾ|| ಎನ್. ಸುಬ್ರಮಣಿಯನ್ ಅವರ 'ಸಂಗಮ' ರಾಜಕೀಯ ಸಾಮಾಜಿಕ ವ್ಯವಸ್ಥೆ ಕೃತಿಯನ್ನು ಕೂಡ ಅನುವಾದಿಸಿದ್ದಾರೆ.

## ಅಧ್ಯಾಯ ೮

# ಸಮಾರೋಪ

ನಿರಂಜನರ ಕತೆಗಳನ್ನೆಲ್ಲ ಇಲ್ಲಿ ಚರ್ಚಿಸಲಾಗಲಿಲ್ಲ. ಅದರ ಅವಶ್ಯಕತೆಯೂ ಇಲ್ಲ. ಆದರೂ ಎಲ್ಲ ಮುಖ್ಯ ಕತೆಗಳನ್ನು ಇಲ್ಲಿ ವಿವರಿಸಲಾಗಲಿಲ್ಲ. ಒಟ್ಟಿನಲ್ಲಿ ಅವರ ಕತೆಗಾರಿಕೆಯ ಮತ್ತು ವಸ್ತು ವೈವಿಧ್ಯತೆಯ ಹಾಗೂ ತಾತ್ವಿಕತೆಯ ಹರವು ತಪ್ಪಿಹೋಗದ ಹಾಗೆ ನೋಡಿಕೊಳ್ಳಲಾಗಿದೆ. ಎಳೆತನದ ಕತೆಗಳಲ್ಲಿ ಎಳಸು ಕಾಣುವಂತಿದ್ದರೂ ಕತೆಗಾರನ ಬೆಳವಣಿಗೆಯ ದೃಷ್ಟಿಕೋನದಿಂದ ಅದು ಅವಶ್ಯ ಎನಿಸಿದೆ.

ಕನ್ನಡದ ಐದು ಉತ್ತುಂಗ ಶ್ರೇಣಿಯ ಕಾದಂಬರಿಗಳನ್ನು ಆರಿಸಿಕೊಂಡೆನೆಂದರೆ ನನ್ನ ಆಯ್ಕೆಯಲ್ಲಿ ನಿಶ್ಚಯವಾಗಿ ಮೃತ್ಯುಂಜಯ ಬರುತ್ತದೆ. ನಿರಂಜನರ ಕಾದಂಬರಿಗಳನ್ನು ವಿವರಿಸುವಾಗಲೂ ಅವರ ಮುಖ್ಯ ಕಾದಂಬರಿಗಳು ಇಲ್ಲಿ ಹೆಚ್ಚಿನ ಅವಕಾಶ ಪಡೆದಿದೆ. ಅದೇನೇ ಇದ್ದರೂ ನಿರಂಜನರ ಸಾಮಾನ್ಯ ಕಾದಂಬರಿ ಕೂಡ ಪ್ರತಿಗಾಮಿ ವಿಚಾರದ ಸೋಂಕನ್ನು ಪಡೆದಿರುವುದಿಲ್ಲ. ಅವರಲ್ಲಿ ಪ್ರಜ್ಞಾಪೂರಕವಾದ ಪ್ರಯೋಗಶೀಲತೆ ಇತ್ತೆಂಬುದರ ಬಗ್ಗೆ ಕೆಲಕಡೆ ಅವರೇ ಹೇಳಿದ್ದಾರೆ. ತಾನು ಮುಂದೆ ಮೂರು ಕಂತಿನಲ್ಲಿ ಬರೆಯಬೇಕೆಂದುಕೊಂಡ ಪ್ರಾಗ್ಭಾರತ ಕಾದಂಬರಿಯ ಸ್ವರೂಪ ಈಗೆಲ್ಲದರಕ್ಕಿಂತ ಹೊಸದೇ ಎಂದಿದ್ದರು 'ಮುಖತಃ'ದಲ್ಲಿಯ ಒಂದು ಸಂದರ್ಭದಲ್ಲಿ. ಆದರೆ ಅದನ್ನು ಅವರಿಗೆ ಬರೆಯಲಾಗಲಿಲ್ಲ. ಅಷ್ಟರಲ್ಲೇ ಅವರನ್ನು ಅನಾರೋಗ್ಯ ಕಿತ್ತುಕೊಂಡಿತ್ತು.

ಅಂಕಣಕಾರರಾಗಿ ಕೂಡ ಮುಂದಿನ ತಲೆಮಾರಿನ ಮೇಲೆ ಪ್ರಭಾವ ಬೀರಿದವರು ಅವರು. ಅವರ ಸಂಪಾದಿತ ಕೃತಿಗಳು ಮತ್ತು ಅನುವಾದಗಳು ಕೂಡ ಅವರ ಧೀಮಂತಿಕೆಯನ್ನು ಸಾರಿ ಹೇಳುತ್ತವೆ.

ಕಾವ್ಯಕ್ಷೇತ್ರದಲ್ಲಿ ನಿರಂಜನರ ಪರಿಶ್ರಮ ತೀರ ಚಿಕ್ಕದು. ಅವರು ೧೩-೧೪ ವರ್ಷದವರಿರುವಾಗಲೇ ತುಳು ಹಾಗೂ ಕನ್ನಡದಲ್ಲಿ ಬರೆದರು. ಎಂಟೋ, ಹತ್ತೋ ಕವಿತೆ ಪ್ರಕಟಗೊಂಡದ್ದೂ ಉಂಟು. ಅವುಗಳಲ್ಲಿ ಒಂದು ಅವರ 'ಧ್ವನಿ'ವಾಚಿಕೆಯಲ್ಲಿ ಸಾಕ್ಷಿಯಾಗಿ ಉಳಿದುಕೊಂಡಿದೆ.

ಕವಿತೆಯ ಹೆಸರು 'ಕರ್ನಾಟಕದ ಕೊಡಗೂಸು' ಅಂದರೆ ಕಾಸರಗೋಡು ಜಿಲ್ಲೆ, ಅದು ಕೇರಳಕ್ಕೆ ಸೆರಿದಾಗಿನ ಸಂದರ್ಭದ್ದು. ಕಾಸರಗೋಡು ಕೇರಳಕ್ಕೆ ಸೇರಿತಲ್ಲ ಎಂಬ ವ್ಯಥೆಯದಲ್ಲ, ಅದೊಂದು ಆತ್ಮೀಯ ಬೀಳ್ಕೊಡುಗೆ.

ಅವರು ಬದುಕಿಗೆ ಅಚಲವಾದ ಬದ್ಧತೆ ಹೊಂದಿದ್ದರು. ಬದುಕಿಗೆ ಬದ್ಧತೆ ಎಂದರೆ ನೊಂದವರ ಶೋಷಿತರ ಬದುಕಿಗೆ; ಅವರು ಸ್ವತಃ ಅಂತಹ ಬದುಕಿನಿಂದ ಬಂದರು. ಬರೆದೇ ಬದುಕುವ ಸಾಹಸವನ್ನು ತೊಟ್ಟರು. ಕೇವಲ ಬರಹವಲ್ಲ, ಸಂಘಟನೆಯಲ್ಲೂ ತೊಡಗಿದರು. ಈ ಸಂಘಟನೆಯ ಒಲವು ಬಾಲ್ಯದಿಂದಲೂ ಇದ್ದುದು. ಅನಂತರ ಅವರು ಕಮ್ಯುನಿಸ್ಟ್ ಪಕ್ಷ ಸೇರಿದ ಮೇಲೆ ದಲಿತರ ಖಾಸಾ ಬದುಕನ್ನು ಕಂಡು ಅನುಭೋಗಿಸಿದರು. ಹೀಗಾಗಿ ಅವರ ಸಾಹಿತ್ಯದಲ್ಲಿ ಎಲ್ಲಿ ಕೈ ಹಾಕಿದರೂ ಅಲ್ಲಿ ವಾಸ್ತವದ ಬದುಕು ಇದೆ. ಹಾಗೇ ಕನಸೂ ಇದೆ.

ಕಮ್ಯುನಿಸ್ಟ್ ಪಕ್ಷದಿಂದ ಹೊರಬಂದರೂ ಮಾರ್ಕ್ಸ್‌ವಾದಿ ಟೀಕಾಕಾರರಾಗಲಿಲ್ಲ.

ನಿರಂಜನರು ಸರಳ ಜೀವನವನ್ನು ಸ್ವೀಕರಿಸಿದ್ದರು. ಅವರು ತಮ್ಮ ಸ್ನೇಹಿತರನ್ನು ಅಷ್ಟು ಹೊತ್ತಿಗೆ ಮಾತ್ರ ಎಂದು ಮರೆತವರಲ್ಲ. ಅವರ ಹತ್ತಿರ ಬಂದವರಾರೂ ಅವರ ಸ್ನೇಹಶೀಲತೆಯನ್ನು ಮರೆಯುವುದು ಸಾಧ್ಯವಿಲ್ಲ. ಎಲ್ಲಾ ಶಿಸ್ತು, ಅಚ್ಚುಕಟ್ಟು, ಸಾಹಸ ಪ್ರವೃತ್ತಿ, ಬಿಡುವಿರದ ದುಡಿಮೆ.

ನಿರಂಜನರ ಕೊನೆಯ ದಿನಗಳು ಸುಖಮಯವಾಗಿರಲಿಲ್ಲ. ಅವರು ಮೈಸೂರಿನ ವಿಶ್ವವಿದ್ಯಾಲಯದ ಸೆನೆಟ್ ಸಭೆಯಲ್ಲಿ ಭಾಗವಹಿಸಲು ಹೋಗಿದ್ದಾಗಲೇ ಎರಡನೇ ಸಲ ಲಕ್ವ ಹೊಡೆಯಿತು. ಮೊದಲನೆಯದು 'ಜ್ಞಾನ ಗಂಗೋತ್ರಿ'ಯ ಸಮಯ. ಇದು ಅವರ ಅವಿಶ್ರಾಂತ ದುಡಿತದ ಪರಿಣಾಮ. ಮುಂದೆ ಅವರ ಆರೋಗ್ಯ ಶಿಥಿಲವಾಗುತ್ತ ಹೋಯಿತು. ಅವರ ಹೆಂಡತಿ ಅನುಪಮಾ ದೊಡ್ಡ ಲೇಖಕಿ. ಅವರು ವೈದ್ಯರು ಕೂಡ. ಆದರೇನು, ಕ್ಯಾನ್ಸರಿಗೆ ತುತ್ತಾದರು.

ನಿರಂಜನ ನೆನಪನ್ನು ಕಳೆದುಕೊಳ್ಳುತ್ತ ಹೋದರು. ಅನಂತರ ಪೂರ್ಣ ಹೋಯಿತು. ದೇಹದ ಚೇಷ್ಟೆಯೇ ಮರೆಯಿತು. ಸಾವಿಗೂ ಅವರನ್ನು ಒಂದೇ ಹೊಡೆತಕ್ಕೆ ತೆಗೆದುಕೊಳ್ಳಲಾಗಲಿಲ್ಲ. ಸದಾ ಸಾಹಸ, ಹೋರಾಟ, ಮೃತ್ಯುವಿನೊಡನೆಯ ಹೋರಾಟದಲ್ಲಿ ಅವರು ಕೊನೆಗೂ ಸೋಲೊಪ್ಪಬೇಕಾಯಿತು. ಅವರು ಮುಂದೆ ಮರೆಯಲಾಗದ ನೆನಪಾಗಿ ಉಳಿದರು. ಕನ್ನಡದ ಸಾಹಿತ್ಯ ಶಿಖರಗಳಲ್ಲಿ ನಿರಂಜನರೂ ಒಬ್ಬರಾಗಿದ್ದಾರೆ. ಅವರು ತಮ್ಮ ಅರವತ್ತೆಂಟನೆಯ ವಯಸ್ಸಿನಲ್ಲಿ ನಿಧನರಾದರು.

## ಅನುಬಂಧ ೧

# ಕುಳುಕುಂದ ಶಿವರಾಯ - ನಿರಂಜನ: ಪ್ರಯಾಣ

೧೯೨೪ : ಜನನ (ಜೂನ್ ೧೫) ದಕ್ಷಿಣ ಕನ್ನಡದ ಕುಳುಕುಂದ ಎಂಬ ಹಳ್ಳಿಯಲ್ಲಿ. ಚಿನ್ನಮ್ಮ ಎಂಟನೆಯ ವಯಸ್ಸಿನಲ್ಲಿ ಮದುವೆಯಾಗಿ ಅದೇ ವರ್ಷ ವಿಧವೆಯಾದವಳು. ಮುಂದೆ ತನ್ನ ಮೂವತ್ತನೆಯ ವರ್ಷದಲ್ಲಿ ಶ್ರೀನಿವಾಸರಾಯ ಎಂಬವರ ಸಂಬಂಧದಿಂದ ತಾಯಿಯಾದಳು. ಮಗುವಿಗೆ ಇಟ್ಟ ಹೆಸರು ಶಿವರಾಯ. ಮಗುವಿಗೆ ಆರು ತಿಂಗಳಾದಾಗ ಪರಿತ್ಯಕ್ತೆಯಾಗಿ ಗ್ರಾಮದಿಂದ ನಿರ್ಗಮನ. ಬೀಡು ಬಿಟ್ಟಿದ್ದು ಕಾವು ಎಂಬ ಪುಟ್ಟ ಊರಲ್ಲಿ. ಅಲ್ಲಿ ಪಂಚಾಯತಿ ವಿಚಾರಣೆ. ಆ ಸ್ಥಳಕ್ಕೆ ತಾಯಿಯನ್ನೂ ಮಗುವನ್ನೂ ಕರೆದು ತಂದ ಶ್ರೀ ಮಂಜುನಾಥ ಪೈ ರಕ್ಷಕ. (ಮುಂದೆ ನೀಲೇಶ್ವರದಲ್ಲಿ ಮಗನ ಹದಿನಾಲ್ಕನೆಯ ಹರೆಯದಲ್ಲಿ ಈ ರಕ್ಷಣೆಯಿಂದ ಬಿಡುಗಡೆ)

೧೯೩೦-೩೩ : ಕಾವು ಲೋವರ್ ಎಲಿಮೆಂಟರಿ ಶಾಲೆಯಲ್ಲಿ ಮೂರು ವರ್ಷ ಅಧ್ಯಯನದ ಬಳಿಕ ಸುಳ್ಯಕ್ಕೆ ವಲಸೆ.

೧೯೩೩-೩೮ : ಪ್ರಾಥಮಿಕ ವಿಭಾಗವೂ ಇದ್ದ ಸುಳ್ಯ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಶಿಕ್ಷಣ.

೧೯೩೪ : ಮೊದಲ ಭಾಗದಲ್ಲಿ ಸುಳ್ಯದ ದಾರಿಯಾಗಿ ಬಂದ ಗಾಂಧೀಜಿಯನ್ನು ಕಂಡದ್ದು.

೧೯೩೭ : ಆದಿ ಭಾಗದಲ್ಲಿ ಪುತ್ತೂರಿಗೆ ಹೋಗಿ ಜವಾಹರಲಾಲರ ಭಾಷಣ ಕೇಳಿದ್ದು, ಕಾಂಗ್ರೆಸ್ ಸ್ವಯಂ ಸೇವಕನಾದದ್ದು.

ತುಳು ಭಾಷೆಯಲ್ಲಿ ಕೃತಿ ರಚನೆ. ಕಾವ್ಯನಾಮ: 'ಕಿಶೋರ' 'ತುಳುನಾಡ್' ಪತ್ರಿಕೆಯಲ್ಲಿ (ಸಂ: ಎಸ್.ಯು. ಪಣಿಯಾಡಿ) ಪ್ರಕಟಣೆ. ಕನ್ನಡದಲ್ಲಿ ಕಥಾ ರಚನೆ. ಚೊಚ್ಚಲ ಕೃತಿಯೂ ಆನಂತರದ ಹಲವು ಕತೆಗಳೂ ಅಚ್ಚಾದದ್ದು ರಾಷ್ಟ್ರಬಂಧು ಸಾಪ್ತಾಹಿಕದಲ್ಲಿ (ಸಂ. ಕಡೆಂಗೋಡ್ಲು ಶಂಕರಭಟ್ಟ)

೧೯೩೮-೪೧ : ರಾಜಾಸ್ ಹೈಸ್ಕೂಲಿನಲ್ಲಿ ಪ್ರೌಢ ವಿದ್ಯಾಭ್ಯಾಸ. ಮುಖ್ಯೋಪಾಧ್ಯಾಯರು ಶ್ರೀ ಕೆ. ರಾಮಕೃಷ್ಣರಾವ್, ಗಾಂಧಿವಾದ, ಸಮಾಜವಾದಗಳ ಮುಂದುವರಿಕೆಯಾಗಿ ಕಮ್ಯೂನಿಸಮಿನ ಪರಿಚಯ. ವರ್ಷದ ಆರಂಭದಲ್ಲಿ ಕಾಸರಗೋಡು ತಾಲ್ಲೂಕು ವಿದ್ಯಾರ್ಥಿ ಸಮ್ಮೇಳನದ ಸಂಘಟನಾ ಕಾರ್ಯದರ್ಶಿ. ಕಯ್ಯೂರಿನ ರೈತರ ಚರಿತ್ರಾರ್ಹ ಹೋರಾಟದ ಸಮೀಪ ವೀಕ್ಷಕ. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಬಳಿಕ ಮಂಗಳೂರಿಗೆ ಪ್ರಯಾಣ. ರಾಷ್ಟ್ರಬಂಧುವಿನಲ್ಲಿ ಉಪ ಸಂಪಾದಕ. ಆಳುವ ಪರಕೀಯರ ಹಂಗು ಬೇಡವೆಂದು ಎಸ್.ಎಸ್.ಎಲ್.ಸಿ. ಉತ್ತೀರ್ಣತಾ ಪತ್ರದ ನಿರಾಕರಣೆ.

೧೯೪೨ : ರಾಷ್ಟ್ರಬಂಧು ಸಂಪಾದಕೀಯ ದುಡಿಮೆಯ ಜತೆಗೆ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕದ ಸುದ್ದಿಗಾರ.

೧೯೪೩ : ಕಮ್ಯೂನಿಸ್ಟ್ ಪಕ್ಷದ ಸದಸ್ಯ. ಜೂನ್‌ನಲ್ಲಿ ಮುಂಬಯಿಯಲ್ಲಿ ಜರುಗಿದ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನ ಹಾಗೂ ಜನತಾ ರಂಗಭೂಮಿ ಸಮ್ಮೇಳನದಲ್ಲಿ ಭಾಗಿ. ಅಲ್ಲಿಂದ ಬೆಂಗಳೂರಿಗೆ ಪ್ರಯಾಣ. ಶ್ರೀ ಅ.ನ.ಕೃ. ಭೇಟಿ. ನಡು ವಯಸ್ಸಿನಲ್ಲಿ ಶ್ರೀನಿವಾಸರಾಯರು ಹೃದಯಾಘಾತದಿಂದ ನಿಧನರಾದ ವಾರ್ತೆ. ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಸಂಘಟನಾ ಕಾರ್ಯದರ್ಶಿ.

೧೯೪೪ : ಮಂಗಳೂರಿನಲ್ಲಿ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ. (ಮದರಾಸಿನ ಸ್ವದೇಶ ಮಿತ್ರನ ದೈನಿಕದ ಸಂಪಾದಕ ಸಿ.ಆರ್. ಶ್ರೀನಿವಾಸನ್ ಅಧ್ಯಕ್ಷರು) ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ಕಾರ್ಯದರ್ಶಿಯಾಗಿ ಆಯ್ಕೆ. ಮಂಗಳೂರು ಪ್ರಗತಿಶೀಲ ಲೇಖಕರ ಸಂಘ, ಜನತಾ ರಂಗಭೂಮಿಗಳ ಕಾರ್ಯದರ್ಶಿತ್ವ. ಉಡುಪಿ ಕಿರಿಯರ ಸಮ್ಮೇಳನದ ಸೂತ್ರ ಚಾಲನೆ.

ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕದೊಂದಿಗೆ ಬೆಂಗಳೂರಿನ ತಾಯಿನಾಡು Daily News ಜನವಾಣಿ ದೈನಿಕಗಳಿಗೂ ಮಂಗಳೂರು ಸುದ್ದಿಗಾರ ಅಲ್ಲದೆ ರಾಷ್ಟ್ರಬಂಧು ಸಾಪ್ತಾಹಿಕ, ನವಭಾರತ ದೈನಿಕಗಳ ನಗರ ಪ್ರತಿನಿಧಿ. ನವೆಂಬರ್ ೭ ರಂದು ಮಂಗಳೂರು ಮೈದಾನದಲ್ಲಿ ''ನಾವೂ ಮನುಷ್ಯರು'' ಬಯಲು ನಾಟಕದ ಪ್ರದರ್ಶನ (ಜನತಾ ರಂಗಭೂಮಿ ಕೊಡುಗೆ)

೧೯೪೫ : ಮಂಗಳೂರು ಮಕ್ಕಳ ಸಮ್ಮೇಳನದ ಉಸ್ತುವಾರಿ, ಮಂಗಳೂರಿನಿಂದ ಬೆಂಗಳೂರಿಗೆ ವಲಸೆ. ಪ್ರಜಾಮತ ಸಾಪ್ತಾಹಿಕದ ಸಹಸಂಪಾದಕತ್ವ (ಸಂ: ಬಿ.ಎನ್. ಗುಪ್ತ)

ಆ ಪತ್ರಿಕೆಯಲ್ಲಿ 'ಸರೂ ಕೇಳಿದೆಯಾ'? ಅಂಕಣ.

ಪ್ರಥಮ ಕಥಾ ಸಂಗ್ರಹ ಅಯ್ಯಯ್ಯೆ; ಪ್ರಕಟಣೆ.

ಮದರಾಸಿನಲ್ಲಿ ಜರಗಿದ ೨೯ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ. ಕೈಲಾಸಂ ಅಧ್ಯಕ್ಷತೆ.

೧೯೪೭ : ಮೇ ೧ ರಂದು ಆರಂಭವಾದ ಜನಶಕ್ತಿಯ ಸಂಪಾದಕತ್ವ.

೧೯೪೮-೧೯೫೦ : ಕಮ್ಯೂನಿಸ್ಟ್ ಪಕ್ಷದ ವಿರುದ್ಧ ಸರಕಾರ ಅಸ್ತ್ರ ಹಿಡಿದಾಗ ಭೂಗತ ಬದುಕು. ಜನಶಕ್ತಿಯ ಮೇಲೆ ನಿಷೇಧಾಜ್ಞೆ ಜಾರಿಯಾಗುವವರೆಗೂ ಹುಬ್ಬಳ್ಳಿ ಧಾರವಾಡಗಳಲ್ಲಿ ತಲೆಮರೆಸಿಕೊಂಡು ಪತ್ರಿಕೆಗೆ ಮ್ಯಾಟರ್ ಪೂರೈಕೆ. ಬಳಿಕ ಭೂಗತವಾಗಿ ಬೆಂಗಳೂರಿನಲ್ಲಿ. ಸರಿ ತಪ್ಪುಗಳ 'ಸೈದ್ಧಾಂತಿಕ' ತಾಕಲಾಟದಲ್ಲಿ ಬೆಂದು, ಪಕ್ಷದಿಂದ ಬಿಡುಗಡೆ ಬಯಸಿ, ವರಿಷ್ಠರಿಗೆ ಪತ್ರ. ವೆಂಕಟಲಕ್ಷ್ಮಿ ಎಂಬ 'ಬರೆಯುವ ಹುಡುಗಿ'ಯಲ್ಲಿ ಅನುರಕ್ತ.

೧೯೫೧ : ಬೆಂಗಳೂರಿಗೆ ಮರಳಿ ಪುರೋಗಾಮಿ ಪ್ರಕಾಶನದ ಆರಂಭ. ಮುಂಬಯಿಯ ಶ್ರೀ ವಾಸುದೇವ ಜತೆ ಸಂಪಾದಕರು.

ಇಪ್ಪತ್ತಾರು ದಾಟದ ಕುಳುಕುಂದ ಶಿವರಾಯ ನಿರಂಜನನಾದ. 'ಜನಶಕ್ತಿ'ಯಲ್ಲಿ ಮೂರು ವರ್ಷಗಳಿಗೆ ಹಿಂದೆ ಬರೆದ ಲೇಖನಗಳಿಗೆ ಸಂಬಂಧಿಸಿ ಬೆಂಗಳೂರಿನಲ್ಲಿ 'ಕೈಕೋಳ ಬಂಧನ' ಕಾರವಾರಕ್ಕೆ ಒಯ್ದು ದೀರ್ಘ ವಿಚಾರಣೆ, ದಂಡನೆ; ಖುಲಾಸೆ.

'ಪುರೋಗಾಮಿ ಪ್ರಕಾಶನದ' 'ಲಾಂಛನದಲ್ಲಿ ಪುಸ್ತಕಗಳ ಪ್ರಕಟಣೆ' 'ಉಷಾ'ದಲ್ಲಿ ಸಾಧನ ಸಂಚಯ' ಅಂಕಣ ಆರಂಭ. 'ಜನಪ್ರಗತಿ'ಯಲ್ಲಿ ಈ ಅಂಕಣದ ಮುಂದುವರಿಕೆ. (ಸಂ. ಎನ್.ಎಸ್. ಸೀತಾರಾಮಶಾಸ್ತ್ರಿ) 'ಚಿತ್ರಗುಪ್ತ'ದಲ್ಲಿ (ಸಂ. ಎಂ.ಎಸ್. ಭಾರದ್ವಾಜ್) ಓದುಗರೊಡನೆ ಐದು ನಿಮಿಷ, 'ಸಾಹಿತ್ಯ ಸಮೀಕ್ಷೆ' ಅಂಕಣಗಳು. ದಿಲ್ಲಿಯಲ್ಲಿ ಜರಗಿದ ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಮ್ಮೇಳನದಲ್ಲಿ ಜತೆ ಭಾಗಿ.

೧೯೫೨ : ವರ್ಷಾರಂಭದಲ್ಲಿ ಕಮ್ಯೂನಿಸ್ಟ್ ಪಕ್ಷದಿಂದ ವಿಮೋಚನೆ. ಕಾದಂಬರಿ ಬರೆಯಲು ಆರಂಭ. ಕೈಹೊತ್ತಗೆಯಾಗಿ ಪ್ರಥಮ

ಕೃತಿಯ ಪ್ರಕಟಣೆ. ವರ್ಷಾಂತ್ಯದಲ್ಲಿ ಶ್ರೀರಂಗರ ಓರಿತನದಲ್ಲಿ ರಾಯಚೂರಿನಲ್ಲಿ ಜರಗಿದ ೩೮ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲೇಖಕರ ಗೋಷ್ಠಿಯ ಅಧ್ಯಕ್ಷ.

೧೯೫೬ : ನಿರಂಜನ - ಅನುಪಮಾ ಮದುವೆ. ಹೈದರಾಬಾದಿನ 'ಸಾಧನಾ' ವಾರ ಪತ್ರಿಕೆಯಲ್ಲಿ (ಸಂ: ಜೆ.ಕೆ. ಪ್ರಾಣೇಶಾಚಾರ್ಯ) ಕೆಲಕಾಲ 'ಮಧುಸಂಚಯ' ಅಂಕಣ.

೧೯೬೪ : ವರ್ಷದ ಅಂತ್ಯ ಭಾಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ (ಅಧ್ಯಕ್ಷರು: ಜಿ. ವೆಂಕಟಸುಬ್ಬಯ್ಯ)

೧೯೬೫ : ಬೇಸಿಗೆಯಲ್ಲಿ ಕಾರವಾರದಲ್ಲಿ ೪೫ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕಡೆಂಗೋಡ್ಲು ಶಂಕರಭಟ್ಟರ ಅಧ್ಯಕ್ಷತೆ. ಸಮ್ಮೇಳನ ಮುಗಿದೊಡನೆ ಸ್ವಇಚ್ಛೆಯಿಂದ ಪರಿಷತ್ತಿನಿಂದ ನಿರ್ಗಮನ. ಕಾರ್ಯನಿರತ ಪತ್ರಿಕೋದ್ಯಮ. ದಿಲ್ಲಿಯ ಇನ್ಫಾ (ಇಂಡಿಯಾ ನ್ಯೂಸ್ ಅಂಡ್ ಫೀಚರ್ ಅಲಯನ್ಸ್) ಸಂಸ್ಥೆಗೆ ಕರ್ನಾಟಕ ಪ್ರತಿನಿಧಿ, ಅಂಕಣಗಳು: 'ರಾಜಧಾನಿಯಿಂದ', 'ದಿನಚರಿಯಿಂದ'.

೧೯೬೯-೭೧ : ಮೈಸೂರು, ಬೆಂಗಳೂರು ವಿಶ್ವವಿದ್ಯಾನಿಲಯಗಳ ಸೆನೆಟ್ ಸದಸ್ಯತ್ವ.

೧೯೬೯ : ಕಿರಿಯರ ವಿಶ್ವಕೋಶ 'ಜ್ಞಾನ ಗಂಗೋತ್ರಿ'ಯ ರಚನೆಯ ಉದ್ದೇಶಕ್ಕಾಗಿ ಸ್ವ-ಇಚ್ಛೆಯಿಂದ ಇನ್ಫಾದಿಂದ ಬಿಡುಗಡೆ.

೧೯೬೯-೭೪ : 'ಜ್ಞಾನ ಗಂಗೋತ್ರಿ' ಪ್ರಧಾನ ಸಂಪಾದಕತ್ವ. ದೊಡ್ಡ ಆಕಾರದ ೫೦೦೦ ಪುಟಗಳು, ಏಳು ಸಂಪುಟಗಳಲ್ಲಿ ವಿಶ್ವಕೋಶದ ನಿರ್ಮಾಣ. ಪ್ರಕಟಣೆ: ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರದಿಂದ.

೧೯೭೧ : ಪಾರ್ಶ್ವವಾಯು ಪೀಡೆ, ಹತೋಟಿ ತಪ್ಪದ ಎಡಗೈ, ಎಡಗಾಲು. ಈ ಸ್ಥಿತಿಯಲ್ಲೇ ನಿಗದಿತ ಅವಧಿಗಿಂತಲೂ ತುಸು ಮುನ್ನವೇ 'ಜ್ಞಾನ ಗಂಗೋತ್ರಿ' ಯೋಜನೆಯ ಯಶಸ್ವೀ ಮುಕ್ತಾಯ.

೧೯೭೪ : ಯೋಜನೆ ಮುಗಿದೊಡನೆ ಪ್ರಕಾಶನ ಮಂದಿರಕ್ಕೆ ಅಂತಿಮ ನಮಸ್ಕಾರ. 'ಚಿರಸ್ಮರಣೆ' ಕಾದಂಬರಿಗೆ ಸೋವಿಯೆತ್ ಲ್ಯಾಂಡ್-ನೆಹರೂ ಪುರಸ್ಕಾರ.

೧೯೭೫ : ತಾಯಿಯ ಮರಣ, ೮೦ನೇ ವಯಸ್ಸಿನಲ್ಲಿ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.

೧೯೭೬ : ದಾವಣಗೆರೆಯಲ್ಲಿ ಸಮಾವೇಶಗೊಂಡ ಪ್ರಗತಿ ಪಂಥ ಸಂಸ್ಥಾಪನಾ ಸಮ್ಮೇಳನದ ಅಧ್ಯಕ್ಷತೆ.

೧೯೭೮ : ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ. ಅನುಪಮಾಗೆ ಕ್ಯಾನ್ಸರ್

೧೯೭೯ : 'ಗವಿವಾಸಿ'ಯಾಗಿದ್ದುಕೊಂಡೇ ನವಕರ್ನಾಟಕ ಪ್ರಕಾಶನ ಸಂಸ್ಥೆಗಾಗಿ ೨೫ ಸಂಪುಟಗಳ 'ವಿಶ್ವಕಥಾಕೋಶ'ದ ಯೋಜನೆ ರೂಪಿಸಿ, ಪ್ರಧಾನ ಸಂಪಾದಕರಾಗಿ, ಯೋಜನೆಯನ್ನು ಕೃತಿಗಿಳಿಸುವ ಹೊಣೆ ಹೊತ್ತದ್ದು.

೧೯೮೨ : ಮೇಲಿನ ಯೋಜನೆ ಅಂತಿಮ ಹಂತ ಸಮೀಪಿಸುತ್ತಿದ್ದಂತೆ ಪಾರ್ಶ್ವ ಪೀಡೆಯ ಎರಡನೇ ಆವೃತ್ತಿ. ಈ ಸಲ ದೃಷ್ಟಿಗೂ ಮಾತಿಗೂ ಧಕ್ಕೆ, ಬೇಗನೆ ಚೇತರಿಕೆ. 'ವಿಶ್ವಕಥಾ ಕೋಶ'ವನ್ನು ಪೂರ್ತಿಗೊಳಿಸಿ ನವಕರ್ನಾಟಕ ಪ್ರಕಾಶನಕ್ಕೆ 'ದಸ್ವಿದಾನಿಯ' (ವಿದಾಯ)

೧೯೮೫ : ಪುತ್ತೂರು ಸಂತ ಫಿಲೋಮಿನಾ ಕಾಲೇಜು ಕನ್ನಡ ಸಂಘದ ಆಶ್ರಯದಲ್ಲಿ ನಿರಂಜನ ಸಾಹಿತ್ಯ ವಿಚಾರ ಸಂಕಿರಣ.
ಕನ್ನಡ ಸಾಹಿತ್ಯ ಪರಿಷತ್ತಿನಿಂದ ಗೌರವ ಸದಸ್ಯತ್ವ ನೀಡಿಕೆ.

೧೯೮೬ : ಪುತ್ತೂರಿನಲ್ಲಿ 'ನಿರಂಜನ ಅಭಿನಂದನ' ಗ್ರಂಥ ಬಿಡುಗಡೆ

೧೯೯೨ : ಮರಣ

## ಅನುಬಂಧ ೨

## ನಿರಂಜನ ಸಾಹಿತ್ಯ: ಗ್ರಂಥಸೂಚಿ - ೨

### ಕಾದಂಬರಿ

*ವಿಮೋಚನೆ* : ೧೯೫೩, ೧೯೫೫, ೧೯೭೬
ರಷ್ಯನ್ ಆವೃತ್ತಿ: ೧೯೭೦
ಪೋಲಿಷ್ ಭಾಷಾಂತರ: ೧೯೭೬
ಇಂಗ್ಲೀಷ್: Wait for the moon ೧೯೮೩
ಮಲಯಾಳಂ: ಮೋಚನಂ ೧೯೮೪
ತೆಲುಗು: ವಿಮೋಚನೆ ೧೯೮೫

*ಬನಶಂಕರಿ* : ೧೯೫೪, ೧೯೫೯, ೧೯೭೬

*ಸೌಭಾಗ್ಯ* : ೧೯೫೪

*ಅಭಯ* : ೧೯೫೪, ೧೯೫೯, ೧೯೭೬

ತೆಲುಗು: ಅಭಯಧಾಮಂ ೧೯೭೩

*ರಂಗಮ್ಮನ ವಠಾರ* : ೧೯೫೪, ೧೯೭೬, ೧೯೭೭

ಮಲಯಾಳಂ: ರಂಗಮ್ಮಯಡೆ ವಾಡಗಪರೆಂಬು ೧೯೮೦

*ದೂರದ ನಕ್ಷತ್ರ*: ೧೯೫೪, ೧೯೫೬

*ನವೋದಯ* : ೧೯೫೬

*ಪಾಲಿಗೆ ಬಂದ ಪಂಚಾಮೃತ* : ೧೯೫೫

*ಏಕಾಂಗಿನಿ* : ೧೯೫೫

*ಚಿರಸ್ಮರಣೆ* : ೧೯೫೫, ೧೯೭೫, ೧೯೮೧, ೧೯೮೩

ಮಲಯಾಳಂ : ಚಿರಸ್ಮರಣ ೧೯೭೪, ೧೯೭೮

ತೆಲುಗು : ಚಿರಸ್ಮರಣ ೧೯೮೧

ತಮಿಳು : ನಿನೈವುಗಳ್ ಅಳಿವದಿಲ್ಲೈ ೧೯೭೯, ೧೯೮೧, ೧೯೮೫

ಮರಾಠಿ : ಅವಿಸ್ಮರಣೀಯ್ ವೀರಗಾಥಾ ೧೯೭೯

ಬಂಗಾಳಿ : ಚಿರಸ್ಮರಣೀಯ್ ೧೯೮೧

ತುಳು : ಮದಪ್ಪಂದಿ ನೆಂಪು ೧೯೮೪

ಇಂಗ್ಲಿಷ್ : The stars shine brightly ೧೯೭೯

***ಕೊನೇ ನಮಸ್ಕಾರ*: ೧೯೫೫**

*ದೀಕ್ಷೆ*: ೧೯೫೬

*ಕಲ್ಯಾಣ ಸ್ವಾಮಿ*: ೧೯೫೬, ೧೯೫೮, ೧೯೭೬

*ಮಿಣುಕುಹುಳ*: ೧೯೫೬

*ವಿಲಾಸಿನಿ*: ೧೯೫೬

*ಅಂಜನ*: ೧೯೫೭

*ವಿಶಾಲಾಕ್ಷಿ*: ೧೯೫೮

*ತೊಟ್ಟಿಲು ತೂಗದ ಕೈ*-'ಪ್ರಜಾಮತ' ಧಾರವಾಹಿ ೧೯೬೦-೧೯೬೧

*ಹೆಣ್ಣಾಗಿ ಕಾಡಿತ್ತು ಮಾಯೆ*: ೧೯೬೨

*ಬಂಗಾರದ ಜಿಂಕೆ: ೧೯೬೩, ೧೯೭೬*

*ನಂದಗೋಕುಲ: ೧೯೬೪, ೧೯೭೬*

*ಸ್ವಾಮಿ ಅಪರಂಪಾರ: ೧೯೬೭, ೧೯೭೬, ೧೯೭೭, ೧೯೭೭, ೧೯೭೭*

*ಮಲಯಾಳಂ:* ಅಪರಂಪಾರಸ್ವಾಮಿ ೧೯೮೬

*ನೋವು* (ನೂರು ಜುಟ್ಟು ಮೂರು ಜಡೆ) ೧೯೬೫, ೧೯೭೬

*ಸ್ಮರಣೆಯೊಂದೇ ಸಾಲದೆ? ೧೯೭೧*

*ಮೃತ್ಯುಂಜಯ ೧೯೭೬, ೧೯೮೨*

ಮಲಯಾಳಂ : ಮೃತ್ಯುಂಜಯನ್ ೧೯೮೫

ತೆಲುಗು : ಮೃತ್ಯುಂಜಯಡು ೧೯೮೫

ಹಿಂದಿ : ಮೃತ್ಯುಂಜಯ್ (ಅನುವಾದ ಮುಗಿದಿದೆ ೧೯೮೬)

ಇಂಗ್ಲೀಷ್ : coming forth by day (ಬೆರಳಚ್ಚು ಪ್ರತಿ ಸಿದ್ಧ ೧೯೮೨)

ಅರಬಿ : ಅರಾಬಿಕ್‌ಗೆ ತರ್ಜುಮೆ ಮಾಡಲು ಈಜಿಪ್ಟಿನ ಸಾಹಿತ್ಯಾಸಕ್ತರ ಅಪೇಕ್ಷೆ ೧೯೮೬

## ಕಥಾಸಂಗ್ರಹ

ಅಯ್ಯನ್ಯೈ: ೧೯೪೫

ಸಂಧಿಕಾಲ (ಅಯ್ಯನ್ಯೈಯ ಹೊಸ ಆವೃತ್ತಿ) ೧೯೪೬

ರಕ್ತ ಸರೋವರ: ೧೯೪೭

ಅನ್ನಪೂರ್ಣ: ೧೯೫೨

ಕೊನೆಯ ಗಿರಾಕಿ: ೧೯೫೩

ವಾರದ ಹುಡುಗ: ೧೯೫೭

ಕಾತ್ಯಾಯನಿ: ೧೯೫೭

ಒಂಟಿ ನಕ್ಷತ್ರ ನಕ್ಕಿತು: ೧೯೬೦

ಯಾವ ಜನ್ಮದ ಶಾಪ? ೧೯೬೪

ನಾಸ್ತಿಕ ಕೊಟ್ಟ ದೇವರು ೧೯೬೫, ೧೯೬೮

ಕೆಲವು ಸಣ್ಣ ಕಥೆಗಳು ೧೯೮೬

ಧ್ವನಿ - ಸಮಗ್ರ ಕಥಾ ಸಂಪುಟ ೧ ಮತ್ತು ೨

ಬೇರೆ ಬೇರೆ ಕತೆಗಳು ಇಂಗ್ಲಿಷ್, ಹಿಂದಿ, ತೆಲುಗು, ಮಲೆಯಾಳಂ, ರಷ್ಯನ್ ಭಾಷೆಗಳಿಗೆ ಅನುವಾದವಾಗಿವೆ.

## ನಾಟಕ

ಸಂಗಮಸ್ನಾನ: ೧೯೬೧

ಆಹ್ವಾನ: ೧೯೬೩

ಸಾಮ್ರಾಜ್ಞಿ: ೧೯೬೭

ನಾವೂ ಮನುಷ್ಯರು: ೧೯೮೫

## ಜೀವನವೃತ್ತ

ಋತುರಾಜ: ೧೯೬೧

ಪುರುಷೋತ್ತಮ ('ಋತುರಾಜ' – ಪರಿಷ್ಕೃತ) ೧೯೬೪

## ವ್ಯಕ್ತಿ ಚಿತ್ರ ಸಂಕಲನ

ನಡೆ ಚೆನ್ನ, ನುಡಿ ಚೆನ್ನ ೧೯೮೬

## ಲೇಖನ ಸಂಗ್ರಹ

ಬುದ್ಧಿ, ಭಾವ, ಬದುಕು ೧೯೮೪

## ಸಂದರ್ಶನ ಸಂಕಲನ

ಮುಖತಃ ೧೯೮೫

## ಅಂಕಣ ಸಂಗ್ರಹ

| | |
|---|---|
| ಐದು ನಿಮಿಷ | ೧೯೫೩ |
| ಸಾಧನಾ | ೧೯೫೩ |
| ಕಾಲಕ್ಷೇಪ | ೧೯೫೭ |
| ಪುಷ್ಪಹಾರ | ೧೯೫೭ |
| ದಿನಚರಿಯಿಂದ | ೧೯೭೨ |
| ರಾಜಧಾನಿಯಿಂದ | ೧೯೭೨ |
| ಅಂಕಣ | ೧೯೭೨ |

## ದಾಖಲೆ- ರಾಜಕೀಯ

ಹಿಮಾಲಯದ ದಳ್ಳುರಿ: ೧೯೬೨

ಗಾಂಧೀ - ಇಂದು ನಾಳೆ: ೧೯೭೩

ಚಿರಸ್ಮರಣೆಯ ಕಯ್ಯೂರು: ೧೯೮೧

## ಭಾಷಾಂತರ

ಸಮತಾವಾದ ೧೯೪೫

ತಾಯಿ: ೧೯೫೪, ೧೯೮೧

ಅಧಃಪತನ ೧೯೫೮

ನನ್ನ ಬಾಲ್ಯ: ೧೯೫೬

ಜನತೆಯ ನಡುವೆ: ೧೯೬೧

ACC. No.: CC6211
No.: 6033 - 6211
DATE:

ನನ್ನ ವಿಶ್ವವಿದ್ಯಾನಿಲಯ: ೧೯೬೧

ಚೀಣಾ ದೇಶದ ನೀತಿ ಕಥೆಗಳು: ೧೯೫೬

ಮದುವಣಗಿತ್ತಿ: ೧೯೫೭

ಮಾನವನ ಪಾಡು: ೧೯೬೭

ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ: ೧೯೭೯

## ಸಂಪಾದಿತ

ಜನತಾ ಸಾಹಿತ್ಯದ ೨೫ ಪುಸ್ತಕ: ೧೯೪೬-೪೭

ಪುರೋಗಾಮಿ ಪ್ರಕಾಶನದ ೮ ಪುಸ್ತಕ: ೧೯೫೧:೧೯೫೩

ಜ್ಞಾನ ಗಂಗೋತ್ರಿ - ಕಿರಿಯರ ವಿಶ್ವಕೋಶದ ೭ ಸಂಪುಟ: ೧೯೭೦-೧೯೭೪

ವಿಶ್ವಕಥಾಕೋಶ - ಜಗತ್ತಿನ ಶ್ರೇಷ್ಠ ಸಣ್ಣ ಕಥೆಗಳು - ೨೫ ಸಂಪುಟಗಳಲ್ಲಿ ೧೯೭೯-೧೯೮೨

ಈ ಮೇಲಿನ ಮಾಹಿತಿಗಾಗಿ **'ನಿರಂಜನ ಅಭಿನಂದನ'**
ಮುಖ್ಯ ಸಂಪಾದಕ: ಬೋಳಂತಕೋಡಿ ಈಶ್ವರಭಟ್ಟ
ಕರ್ನಾಟಕ ಸಂಘ, ಪುತ್ತೂರು: ೧೯೮೬ಕ್ಕೆ ಋಣಿಯಾಗಿದ್ದೇನೆ.





ಕುಳಕುಂದ ಶಿವರಾಯ (1924-1992), 'ನಿರಂಜನ' ಕಾವ್ಯನಾಮದಿಂದ ಪ್ರಸಿದ್ಧರಾದವರು. ಆಧುನಿಕ ಕನ್ನಡದ ಸಂದರ್ಭದಲ್ಲಿ ಪ್ರಗತಿಶೀಲ ಬರಹಗಾರರಲ್ಲಿ ಮುಂಚೂಣಿಯಲ್ಲಿದ್ದವರು. ಕಾದಂಬರಿಕಾರರಾಗಿ, ಕತೆಗಾರರಾಗಿ, ಪತ್ರಕರ್ತರಾಗಿ, ವಿಶ್ವಕೋಶ, ಕಥಾಕೋಶಗಳ ಸಂಪಾದಕರಾಗಿ ಅವರ ಕೊಡುಗೆ ಅನನ್ಯವಾದುದು. ಕೇರಳದ ಕೆಯ್ಯೂರು ರೈತ ಸತ್ಯಾಗ್ರಹದ ಆಧಾರಿತ ಅವರ 'ಚಿರಸ್ಮರಣೆ' ಕಾದಂಬರಿ ಭಾರತೀಯ ಭಾಷೆಗಳಿಗೆ ಮಾತ್ರವಲ್ಲ, ಹಲವು ವಿದೇಶೀ ಭಾಷೆಗಳಿಗೂ ಅನುವಾದಗೊಂಡು ಅತ್ಯಂತ ಜನಪ್ರಿಯತೆ ಗಳಿಸಿದ ಕೃತಿಯಾಗಿದೆ.

'ಭಾರತೀಯ ಸಾಹಿತ್ಯದ ನಿರ್ಮಾಪಕರು' ಮಾಲಿಕೆಗಾಗಿ ನಿರಂಜನ ಕುರಿತಾದ ಈ ಪುಸ್ತಕವನ್ನು ಅತ್ಯಂತ ಸಮರ್ಥವಾಗಿ ಬರೆದುಕೊಟ್ಟಿರುವ ಡಾ|| ಆರ್.ವಿ. ಭಂಡಾರಿ ಅವರು ಖ್ಯಾತ ವಿಮರ್ಶಕರು.

**NIRANJANA (Kannada)**

ISBN:81-260-1973-5

Rs. 25/-